ಬಾಗಲಕೋಟೆ ಪರಿಸರದ ಚರಿತ್ರೆ

(ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ)

ಚರಿತ್ರೆ ಅಧ್ಯಯನ (ಸಮಾಜ ವಿಜ್ಞಾನಗಳ ನಿಕಾಯ) ವಿಷಯದಲ್ಲಿ
ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧಕರು
ರಾಂಪೂರ ಸಿದ್ದಣ್ಣ ಎನ್.
ಸಹಾಯಕ ಉಪನ್ಯಾಸಕರು
ಇತಿಹಾಸ ವಿಭಾಗ, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ
ನೋಂದಣಿ ಸಂಖ್ಯೆ : BVVBHS - 0174

ಮಾರ್ಗದರ್ಶಕರು
ಡಾ.ಜಿ.ಬಿ.ಕುಲಕರ್ಣಿ
ಪ್ರಾಚಾರ್ಯರು
ಎಸ್.ಆರ್.ಎಸ್. ಕಲಾ ಹಾಗೂ ಎಂ.ಬಿ. ಶಿರೂರ
ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ

ಮಾನ್ಯತಾ ಕೇಂದ್ರ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ

ಮಾನ್ಯತೆ
ಸಮಾಜ ವಿಜ್ಞಾನಗಳ ನಿಕಾಯ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೫

ಬಾಗಲಕೋಟೆ ಪರಿಸರದ ಚರಿತ್ರೆ

(ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ)

ಚರಿತ್ರೆ ಅಧ್ಯಯನ (ಸಮಾಜ ವಿಜ್ಞಾನಗಳ ನಿಕಾಯ) ವಿಷಯದಲ್ಲಿ
ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧಕರು
ರಾಂಪೂರ ಸಿದ್ದಣ್ಣ ಎನ್.
ಸಹಾಯಕ ಉಪನ್ಯಾಸಕರು
ಇತಿಹಾಸ ವಿಭಾಗ, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ
ನೋಂದಣಿ ಸಂಖ್ಯೆ : BVVBHS - 0174

ಮಾರ್ಗದರ್ಶಕರು
ಡಾ.ಜಿ.ಬಿ.ಕುಲಕರ್ಣಿ
ಪ್ರಾಚಾರ್ಯರು
ಎಸ್.ಆರ್.ಎನ್.ಕಲಾ ಹಾಗೂ ಎಂ.ಬಿ. ಶಿರೂರ
ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ

ಮಾನ್ಯತಾ ಕೇಂದ್ರ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ

ಮಾನ್ಯತೆ
ಸಮಾಜ ವಿಜ್ಞಾನಗಳ ನಿಕಾಯ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೫

ಅಭ್ಯರ್ಥಿಯ ಪ್ರಮಾಣ ಪತ್ರ

"ಬಾಗಲಕೋಟೆ ಪರಿಸರದ ಚರಿತ್ರೆ" (ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ.ಜಿ.ಬಿ.ಕುಲಕರ್ಣಿ,** ಎಸ್.ಆರ್.ಎನ್. ಕಲಾ ಹಾಗೂ ಎಂ.ಬಿ. ಶಿರೂರು ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಚರಿತ್ರೆ ಅಧ್ಯಯನ ವಿಭಾಗದಲ್ಲಿ ಬಾಗಲಕೋಟೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಮಾನ್ಯತಾ ಸಂಶೋಧನಾ ಕೇಂದ್ರದ ಮೂಲಕ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ರಾಂಪೂರ ಸಿದ್ದಣ್ಣ ಎನ್.)

ಸ್ಥಳ : ಬಾಗಲಕೋಟ

ದಿನಾಂಕ :

ಸಂಶೋಧನಾ ವಿದ್ಯಾರ್ಥಿ
ಸಹಾಯಕ ಉಪನ್ಯಾಸಕರು
ಬಸವೇಶ್ವರ ಕಲಾ ಮಹಾವಿದ್ಯಾಲಯ
ಬಾಗಲಕೋಟ–587101.

ಮಾರ್ಗದರ್ಶಕರ ದೃಢೀಕರಣ ಪತ್ರ

ರಾಂಪೂರ ಸಿದ್ದಣ್ಣ ಎನ್. ಅವರು "ಬಾಗಲಕೋಟೆ ಪರಿಸರದ ಚರಿತ್ರೆ"(ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಚರಿತ್ರೆ ಅಧ್ಯಯನ ವಿಭಾಗದಲ್ಲಿ ಬಾಗಲಕೋಟೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಮಾನ್ಯತಾ ಕೇಂದ್ರದ ಮುಖಾಂತರ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು
ಡಾ ಜಿ.ಬಿ. ಕುಲಕರ್ಣಿ
ಪ್ರಾಚಾರ್ಯರು
ಎಸ್.ಆರ್.ಎನ್. ಕಲಾ ಹಾಗೂ
ಎಂ.ಬಿ. ಶಿರೂರು ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ

ಸ್ಥಳ : ಬಾಗಲಕೋಟ
ದಿನಾಂಕ :

ಕೃತಜ್ಞತೆಗಳು

ಬಾಗಲಕೋಟೆ ಪರಿಸರದ ಚರಿತ್ರೆ (ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ) ಎಂಬ ವಿಷಯದ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತಿದೆ. ನಾನು ಕಟ್ಟಿಕೊಂಡಿದ್ದ ಸಂಶೋಧನೆಯ ಕನಸು ನನಸಾದದ್ದು ಪ್ರಸ್ತುತ ಮಹಾಪ್ರಬಂಧದ ಮೂಲಕ. ಈ ಸಂದರ್ಭದಲ್ಲಿ ನನ್ನ ಅಧ್ಯಯನಕ್ಕೆ ನೆರವಾದವರನ್ನು ಸ್ಮರಿಸುವುದು ನನ್ನ ಆದ್ಯ ಕರ್ತವ್ಯ ಹಾಗೂ ಸಂತೋಷದ ಸಂಗತಿ.

ಪ್ರಾರಂಭದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಹ ಕುಲಪತಿಗಳಾದ ಪ್ರೊ. ಹಿ.ಚಿ.ಬೋರಲಿಂಗಯ್ಯ ಅವರಿಗೆ ಇಂದಿನ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ ಹಾಗೂ ಹಿಂದಿನ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಅಂದಿನ ಡಾ. ಅಶೋಕಕುಮಾರ ರಂಜೇರೆ ಹಾಗೂ ಇಂದಿನ ನಿರ್ದೇಶಕರಾದ ಡಾ. ಕೆ. ರವೀಂದ್ರನಾಥ ಹಿಂದಿನ ಉಪನಿರ್ದೇಶಕರಾದ ಡಾ. ಎಸ್. ವೈ. ಸೋಮಶೇಖರ ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಹೇಳುತ್ತೇನೆ.

ನನ್ನ ಸಂಶೋಧನೆಗೆ ಸೂಕ್ತ ವಿಷಯವನ್ನು ನೀಡಿ ಅದಕ್ಕೆ ಪೂರಕವಾಗುವಂತೆ ಚರ್ಚಿಸುತ್ತಾ ಅಕ್ಷರ ಅಕ್ಷರವನ್ನೂ ಬಿಡದೆ ಪರಿಶೀಲಿಸಿ ಬರವಣಿಗೆಯ ಓರೆಕೋರೆಗಳನ್ನು ತಾಳ್ಮೆಯಿಂದ ತಿದ್ದಿ ತೀಡಿ ಆತ್ಮೀಯತೆಯಿಂದ ಸಹಕರಿಸಿದ ಎಸ್.ಆರ್.ಎಸ್. ಕಲಾ ಹಾಗೂ ಎಂ.ಬಿ.ಶಿರೂರು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಮತ್ತು ಮಾರ್ಗದರ್ಶಕರೂ ಆದ ಡಾ.ಜಿ.ಬಿ.ಕುಲಕರ್ಣಿ ಅವರಿಗೂ ಕೃತಜ್ಞತೆಗಳನ್ನು ಹೇಳುತ್ತೇನೆ.

ಶಿಸ್ತು ಹಾಗೂ ಶ್ರಮ ಸಂಸ್ಕೃತಿಯ ಪ್ರತೀಕವಾಗಿರುವ ಹಾಗೂ ಅದನ್ನು ವಿದ್ಯಾರ್ಥಿಗಳಿಗೂ ಕಲಿಸುವ ವಿಭಾಗದ ಪ್ರಾಧ್ಯಾಪಕರುಗಳಾದ ಡಾ.ಮೋಹನ್‌ಕೃಷ್ಣ ರೈ, ಡಾ. ಸಿ.ಆರ್.ಗೋವಿಂದರಾಜು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಎನ್.ಚಿನ್ನಸ್ವಾಮಿ ಸೋಸಲೆ, ಡಾ. ಶೀಲಾಕಾಂತ ಪತ್ತಾರ, ಅವರಿಗೂ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಬಿ.ವೀ.ವಿ. ಸಂಘದ ಕಾರ್ಯಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ವೀರಣ್ಣ ಸಿ.ಚರಂತಿಮಠ, ಬಿ.ವೀ.ವಿ.ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಮಹೇಶ ಅಥಣಿ, ಶ್ರೀ ಅಶೋಕ ಎಮ್. ಸಜ್ಜನ (ಬೇವೂರ), ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರು ಹಾಗೂ ಬಿ.ವೀ.ವಿ.ಸಂಘದ ಆಡಳಿತಾಧಿಕಾರಿ ಪ್ರೊ. ಎನ್.ಜಿ.ಕರೂರ ಬಿ.ವೀ.ವಿ. ಸಂಘದ ಸಂಶೋಧನಾ ಕೇಂದ್ರದ ಸಂಯೋಜನಾಧಿಕಾರಿಗಳಾದ ಪ್ರೊ. ವ್ಹಿ. ಕೆ. ಮೊರಬದ ಅವರಿಗೆ, ಬಿ.ವೀ.ವಿ. ಸಂಘದ ಕಲಾ ಕಾಲೇಜಿನ ಪ್ರಾಚಾರ್ಯರಾದ ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಹಾಗೂ

ನನ್ನ ಮಿತ್ರ ಉಪನ್ಯಾಸಕರಾದ ಡಾ. ರಾಮು ಸಜ್ಜನ್. ಡಾ. ಬಿ.ಎ.ಗೂಳಿ. ಪ್ರೊ. ಪಿ.ಬಿ. ಬಡಿಗೇರ, ಪ್ರೊ. ಸಿ.ಸಿ. ಮುದೇನೂರ, ಪ್ರೊ.ಬಿ.ಆರ್.ಪಾಟೀಲ ಶ್ರೀಮತಿ ಎಂ.ಎಲ್.ಹಿರೇಮಠ್, ಡಾ. ಎ.ಎಂ.ಸತ್ಯನಾಯಕ, ಪ್ರೊ. ಎಸ್.ಎಂ.ಕುರಬರ, ಪ್ರೊ. ಎಸ್.ಆರ್. ಮೂಗನೂರಮಠ, ಡಾ. ಎಸ್.ಎಂ.ಮಿಟಲ್‌ಕೋಡ ಅವರಿಗೂ ಹಾಗೂ ಎಲ್ಲಾ ಪ್ರಾಧ್ಯಾಪಕ ವೃಂದಕ್ಕೆ ಮತ್ತು ಬೋಧಕೇತರ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆಗಳು.

ನನ್ನ ಓದಿನ ಹೆಗ್ಗಳಿಕೆಯನ್ನು ಸಾರುತ್ತ ಅನೇಕ ಕನಸುಗಳನ್ನು ಕಟ್ಟಿಕೊಂಡಿರುವ ಪೂಜ್ಯನೀಯ ತಂದೆ ಶ್ರೀ ನಿಂಗಪ್ಪ ಸಿ. ರಾಂಪೂರ ತಾಯಿ ಶ್ರೀಮತಿ ಪಾರ್ವತೆವ್ವ ಅವರಿಗೂ ಶೈಕ್ಷಣಿಕ ಅಭಿವೃದ್ಧಿಗೆ ಬೆಂಬಲಿಗರಾಗಿರುವ ನನ್ನ ಧರ್ಮಪತ್ನಿ ಶ್ರೀಮತಿ ನಿರ್ಮಲಾ ಎಸ್. ರಾಂಪೂರ ಮತ್ತು ಪುತ್ರರಾದ ಕು. ಶಶಿಧರ, ಕು. ಶ್ರೀಶೈಲ, ಪುತ್ರಿ ಕುಮಾರಿ ನೇತ್ರಾ, ಸಹೋದರ ಗ್ಯಾನಪ್ಪ ರಾಂಪೂರ, ಸಹೋದರಿಯರಾದ ಶ್ರೀಮತಿ ಬೋರಮ್ಮ ದಾದಾಗೌಡ ಪಾಟೀಲ, ಶ್ರೀಮತಿ ಅನ್ನಪೂರ್ಣಾ ಶರಣಬಸಪ್ಪ ಕೋಟಿ, ಶ್ರೀಮತಿ ಲಕ್ಷ್ಮೀ ಗುರುಲಿಂಗಪ್ಪ ಅಂಗಡಿ, ಶ್ರೀಮತಿ ಮಂಜುಳಾ ಭೀಮಪ್ಪ ಕೊಟ್ಲಿ, ಅಲ್ಲದೇ ನನ್ನ ಸಹೋದರ ಸಂಬಂಧಿಗಳಾದ ಶ್ರೀ ಬಸವನಗೌಡ ಸಿ. ಪಾಟೀಲ, ಶ್ರೀ ಚನಗೌಡ ಬಿ. ಪಾಟೀಲ ಹಾಗೂ ಸೋದರಳಿಯಂದಿರಾದ ಶಿವಲಿಂಗಪ್ಪ ಕೋಟಿ, ಗುರುರಾಜ ಕೋಟಿ, ಕಾಶೀನಾಥ ಅಂಗಡಿ ಸಹೋದರ ಶ್ರೀ. ಶಿವಾನಂದ. ಗಬ್ಬೂರ. ಬಸವರಾಜ ಗಬ್ಬೂರ, ಸುನೀಲ ಕೋಟಿ ಅವರಿಗೂ ಆಭಾರಿಯಾಗಿರುವೆ.

ನನ್ನ ಬದುಕಿಗೆ ಸ್ಫೂರ್ತಿಯ ಸೆಲೆಯಾಗಿ ನನ್ನ ಶ್ರೇಯೋಭಿಲಾಷಿಗಳಾಗಿ ತಮ್ಮದೆಂದೆ ಬಗೆಯುವ ಸ್ನೇಹಿತರಾದ ಪ್ರೊ. ಆರ್.ಕೆ.ಕುಲಕರ್ಣಿ, ಪ್ರೊ. ಎನ್.ಪಿ.ಜೋಶಿ, ಪ್ರೊ. ಎಂ.ಆರ್.ಇಂಗಳಗಿ, ಪ್ರೊ. ಕೆ.ವಿ.ಮಠ, ಪ್ರೊ. ಆರ್.ಆರ್.ಅರಿಶಿಣಗೋಡಿ, ಶ್ರೀ ವಿನಯಕುಮಾರ ಹಿರೇಮಠ, ಡಾ. ನಂದಿಕೋಲಮಠ, ಪ್ರೊ. ಗೌಡರ, ಪ್ರೊ. ಎ.ಎಸ್.ಕೊಲ್ಹಾರ ಜೆ.ಆರ್.ಪಾಟೀಲ ವಿಶ್ರಾಂತ ಶಿಕ್ಷಕರು ಅವರಿಗೆ ನನ್ನ ಅನಂತ ವಂದನೆಗಳು.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಬಸವೇಶ್ವರ ಕಲಾ ಕಾಲೇಜಿನ ಗ್ರಂಥಪಾಲಕ ದಡೇಕರ ಹಾಗೂ ಸಿಬ್ಬಂದಿಗಳಿಗೆ ಮತ್ತು ಚರಿತ್ರೆ ಅಧ್ಯಯನ ವಿಭಾಗದ ಸಿಬ್ಬಂದಿ ವರ್ಗದವರೆಲ್ಲರಿಗೂ, ಮತ್ತೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅಧ್ಯಯನಕ್ಕೆ ನೆರವಾದ ವಿದ್ವಾಂಸರಿಗೂ ಮತ್ತು ನನ್ನ ಮಿತ್ರರಿಗೂ ಸದಾ ಅಭಿಮಾನದಿಂದ ಕಾಣುವ ನನ್ನೂರಿನ ಸಮಸ್ತ ಬಾಂಧವರಿಗೂ ಹಾಗೂ ಆತ್ಮೀಯತೆಯಿಂದ ಡಿ.ಟಿ.ಪಿ ಮತ್ತು ಮಹಾಪ್ರಬಂಧವನ್ನು ಅಂದವಾಗಿ ಪುಟವಿನ್ಯಾಸ ಮಾಡಿದ ಸಿದ್ದು ಶಿವವಸಿಂಪಿ ಇವರಿಗೂ ನಾನು ಅಭಾರಿಯಾಗಿರುವೆ.

ಸ್ಥಳ: ಕನ್ನಡ ವಿಶ್ವವಿದ್ಯಾಲಯ. ಹಂಪಿ ಡಾ.ರಾಂಪೂರ ಸಿದ್ದಣ್ಣ ಎಸ್.

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಪೀಠಿಕೆ

"ಸೂಕ್ಷ್ಮ ಅಧ್ಯಯನಗಳಿಗೆ ಒತ್ತು ಕೊಡುತ್ತಿರುವ ಇಂದಿನ ಶೈಕ್ಷಣಿಕ ಸಂದರ್ಭದಲ್ಲಿ ಪ್ರಾದೇಶಿಕ ಅಧ್ಯಯನವು ಸಾಕಷ್ಟು ಮಹತ್ವ ಪಡೆದಿದೆ".

ಈ ಮೇಲಿನ ಮಾತುಗಳು ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪ್ರದೇಶದ ಭೌಗೋಳಿಕ ಮತ್ತು ರಾಜಕೀಯ ಪರಿಸರದ ಕನಿಷ್ಠ ಜ್ಞಾನ ಇರಬೇಕೆಂಬುದನ್ನು ಸ್ಪಷ್ಟಪಡಿಸುತ್ತದೆ.

ಒಬ್ಬ ವ್ಯಕ್ತಿ ಮೊದಲು ತನ್ನ ಆವರಣದಲ್ಲಿ ನೆಲೆಯೂರಿ ನಂತರ ಯಾವ ವಿಶಾಲ ಪ್ರದೇಶದ ಭಾಗ ತಾನಾಗಿರುವನೋ ಅದನ್ನು ಅರಿಯಲು ತೊಡಗಬೇಕಾಗುತ್ತದೆ.[೧] ಇಂತಹ ಪ್ರಾದೇಶಿಕ ಮತ್ತು ಸ್ಥಾನಿಕ ಅಧ್ಯಯನಗಳು ನಮ್ಮ ಐತಿಹಾಸಿಕ ಬೇರುಗಳನ್ನು ಅರ್ಥೈಸಲು ಹಾಗೂ ವಿಸ್ತೃತಗೊಳ್ಳುತ್ತಿರುವ ಚರಿತ್ರೆಯ ಅರ್ಥವ್ಯಾಪ್ತಿಯಿಂದಾಗಿ ಒಂದು ನಾಡಿನ, ಸ್ಥಾನಿಕ ಚರಿತ್ರೆಯಲ್ಲಿ ರಾಜಮಹಾರಾಜರ ಚರಿತ್ರೆ ಗೌಣವಾಗಿ ಶ್ರೀಸಾಮಾನ್ಯನ ಬದುಕಿಗೆ ಮಹತ್ವ ದೊರಕುತ್ತಿರುವುದು ಇಂದಿನ ಚರಿತ್ರೆಯ ಪ್ರಮುಖ ಬದಲಾವಣೆಯಾಗಿದೆ.[೨] ಒಂದು ಪ್ರದೇಶವು ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿಕಾಸಕ್ಕೆ ಅನುವು ಮಾಡಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಸಾಂಸ್ಕೃತಿಕ ಚರಿತ್ರೆಯ ಭಾಗವಾದ ವಾಸ್ತುಶೈಲಿ(ದೇವಾಲಯ-ಶಿಲ್ಪಗಳು) ಒಂದು ರಾಜ್ಯ ಅಥವಾ ಸಾಮ್ರಾಜ್ಯದ ಅಧೀನಕ್ಕೊಳಪಡುವ ಪ್ರಾದೇಶಿಕ, ಸ್ಥಾನಿಕ ಆಳ್ವಿಕೆಯಲ್ಲಿ ಅಂದಿನಿಂದ ಪ್ರಚಲಿತ ಸಂಗತಿಗಳು ಈ ವಾಸ್ತುಶಿಲ್ಪದಲ್ಲಿ ವ್ಯಕ್ತವಾಗುತ್ತವೆ. ವಾಸ್ತುಶಿಲ್ಪವು ಒಂದು ಸಾಮ್ರಾಜ್ಯದ ರಾಜ್ಯನಿರ್ಮಾಣ ಮತ್ತು ವಿಸ್ತರಣೆಯ ಸೂಚನೆಯೂ ಆಗಿದೆಯೆಂದರೆ

ಅತಿಶಯೋಕ್ತಿಯಲ್ಲ. ಏಕೆಂದರೆ ಬಾಗಲಕೋಟೆ ಪರಿಸರ ಕರ್ನಾಟಕ ವಾಸ್ತುಶಿಲ್ಪದ ಪ್ರಥಮ ತವರುಮನೆಯಾದ ಐಹೊಳೆ, ಪಟ್ಟದಕಲ್ಲು, ಬಾದಾಮಿ ಮತ್ತು ಮಹಾಕೂಟಗಳಲ್ಲಿ, ಪ್ರಥಮ ಕನ್ನಡ ಸಾಮ್ರಾಜ್ಯ ಕಟ್ಟಿದ ಬಾದಾಮಿ ಚಾಲುಕ್ಯರ ಬಾದಾಮಿ ಹತ್ತಿರದಲ್ಲೇ ಇರುವುದು ವಿಶೇಷ. ಅದಕ್ಕಾಗಿಯೇ ಪ್ರಸ್ತುತ ಮಹಾಪ್ರಬಂಧಕ್ಕೆ **ಬಾಗಲಕೋಟೆ ಪರಿಸರದ ಚರಿತ್ರೆ** ಬಾಗಲಕೋಟ ತಾಲೂಕಿನ ಸುತ್ತಮುತ್ತಲಿನ ಪ್ರದೇಶಕ್ಕೆ ನಾವು ಬಾಗಲಕೋಟ ಪರಿಸರದ ಚರಿತ್ರೆ ಎಂದು ಅರ್ಥೈಸಿದೆ. (ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ) ಎಂಬ ಶೀರ್ಷಿಕೆಯನ್ನು ಆಯ್ಕೆ ಮಾಡಿ ಕೊಂಡಿರುವುದು ಸೂಕ್ತವೆನಿಸುತ್ತದೆ.

೧.೨. ಅಧ್ಯಯನದ ಉದ್ದೇಶ

ಚರಿತ್ರೆಯ ಕಾಲಗರ್ಭದಲ್ಲಿ ಅಡಗಿರುವ ವಾಸ್ತು ಮತ್ತು ಶಿಲ್ಪಕಲೆ, ಚಿತ್ರಕಲೆ, ವಾಸ್ತುಶಾಸ್ತ್ರ, ಸ್ಮಾರಕ, ಅದರ ರಚನೆ ಶೈಲಿಯೆಂಬ ಅರ್ಥದಲ್ಲಿ ಅಭ್ಯಾಸ ಮಾಡಲಾಗುತ್ತದೆ. ಈ ವಾಸ್ತು ವಿದ್ಯೆಗೆ ಮೂಲ ತಳಹದಿಯೆಂದರೆ ಪ್ರಾಕ್ತನಶಾಸ್ತ್ರ. ಏಕೆಂದರೆ ಪ್ರಾಕ್ತನಶಾಸ್ತ್ರವು ಅತಿ ಪ್ರಾಚೀನ ಯುಗದಿಂದ ಚರಿತ್ರೆಯ ಬರವಣಿಗೆಯ ತನಕ ಮಾನವ ಜೀವನದ ಪ್ರತಿಯೊಂದು ಹಂತವನ್ನು ಅಭ್ಯಾಸ ಮಾಡುತ್ತದೆ. ಅದ್ದರಿಂದ ಪ್ರಾಕ್ತನ ಅಥವಾ ಪ್ರಾಗೈತಿಹಾಸಿಕ ಶಾಸ್ತ್ರವು ವಾಸ್ತುಶಾಸ್ತ್ರಕ್ಕೆ ಅಥವಾ ವಿದ್ಯೆಗೆ ಮೂಲವೆಂಬ ಹಿನ್ನೆಲೆಯಲ್ಲಿ ಬಾಗಲಕೋಟೆ ಪರಿಸರದ ಚರಿತ್ರೆ(ದೇವಾಲಯಗಳ ವಾಸ್ತುಶಿಲ್ಪ ಅನುಲಕ್ಷಿಸಿ)ಯೆಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಾಕ್ತನಶಾಸ್ತ್ರದ ಶಿಲಾಯುಗ ಸಂಸ್ಕೃತಿಯ ಕುರಿತು ಸಾಕಷ್ಟು ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಲಿವೆ. ಅದೇ ರೀತಿ ಜಿಲ್ಲೆಯ ಪರಿಸರ ವ್ಯಾಪ್ತಿಯಲ್ಲಿಯೇ ಬರುವ ಬಾದಾಮಿ ಚಾಲುಕ್ಯರ ಅವಧಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳ ನೆಲೆಗಳಾದ ಐಹೊಳೆ, ಬಾದಾಮಿ, ಪಟ್ಟದಕಲ್ಲು ಮತ್ತು ಮಹಾಕೂಟಗಳ ಕುರಿತು ಸಾಕಷ್ಟು ಅಧ್ಯಯನ ನಡೆದಿದೆ ಮತ್ತು ನಡೆಯುತ್ತಲಿದೆ. ಹತ್ತಿರದಲ್ಲಿಯೇ ಇರುವ ಬಾಗಲಕೋಟೆ ಪರಿಸರದ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ಅಧ್ಯಯನ ನಡೆದಿಧೆ. ಆದರೆ ದೇವಾಲಯ ಮತ್ತು ಮೂರ್ತಿಶಿಲ್ಪಗಳ ಕುರಿತು ಶಾಸ್ತ್ರಗ್ರಂಥಗಳ ರೀತ್ಯ ಅಧ್ಯಯನಗಳು ನಡೆದಿರುವುದಿಲ್ಲ. ಈ ಕೊರತೆಯನ್ನು ಪ್ರಾಸಂಗಿಕವಾಗಿ ತುಂಬುವುದೇ ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶ. ಜೊತೆಗೆ ಮಹಾಪ್ರಬಂಧದ ವಿಷಯಕ್ಕನುಸಾರವಾಗಿ ಪ್ರಾಗೈತಿಹಾಸಿಕ ಕಾಲದಿಂದ ಕ್ರಿಶ. ೧೫೬೫ರವರೆಗೆ ಪ್ರಬಂಧಕ್ಕೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ. ಮುಖ್ಯವಾಗಿ ಪ್ರಸ್ತುತ ಪರಿಸರದಲ್ಲಿ ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಲುಕ್ಯರ ವಾಸ್ತುಶಿಲ್ಪ ಸ್ಮಾರಕಗಳೇ ಹೆಚ್ಚಾಗಿ ಕಂಡುಬರುವುದರಿಂದ ಅವುಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ.

೧.೩. ಅಧ್ಯಯನ ವ್ಯಾಪ್ತಿ

ಭೌಗೋಳಿಕವಾಗಿ ದಖ್ಖನ್ ಪ್ರಸ್ಥಭೂಮಿಯು ಒಣ ಹಾಗೂ ಶುಷ್ಕ ವಲಯಕ್ಕೆ ಸೇರಿದೆ. ಉತ್ತರಕ್ಕೆ ವಿಜಯಪುರ ಜಿಲ್ಲೆ, ಪೂರ್ವಕ್ಕೆ ಯಾದಗಿರಿ ಜಿಲ್ಲೆ, ದಕ್ಷಿಣಕ್ಕೆ ರಾಯಚೂರು, ಕೊಪ್ಪಳ, ಗದಗ, ಧಾರವಾಡ ಜಿಲ್ಲೆಗಳು, ಪಶ್ಚಿಮಕ್ಕೆ ಬೆಳಗಾವಿ ಜಿಲ್ಲೆಗಳು ಗಡಿಗಳಾಗಿವೆ. ಇದು ಆಧುನಿಕ ಜಿಲ್ಲೆಯ ಗಡಿರೇಖೆಯಾದರೆ, ಇನ್ನೂ ಬಾಗಲಕೋಟೆ ಪ್ರದೇಶ ಅಥವಾ ತಾಲೂಕು ಗಡಿಗಳಾಗಿ ದಕ್ಷಿಣಕ್ಕೆ ಬಾದಾಮಿ ತಾಲೂಕು, ಪೂರ್ವಕ್ಕೆ ಹುನಗುಂದ ತಾಲೂಕು, ಉತ್ತರಕ್ಕೆ ಕೃಷ್ಣಾನದಿ ದಾಟಿ ಬಾಗೇವಾಡಿ ತಾಲೂಕು, ಪಶ್ಚಿಮಕ್ಕೆ ಮುಧೋಳ-ಬೀಳಗಿ ತಾಲೂಕುಗಳು ಗಡಿಯನ್ನು ಒದಗಿಸುತ್ತವೆ. ಬಾಗಲಕೋಟೆ(ತಾಲೂಕು) ಪರಿಸರದಲ್ಲಿ ಉತ್ತರದ ಗಡಿಯಾಗಿ ಕೃಷ್ಣಾನದಿ ಮತ್ತು ಘಟಪ್ರಭಾ ನದಿಗಳು ಪೂರ್ವದತ್ತ ಅಂಕುಡೊಂಕಾಗಿ ಹರಿಯುತ್ತಿದ್ದರೆ, ಮಲಪ್ರಭಾ ನದಿ ಇದರ ವ್ಯಾಪ್ತಿಯ ಹತ್ತಿರದಲ್ಲಿ ಅಂದರೆ ಬಾದಾಮಿ, ಹುನಗುಂದ ತಾಲೂಕುಗಳನ್ನು ಸೀಳಿಕೊಂಡು ಕೂಡಲಸಂಗಮದಲ್ಲಿ ಸೇರುತ್ತದೆ. ಇಂತಹ ಫಲವತ್ತಾದ ಕಪ್ಪು, ಕೆಂಪು ಮಣ್ಣಿನ ಭೂಪ್ರದೇಶದ ಬಾಗಲಕೋಟೆ ಪರಿಸರ ಪ್ರಾಗೈತಿಹಾಸಿಕ ಮಾನವನ ಸಂಸ್ಕೃತಿಯ ಬೆಳವಣಿಗೆಯಲ್ಲಿ ತನ್ನದೆಯಾದ ಪಾತ್ರವನ್ನು ನಿರ್ವಹಿಸಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ದೇವಾಲಯಗಳ ಮತ್ತು ಶಿಲ್ಪಗಳ ವಿಷಯಕ್ಕೆ ಹೆಚ್ಚು ಮಹತ್ವ ನೀಡಲಾಗಿದ್ದರೂ ಪ್ರಾಗೈತಿಹಾಸಿಕ ಮಾನವ ಇಲ್ಲಿ ನೆಲೆಯೂರಿ ಹಂತ ಹಂತವಾಗಿ ತನ್ನ ಸಂಸ್ಕೃತಿಯನ್ನು ಉನ್ನತಿಗೇರಿಸಿದನೆಂಬುದರ ಕುರಿತು ಸಹ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಆದ್ದರಿಂದ ಪ್ರಬಂಧ ವ್ಯಾಪ್ತಿಯನ್ನು ಈ ಪ್ರಾಚೀನ ಮಾನವನ ನೆಲೆಗಳ ಸಂಸ್ಕೃತಿಯಿಂದ ಹಿಡಿದು ಇಂದು ಬಾಗಲಕೋಟೆ ಪರಿಸರದಲ್ಲಿ ಗ್ರಾಮಗಳಲ್ಲಿ ಕಂಡುಬರುವ ವಾಸ್ತುಶಿಲ್ಪ ದೇವಾಲಯ ಜೊತೆ ಜೊತೆ ಅಂದಂದಿನ ರಾಜಕೀಯ ಚರಿತ್ರೆಯನ್ನು-ಕ್ರಿ.ಶ. ೧೫೬೫ರವರೆಗೆ ಚರ್ಚಿಸಲಾಗಿದೆ.

೧.೪. ಅಧ್ಯಯನದ ಸಾಧನ-ಸಾಮಗ್ರಿ

ವ್ಯಾಪ್ತಿಯಲ್ಲಿ ಕಿರಿದಾದ ಎಪ್ಪತ್ತು ಹಳ್ಳಿಗಳನ್ನು ಹೊಂದಿದ್ದ ಪ್ರದೇಶ ಈ ಬಾಗಡಗೆ-೭೦ ನಾಡು. ಇಂದು ಬಾಗಲಕೋಟೆಯಾಗಿ ಜಿಲ್ಲಾ ಹಾಗೂ ತಾಲೂಕು ಕೇಂದ್ರವಾಗಿ ಹೊರಹೊಮ್ಮಿದ್ದು ಪ್ರಸ್ತುತ ಅಧ್ಯಯನದಲ್ಲಿ ಪ್ರಾಚೀನ ಬಾಗಡಗೆ-೭೦ರ ಪರಿಸರದಲ್ಲಿ ಬರುವ ಗ್ರಾಮಗಳೇ ಆಗಿರುವುದು ವಿಶೇಷ. ಅಂದು ೭೦ ಹಳ್ಳಿಗಳ ಕೇಂದ್ರಸ್ಥಾನ ಪಡೆದ ಬಾಗಡಗೆ ನಾಡನ್ನು ಪ್ರಮುಖ ಅರಸುಮನೆತನಗಳಾದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ ಮತ್ತು ದೇವಗಿರಿ ಯಾದವ ಹಾಗೂ ವಿಜಯನಗರದ ಅರಸರ ಅಧಿಕಾರಕ್ಕೊಳಪಟ್ಟು ಸುಮಾರು ಒಂದು ಸಾವಿರ ವರ್ಷಗಳಷ್ಟು ದೀರ್ಘ ಚರಿತ್ರೆಯನ್ನು ಹೊಂದಿದೆ. ಅದರಲ್ಲಿಯೂ ಬಾಗಡಗೆ-೭೦ ವಿಭಾಗವನ್ನು ಚಾಲುಕ್ಯ ಮಾಂಡಲಿಕರಾದ

ಸಿಂಧರು-ಚರಿತ್ರೆಯಲ್ಲಿ ಸಿಂಧರ ಒಂದು ಶಾಖೆ ಬಾಗಡಗೆ-ಸಿಂಧರೆಂದು ಪ್ರಸಿದ್ಧಿ ಪಡೆದಿರುವುದು ಬಾಗಲಕೋಟೆ ಪರಿಸರದ ಚರಿತ್ರೆಗೆ ಮತ್ತಷ್ಟು ಬಲತಂದಿದೆ.

ಸಾಂಸ್ಕೃತಿಕವಾಗಿಯೂ ಬಾಗಡಗೆನಾಡು(ಪರಿಸರ) ತುಂಬಾ ಪ್ರಾಮುಖ್ಯತೆ ಪಡೆದಿದೆ. ಇಲ್ಲಿ ಶಿರೂರ ಗ್ರಾಮವೆಂಬುದು ಶ್ರೀಪುರವಾಗಿ ಬ್ರಾಹ್ಮಣರ ಅಗ್ರಹಾರವಾಗಿ, ಶೈಕ್ಷಣಿಕ ಕೇಂದ್ರವಾಗಿ, ಪ್ರಮುಖ ದ್ರಾವಿಡ, ನಾಗರ, ಫಾಂಸನಾ ವಾಸ್ತುಶೈಲಿ ದೇವಾಲಯಗಳ ಸಮೂಹದ ಚಾಲುಕ್ಯ, ಕಲ್ಯಾಣ ಚಾಲುಕ್ಯ ವಾಸ್ತುಶೈಲಿ ಕೇಂದ್ರವೆನಿಸಿದೆ. ಇಲ್ಲಿ ಹಲವಾರು ಶಾಸನ, ದೇವಾಲಯ, ತಟಾಕ, ಕೆರೆ, ಕಟ್ಟೆಗಳು ನಿರ್ಮಾಣವಾಗಿವೆ. ಅದೇ ರೀತಿ ಹಳ್ಳೂರ ಗ್ರಾಮವು ಹಿಂದೆ ಹಳ್ಳವೂರ, ಹಳ್ಳಪುರವೆಂದು ಕರೆಯಿಸಿಕೊಂಡು ರಾಷ್ಟ್ರಕೂಟ, ಕಲ್ಯಾಣಚಾಲುಕ್ಯರ ಕಾಲದ ಪ್ರಮುಖ ಪಟ್ಟಣವಾದಂತೆ ಜೈನ, ಶೈವ ದೇವಾಲಯಗಳ ವಾಸ್ತುಶಿಲ್ಪ ಕೇಂದ್ರವಾಗಿತ್ತು. ಹೀಗೆ ಹಲವಾರು ದೃಷ್ಟಿಯಿಂದ ನೋಡಿದರೆ ಕನ್ನಡನಾಡಿನ ಸಂಸ್ಕೃತಿಯ ಬೆಳವಣಿಗೆಯಲ್ಲಿ ಬಾಗಡಗೆ-೭೦ರ ಪಾತ್ರವು ಹಿರಿದಾಗಿದ್ದು ಅದರ ಚರಿತ್ರೆ ರಚನೆಗೆ ಸಾಧನ ಸಾಮಗ್ರಿಗಳ ಕೊರತೆ ಇರುವುದಿಲ್ಲ.

ಒಂದು ಪ್ರದೇಶದ ಚರಿತ್ರೆಯ ರಚನೆಗೆ ಸಾಧನ ಸಾಮಗ್ರಿಗಳ ಸಹಾಯ ಪಡೆಯುವುದು ಅನಿವಾರ್ಯ. ಆದ್ದರಿಂದ ಬಾಗಲಕೋಟೆ ಪರಿಸರದ ಚರಿತ್ರೆಗೂ ಈ ಸಾಧನ ಸಾಮಗ್ರಿಗಳೇ ಪ್ರಮುಖ ದಾಖಲೆಗಳಾಗಿವೆ. ಇಂತಹ ಸಾಧನ ಸಾಮಗ್ರಿಗಳನ್ನು ಕಲೆಹಾಕಿಕೊಂಡು ಪ್ರಾಚ್ಯವಸ್ತು ಮತ್ತು ಸಾಹಿತ್ಯವೆಂಬ ಎರಡು ರೀತಿಯಲ್ಲಿ ವಿಭಾಗಿಸಿ ನೋಡಲಾಗಿದೆ. ಪ್ರಾಚ್ಯವಾಸ್ತುವಿನಲ್ಲಿ ಶಾಸನ, ನಾಣ್ಯ ಹಾಗೂ ವಾಸ್ತು ಸ್ಮಾರಕಗಳು ಸೇರುವವು. ಸಾಹಿತ್ಯಾಧಾರಗಳಲ್ಲಿ ದೇಶೀಯ ಸಾಹಿತ್ಯ ಬರವಣಿಗೆ, ವಿದೇಶಿಯ ಬರವಣಿಗೆ ಬರುತ್ತವೆ. ಈ ಮಹಾಪ್ರಬಂಧವು ಪ್ರಾಚ್ಯವಸ್ತು ಮೂಲಾಧಾರಗಳಲ್ಲಿ ಶಾಸನ, ಸ್ಮಾರಕಗಳ(ದೇವಾಲಯಶಿಲ್ಪ) ಸಹಕಾರವನ್ನು ಸಂಪೂರ್ಣವಾಗಿ ಪಡೆದುಕೊಂಡಿದೆ. ಸಾಹಿತ್ಯಾಧಾರದಲ್ಲಿ ದೇಶೀಯವಾಗಿ ಅದರಲ್ಲಿಯೂ ಪ್ರಾಚೀನ ಮತ್ತು ಮಧ್ಯ, ಆಧುನಿಕ ಗ್ರಂಥಗಳ ಸಹಕಾರವನ್ನು ಪೂರ್ಣವಾಗಿ ಆಳವಡಿಸಿಕೊಂಡಿದೆ.

ಪ್ರಾಚ್ಯಮೂಲಾಧಾರಗಳಲ್ಲಿ ಶಾಸನಗಳು ಚರಿತ್ರೆಯ ಪುನಾರಚನೆಯಲ್ಲಿ ವಹಿಸಿದ ಪಾತ್ರವು ತುಂಬಾ ಮಹತ್ವದ್ದು. ನಮ್ಮ ದೇಶ, ರಾಜ್ಯ, ಜಿಲ್ಲೆ ಇತ್ಯಾದಿಗಳ ಚರಿತ್ರೆಗೆ ಶಾಸನಗಳು ಜೀವನಾಡಿಯಾಗಿದ್ದು, ಮೂಲದಾಖಲೆಗಳಾಗಿ ಬಳಕೆಯಾಗುತ್ತಲಿವೆ. ಇಂತಹ ಶಾಸನಗಳು ಘನ ಸರ್ಕಾರಗಳ ಧನಸಹಾಯದಿಂದ ಉನ್ನತ ಶಿಕ್ಷಣ ಕೇಂದ್ರಗಳಾದ ವಿಶ್ವವಿದ್ಯಾಲಯಗಳ ಸಂಶೋಧನೆಗಳಿಂದ ಹೊರಬಂದು ಪ್ರಕಟಗೊಂಡಿವೆ. ಮುಖ್ಯವಾಗಿ ಬಾಗಲಕೋಟೆ ಪರಿಸರಕ್ಕೆ ಸಂಬಂಧಿಸಿದಂತೆ. South Indian Inscriptions (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್) ಎಂಬ ಶಾಸನ ಸಂಪುಟಗಳಾದ ಸಂಪುಟ-೧೫, ಸಂಪುಟ-೧೧, ಭಾಗ-೧ರಲ್ಲಿ ಪ್ರಕಟಗೊಂಡಿವೆ. ಅವೇ ಶಾಸನಗಳನ್ನು ಮತ್ತೊಮ್ಮೆ ಪರಿಷ್ಕರಿಸಿ ಕನ್ನಡ ವಿಶ್ವವಿದ್ಯಾಲಯ,

ಹಂಪಿಯ ಶಾಸನ ವಿಭಾಗವು ಹೊರತಂದ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೯ರಲ್ಲಿ ಪ್ರಕಟಗೊಂಡಿವೆ. ಇವುಗಳಲ್ಲಿ ಬಾಗಲಕೋಟೆ ಪರಿಸರಕ್ಕೆ ಸಂಬಂಧಿಸಿದ ಚರಿತ್ರೆಯ ಅಧ್ಯಯನಕ್ಕೆ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಮಾಂಡಲಿಕರಾದ ಸಿಂಧ ಹಾಗೂ ಕಳಚೂರಿ, ಯಾದವ, ವಿಜಯನಗರದ ಕಾಲಾವಧಿಯಲ್ಲಿ ಹಾಕಿಸಿದ ಶಾಸನಗಳು ಪ್ರಮುಖವಾಗಿದ್ದರೂ ಅವುಗಳಲ್ಲಿ ೨೧ ಶಾಸನಗಳು ಉಪಯುಕ್ತವಾಗಿವೆ. ಚರಿತ್ರೆಯ ರಚನೆ ಮತ್ತು ಸಾಂಸ್ಕೃತಿಕ ಇತಿಹಾಸ ತಿಳಿದುಕೊಳ್ಳಲು ಪ್ರಕಟಿತ ಶಾಸನಗಳು ಆಧಾರಗಳಾಗಿದ್ದು ಪ್ರಸ್ತುತ ಅಧ್ಯಯನ ಇವುಗಳ ಸಹಾಯ ಪಡೆಯುವುದರ ಜೊತೆಯಲ್ಲಿ ಪ್ರಾದೇಶಿಕ ಶಾಸನಗಳ ಸಹಕಾರವನ್ನು ಪಡೆದುಕೊಂಡಿದೆ.

ಬಾಗಲಕೋಟೆ ಪರಿಸರದಲ್ಲಿ ದೊರೆತ ಶಾಸನಗಳು ಹೆಚ್ಚಾಗಿ ದಾನಶಾಸನಗಳಾಗಿವೆ. ಇಲ್ಲಿ ಸಿಕ್ಕ ಶಾಸನಗಳು ಬಹಳಷ್ಟು ಪ್ರಕಟಿತಗೊಂಡಿವೆ. ಆದರೂ ಅವುಗಳಿಂದ ದೊರೆಯುವ ಮಾಹಿತಿ ಮಾತ್ರ ದೊಡ್ಡದಾಗಿದೆ. ಈ ಶಾಸನಗಳು ಯಾವುದೇ ಮಾದರಿಯಲ್ಲಿ ಇಂದು ನಮಗೆ ಕಂಡುಬಂದರೂ ಒಂದಿಲ್ಲೊಂದು ರೀತಿಯಲ್ಲಿ ಅವು ನಾಡಿನ ಚರಿತ್ರೆಗೆ ವಿಷಯ ಸಾಮಗ್ರಿಯನ್ನೊದಗಿಸುತ್ತವೆ.

ಪ್ರಾಚ್ಯಾಮೂಲಾಧಾರಗಳಲ್ಲಿ ಸ್ಮಾರಕಗಳು, ಪಳೆಯುಳಿಕೆಗಳು ದೇಶದ ಮಾನವ ಸಂಸ್ಕೃತಿಯ ಪ್ರತಿಬಿಂಬಗಳೆಂದೇ ಕರೆಯಿಸಿಕೊಂಡಿವೆ. ಪ್ರಾಚೀನ ಪಳೆಯುಳಿಕೆಯ ಸಾಮಗ್ರಿಗಳು ಮನುಷ್ಯ ಬರಹ ಕಂಡುಹಿಡಿಯದ ಹಿಂದಿನ ಕಾಲದ ಮಾನವ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಉಪಯುಕ್ತ ದಾಖಲೆಗಳೆನಿಸಿವೆ. ಅದೇ ರೀತಿಯಾಗಿ ಬರವಣಿಗೆ ಕಂಡುಕೊಂಡ ಸಮಕಾಲೀನ ಹಾಗೂ ನಂತರದ ಕಾಲದಲ್ಲಿ ಮನುಷ್ಯನ ಧಾರ್ಮಿಕ ನಂಬಿಕೆಯಿಂದ ಹಾಗೂ ಅವನ ನಾಗರಿಕ ಬದುಕಿಗೆ ಬಳಕೆಯಾದ ಗೃಹ, ಕೋಟೆ, ಕೊತ್ತಲ ಇತ್ಯಾದಿಗಳು ಮತ್ತು ವಾಸ್ತುಶಿಲ್ಪ ದೇವಾಲಯಗಳು ಸಹ ಚರಿತ್ರೆ ರಚನೆಗೆ ಮೂಲ ದಾಖಲೆಗಳಾಗಿ ಪರಿಗಣಿತವಾಗಿವೆ. ಈ ಎಲ್ಲ ಸ್ಮಾರಕಗಳ ಅಧ್ಯಯನವು ಬೇರೆ ಬೇರೆ ಧರ್ಮಗಳ ಪ್ರಭಾವ, ಜನರ ಜೀವನಕ್ರಮ, ಅವರ ಕಾಲದ ಕಲಾಭಿರುಚಿ, ಕರಕುಶಲತೆ, ಧಾರ್ಮಿಕ ನಂಬಿಕೆ, ಆರ್ಥಿಕ ಉನ್ನತೀಕರಣ ವಿವಿಧ ವಾಸ್ತುಶಿಲ್ಪ ಪ್ರಭೇದ ಇತ್ಯಾದಿ ಚಿತ್ರಣ ಒದಗಿಸುತ್ತವೆ. ಇವಲ್ಲದೆ, ಸಾರ್ವಜನಿಕ ಕಟ್ಟೆ, ಕೆರೆ, ತಟಾಕ, ಧರ್ಮತಿ ಬಾವಿ, ಅರವಟ್ಟಿಗೆ, ಮಂಟಪ, ಕೋಟೆ, ವಾಸದ ಗೃಹ, ರಾಜಧಾನಿಯ ಅರಮನೆ ಉದ್ಯಾನ ಇತ್ಯಾದಿಗಳು ಕೂಡಾ ಉಪಯುಕ್ತ ದಾಖಲೆಗಳಾಗಿ ಕೆಲವೊಮ್ಮೆ ಸಹಾಯ ಮಾಡುತ್ತವೆ.

ಧಾರ್ಮಿಕ ಮತ್ತು ಲೌಕಿಕ ಬದುಕಿನ ಸ್ಮಾರಕ ಶಿಲೆಗಳಿಗೆ ಸಂಬಂಧಿಸಿದಂತೆ ವೀರಗಲ್ಲುಗಳು ಮೊದಲಸ್ಥಾನ ಪಡೆದುಕೊಂಡಿವೆ. ಇವುಗಳಲ್ಲದೆ ಮಾಸ್ತಿ, ನಿಸಿದಿಗೆ ಕಲ್ಲುಗಳು ದೊರಕುವವು. ಯುದ್ಧದಲ್ಲಿ(ಯಾವುದೇ ರೀತಿಯ) ಮಡಿದ ವೀರನ ನೆನಪಿಗಾಗಿ ನಿಲ್ಲಿಸಲಾದ ಕಲ್ಲುಗಳು ವೀರಗಲ್ಲುಗಳಾಗಿವೆ.

ಗಂಡನೊಂದಿಗೆ ಬೆಂಕಿಯಲ್ಲಿ ಹಾರಿ ಪ್ರಾಣ ತೆತ್ತು ಸಹಗಮನವಾದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳು ಮಾಸ್ತಿ, ಮಹಾಸತಿಗಲ್ಲುಗಳಾಗಿವೆ. ಇನ್ನು ರಾಜಕೀಯ ಮತ್ತು ಸಾಮಾಜಿಕ ಕಾರಣಕ್ಕಾಗಿ ಪ್ರಾಣತೆತ್ತರೆ ಅವನು ಸಹ ವೀರಗಲ್ಲುಗಳಲ್ಲಿ ಸೇರಿಸಲಾಗುತ್ತದೆ. ಜೈನರು ಧಾರ್ಮಿಕ ವಿಧಿಯಿಂದ ವ್ರತಾಚರಣೆ ಕೈಗೊಂಡು ಮರಣ ಹೊಂದಿದರೆ ಅವರ ನೆನಪಿಗಾಗಿ ನೆಟ್ಟ ಕಲ್ಲುಗಳನ್ನು ನಿಸಿದಿ ಸ್ಮಾರಕವೆಂದು ಕರೆಯಲಾಗುತ್ತದೆ.

ಸಾಹಿತ್ಯವು ಸಹ ಜನರ ನಿತ್ಯ ಬದುಕಿನ ಪ್ರತಿಬಿಂಬವಾಗಿದೆ. ಸಾಹಿತ್ಯವು ಆಯಾ ಕಾಲದ ಜನರ ಜೀವನವನ್ನು ಎತ್ತಿ ತೋರಿಸಿದೆ. ಇಲ್ಲಿ ಪ್ರಾಚೀನ ಪುರಾಣ-ಕಾವ್ಯಗಳು ನಮ್ಮ ಅಧ್ಯಯನಕ್ಕೆ ಬಳಕೆಗೊಂಡಿಲ್ಲ. ಆಧುನಿಕ ಸಾಹಿತ್ಯ ಗ್ರಂಥಗಳು, ಸಂಶೋಧನ ಗ್ರಂಥಗಳು, ಬಿಡಿ ಬಿಡಿಯಾದ ಬರಹಗಳು ಚರಿತ್ರೆ ರಚನೆಯಲ್ಲಿ ಸಾಕಷ್ಟು ಮಹತ್ವ ಪಡೆದಿದ್ದು ಅವುಗಳ ಸಹಕಾರದಿಂದ ಪ್ರಸ್ತುತ ಅಧ್ಯಯನ ರೂಪುಗೊಂಡಿದೆ.

ಅಧ್ಯಯನದ ರೀತಿ

ಪ್ರಸ್ತುತ ಅಧ್ಯಯನವು ಬಾಗಡಗೆ-೭೦ ನಾಡಾಗಿ ರೂಪುಗೊಳ್ಳುವ ಪೂರ್ವದ ಅವಧಿಯಿಂದ ಹಿಡಿದು ಬಾಗಲಕೋಟೆ ಹೆಸರು ಪಡೆಯುವುದಕ್ಕೂ ಮುನ್ನ ವಿಜಯನಗರ ಸಾಮ್ರಾಜ್ಯ ಕೊನೆಗೊಳ್ಳುವ ಕಾಲದವರೆಗಿನ ಅವಧಿ ಹೊಂದಿದ್ದು, ಅದರ ಒಟ್ಟು ಸ್ಥಿತಿಗತಿಯ ಸಮಗ್ರ ಚಿತ್ರಣ ನೀಡುವುದೇ ಈ ಮಹಾಪ್ರಬಂಧದ ಮೂಲ ಉದ್ದೇಶವಾಗಿದ್ದು, ಅದಕ್ಕಾಗಿ ಮಾನವನ ಪಳೆಯುಳಿಕೆ, ಶಾಸನ, ಆಧುನಿಕ ಸಾಹಿತ್ಯ ಗ್ರಂಥಗಳನ್ನು ಸಾಧನ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ.

ಚರಿತ್ರೆಯ ಪೂರ್ವೇತಿಹಾಸಕ್ಕೆ ಸಂಬಂಧಿಸಿದಂತೆ ಮಾನವನು ಅಂದು ಬಿಟ್ಟು ಹೋದ ಪಳೆಯುಳಿಕೆಗಳಾದ ಕಲ್ಲಿನ ಆಯುಧಗಳು, ಮಣ್ಣಿನ ಮಡಿಕೆಗಳು, ಎಲುಬು, ಹಸ್ತಿದಂತ, ಬೆಂಕಿಕಲ್ಲುಗಳು ಬಾಗಲಕೋಟೆ ಪರಿಸರದಲ್ಲಿ ಸಾಕಷ್ಟು ನೆಲೆಗಳಲ್ಲಿ ಕಂಡುಬರುವವು. ಇವುಗಳನ್ನು ಆದಿಶಿಲಾಯುಗ, ಮಧ್ಯ, ಅಂತ್ಯಶಿಲಾಯುಗ, ನೂತನ ಶಿಲಾಯುಗ, ತಾಮ್ರಶಿಲಾಯುಗ, ಬೃಹತ್(ಕಬ್ಬಿಣ) ಶಿಲಾಯುಗವೆಂದು ವಿಂಗಡಿಸಿಕೊಂಡು ಆಯಾ ಕಾಲದ ಪಳೆಯುಳಿಕೆಗಳು ಯಾವ ನೆಲೆಯಲ್ಲಿ ದೊರಕುತ್ತವೆ ಎಂಬುದನ್ನು ತಿಳಿದುಕೊಂಡು ಅಧ್ಯಯನಕ್ಕೆ ಬಳಸಲಾಗಿದೆ. ಪ್ರಬಂಧಕ್ಕೆ ಶಾಸನಾಧಾರಗಳು ಪ್ರಮಾಣೀಭೂತ ಆಕರಗಳಾಗಿದ್ದರಿಂದ ಪ್ರತಿಯೊಂದು ಶಾಸನಗಳನ್ನು ಪ್ರಬಂಧದ ಅಧ್ಯಾಯಗಳ ವಿಷಯಕ್ಕೆ ತಕ್ಕಹಾಗೆ ಪಟ್ಟಿಕೆ ರೂಪದಲ್ಲಿ ಸಿದ್ಧಪಡಿಸಿಕೊಂಡು ಕಾಲಮಾನ ಕ್ರಮದಲ್ಲಿ ಅವುಗಳನ್ನು ಜೋಡಿಸಿ ಬಳಸಲಾಗಿದೆ. ಪ್ರಾಕ್ತನಶಾಸ್ತ್ರದ ಮಾನವನ ಪಳೆಯುಳಿಕೆ, ಶಾಸನಗಳು, ಆಧುನಿಕ ಗ್ರಂಥಗಳು ಮತ್ತು ಅನ್ವೇಷಣೆಯಲ್ಲಿ

ಕಂಡುಬಂದ ದೇವಾಲಯ ಮೂರ್ತಿಶಿಲ್ಪಗಳ ಒಟ್ಟು ಮಾಹಿತಿಗಳನ್ನು ಕಲೆಹಾಕಿ ಅಧ್ಯಯನಕ್ಕೊಂದು ಸ್ವರೂಪ ಕೊಡಲು ಪ್ರಯತ್ನಿಸಲಾಗಿದೆ.

ಅಧ್ಯಯನ ಸ್ವರೂಪ

ಅಧ್ಯಾಯ ಒಂದು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇದರಲ್ಲಿ ಅಧ್ಯಯನದ ಕುರಿತು ವಿಷಯ, ವಿಷಯದ ಆಯ್ಕೆಯ ಉದ್ದೇಶ, ವಿಷಯದ ಆಯ್ಕೆಯ ವ್ಯಾಪ್ತಿ(ಕಾಲಮಾನ), ಅಧ್ಯಯನಕ್ಕೆ ಬೇಕಾದ ದಾಖಲೆ, ಆಕರ ಸಾಮಗ್ರಿ ಮತ್ತು ಮುಂದಿನ ಅಧ್ಯಯನದ ರೀತಿ, ಯಾವ ರೀತಿ ಮಂಡನೆಯಾಗಿದೆ ವಿಷಯ ಎಂಬುದರ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎರಡು

ಬಾಗಲಕೋಟೆ ಪರಿಸರದ ಭೌಗೋಳಿಕ ಮತ್ತು ಪ್ರಾಗೈತಿಹಾಸಿಕ ಸಂಸ್ಕೃತಿ

ಈ ಅಧ್ಯಾಯದಲ್ಲಿ ಬಾಗಲಕೋಟೆ ಅಥವಾ ಪ್ರಾಚೀನ ಬಾಗಡಗೆ–೭೦ರ ನಾಡಿನ(ಬಾಗಡಗೆ–ಇಂದಿನ ಬಾಗಲಕೋಟೆ) ಪರಿಸರದ ಭೌಗೋಳಿಕ ಲಕ್ಷಣಗಳಾದ ಕಲ್ಲು, ಮಣ್ಣು, ನೀರು, ನದಿ, ಹವಾಮಾನ, ಬಿಸಿಲಿನ ಪ್ರಮಾಣ, ಖನಿಜಸಂಪತ್ತು, ಅರಣ್ಯಪ್ರದೇಶ, ಇತ್ಯಾದಿ ಕುರಿತು ಚರ್ಚಿಸಲಾಗಿದೆ. ಹಾಗೆಯೇ ಭೌಗೋಳಿಕ ಪರಿಸರಕ್ಕನುಗುಣವಾಗಿ ಜಿಲ್ಲೆಯಲ್ಲಿ ಬೆಳೆದು ಬಂದ ಪ್ರಾಗೈತಿಹಾಸಿಕ ಮಾನವನ ಪಳೆಯುಳಿಕೆಗಳ ಕಾಲಘಟ್ಟ, ಅಂದರೆ ಹಳೆ ಶಿಲಾಯುಗ, ಅಂತ್ಯ ಶಿಲಾಯುಗ, ನೂತನಯುಗ, ಬೃಹತ್ ಶಿಲಾ ಸಂಸ್ಕೃತಿಗಳ ಜನರು ಈ ಪ್ರದೇಶದಲ್ಲಿ ಯಾವ ರೀತಿ ತಮ್ಮ ಜೀವನ ಸಂಸ್ಕೃತಿ ಕಟ್ಟಿಕೊಂಡಿದ್ದರೆಂಬುದನ್ನು ತಿಳಿಸುವುದಾಗಿದೆ.

ಅಧ್ಯಾಯ ಮೂರು

ಬಾಗಲಕೋಟೆ ಪರಿಸರದ ರಾಜಕೀಯ ಚರಿತ್ರೆ

ಇದರಲ್ಲಿ ಬಾಗಡಗೆ ನಾಡು ಯಾವ ಅರಸುಮನೆತನಗಳ ಸಾರ್ವಭೌಮ ಅಧಿಕಾರಕ್ಕೆ ಒಳಪಟ್ಟಿತ್ತು ಎಂಬುದರ ಜೊತೆಗೆ ಪ್ರಾಚೀನ ಕಾಲದಿಂದ ಕ್ರಿ.ಶ. ೧೫೬೫ರ ಮಧ್ಯಾವಧಿಯಲ್ಲಿ ಬರುವ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಕಲಚುರಿ, ಯಾದವ ಮತ್ತು ವಿಜಯನಗರದ ಅರಸರ ಕುರಿತು ದಾಖಲೆಗಳ ಸಹಾಯದಿಂದ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು

ಬಾಗಡಗೆ-೭೦ರ ಒಂದು ಆಡಳಿತ ವಿಭಾಗ

ಇದರಲ್ಲಿ ಇಂದಿನ ಬಾಗಲಕೋಟೆ ನಗರ(ಊರು) ಹಿಂದೆ ಬಾಗಡಗೆ-೭೦ ನಾಡಿನ ರಾಜಧಾನಿ(ಕೇಂದ್ರ)ಯಾಗಿದ್ದು, ಪ್ರಾಚೀನ ಬಾಗಡಗೆ-೭೦ ವ್ಯಾಪ್ತಿ ಎಲ್ಲಿಯವರೆಗೆ ಇತ್ತು ಹಾಗೂ ಅದು ಯಾವ ವಂಶಸ್ಥರ ಕಾಲದಲ್ಲಿ ಹೇಗೆ ರೂಪು ಪಡೆಯುತ್ತ ಬಂದು ಬಾಗಡಗೆ-೭೦ ನಾಡಾಗಿ, ಒಂದು ಆಡಳಿತದ ಘಟಕವಾಗಿ ಹೊರಹೊಮ್ಮಿದ ಕುರಿತು ನೋಡಲಾಗಿದೆ.

ಜೊತೆಗೆ ಈ ಸಾರ್ವಭೌಮರ ಅಧೀನರಾಗಿ ನಾಡುಗಳನ್ನು ಆಳಿದ ಸಾಮಂತ, ಮಹಾಮಂಡಳೇಶ್ವರ ಕುರಿತು ನೋಡಲಾಗಿದೆ. ಇವರಲ್ಲಿ ಬಾಗಡಗೆ ನಾಡನ್ನು ಅಳಿದ ಸಿಂಧ ವಂಶದ ಕುರಿತು ಸಮಗ್ರವಾಗಿ ಮತ್ತು ಅವರ ಇತರ ಸಿಂಧ ವಂಶಸ್ಥರ ಕುರಿತು ಸಹ ವಂಶಾವಳಿಗಳ ಸಮೇತ ನೋಡಲಾಗಿದೆ. ಸಾಮಂತ, ಮಂಡಳೇಶ್ವರ ಕೈಕೆಳಗೆ ಅಧೀನ ಅಧಿಕಾರಿ ವರ್ಗವಾದ ಪ್ರಭುಗಳು, ದಂಡನಾಯಕರು, ಗಾವುಂಡ, ಪೆರ್ಗ್ಗಡೆಗಳ ಕುರಿತು ಸಹ ಚರ್ಚಿಸಲಾಗಿದೆ.

ಅಧ್ಯಾಯ ಐದು

ಬಾಗಲಕೋಟೆ ಪರಿಸರದ ದೇವಾಲಯಗಳು

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಕೇಂದ್ರಬಿಂದುಗಳಾದ ದೇವಾಲಯಗಳ ಕುರಿತು ನೋಡಲಾಗಿದ್ದು, ಅವು ಯಾವ ಗ್ರಾಮದಲ್ಲಿವೆ, ಯಾರು ಕಟ್ಟಿಸಿದರು, ಯಾವ ಶೈಲಿ, ಯಾರ ಕಾಲದ ದೇವಾಲಯ, ಅವುಗಳ ಲಕ್ಷಣಗಳು, ತಲವಿನ್ಯಾಸ ಇತ್ಯಾದಿ ವಿಷಯಗಳನ್ನು ಮುಖ್ಯವಾಗಿ ಪ್ರಾಚೀನ ವಾಸ್ತುಶಾಸ್ತ್ರ ಗ್ರಂಥಗಳ ಮುಖಾಂತರ ತಿಳಿದುಕೊಳ್ಳಲಾಗಿದೆ.

ಅಧ್ಯಾಯ ಆರು

ಮೂರ್ತಿಶಿಲ್ಪ ಕಲೆ

ಅಧ್ಯಯನದ ಕೇಂದ್ರ ಬಿಂದುವಾದ ಮೂರ್ತಿಶಿಲ್ಪ ಕಲೆಯ ಕುರಿತು ಚರ್ಚಿಸಲಾಗಿದೆ. ಮೂರ್ತಿಗಳ ಭಾವಭಂಗಿ, ಮುದ್ರೆ, ಆಯುಧ, ಲಕ್ಷಣಗಳನ್ನು, ಶಿಲ್ಪಗಳು ದೊರೆಯುವ ಗ್ರಾಮಗಳು ಅವು ಯಾವ ಧರ್ಮಕ್ಕೆ ಸೇರಿದವು, ಯಾವ ದೇವರ ಶಿಲ್ಪಗಳು, ಬಲಿದಾನದ ಶಿಲ್ಪಗಳಾದ ಮಾಸ್ತಿ, ನಿಸಿದಿ, ವೀರಗಲ್ಲು ಸ್ಮಾರಕಗಳ ಕುರಿತು ಸಮಗ್ರವಾಗಿ ಚಿತ್ರಿಸಲಾಗಿದೆ.

ಅಧ್ಯಾಯ ಏಳು

ಸಮಾರೋಪ

ಇದರಲ್ಲಿ ಮೇಲಿನ ಆರು ಅಧ್ಯಾಯಗಳಲ್ಲಿ ವ್ಯಕ್ತವಾದ, ಮಂಡಿಸಲ್ಪಟ್ಟ ವಿಷಯಗಳ ಸಂಕ್ಷಿಪ್ತ ರೂಪವಾಗಿದೆ.

ಮೇಲಿನ ಅಧ್ಯಾಯಗಳಲ್ಲಿ ಬಾಗಡಗೆ-೭೦ರ ಹಾಗೂ ಆಧುನಿಕ ಬಾಗಲಕೋಟೆಯ ಪರಿಸರದಲ್ಲಿ ಇದುವರೆಗೆ ಬೆಳಕು ಕಂಡಿರುವ ಪ್ರಾಗೈತಿಹಾಸಿಕ ಪಳೆಯುಳಿಕೆ ಮತ್ತು ಪ್ರಾಕ್ತನ ಮೂಲಾಧಾರಗಳಾದ ಶಾಸನ, ಸ್ಮಾರಕ, ದೇವಾಲಯ ಶಿಲ್ಪಗಳನ್ನು ಒಟ್ಟುಗೂಡಿಸಿ ಅವುಗಳಿಂದ ತಿಳಿದುಬರುವ ವಿಷಯದ ಸ್ಪಷ್ಟನೆಗಾಗಿ, ಅನ್ವೇಷಣೆ ಕೈಗೊಂಡು ಆಧುನಿಕ ಗ್ರಂಥಗಳ, ಛಾಯಾಚಿತ್ರಗಳ ಸಹಕಾರದಿಂದ ಮುಂದಿನ ಅಧ್ಯಾಯಗಳಲ್ಲಿರುವ ವಿಷಯಗಳನ್ನು ಸಮರ್ಥವಾಗಿ ಚರ್ಚೆ ಮಾಡಿ ಒಂದು ಸುಸಂಬದ್ಧ ಪ್ರಬಂಧ ರಚನೆ ಮಾಡಲು ಪ್ರಯತ್ನಿಸಲಾಗಿದೆ.

ಗ್ರಂಥಋಣ

೧. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್(ಸಂ), **'ಮಲೆಕರ್ನಾಟಕದ ಅರಸುಮನೆತನಗಳು'**, ಪು. ೩೩೧.

೨. ಕೊಪ್ಪಾ ಎಸ್.ಕೆ., **'ತರ್ದವಾಡಿ ನಾಡು: ಒಂದು ಅಧ್ಯಯನ'**, ಪು. ೧.

೩. ಚಿದಾನಂದಮೂರ್ತಿ ಎಂ., **'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'** ನೋಡಲಾಗಿದೆ.

೪. ಸುಭಾಸ, ರಾ.ಚಂಚೋಳಿಯವರ, **'ಪ್ರಾಕ್ತನಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ'** (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ನೋಡಲಾಗಿದೆ.

೫. **'South Indian Inscriptions, ಸಂಪುಟ-೧೧'**, ಭಾಗ- ೧, ೨ ಹಾಗೂ ಸಂಪುಟ-೧೫, ಸಂಪುಟ-೨೦, **'Epigraphia Indica, Inscriptions of Karnataka, Bombay Karnatka Inscriptions'** ಹಾಗೂ ಕನ್ನಡ ವಿಶ್ವವಿದ್ಯಾಲಯ, ಹಂಪಿ ಹೊರತಂದ **'ರಾಯಚೂರು ಜಿಲ್ಲೆ ಶಾಸನ ಸಂಪುಟ-೭'**, **'ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯'** ಗಳನ್ನು ನೋಡಲಾಗಿದೆ.

ಅಧ್ಯಾಯ ಎರಡು

ಬಾಗಲಕೋಟೆ ಪರಿಸರದ ಭೌಗೋಳಿಕ ಮತ್ತು ಪ್ರಾಗೈತಿಹಾಸಿಕ ಸಂಸ್ಕೃತಿ

೨.೧. ಭೌಗೋಳಿಕ ಪರಿಸರ

ಭೌಗೋಳಿಕವಾಗಿ ಬಾಗಲಕೋಟ ಪರಿಸರ ಒಂದೇ ರೀತಿಯ ಒಣ ಮತ್ತು ಶುಷ್ಕವಲಯಕ್ಕೆ ಸೇರಿದೆ. ಇದು ಬಹು ಪ್ರಾಚೀನ ಕಾಲಕ್ಕೆ ಸೇರಿದೆ. ಘಟಪ್ರಭಾ ನದಿಯ ದಕ್ಷಿಣ, ಉತ್ತರ ದಡಗಳ ಗುಂಟ ವಿಶಾಲವಾಗಿ ಕಪ್ಪು ಮಣ್ಣು ಹರಡಿಕೊಂಡಿದೆ. ಹಾಗೂ ಸೀತಿಮನಿ, ಭಗವತಿ, ರಾಂಪೂರ, ಬೇವೂರ, ಹಳ್ಳೂರ, ಶಿರೂರ ಕಿರಸೂರ, ಸಿಂದಗಿ, ಕೇಸನೂರ, ಬಾಗಲಕೋಟ, ಗದ್ದನಕೇರಿ, ಯಂಕಂಚಿ ಇತ್ಯಾದಿಗಳ ಪರಿಸರದಲ್ಲಿ ಕಪ್ಪು ಎರೆಮಣ್ಣು ವಿಶಾಲವಾಗಿ ಹರಡಿದೆ. ಬಾಗಲಕೋಟೆಯ ಉತ್ತರಭಾಗದ ಶಿರೂರ ಗದ್ದನಕೇರಿ ಅನವಾಲ, ಚಿಂಚಕಂಡಿ ಇತ್ಯಾದಿ ಗ್ರಾಮಗಳ ಸುತ್ತಲೂ ಕೆಂಪು, ಅರೆ ಕೆಂಪುಹರಳು ಮಣ್ಣು ಹರಡಿಕೊಂಡಿದೆ.

ಕುರುಚಲು ಅರಣ್ಯ ಇಲ್ಲಿಯ ಅಲ್ಪ ಅರಣ್ಯವಾಗಿದೆ. ಬಯಲುಪ್ರದೇಶವೇ ಹೆಚ್ಚು. ಮಣ್ಣು ಫಲವತ್ತಾಗಿದ್ದರೂ ಕೃಷಿ ಉತ್ಪನ್ನ ಗರಿಷ್ಠ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಹೆಚ್ಚು ಭಾಗ ಒಣಬೇಸಾಯಕ್ಕೆ ಸೇರಿದ್ದು ಮಳೆಯಾಶ್ರಿತ ಕೃಷಿಪದ್ಧತಿ ಕಂಡುಬರುತ್ತದೆ. ಅದಾಗ್ಯೂ ಇಂದು ಆಧುನಿಕ ವೈಜ್ಞಾನಿಕ ಕೃತಕ ನೀರಾವರಿ ವ್ಯವಸ್ಥೆ(ನದಿ, ಏತ ನೀರಾವರಿ, ಬೋರ್‌ವೇಲ್ ನೀರಾವರಿ)ಯಿಂದ ಜನರು ಕನಿಷ್ಠವಲ್ಲದ ಮಧ್ಯಮ ಪ್ರಮಾಣದ ಕೃಷಿ ನೀರಾವರಿ ವ್ಯವಸಾಯ ಮಾಡಿಕೊಂಡು ಬದುಕುತ್ತಿದ್ದಾರೆ. ಇಲ್ಲಿ ಕಡಿಮೆ ಪ್ರಮಾಣದ ತೇವಾಂಶದಲ್ಲಿ ಬೆಳೆಯುವ ಜೋಳ, ಸಜ್ಜೆ, ಹತ್ತಿ, ಶೇಂಗಾ, ತೊಗರಿ, ಎಣ್ಣೆ ಬೀಜಗಳು ಇಲ್ಲಿಯ ಮುಖ್ಯ ಬೆಳೆಗಳಾಗಿವೆ.[೧] ವಾಣಿಜ್ಯ ಬೆಳೆಯಾಗಿ ಕಬ್ಬನ್ನು ಅಲ್ಲಲ್ಲಿ ಅಲ್ಪಪ್ರಮಾಣದಲ್ಲಿ ಇಂದು ಬೆಳೆಯಲಾಗುತ್ತಿದೆ.

ಬಾಗಲಕೋಟ ಪ್ರದೇಶಕ್ಕೆ ಹತ್ತಿಕೊಂಡು ಕೃಷ್ಣಾನದಿಯು ಸೀತಿಮನಿಯಿಂದ ಮಂಕಣಿ ಗ್ರಾಮದವರೆಗೆ ಗಡಿಯಾಗಿ ಹರಿಯುತ್ತಿದ್ದರೆ, ಇದರ ಉಪನದಿಯಾದ ಘಟಪ್ರಭಾನದಿಯು ಬಾಗಲಕೋಟ ತಾಲೂಕನ್ನು ಸ್ವಲ್ಪ ಭಾಗ ಸೀಳಿಕೊಂಡು ಅಂದರೆ, ಬೀಳಗಿಯ ಕಾತರಕಿಗ್ರಾಮ, ಬಾಗಲಕೋಟ ತಾಲೂಕಿನ ಗದ್ದನಕೇರಿಯ ಉತ್ತರಕ್ಕೆ ಸೀಳಿಕೊಂಡು ಅಂಕುಡೊಂಕಾಗಿ ಹರಿಯುತ್ತಾ ಬಾಗಲಕೋಟ ನಗರದ ಹತ್ತಿರ ಹಾಯ್ದು ಸ್ವಲ್ಪ ಉತ್ತರಕ್ಕೆ ತಿರುಗಿ ಚಿಕ್ಕಸಂಗಮದಲ್ಲಿ ಕೃಷ್ಣಾನದಿಯಲ್ಲಿ ಸೇರುವುದು. ಬಾಗಲಕೋಟೆ ಪರಿಸರಕ್ಕೆ ಘಟಪ್ರಭಾನದಿಯು ಜೀವ-ಜಲವಾಗಿದೆ.

ಬಾಗಲಕೋಟ ಪ್ರದೇಶ ಮುಂಗಾರು-ಹಿಂಗಾರು ಮಳೆಯ ಸೆರಗಿನ ಪ್ರದೇಶವಾಗಿದೆ. ಆದ್ದರಿಂದ ಇಲ್ಲಿ ಸಸ್ಯಾಹಾರಿಗಳಾದ ಹಾಗೂ ಬರಗಾಲವನ್ನು ತಡೆದುಕೊಳ್ಳುವ ಪ್ರಾಣಿಗಳಾದ ಮೊಲ, ನರಿ, ತೋಳ, ಹಂದಿ, ಉಡ, ಹಾವು ಇತ್ಯಾದಿ ಪ್ರಾಣಿಗಳು ಕಂಡುಬಂದರೆ, ಹಿಂದಿನ ಪ್ರಾಚೀನ ಪ್ರಾಣಿಗಳಾದ ಜಿಂಕೆ, ಕರಡಿ, ಚಿರತೆ, ಹುಲಿ ಇತ್ಯಾದಿ ಪ್ರಾಣಿಗಳು ಇಂದು ಕಂಡುಬರುವುದಿಲ್ಲ.

ಭೂಮಿಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿದಾಗ ಬಾಗಲಕೋಟ ಪ್ರದೇಶ ಪಚ್ಚೇಕಲ್ಲು, ಅಗ್ನಿಶಿಲೆ(Basalt), ಕಲಾದಗಿ(Kaladagi), ಮರಳುಶಿಲೆ(Sand stone), ಸ್ಫಟಿಕಾಂತರಶಿಲೆ (Quartzites), ಸುಣ್ಣದಕಲ್ಲು(Lime stone) ಮುಂತಾದ ಸಂಕೀರ್ಣ ಶಿಲೆಗಳಿಂದ ಆವೃತವಾಗಿದೆ. ಬೇರೆ ಬೇರೆ ಕಡೆಯ ಜಿಲ್ಲೆಗಳಿಗೆ ಹೋಲಿಸಿದರೆ ಬಾಗಲಕೋಟೆ ತಾಲೂಕಿನ ಪರಿಸರದಲ್ಲಿ ಖನಿಜಸಂಪತ್ತು ಅಲ್ಪಪ್ರಮಾಣದಲ್ಲಿದೆ. ಆದರೂ ಮ್ಯಾಂಗನೀಸ್, ತಾಮ್ರ, ಗ್ಲಾಸ್, ಸುಣ್ಣದ ಕಂಕರು, ಸುಣ್ಣದ ಕಲ್ಲು, ಗಾಜಿನ ಮರಳು, ಕ್ಯಾಲ್ಸೈಟ್‌ಗಳಂತಹ ಖನಿಜ ಸಂಪತ್ತು ದೊರಕುವುದು.[೨]

ಸಮುದ್ರದಿಂದ ದೂರ ಹಾಗೂ ಕಡಿಮೆ ಎತ್ತರ ಪ್ರದೇಶವಾಗಿದ್ದು ಹವಾಮಾನ ಯಾವಾಗಲೂ ವೈಪರೀತ್ಯದಿಂದ ಕೂಡಿದೆ. ಒಣಹವೆ ಇರುವುದರಿಂದ ಜನರ ಆರೋಗ್ಯ ಸಮನಾಗಿರುವುದು. ಬೇಸಿಗೆಯಲ್ಲಿ ಹವಾಮಾನವು ಬಿಸಿಯಾಗಿದ್ದು ಗರಿಷ್ಠ ೩೮ ಡಿಗ್ರಿಯಷ್ಟು ಇರುತ್ತದೆ. ಮುಂಗಾರಿಗೆ ನೈಋತ್ಯ ಮಾನ್ಸೂನದ ಆರು ಮಳೆಗಳು ಬರುತ್ತವೆ. ಹಿಂಗಾರಿಗೆ ಈಶಾನ್ಯ ಮಾರುತಗಳು ಅಲ್ಪಪ್ರಮಾಣದಲ್ಲಿ ಮಳೆಯನ್ನು ಸುರಿಸುತ್ತವೆ. ಮಳೆಗಾಲದಲ್ಲಿ ಹೆಚ್ಚಿನ ಮಳೆಯಾದ ನೀರು ಕಲ್ಲುಗುಡ್ಡಗಳ ಅಡಿಯಲ್ಲಿ ಸಂಚಯವಾಗುತ್ತದೆ. ಇಂತಹ ಸಮಪ್ರಮಾಣದ ಹವಾಮಾನದ ಪರಿಸರ ಹೊಂದಿದ ಬಾಗಲಕೋಟ ಪರಿಸರದಲ್ಲಿ ಪ್ರಾಚೀನ ಶಿಲಾಯುಗ ಮಾನವನು ಇಲ್ಲಿಯ ನದಿ, ಬೆಟ್ಟ, ಹಳ್ಳಗಳ ದಡಗಳಲ್ಲಿ ತನ್ನ ಜೀವನ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದಾನೆ.

೧.೨. ಪ್ರಾಗೈತಿಹಾಸಿಕ ಸಂಸ್ಕೃತಿ

ಭೂ ಇತಿಹಾಸವು ಒಟ್ಟು ೪,೫೦೦ ಮಿಲಿಯದಿಂದ ೫,೦೦೦ ಮಿಲಿಯ ವರ್ಷಗಳಷ್ಟು ಪುರಾತನ. ಚಾತುರ್ಥಿಕ ಭೂಯುಗವು ಭೂವಿಕಾಸದ ಚರಿತ್ರೆಯ ಕೊನೆಯ ಭಾಗವಾಗಿದೆ. ಈ ಚಾತುರ್ಥಿಕ ಯುಗವನ್ನು ಪ್ಲೀಸ್ಟೋಸಿನ್ ಮತ್ತು ಹೋಲೊಸಿನ್ ಎಂಬೆರಡು ಭಾಗಗಳಾಗಿ ವಿಂಗಡಿಸಲಾಗಿದೆ. ಈ ಚಾತುರ್ಥಿಕ ಕಾಲವು ವೈಶಿಷ್ಟಪೂರ್ಣ ಹಾಗೂ ವಿಸ್ಮಯಕಾರಿಯಾಗಿದೆ. ಈ ಅವಧಿಯಲ್ಲಿ ಮಾನವ ಗೋರಿಲ್ಲಾ ಚಿಂಪಾಂಜಿ ತರಹದ ತನ್ನ ಪೂರ್ವಜರಿಂದ ಬೆಳವಣಿಗೆ ಹೊಂದುತ್ತಾ ಇಂದಿನ ದೈಹಿಕ ಸ್ವರೂಪವನ್ನು ಪಡೆದನು. ಮನುಷ್ಯನ ದೈಹಿಕ ಸ್ವರೂಪ, ಹವಾಮಾನದ ಬದಲಾವಣೆಯಿಂದ ಹೊಸ ಅವಿಷ್ಕಾರಗಳು ಅವನಿಂದ ನಡೆಯ ಹತ್ತಿದವು. ತನ್ನ ಹೊಟ್ಟೆಗಾಗಿ ಆಹಾರ ಹುಡುಕಲು ಮುಂದಾದಾಗ ಬೇಕಾಗುವ ಉಪಕರಣಗಳನ್ನು ತಯಾರಿಸಿ ಬಳಸಲು ಪ್ರಾರಂಭಿಸಿದ. ಆಹಾರ ಸಂಗ್ರಹಣೆಗೆ ತೊಡಗಿದಾಗ ಬುದ್ಧಿಗೆ ಹೊಳೆದ ಮೊದಲ ವಸ್ತುವೆಂದರೆ ಕಲ್ಲು. ಕಲ್ಲಿನಲ್ಲಿ ಆಯುಧ ತಯಾರಿಸಿ ಬೇಟೆಗೆ ಬಳಸಿದ ಕಾಲವೇ ಆದಿಹಳೆಶಿಲಾಯುಗ.

ಈ ಯುಗವು ಅತ್ಯಂತ ಸುದೀರ್ಘ ಕಾಲವಾಗಿದೆ. ಅದನ್ನು ಕ್ರಮವಾಗಿ ಶಿಲಾಯುಗ, ಮಧ್ಯಶಿಲಾಯುಗ ಮತ್ತು ನವಶಿಲಾಯುಗವೆಂದು ವಿಂಗಡಿಸಿದ್ದಾರೆ. ಇದನ್ನು ಮತ್ತೆ ವರ್ಗೀಕರಿಸಿ ಆದಿಶಿಲಾಯುಗವನ್ನು ಆದಿಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ ಮತ್ತು ಅಂತಿಮ ಹಳೆಶಿಲಾಯುಗವೆಂದು ವಿಂಗಡಿಸಲಾಗಿದೆ. ಈ ಶಿಲಾಯುಗದ ಪ್ರತಿಯೊಂದು ಹಂತವನ್ನು ಪ್ರಾಚೀನ ಮಾನವರು ಉಪಕರಣ ತಯಾರಿಸಲು ಬಳಸಿದ ತಂತ್ರ, ಮಾದರಿ ಹಾಗೂ ಆಕೃತಿಗಳಿಗೆ ಅನುಗುಣವಾಗಿ ನಿರ್ಧರಿಸಿರುವರು.[೩]

೧.೨.೧. ಶಿಲಾಯುಗ ಸಂಶೋಧನೆ

ಭಾರತದ ಭೂ ಅನ್ವೇಷಣೆಯ ವಿಭಾಗದ ಅಂದಿನ ಬ್ರಿಟಿಷ್ ಅಧಿಕಾರಿ ರಾಬರ್ಟ್ ಬ್ರೂಸ್‌ಫೂಟ್ ಕ್ರಿ.ಶ. ೧೮೬೩, ಮೇ ೩೦ ರಂದು ಚೆನ್ನೈನ ಬಳಿಯ ಪಲ್ಲಾವರಮ್‌ದಲ್ಲಿ[೪] ಹಳೆಶಿಲಾಯುಗದ ಉಪಕರಣವೊಂದನ್ನು ಕಂಡುಹಿಡಿದನು. ಅಂದು ರಾಬರ್ಟ್ ಬ್ರೂಸ್‌ಫೂಟ್ ಪ್ರಾರಂಭಿಸಿದ ಕೆಲಸದಿಂದ ಮುಂದಿನ ಶಿಲಾಸಂಸ್ಕೃತಿಗಳ ಸಂಶೋಧನೆಗಳು ಪ್ರಾರಂಭವಾದವು. ಭಾರತೀಯ ಸಂಶೋಧಕರಾದ ಎಚ್.ಡಿ. ಸಂಕಾಲಿಯಾ ಅವರು ಕ್ರಿ.ಶ. ೧೯೫೦ರಲ್ಲಿ ಮಹಾರಾಷ್ಟ್ರದ ನೇವಾಸದ ಬಳಿಯ ಪ್ರವರಾ ನದಿ ದಂಡೆಯಲ್ಲಿ ಉಪಕರಣಗಳನ್ನು ಗುರುತಿಸಿದರು.[೫] ಇವು ಮಧ್ಯಹಳೆಶಿಲಾಯುಗದ ಸಂಸ್ಕೃತಿಯ ಉಪಕರಣಗಳು ಇಲ್ಲಿಂದ ಭಾರತದ ಹಳೆಶಿಲಾಯುಗ ಸಂಸ್ಕೃತಿಯು ಆದಿಹಳೆಶಿಲಾಯುಗದಿಂದ ನವಶಿಲಾಯುಗಗಳು ಹೇಗೆ ಬೆಳೆದುಬಂತೆಂಬುದನ್ನು ಸಿದ್ಧಮಾಡಿತೋರಿಸಲು ತೊಡಗಿದರು.

ಭಾರತದ ಭೂಭಾಗದಲ್ಲಿ ರಾಬರ್ಟ್ ಬ್ರೂಸ್‌ಫೂಟ್‌ನಿಂದ ಆರಂಭವಾದ ಶಿಲಾಯುಗ ಸಂಶೋಧನೆಗಳು ಕರ್ನಾಟಕದಲ್ಲಿಯೂ ನಡೆಯತೊಡಗಿದವು. ಕರ್ನಾಟಕದಲ್ಲಿಯೂ ಬ್ರೂಸ್‌ಫೂಟ್‌ನು ಮೊದಲ ಬಾರಿಗೆ ಶಿಲಾಸಂಸ್ಕೃತಿಯ ಇರುವಿಕೆಯನ್ನು ತೋರಿಸಿಕೊಟ್ಟವನಾಗಿದ್ದಾನೆ. ಕ್ರಿ.ಶ. ೧೮೭೩ರಲ್ಲಿ ಇಂದಿನ ಬಾಗಲಕೋಟ ಜಿಲ್ಲೆಯ ಬಾದಾಮಿ ಹತ್ತಿರದ ಮಲಪ್ರಭಾ ನದಿ ದಂಡೆಯ ಮೇಲಿನ ಗ್ರಾಮಗಳಾದ ಥಾಣಕಶಿರೂರ, ಮೆಣಸಗಿ ಮತ್ತು ಖ್ಯಾಡ ಗ್ರಾಮಗಳಲ್ಲಿ ಪ್ರಾಚೀನ ಶಿಲಾ ಉಪಕರಣ ಇರುವುದನ್ನು ಕಂಡುಹಿಡಿದು ವರದಿ ಮಾಡಿದನು.[೬] ೧೯೪೯-೫೨ರಲ್ಲಿ ಆರ್.ವಿ. ಜೋಶಿಯವರು ಮತ್ತೆ ಮಲಪ್ರಭಾ ನದಿ ಪರಿಸರದ ಕಣಿವೆಯಲ್ಲಿ ಶಿಲಾಯುಗ ಚರಿತ್ರೆಗೆ ತಕ್ಕಂತೆ ಶಾಸ್ತ್ರೀಯ ಅನ್ವೇಷಣೆಯನ್ನು ಮಾಡಿದರು.[೭] ಮುಂದಿನ ೧೯೫೦ ನಂತರದ ಶಿಲಾಯುಗ ಸಂಶೋಧನೆಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ವಿಸ್ತೃತ ಅಧ್ಯಯನ, ಅನ್ವೇಷಣೆಯ ಕಾಲವಾಗಿ ಪರಿಣಮಿಸಿದ್ದರಿಂದ ಕರ್ನಾಟಕ ಒಳಗೊಂಡು ಬಾಗಲಕೋಟ ಪರಿಸರದಲ್ಲಿ ನಡೆದವು. ಇವತ್ತಿಗೂ ನಡೆಯುತ್ತಲಿವೆ. ಭಾರತ ಸರಕಾರವು ಈ ಕಾಯಕಕ್ಕಾಗಿ ಅನೇಕರನ್ನು ನೇಮಕ ಮಾಡಿತು. ಕ್ರಿ.ಶ. ೧೯೫೭ರಿಂದ ಅರ್ಕಿಯಾಲಜಿಕಲ್ ಸರ್ವೇ ಆಫ್ ಇಂಡಿಯ(ಭಾರತೀಯ ಪುರಾತತ್ವ ಇಲಾಖೆ) ವತಿಯಿಂದ ಹಿಂದಿನ ಬಿಜಾಪುರ ಜಿಲ್ಲೆಯಲ್ಲಿ ಸಹ ಪ್ರತಿಯೊಂದು ಗ್ರಾಮಗಳ ಅನ್ವೇಷಣಾಕಾರ್ಯ ನಡೆದಿದ್ದರಿಂದ ನೂರಾರು ಮಾನವನ ನೆಲೆಗಳ ಸ್ಥಳಗಳು ನದಿ, ಹಳ್ಳ, ಕೊಳ್ಳ, ಗುಡ್ಡ ಪ್ರದೇಶಗಳು ಬೆಳಕು ಕಂಡವು. ಇದರ ನೇತೃತ್ವವನ್ನು ಎಂ.ಎಸ್. ದೇಶಪಾಂಡೆಯವರು ವಹಿಸಿದ್ದರು.[೮] ಇದರ ಪರಿಣಾಮವಾಗಿ ನೂರಾರು ಹಳೆಶಿಲಾಯುಗ, ಮಧ್ಯೆಹಳೆಶಿಲಾಯುಗ, ಉತ್ತರಹಳೆಶಿಲಾಯುಗ, ನಂತರ ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ತಾಮ್ರಶಿಲಾಯುಗ, ಬೃಹತ್ (ಕಬ್ಬಿಣ) ಶಿಲಾಯುಗ ಹಾಗೂ ಐತಿಹಾಸಿಕ ಕಾಲದ(ಮೌರ್ಯ, ಶಾತವಾಹನ) ಮಾನವನ ನೆಲೆಗಳು ಬೆಳಕು ಕಂಡವು.

೨.೨.೨. ಆದಿಹಳೆಶಿಲಾಯುಗ ಸಂಸ್ಕೃತಿ

ಬಾಗಲಕೋಟ ಜಿಲ್ಲೆಯಲ್ಲಿ ಶಿಲಾಯುಗ ಮಾನವನು ಕಟ್ಟಿಕೊಂಡಿದ್ದ ಜೀವನಪದ್ಧತಿ ಮತ್ತು ಸಂಸ್ಕೃತಿಯನ್ನು ಅದರ ಪರಿಸರದ ವ್ಯಾಪ್ತಿಯ ಗ್ರಾಮಗಳಲ್ಲಿ ಕಂಡುಬರುತ್ತಿದ್ದು ಸ್ಥೂಲವಾಗಿ ಅವುಗಳನ್ನು ಆಯಾ ಶಿಲಾಯುಗಗಳ ಕಾಲಘಟ್ಟದಲ್ಲಿಯೇ ಒಂದೊಂದಾಗಿ ವಿವೇಚಿಸಲಾಗಿದೆ.

ಈ ಆದಿಹಳೆಶಿಲಾಯುಗವನ್ನು ಮೂರು ಹಂತದಲ್ಲಿ ಆದಿ, ಮಧ್ಯ, ಅಂತ್ಯ ಹಳೆ ಶಿಲಾಯುಗಗಳೆಂದು ಕರೆದು ವಿಭಾಗಿಸಿ ನೋಡಿದ್ದಾರೆ.

ಬಾಗಲಕೋಟ ಪರಿಸರದಲ್ಲಿ ಅತ್ಯಂತ ಹಳೆಯದಾದ ಮಾನವನು ಜೀವನ ಸಾಗಿಸಿದ ನೆಲೆಗಳು ಕಂಡುಬರುತ್ತವೆ. ಈ ಶಿಲಾಯುಗದಲ್ಲಿ ಮಾನವನು ಬಳಕೆ ಮಾಡಿದ ಕಲ್ಲಿನ ಉಪಕರಣ ತಯಾರಿಕೆಯಲ್ಲಿ ಎರಡು ಸಂಪ್ರದಾಯಗಳಿರುವುದು ಕಂಡುಬರುತ್ತದೆ. ಒಂದು ಮಚ್ಚುಗತ್ತಿ ಸಂಪ್ರದಾಯ ಮತ್ತು ದ್ವಿಮುಖ ಕೈಕೊಡಲಿ ಹಾಗೂ ಸೀಳುಗತ್ತಿ ಸಂಪ್ರದಾಯಗಳು (chappor-chopping Traditional and Bipasial Hand Axe and Cleiver). ಈ ಸಂಪ್ರದಾಯದಲ್ಲಿ ಮೂರು ರೀತಿಯ ಮನುಷ್ಯನ ಜೀವನ ಸಂಸ್ಕೃತಿಗಳಿದ್ದು ಕ್ರಮವಾಗಿ ಆದಿ, ಮಧ್ಯ ಮತ್ತು ಅಂತ್ಯ ಅಶ್ಯೂಲಿಯನ್ ಹಾಗೂ ಅಬ್ಬೆವಿಲೆ ಮತ್ತು ಅಶೂಲ್ ಮಾದರಿಗಳೆಂದು ವಿಂಗಡಿಸಿ ನೋಡಲಾಗಿದೆ. ಬಾಗಲಕೋಟ ಜಿಲ್ಲೆಯಲ್ಲಿ ಕಂಡುಬರುವ ಆದಿಹಳೆಶಿಲಾಯುಗದ ಉಪಕರಣಗಳಲ್ಲಿ ಮೊದಲ ಮಾದರಿ ಅಶ್ಯೂಲಿಯನ್ ಸಂಸ್ಕೃತಿಯ ಹಂತಗಳು ಕಂಡುಬರುತ್ತವೆ.

ಇವು ಬಾಗಲಕೋಟ ಜಿಲ್ಲೆಯ ಕೃಷ್ಣಾ, ಘಟಪ್ರಭಾ, ಮಲಪ್ರಭಾ ನದಿಗಳ ದಡಗಳ ಮೇಲೆ ನೆಲೆಗೊಂಡಿವೆ. ಈ ಉಪಕರಣಗಳು ಮುಖ್ಯವಾಗಿ ಕಲಾದಗಿ ಶ್ರೇಣಿಯ ವಿವಿಧ ಮಾದರಿ ಕಲ್ಲುಗಳಾದ ಕ್ವಾರ್ಟ್‌ಜೈಟ್ ಮತ್ತು ಸ್ಯಾಂಡ್‌ಸ್ಟೋನ್‌ಗಳಿಂದ ತಯಾರಿಸಲಾಗಿದೆ. ಇಂತಹ ಕಲ್ಲು ಉಪಕರಣಗಳು ಜಿಲ್ಲೆಯ ಪರಿಸರದ ಗ್ರಾಮಗಳಾದ ಆಲಮಟ್ಟಿ[೧೧] ಸಿಂದಗಿ[೧೨] ಗ್ರಾಮ ನೆಲೆಗಳಲ್ಲಿ ಕಂಡುಬರುತ್ತಿದ್ದು ಕ್ರಮವಾಗಿ ಆಲಮಟ್ಟಿ ಕೃಷ್ಣಾನದಿಯ ಮೇಲ್ಗಡೆ(ದಡ) ಬಂದರೆ, ಸಿಂದಗಿ ಗ್ರಾಮವು ಘಟಪ್ರಭಾನದಿ ದಡದ ಮೇಲೆ ಬರುತ್ತದೆ.

ಈ ಎರಡು ನೆಲೆಗಳಲ್ಲಿ ಅಶ್ಯೂಲ್ ಮಾದರಿಯ ಕೈಕೊಡಲಿ, ಸೀಳುಗತ್ತಿ, ಮಚ್ಚು, ಕೊರೆಗತ್ತಿ, ದುಂಡು (Hammer), ಚಪ್ಪಟೆ(Star) ಆಯುಧ ಉಪಕರಣಗಳು ದೊರೆತಿರುವವು. ಇವುಗಳಲ್ಲಿ ವಿಶಿಷ್ಟ ಮಾದರಿ ಕೈಕೊಡಲಿಯ(Hand Axe)ದಾಗಿದೆ. ಇದೊಂದು ಆದಿಹಳೆಶಿಲಾಯುಗದ ಸಾಮಾನ್ಯ ಉಪಕರಣವಾಗಿ ಮೊದಲ ಬಾರಿಗೆ ಬಳಕೆಗೊಂಡಿದೆ. ಇದರ ಕೈಹಿಡಿಕೆ ಭಾಗ ದಪ್ಪವಾಗಿ, ಅಲಗಿನ ಭಾಗ(ಮೇಲಿನ ಚುಚ್ಚುವ ಭಾಗ) ಮೊನಚಾಗಿ(ಚೂಪಾಗಿ) ಇರುತ್ತದೆ. ಇವುಗಳಿಗೆ ಚಕ್ಕೆಗಳನ್ನು ಎಬ್ಬಿಸಿದ್ದರಿಂದ ದ್ವಿಮುಖ(ಎರಡು ಮುಖ) ಕೈಕೊಡಲಿಗಳೆಂದು ಕರೆಯಲಾಗುತ್ತದೆ.

ಈ ಶಿಲಾಯುಗದ ಮಾನವನ ವಾಸಸ್ಥಾನಗಳೇ ಅವರು ಜೀವನ ನಡೆಯಿಸಿದ ನೆಲೆ (ಸ್ಥಳ)ಗಳಾಗಿದ್ದು, ಅಲ್ಲಿ ಕೆಲವು ಕಾಲವಿದ್ದು ಬದುಕು ಸಾಗಿಸುತ್ತಿದ್ದರು.

ಆದಿಹಳೆಶಿಲಾಯುಗ ಜನರ ನಿತ್ಯದ ಆಹಾರವೆಂದರೆ ಬೇಟೆಯಾಡಿ ಪ್ರಾಣಿಗಳ ಮಾಂಸ ತಿಂದು ಬದುಕುವುದು ಮತ್ತು ಅರಣ್ಯದಲ್ಲಿ, ನದಿದಡಗಳ ಹತ್ತಿರ ದೊರೆಯುತ್ತಿದ್ದ ಅಂದಿನ ಗೆಡ್ಡೆ-ಗೆಣಸು, ಹಣ್ಣುಹಂಪಲುಗಳು ನಿತ್ಯದ ಆಹಾರಗಳಾಗಿದ್ದವು.

ಅಂದು ಈ ಶಿಲಾಯುಗ ಮಾನವ ತನ್ನ ನಿತ್ಯದ ಆಹಾರಕ್ಕಾಗಿ ಬಳಸಿದ ಉಪಕರಣಗಳು ನದಿಗಳ ದಡದ ಮೇಲೆ ಮತ್ತು ಕೆಲವೊಮ್ಮೆ ಭೂಮಿಯ ಮಣ್ಣಿನಲ್ಲಿ ದೊರಕುತ್ತವೆ. ಒಟ್ಟಿನಲ್ಲಿ ಈ ಯುಗದ ಮಾನವನು ಸಂಚಾರಿ ಜೀವನ ಅಂದರೆ ಆಹಾರ ಹುಡುಕುತ್ತಾ ಅದು ದೊರಕುವ ಸ್ಥಳದಲ್ಲಿ ಹೆಚ್ಚು ಕಾಲ ನಿಂತು, ಅದು ದೊರಕದೆ ಇದ್ದಾಗ ಆಹಾರ ಸಿಗುವ ಸ್ಥಳದತ್ತ ಸಾಗುತ್ತಿದ್ದನು. ಪ್ರಾಣಿಬೇಟೆ ಅವನ ಮುಖ್ಯ ಕಾಯಕವಾಗಿತ್ತು.

ಇಂತಹ ಆದಿಹಳೆಶಿಲಾಯುಗದ ಕಾಲಗತಿಯು ಸುಮಾರು ೭-(ಏಳು) ಲಕ್ಷ ವರ್ಷಗಳಿಂದ ೧.೧೫ ಲಕ್ಷ ಪೂರ್ವದಲ್ಲಿ ಇತ್ತೆಂದು ಗುರುತಿಸಲಾಗಿದೆ. ಭಾರತದಲ್ಲಿ ಇದರ ಕಾಲವನ್ನು ವೈಜ್ಞಾನಿಕವಾಗಿ ಒಂದು ಲಕ್ಷದಿಂದ ನಾಲ್ಕುಲಕ್ಷ ವರ್ಷಗಳಷ್ಟು ಪೂರ್ವದಲ್ಲಿ ಇತ್ತೆಂದು ತಿಳಿಯಲಾಗಿದೆ.[೧೨]

೨.೨.೩.. ಮಧ್ಯಹಳೆಶಿಲಾಯುಗ ಸಂಸ್ಕೃತಿ

ಋತುಮಾನಕ್ಕೆ ತಕ್ಕಂತೆ ಪ್ರಾಚೀನ ಮನುಷ್ಯನ ಜೀವನಕ್ರಮ ಅದಿಹಳೆಶಿಲಾಯುಗದಿಂದ ಮಧ್ಯಹಳೆಶಿಲಾಯುಗದ ಕಾಲಕ್ಕೆ ಬಂದಾಗ ಭೌಗೋಳಿಕ ವಿಸ್ತಾರ ಪಡೆದಿರುವುದು ನೆಲೆಗಳು ದೊರಕುವುದರ ಮೇಲೆ ಗೊತ್ತಾಗುತ್ತದೆ. ಈ ಮಧ್ಯ ಹಳೆಶಿಲಾಯುಗದ ಜನರು ನದಿ, ಕೊಳ್ಳಗಳ ಜೊತೆಗೆ ಸುತ್ತಲಿನ ಮೈದಾನ ಪ್ರದೇಶದ ಸಸ್ಯಸಂಪತ್ತನ್ನು ಜೀವನಾಧಾರಕ್ಕೆ ಉಪಯೋಗಿಸಿದ್ದು ಈಗ ಮೈದಾನ ಪ್ರದೇಶದಲ್ಲಿಯೂ ನೆಲೆ ಕಂಡುಕೊಂಡನು. ನಿತ್ಯದ ಆಹಾರಕ್ಕೆ ಗೆಡ್ಡೆಗೆಣಸು, ಹಣ್ಣುಗಳ ಜೊತೆಗೆ ಪ್ರಾಣಿಮಾಂಸವೇ ಮುಖ್ಯವಾಗಿತ್ತು. ಈ ಯುಗದ ನೆಲೆಗಳು ಜಿಲ್ಲೆಯ ಘಟಪ್ರಭಾ ಕೃಷ್ಣಾನದಿಗಳ ದಡದ ಮೇಲೆ ಕಂಡುಬರುತ್ತವೆ.

ಮಧ್ಯಹಳೆಶಿಲಾಯುಗದ ಸಂಸ್ಕೃತಿಯ ಜನರು ಬಳಕೆ ಮಾಡಿದ ಉಪಕರಣಗಳು ಪ್ರಾಣಿ ಸಮೂಹ ಹೆಚ್ಚಾಗಿರುವ ಪ್ರದೇಶದಲ್ಲಿ ಕಂಡುಬರುತ್ತವೆ. ಈ ಉಪಕರಣಗಳನ್ನು ಸಂಗ್ರಹಿಸಿದ ಎಚ್.ಡಿ. ಸಂಕಾಲಿಯಾ ಅವರು ಜಿಲ್ಲೆಯ ಪರಿಸರದ ಘಟಪ್ರಭಾ, ಮಲಪ್ರಭಾ ಹಾಗೂ ಕೃಷ್ಣಾ ನದಿಕೊಳ್ಳಗಳಲ್ಲಿ ತಮ್ಮ ಮೊದಲ ಪ್ರಯತ್ನದಲ್ಲಿ ಕಂಡುಹಿಡಿದರು. ಉಪಕರಣಗಳನ್ನು ಕಲೆಹಾಕಿ ಪರಿಶೀಲಿಸಿ ಇವು ಆದಿ ಮತ್ತು ಅಂತ್ಯಶಿಲಾಯುಗಗಳ ಮಧ್ಯದ ಕಾಲದಲ್ಲಿ ಇದ್ದವೆಂದು ಹೇಳಿ ಅದಕ್ಕೆ ಮಧ್ಯಹಳೆಶಿಲಾಯುಗವೆಂದು ಕರೆದರು.[೧೩]

ಇವರ ಒಂದು ಪ್ರಯತ್ನದ ಫಲವಾಗಿ ಜಿಲ್ಲೆಯ ಪರಿಸರದ ಘಟಪ್ರಭಾ ನದಿಕೊಳ್ಳದ ಕದಂಪೂರ[೧೪] ಹಾಗೂ ಖಜ್ಜಿಡೋಣಿ[೧೫] ಗ್ರಾಮಗಳ ನೆಲೆಗಳಲ್ಲಿ ಮಧ್ಯಹಳೆಶಿಲಾಯುಗದ ಉಪಕರಣಗಳು ದೊರಕಿವೆ.

ಈ ಮಧ್ಯಹಳೆಶಿಲಾಯುಗ ಸಂಸ್ಕೃತಿಯ ಹಂತದಲ್ಲಿ ದೊರಕಿದ ಉಪಕರಣಗಳು ಹಿಂದಿನ ಆದಿಹಳೆಶಿಲಾಯುಗದಲ್ಲಿ ದೊರೆಯುವ ಉಪಕರಣಗಳಿಗಿಂತ ಚಿಕ್ಕದಾಗಿವೆ. ಇವುಗಳಲ್ಲಿ ಹಲವು ಬಗೆಯ ಉಪಕರಣಗಳು ದೊರಕುತ್ತವೆ. ಲಂಬ, ತ್ರಿಕೋನ, ವರ್ತುಲಾಕಾರವಾಗಿ ಹೆರೆಯುವ ಕಲ್ಲು ಉಪಕರಣಗಳು ದೊರಕುವುವು. ಮುಖ್ಯವಾಗಿ ಕೈಕೊಡಲಿ, ಕಡಿಗತ್ತಿ, ಮಚ್ಚು, ಚೂರಿತರದ ಚಕ್ಕೆಕಲ್ಲು, ಹೆರೆಯುವ ಬೈರಿಗೆ, ರಂಧ್ರದ ಹೆರೆಯುವ ಬಹುಮುಖಿ ಕಲ್ಲು ಉಪಕರಣ ಇತ್ಯಾದಿಗಳು ಈ ಯುಗದ ವೈಶಿಷ್ಟ್ಯವಾಗಿದೆ.

ಮಧ್ಯಹಳೆಶಿಲಾಯುಗ ನೆಲೆಗಳ ಮಾನವನ ಉಪಕರಣ ಬಳಸಿ ಅವನ ಸಂಸ್ಕೃತಿ ಕಾಲವನ್ನು ಗುರುತಿಸಲಾಗಿದೆ. ಈ ಕಾಲಗಣನೆಯನ್ನು ಇಂಗಾಲ ವಿಕಿರಣದ(ರೆಡಿಯೋಕಾರ್ಬನ್) ಕಾಲ ನಿರ್ಣಯದ ವಿಧಾನದಿಂದ ತಿಳಿದುಕೊಳ್ಳಲಾಗಿದೆ. ಇದರ ಪ್ರಕಾರ ಮಧ್ಯಹಳೆಶಿಲಾಯುಗದ ಸಂಸ್ಕೃತಿಯ ಕಾಲಮಾನ ಇಂದಿಗೆ ೧೦,೦೦೦ ವರ್ಷಗಳಿಂದ ೪೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿರಬಹುದೆಂದು ತರ್ಕಿಸಲಾಗಿದೆ. ಇದಕ್ಕೆ ಹೊಸ ನೀರಿನ ಚಿಪ್ಪುಗಳು ಅರೆ ಅಂಗಾರಾಮ್ಲೀಕರಣಗೊಂಡ ಕಟ್ಟಿಗೆ ಮತ್ತು ಎಲುಬಿನ ಚೂರುಗಳಿಂದ ತಿಳಿದುಕೊಳ್ಳಲಾಗಿದೆ.[೧೬]

ಅಂತ್ಯಹಳೆಶಿಲಾಯುಗ ಮತ್ತು ನೂತನಶಿಲಾಯುಗಗಳ ಮಧ್ಯದ ಕಾಲಘಟ್ಟವನ್ನು ಸ್ಥಿತ್ಯಂತರ ಸೂಕ್ಷ್ಮಶಿಲಾಯುಗವೆಂದು ಕರೆಯಲಾಗಿದೆ. ಇದರ ಅವಧಿ ಬಹಳ ಕಡಿಮೆ. ಆದರೆ ಸಾಂಸ್ಕೃತಿಕ ವಿಕಾಸದಲ್ಲಿ ಸೂಕ್ಷ್ಮಶಿಲಾಯುಗದ ಪಾತ್ರ ಮಹತ್ವದ್ದಾಗಿದೆ. ಈ ಯುಗದಲ್ಲಿ ಹಿಂದಿನ ಯುಗಗಳಲ್ಲಿ ಮಾನವನು ಬೇಟೆ, ಮೀನು, ಹಿಡಿಯುವ ಮತ್ತು ಆಹಾರ ಸಂಗ್ರಹಮಾಡಿಟ್ಟುಕೊಳ್ಳುವ ಜೀವನ ಪದ್ಧತಿಯತ್ತ ಮನುಷ್ಯ ಮುಂದುವರೆದಿದ್ದನು. ಈ ಯುಗದ ಮುಖ್ಯ ಬೆಳವಣಿಗೆಯೆಂದರೆ ಧಾನ್ಯಗಳನ್ನು ಉತ್ತು ಬೆಳೆಯುವ ಬೇಸಾಯ ಕ್ರಮವನ್ನು ರೂಢಿಸಿಕೊಂಡದ್ದು.

ಸೂಕ್ಷ್ಮಶಿಲಾಯುಗ ನೆಲೆಗಳು ಉಳಿದ ಸಂಸ್ಕೃತಿಯ ಶಿಲಾಯುಗಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಅವು ನದಿ, ಮೈದಾನ ಪ್ರದೇಶದಲ್ಲಿ ಹರಡಿಕೊಂಡಿವೆ. ಸೂಕ್ಷ್ಮಯುಗದ ಜನರು ಹಿಂದಿನ ಮಾನವರಿಗಿಂತ ಹೆಚ್ಚಿನ ಮಟ್ಟದ ನಿಸರ್ಗ(ಪರಿಸರ)ದ ನೆಲೆಗಳಲ್ಲಿ ವಾಸ ಮಾಡಿದ್ದರಿಂದ ಅಲ್ಲಿ ಅವನಿಗೆ ವಿಭಿನ್ನ ಸನ್ನಿವೇಶಗಳು ಎದುರಾಗಿ ಪರಿಸರದ ಜೊತೆಗೆ ನಿರಂತರ ಹೋರಾಡಬೇಕಾಯಿತು.

ಸೂಕ್ಷ್ಮಶಿಲಾಯುಗದ ಮಾನವ ನೆಲೆಗಳು ನದಿಕೊಳ್ಳ, ನದಿಗಳ ಪಾತ್ರ, ಮುಖಜಭೂಮಿ ಹಾಗೂ ಮೈದಾನ ಪ್ರದೇಶಗಳಲ್ಲಿ ಕಂಡುಬರುವಂತೆ ಬಾಗಲಕೋಟ ಪರಿಸರದಲ್ಲಿ ಒಂದೇ ಒಂದು ಸ್ಥಳವು ಘಟಪ್ರಭಾ ನದಿ ಪಾತ್ರದಲ್ಲಿ ದೊರಕುತ್ತದೆ. ಅದು ಇಂದಿನ ಬಾಗಲಕೋಟ ನಗರ(ಗ್ರಾಮ)ವಾಗಿದೆ.[೧೭]

ಸೂಕ್ಷ್ಮಶಿಲಾಯುಗದ ಜನರು ನಿತ್ಯ ಜೀವನಕ್ರಮಕ್ಕೆ ಬೇಕಾದ ಉಪಕರಣಗಳನ್ನು ತಯಾರಿಸಿ

ಕೊಂಡಿದ್ದು ಅವು ಗಾತ್ರದಲ್ಲಿ ಅತಿಚಿಕ್ಕವಾದವುಗಳಾಗಿವೆ. ಆದ್ದರಿಂದಲೇ ಇದನ್ನು ಸೂಕ್ಷ್ಮಶಿಲಾಯುಗವೆಂದು ಕರೆಯಲಾಗಿದೆ. ಈ ಕಾಲಘಟ್ಟದಲ್ಲಿ ಕಲ್ಲಿನ ಅಲಗು(ಚೂರಿ) ಮತ್ತು ಅಲಗುಗಳ ಉತ್ಪಾದನೆ ಮಾಡುವ ತಂತ್ರಗಾರಿಕೆ ವಿಶಿಷ್ಟವಾದುದಾಗಿದೆ. ತಯಾರಿಸಿದ ಉಪಕರಣ ಗಳನ್ನು ಕಟ್ಟಿಗೆಕೋಲು, ಎಲುಬಿನ ಹಿಡಿಕೆಗಳಲ್ಲಿ ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿ ಗೃಹೋಪಯೋಗಕ್ಕೆ ಬೇಕಾದ ಚಾಕು ಮಾದರಿ ಉಪಕರಣ, ಕೃಷಿಯ ಕೊಯ್ಲು ಮಾಡಲು ಕುರುಪಿ, ಕುಡುಗೋಲು, ಬೇಟೆಯಾಡಲು ಬಾಣ, ಈಟಿ ಇತ್ಯಾದಿ ಸಂಕೀರ್ಣ ಹಾಗೂ ಬಹೂಪಯೋಗಿ ಸಲಕರಣೆಗಳನ್ನು ತಯಾರಿಸಿಕೊಂಡು[೧೮] ಹೊಸ ಮನ್ವಂತರ ಸಂಸ್ಕೃತಿಗೆ ನಾಂದಿ ಹಾಡಿದರು.

ಇಂತಹ ಸೂಕ್ಷ್ಮ ಉಪಕರಣ ತಯಾರಿಸಿಕೊಂಡು ಕೃಷಿ ಜೀವನ ಪ್ರಾರಂಭಿಸಿ ಮಾನವ ವಿಕಾಸ ಹೊಂದಿದ್ದು ಇಂತಹ ಕಾಲಘಟ್ಟವನ್ನು ಅದೇ ಹೊಸ ನೀರಿನ ಚಿಪ್ಪುಗಳ ಬಳಕೆಯಿಂದ ಇಂಗಾಲ ೧೪ ಕಾಲನಿರ್ಣಯದಿಂದ ಕಂಡುಹಿಡಿಯಲಾಗಿದೆ. ಅದರ ಪ್ರಕಾರ ಇಂದಿಗೆ ಸೂಕ್ಷ್ಮಶಿಲಾಯುಗ ಸಂಸ್ಕೃತಿ ೧೧,೨೦೦ ± ೧೫೦ ವರ್ಷಗಳಷ್ಟು ಪುರಾತನವಾಗಿತ್ತೆಂದು ತಿಳಿಯಲಾಗಿದೆ. ಇದನ್ನು ಮತ್ತೊಂದು ಕಾಲನಿರ್ಣಯ ಕ್ರಮದಿಂದ ಈ ಸಂಸ್ಕೃತಿಯು ಇಂದಿಗೆ ೨,೫೦೦ ವರ್ಷಗಳಿಂದ ೧೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತ್ತೆಂದು ಗುರುತಿಸಲಾಗಿದೆ.[೧೯]

೨.೨.೪. ನೂತನ ಶಿಲಾಯುಗ ಸಂಸ್ಕೃತಿ

ನೂತನ ಶಿಲಾಯುಗದ ಸಂಸ್ಕೃತಿಯು ಅಂದಿನ ಜನರ ಪರಿವರ್ತನಾಶೀಲ ಜೀವನಕ್ಕೆ ಹೊಸ ತಿರುವು ನೀಡಿದ ಯುಗ. ನೂತನ ಶಿಲಾಯುಗವನ್ನು ಗುರುತಿಸಲು ಆ ಕಾಲದ ವಿಶೇಷ ಉಪಕರಣಗಳ ಮೇಲಿಂದ ತಿಳಿದುಕೊಳ್ಳಲಾಗುತ್ತದೆ. ಈ ಯುಗದಲ್ಲಿ ಮತ್ತೆ ಹಿಂದಿನ ಆದಿಶಿಲಾಯುಗಗಳಲ್ಲಿದ್ದ ದೊಡ್ಡ ಪ್ರಮಾಣದ ಕೈಕೊಡಲಿಗಳು ಮರುಬಳಕೆಗೊಂಡಿದ್ದು ಅವನ್ನು ಮಿಣುಗುವಂತೆ ಉಜ್ಜಿ ಮಾಡಲಾಗಿದೆ. ಅದಕ್ಕಾಗಿಯೇ ಇದನ್ನು 'ಮಿರುಗು ಕಲ್ಲಿನಯುಗ' ಅಥವಾ ತಿಗರಿ(ಚಕ್ರ)ಯುಗ, 'ಹೊಸಕಾಲ'ವೆಂದು ಕರೆಯುವರು.

ಕಲ್ಲಿನ ಉಪಕರಣಗಳಾದ ಕೈಕೊಡಲಿ, ಕೈಚಾಟಿ, ಉಳಿಗಳನ್ನು ಉಜ್ಜಿ ಉಜ್ಜಿ ನಯಗೊಳಿಸ ಲಾಗಿದೆ. ಇವನ್ನು ಒಂದು ಕಟ್ಟಿಗೆಯ ಹಿಡಿಕೆಗೆ ಗಟ್ಟಿಯಾಗಿ ಕಟ್ಟಿ ಕಟ್ಟಿಗೆ ಕಡಿಯಲು ಕೊಡಲಿ ಯನ್ನು, ಈಟಿಯನ್ನು ಬೇಟೆಯಾಡಲು ಬಳಸಲಾಗಿದೆ. ನೂತನಯುಗದ ಮತ್ತೊಂದು ವೈಶಿಷ್ಟ್ಯವೆಂದರೆ ಚಕ್ರ(ತಿಗರಿ)ಕಂಡು ಹಿಡಿದು ಅದರ ಮೇಲೆ ಹದಮಾಡಿದ ಮಣ್ಣಿನ ಕೆಸರನ್ನು ಇಟ್ಟು ಚಕ್ರ ತಿರುಗಿಸಿ ಬೂದು ಬಣ್ಣದ ಹಾಗೂ ಸುಡದೆ ಇರುವ ಒಣಗಿದ ಪಾತ್ರೆಗಳನ್ನು ತಯಾರಿಸಿದ್ದಾಗಿದೆ.[೨೦]

ನೂತನ ಶಿಲಾಯುಗದ ಮಾನವನ ಜೀವನಕ್ರಮ ಒಂದರ್ಥದಲ್ಲಿ ಪರಸ್ಪರ ಕೊಡುಕೊಳ್ಳು ವಿಕೆಯ ಅವಲಂಬಿತ ಆಧಾರದಿಂದ ಕೂಡಿದ್ದಾಗಿತ್ತು. ಇದನ್ನು ಸಂಘಟಿತ ಸಮಾಜ ವ್ಯವಸ್ಥೆಯ ಕಾಲವೆಂದು ಕರೆಯಬಹುದು. ಈ ಯುಗದ ಮಾನವನ ನೆಲೆಗಳು ನದಿಪಾತ್ರ, ಕೊಳ್ಳ, ಬೆಟ್ಟ ಗುಡ್ಡ, ಗವಿಗಳಾಗಿದ್ದವು. ಇಂತಹ ನೂತನ ಶಿಲಾಮಾನವನ ಒಂದೇ ಒಂದು ನೆಲೆಯು ಬಾಗಲಕೋಟ ಪರಿಸರದಲ್ಲಿ ದೊರಕದೇ ಇರುವುದು ಗಮನಿಸುವಂತಹದ್ದು. ಆದರೆ, ಹತ್ತಿರದ ಹುನಗುಂದ, ಬೀಳಗಿ ತಾಲೂಕು ಪ್ರದೇಶದಲ್ಲಿ ನೂತನ ಶಿಲಾ ನೆಲೆಗಳು ದೊರಕಿದ್ದರಿಂದ ಸಹಜವಾಗಿ ಇಲ್ಲಿಯೂ ಆ ನೂತನ ಸಂಸ್ಕೃತಿ ಇತ್ತೆಂದು ತಿಳಿಯುತ್ತದೆ.

೨.೨.೫. ಲೋಹಯುಗ ಸಂಸ್ಕೃತಿ

ನೂತನಶಿಲಾಸಂಸ್ಕೃತಿಯಂತೆ ಜಿಲ್ಲಾ ಪರಿಸರದಲ್ಲಿ ತಾಮ್ರ ಶಿಲಾಯುಗಕ್ಕೆ ಸೇರಿದ ಒಂದೇ ಒಂದು ಮಾನವ ನೆಲೆ ದೊರಕುವುದಿಲ್ಲ. ಆದರೂ ಜಿಲ್ಲಾ ಪರಿಸರದ ಇತರ ತಾಲೂಕುಗಳಲ್ಲಿ ತಾಮ್ರಶಿಲಾಯುಗದ ನೆಲೆಗಳು ದೊರಕುವುದರಿಂದ ಇಲ್ಲಿಯೂ ಈ ಯುಗದ ಜನರು ಬದುಕು ಸಾಗಿಸಿರುವ ಸಾಧ್ಯತೆಯಿದೆ ಏಕೆಂದರೆ ಬಹುಕಾಲದ ಹಿಂದಿನ ಇಂತಹ ನೆಲೆಗಳು ಮಳೆ ಪ್ರವಾಹಕ್ಕೆ ಇಲ್ಲವೇ ಕಾಲಘಟ್ಟಗಳಲ್ಲಿ ಬಂದು ಹೋಗುವ ಮಾನವರ ದುರಾಶೆಗೆ ಬಲಿಯಾಗಿ ತಮ್ಮ ಇರುವಿಕೆ ಕಳೆದುಕೊಂಡಿರಬೇಕು.

ಇಲ್ಲಿಯವರೆಗೆ ನಡೆದ ಪುರಾತತ್ವ ಅನ್ವೇಷಣೆಗಳಿಂದ ಕರ್ನಾಟಕದಲ್ಲಿ ಕಾರವಾರ ಜಿಲ್ಲೆಯನ್ನು ಹೊರತುಪಡಿಸಿ ಸುಮಾರು ೬೮೦ ಬೃಹತ್ ಶಿಲಾಯುಗದ ಸ್ಥಳಗಳು ಬೆಳಕು ಕಂಡಿವೆ. ಅವುಗಳಲ್ಲಿ ೪೫೦ರಷ್ಟು ಕಬ್ಬಿಣಯುಗದ ಕಲ್ಲಿನ ಗೋರಿಗಳಾಗಿರುವುದೇ ವಿಶೇಷವಾಗಿದೆ.[೨೧] ಬೃಹತ್ ಎಂಬ ಶಬ್ದದ ಮೇಲಿಂದಲೇ ಈ ಸಂಸ್ಕೃತಿಯನ್ನು ಅಳೆಯುವುದು ಒಂದು ವಾಡಿಕೆ ಯಾಗಿದೆ. ಏಕೆಂದರೆ ಬೃಹತ್‌ಶಿಲಾಯುಗ(ಕಬ್ಬಿಣ)ದ ಸ್ಥಳಗಳು ದೊರಕುವುದು ಎತ್ತರವಾದ ಬೆಟ್ಟಗಳ ಮೇಲೆ, ಕೆಳಬದಿ, ದೊಡ್ಡ ಪ್ರಮಾಣದ ಕಲ್ಲುಬಂಡೆಗಳು ದೊರೆಯುವ ಪರಿಸರದಲ್ಲಿ ಈ ಸಂಸ್ಕೃತಿ ಬೆಳೆದುಬಂದಿದೆ. ಈ ಬೃಹತ್ ಶಿಲಾಯುಗದ ಒಂದು ಭಾಗವಾಗಿ ಕಂಡುಬರುವ ಗೋರಿಗಳು ಸಾಧ್ಯವಾದಷ್ಟು ಬೆಟ್ಟಗಳ ಮೇಲಿನ ಸಮತಟ್ಟು ಭಾಗದಲ್ಲಿ, ತಪ್ಪಲು ಅಥವಾ ಶಿಲೆ(ಕಲ್ಲು)ಗಳಿಂದ ಕೂಡಿದ ಬರಡುಭೂಮಿಯಲ್ಲಿ ನೆಲೆಗೊಂಡಿರುವುದು ಅದರ ವೈಶಿಷ್ಟ್ಯವಾಗಿದೆ.

ಈ ಕಲ್ಗೋರಿಗಳಲ್ಲಿ ಮೂರು ರೀತಿಯ ಮಾದರಿ ಕಂಡುಬರುವುದು. ೧. ನಾಲ್ಕು ಬಂಡೆಗಳನ್ನು ನಿಲ್ಲಿಸಿ ಅವುಗಳ ಮೇಲೆ ಒಂದು ಹಾಸು ಬಂಡೆಹಾಕಿ ಮಣ್ಣಿನಲ್ಲಿ ಮುಚ್ಚಿ ಅದರ ಸುತ್ತಲೂ ಹೊಡೆದ

ಕಲ್ಲುಗಳಿಂದ ಗೋಲಾಕಾರ ಕಟ್ಟಲಾಗಿದೆ. ೨. ಚಾತಬಂಡೆ ಕಲ್ಲು ನಿಲ್ಲಿಸಿ ಸುತ್ತಲೂ ಕಲ್ಲು ಕಟ್ಟಿ ಇಲ್ಲಿವು ಹಾಗೆಯೇ ಇರುವುದು. ೩. ನಾಲ್ಕು ಬಂಡೆಕಲ್ಲು ನಿಲ್ಲಿಸಿ ಅದರ ಮೇಲೊಂದು ಚಪ್ಪಡಿಕಲ್ಲು(ಹಾಸುಗಲ್ಲು) ಹಾಕಿ, ಮುಂದಿನ ಬಂಡೆಯಲ್ಲಿ ಗೋಲಾಕಾರದ ಕಿಂಡಿ ಮಾಡಿರುವುದು. ಕ್ರಮವಾಗಿ ಸ್ಟೋನ್‌ಸರ್ಕಲ್ ಪ್ಯಾಸೇಜ್ ಚೇಂಬರ್‌ಗಳೆಂದು ಕರೆಯುವರು. ಆಯಾ ಗ್ರಾಮದ ನೆಲೆಗಳನ್ನು ನೋಡಿದ ಜನರು ಅವುಗಳನ್ನು ಪಾಂಡವ ಮನೆ, ಮೌರ್ಯರ ಮನೆಯೆಂದು ಕರೆಯುವರು.

ಬೃಹತ್ ಶಿಲಾಯುಗದ ವಿಶಿಷ್ಟ ಲಕ್ಷಣವೆಂದರೆ, ಕಬ್ಬಿಣದ ಬಳಕೆ, ಬಂಡೆಯ ಗೋರಿ, ವ್ಯವಸ್ಥಿತ ಶವಸಂಸ್ಕಾರ ಪದ್ಧತಿ, ಕಬ್ಬಿಣದಲ್ಲಿ ಅಯುಧ, ಉಪಕರಣ ತಯಾರಿಸಿದ್ದಾಗಿದೆ.

ಬೃಹತ್ ಶಿಲಾಯುಗದ ಹೆಸರೇ ಸೂಚಿಸುವಂತೆ ಈ ಕಾಲದಲ್ಲಿ ಜನರು ರಾಜ್ಯ ಕಟ್ಟಿಕೊಂಡು ಅಧಿಕಾರ ನಡೆಸಿರುವುದಾಗಿದೆ. ಸಾಮ್ರಾಜ್ಯಗಳು ನಿರ್ಮಾಣವಾದವು, ಯುದ್ಧಕಲೆ ಗೊತ್ತಾಗಿ ಪ್ರದೇಶ ಗೆಲ್ಲಲು, ವಿಸ್ತರಿಸಲು ಸೈನ್ಯಸಂಘಟನೆ ಹುಟ್ಟುಕೊಂಡಿತು.

ಜೀವನಕ್ರಮ ಉನ್ನತ ಮಟ್ಟದ್ದಾಗಿದ್ದು ಆಭರಣ, ಉಡುಗೆ, ತೊಡುಗೆಗಳನ್ನು ಜನರು ಹೆಚ್ಚಿಗೆ ಬಳಸಹತ್ತಿದರು. ಪಶು ಸಂಗೋಪನೆ ಕಂಚಿನ ಯುಗದಲ್ಲೇ ಪ್ರಾರಂಭವಾಗಿತ್ತು. ಅದು ಬೃಹತ್ ಸಂಸ್ಕೃತಿಯಲ್ಲಿ ಜನರ ಒಂದು ಜೀವನದ ಭಾಗವಾಯಿತು. ಬೇಟೆಗಾರಿಕೆ, ಮೀನು ಹಿಡಿಯುವುದು, ಕೃಷಿ ಚಟುವಟಿಕೆ ಶ್ರೀಮಂತಗೊಂಡಿತು. ನಗರ, ಪಟ್ಟಣಗಳು ಬೆಳೆದು ವ್ಯಾಪಾರ, ವಾಣಿಜ್ಯಗಳು ಬೆಳೆದವು.

ಇಂತಹ ಸಂಸ್ಕೃತಿಯ ನೆಲೆಗಳು ಬಾಗಲಕೋಟ ಪರಿಸರದಲ್ಲಿ ಕಂಡುಬರುತ್ತವೆ. ಒಂದು ಕಲಾದಗಿ[೨೨], ಮತ್ತೊಂದು ಸೀತಿಮನಿಗಳಾಗಿವೆ.[೨೩] ಕಲಾದಗಿ ಬೆಟ್ಟದಲ್ಲಿದ್ದರೆ, ಸೀತಿಮನಿ ಕೃಷ್ಣಾ ನದಿಯ ಬಲದಂಡೆಯ ಮೇಲ್ಗಡೆ ಬರುತ್ತದೆ.

ಇಂತಹ ವ್ಯವಸ್ಥಿತ ಮತ್ತು ಪ್ರಮಾಣಬದ್ಧವಾದ ಸಂಸ್ಕೃತಿ ಇದಾಗಿದ್ದು ಇದರ ಕಾಲಮಾನ ಎರಡು ರೀತಿಯಲ್ಲಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ಪೂರ್ವಭಾಗದ ಬೃಹತ್‌ಶಿಲಾ ನೆಲೆಗಳ ಕಾಲಮಾನ ಕ್ರಿಪೂ. ೧೦೦೦ ದಿಂದ ೬೦೦ ಎಂದು ಹಾಗೂ ೬೦೦ ರಿಂದ ೨೦೦ ಕಾಲಮಾನವೆಂದು ತರ್ಕಿಸಲಾಗಿದೆ.[೨೪]

ಬಹು ಪ್ರಾಚೀನ ಕಾಲದಿಂದ ಶಿಲಾಯುಗ ಮಾನವನ ಜೀವನ ಸಂಸ್ಕೃತಿ ಹಂತ ಹಂತವಾಗಿ ಬೆಳೆದು ಪೂರ್ವಭಾವಿ ಚರಿತ್ರೆಯ ಕೊನೆಯ ಹಂತವಾದ ಬೃಹತ್‌ಶಿಲಾಯುಗದ ಸಂಸ್ಕೃತಿಯು ಎಲ್ಲ

ಕ್ಷೇತ್ರಗಳಲ್ಲಿ ಉನ್ನತಿ ಸಾಧಿಸಿತು. ಇದರ ಮುಂದಿನ ಭಾಗವೇ, ಸಾಮ್ರಾಜ್ಯಗಳ ಯುಗ ಅಥವಾ ಐತಿಹಾಸಿಕ ಕಾಲ. ಬೃಹತ್ ಶಿಲಾಯುಗದಲ್ಲಿ ಸಾಮ್ರಾಜ್ಯ ಕಟ್ಟುವ ಪ್ರಯತ್ನ ನಡೆದಿತ್ತು. ಅದರ ಫಲವೇ ಉತ್ತರ ಭಾರತದ ಮೌರ್ಯ ಸಾಮ್ರಾಜ್ಯ. ಮೌರ್ಯರ ಸಾಮ್ರಾಜ್ಯ ಉತ್ತರ ಭಾರತಕ್ಕೆ ಸೀಮಿತವಾಗಿದ್ದರೂ ಅಶೋಕ ಚಕ್ರವರ್ತಿ ದಕ್ಷಿಣ ಭಾರತದ ಮೇಲೆ ಅಧಿಕಾರ ಹೊಂದಿದ್ದರಿಂದ ಮೌರ್ಯರಾಜ್ಯ ದಕ್ಷಿಣ ಭಾರತದಲ್ಲಿಯೂ ಪಸರಿಸಿತ್ತೆಂದು ಹೇಳಬಹುದು. ಹೀಗಾಗಿ ಕರ್ನಾಟಕದಲ್ಲಿ ಮೌರ್ಯರ ಕಾಲದ ಜನವಸತಿ ನೆಲೆಗಳು ಕಂಡುಬರುತ್ತವೆ. ಮೌರ್ಯ ವಂಶಸ್ಥರು ಕೊಂಕಣ ಕರಾವಳಿ ಕರ್ನಾಟಕದಲ್ಲಿ ಕ್ರಿ.ಶ. ೭ನೇ ಶತಮಾನದ ತನಕ ಅಧಿಕಾರ ನಡೆಯಿಸಿದ್ದು ಚರಿತ್ರೆಯಲ್ಲಿ ಉಲ್ಲೇಖ ಬಂದಿವೆ. ಆದರೆ, ಬಾಗಲಕೋಟೆ ಪರಿಸರದಲ್ಲಿ ಇವರ ಯಾವುದೇ ಜನವಸತಿ ನೆಲೆಗಳು ಸದ್ಯ ಕಂಡುಬರುವುದಿಲ್ಲ. ಆದಾಗ್ಯೂ ಅವರ ಸಂಸ್ಕೃತಿ ಇಲ್ಲಿ ನೆಲೆಸಿತ್ತು. ಮೌರ್ಯರ ನಂತರ ಅವರ ಸಾಮಂತರಾದ ಶಾತವಾಹನರು ಅಧಿಕಾರಕ್ಕೆ ಬಂದರು. ಶಾತವಾಹನರ ಕಾಲದ ಜನರ ವಾಸದ ನೆಲೆಗಳು ಹೆಚ್ಚಾಗಿವೆ. ಇಂದಿನ ಪ್ರತಿ ಗ್ರಾಮಗಳು ಹಾಳು ಮಣ್ಣಿನ ನೆಲೆಗಳಾಗಿದ್ದು, ಕೆಲವು ಸ್ಥಳಗಳಲ್ಲಿ ಮಾತ್ರ ಶಾತವಾಹನರ ಕಾಲದ ಮಡಿಕೆ ಚೂರುಗಳು, ಮಣಿ, ಗುಂಡಿ, ಹಸ್ತಿದಂತದ ವಸ್ತುಗಳು ದೊರಕುತ್ತವೆ. ಇದಕ್ಕೆ ಬಾಗಲಕೋಟ ಪರಿಸರ ಹೊರತಾಗಿರದೆ ಆಲಮಟ್ಟಿ, ಇಲ್ಲಾಳ, ಕಿರಸೂರ, ಕೇಸನೂರ, ಮುಗಳಳ್ಳಿ, ಹಿರೇಗುಳಬಾಳ ಗ್ರಾಮಗಳು ಶಾತವಾಹನ ಸಂಸ್ಕೃತಿ ಬಿಂಬಿಸುವ ನೆಲೆಗಳ ಸ್ಥಳಗಳಾಗಿವೆ.

ಮೇಲಿನ ಗ್ರಾಮಗಳ ನೆಲೆಗಳಲ್ಲಿ ದೊರೆತ ಐತಿಹಾಸಿಕ ಶಾತವಾಹನ ಉಪಕರಣದ ಪಳೆಯುಳಿಕೆಗಳಾದ ಮಡಿಕೆ, ಕುಡಿಕೆ, ಇಟ್ಟಂಗಿ, ಮಣಿಸರ, ಗುಂಡಿ, ಹಸ್ತಿ ದಂತದ ವಸ್ತುಗಳು ಪ್ರಮುಖವಾಗಿವೆ. ಮಡಿಕೆ(ಗಡಿಗೆ) ಚೂರು ಬೆಂಕಿಯಲ್ಲಿ ಸುಟ್ಟು ಮಾಡಿದವುಗಳಾಗಿದ್ದು ಕಪ್ಪು ಬಣ್ಣದ, ಕೆಂಪುಬಣ್ಣದ, ಕಪ್ಪು-ಕೆಂಪುಬಣ್ಣದ ವಿವಿಧ ನಮೂನೆಯಲ್ಲಿ ದೊರಕುತ್ತವೆ. ಈ ಎಲ್ಲಾ ಮಡಿಕೆ ಕುಡಿಕೆಗಳನ್ನು ಅಂದು ಗೃಹಬಳಕೆಗಾಗಿ, ಧಾನ್ಯಸಂಗ್ರಹಕ್ಕಾಗಿ, ನೀರು ಸಂಗ್ರಹಕ್ಕಾಗಿ ಬಳಕೆ ಮಾಡುತ್ತಿದ್ದರು. ಕೆಲವು ನೆಲೆಗಳಲ್ಲಿ ಧಾನ್ಯ ಸಂಗ್ರಹದ ನೆಲ ಕಣಜಗಳು ಕಂಡುಬರುತ್ತವೆ. ಉಪ್ಪನ್ನು ತಯಾರಿಸುವ ಮಳವೆ ದಿಬ್ಬಗಳು ಸಹ ಕಂಡುಬರುತ್ತವೆ.

ಒಟ್ಟಿನಲ್ಲಿ ಬಾಗಲಕೋಟ ಪ್ರದೇಶ ಆದಿಹಳೆಯ ಶಿಲಾಯುಗದಿಂದ ಐತಿಹಾಸಿಕ ಕಾಲದವರೆಗೆ ತನ್ನದೇ ಆದ ಮಹತ್ವ ಹೊಂದಿದ್ದು, ಮಾನವನ ವಾಸಕ್ಕೆ ಯೋಗ್ಯವಾದ ಹಾಗೂ ಪ್ರಶಸ್ತವಾದ ಪ್ರದೇಶವಾಗಿರುವುದು ಗಮನಾರ್ಹ.

ಟಿಪ್ಪಣಿಗಳು

೧. ಕರ್ನಾಟಕ ಚರಿತ್ರೆ, ಸಂಪುಟ-೧, ಪುಟ. ೩೨.

೨. ಸುಭಾಸ, ರಾ.ಚಿಂಚೋಳಿ, ಪ್ರಾಕ್ತನಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪಕಲೆಯ ಅಧ್ಯಯನ (ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ) ೧೯೯೯, ಪುಟ. ೧೦. ಕ.ವಿ.ವಿ., ಧಾರವಾಡ

೩. ಕರ್ನಾಟಕ ಚರಿತ್ರೆ, ಸಂಪುಟ-೧, ಪುಟ. ೯೪-೯೫.

೪. Foot, **R.B., The Foot Collection of the Indian Pre Historic and Protohistoric Antiquities,** Madras Governmant press, Madras, ೧೯೧೯.

೫. Sankalia, H.D., **Enimal Poisils and Palaeolithic Industries** The Pravara Basin at Nevas District Ahmadnagar, Ancient India, ಸಂಪುಟ–೧೨, ೧೯೫೬, ಪುಟ. ೩೫-೫೬.

೬. ನೋಡಿ, ಅದೇ.

೭. **Joshi, R.V., Plistocin studies in the malaprabha Basin, 1955.** Deccan College Post Graduate Research Institute, Pune and Karnataka University Dharwad.

೮. Sundar **A., Proto Historic sites in Bijapur District**, Katnataka University, Journal, ಸಂಪುಟ-೪, ೧೯೬೪.

೯. ಕರ್ನಾಟಕ ಚರಿತ್ರೆ, ಸಂಪುಟ-೧, ಪುಟ. ೯೭

೧೦. **Indian Archaeology A Review,** ೧೯೫೫-೫೬.

೧೧. ಅದೇ, ೧೯೭೪-೭೫.

೧೨. ಕ.ಚ. ಸಂಪುಟ-೧೦, ಪುಟ. ೧೦೮.

೧೩. Sankalia, **H.D., Pre History and Proto History of India** and Pakistan, Pune, ೧೯೭೪.

೧೪. ಕ.ಚ. ಸಂಪುಟ–೧, ೧೯೯೪.

೧೫. I.A. Review, ೧೯೭೧-೭೨.

೧೬. Poshell, G.L., **Radio Carban dates from South Asia, man and Environment,** ಸಂಪುಟ–೧೨, ೧೯೭೯, ಪುಟ. ೧೬೯-೧೯೬.

೧೭. I.A., Review, ೧೯೫೮-೫೯.

೧೮. ಸುಭಾಸ. ರಾ.ಚಿಂಚೋಳಿ, ಪ್ರಾಕ್ತನಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪಕಲೆಯ ಅಧ್ಯಯನ (ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ) ಕ.ವಿ.ವಿ., ಧಾರವಾಡ, ೧೯೯೯, ಪುಟ. ೩೨.

೧೯. Buletin of Deccan College Research, Institute, ಸಂಪುಟ-೪೦, ೧೯೮೦, ಪುಟ. ೧೫೦-೧೫೫.

೨೦. ಸುಭಾಸ ರಾ. ಚಿಂಚೋಳಿ, ಪ್ರಾಕ್ತನಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪಕಲೆಯ ಅಧ್ಯಯನ (ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ) ಕ.ವಿ.ವಿ., ಧಾರವಾಡ, ೧೯೯೯, ಪುಟ. ೩೩.

೨೧. ಕ.ಚ., ಸಂಪುಟ-೧೦, ಪುಟ. ೧೭೧.

೨೨. I.A. Review, ೧೯೬೭-೮.

೨೩. **Progress Report of Kannada Research Institute,** ೧೯೫೩-೧೯೫೭.

೨೪. ಕ.ಚ. ಸಂಪುಟ-೧, ಪುಟ. ೧೮೧, ೧೮೨.

ಅಧ್ಯಾಯ ಮೂರು

ಬಾಗಲಕೋಟೆ ಪರಿಸರದ ರಾಜಕೀಯ ಚರಿತ್ರೆ

ಬಾಗಡಗೆ ೭೦ರ ಸಾವಿರ ವರ್ಷಗಳಿಗಿಂತ ಹೆಚ್ಚಿನ ರಾಜಕೀಯ ಚರಿತ್ರೆಯಲ್ಲಿ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರು ಕಳಚುರಿ, ಯಾದವ ಹಾಗೂ ವಿಜಯನಗರ ಅರಸುಮನೆತನಗಳು ಅಧಿಕಾರವನ್ನು ನಡೆಸಿದ್ದಾರೆ.

ಕ್ರಿಶ. ಪೂರ್ವದಿಂದ ಕ್ರಿಶ. ೧೫೬೫ರವರೆಗೆ ಬಾಗಡಗೆ ನಾಡಿನಲ್ಲಿ ವಿವಿಧ ಜನವರ್ಗವು, ವಿಭಿನ್ನ ಸಂಸ್ಕೃತಿಯೊಂದಿಗೆ ಬದುಕಿದಂತೆ, ಹಲವು ಅಧಿಕಾರಸ್ಥ ಆರಸುಮನೆತನಗಳು ಬಾಗಡಗೆ ನಾಡನ್ನೊಳಗೊಂಡು ತನ್ನ ಸಾಮ್ರಾಜ್ಯಕ್ಕೆ ಒಡೆಯರಾಗಿದ್ದರಿಂದ ಇವರು ಸಾರ್ವಭೌಮರೆನಿಸಿ ಕೊಂಡಿದ್ದಾರೆ. ಮಂಡಳೇಶ್ವರ, ಸಾಮಂತ, ದಂಡನಾಯಕ, ಪ್ರಭು, ಗಾವುಂಡರು ನಾಡಾಳಿತಕ್ಕೆ ಸಂಬಂಧಿಸಿರುವರು. ಇಂಥವರ ಆಳ್ವಿಕೆಯನ್ನು ಇಲ್ಲಿಯ ಶಾಸನಗಳು 'ದುಷ್ಟನಿಗ್ರಹದಿಂದಾಳುತ್ತಮಿರೆ' ಎಂಬ ಪಾರಿಭಾಷಿಕ ಶಬ್ದದಿಂದ ಕರೆದಿವೆ. 'ದುಷ್ಟ ನಿಗ್ರಹದಿಂದಾಳುತ್ತಮಿರೆ' ಎಂಬ ಶಬ್ದ ಎರಡರ್ಥದಲ್ಲಿ ಬಳಕೆಗೊಂಡಿದೆ. ಒಂದು ಪ್ರಭುವಾಗಿ ಆಳುವುದು, ಇನ್ನೊಂದು ಅಧಿಕಾರಿಯಾಗಿ ತನ್ನ ಹುದ್ದೆಯ ಪರಿಮಿತಿಯಲ್ಲಿ ಆಡಳಿತ ನೋಡಿಕೊಳ್ಳುವುದಾಗಿತ್ತು. ಪ್ರಭುವಿನ ಆಡಳಿತ ವಂಶಪಾರಂಪರಿಕವಾಗಿದ್ದರೆ, ಅಧಿಕಾರಿಯದು ಪ್ರಭುವಿಗೆ(ಅರಸ) ನಿಷ್ಠನಾಗಿ ಆಳುವುದಾಗಿತ್ತು. ಅಂದರೆ ಅಧಿಕಾರ ಪದವಿಯೂ ನಿಶ್ಚಿತವಾಗಿರಲಿಲ್ಲ.

ಅರಸ(ಚಕ್ರವರ್ತಿ)ನಾಗಿ ಆಡಳಿತ ನಡೆಸುವವರಲ್ಲಿ ಚಕ್ರವರ್ತಿ, ಮಹಾಮಂಡಳೇಶ್ವರ, ಮಹಾ ಸಾಮಂತ, ಮನ್ನೆಯ ಪ್ರಭು, ದಂಡನಾಯಕ, ಗಾವುಂಡ, ಪೆರ್ಗ್ಗಡೆಗಳು ಪ್ರಮುಖರು. ಪ್ರಸ್ತುತ ಬಾಗಡಗೆಯೆಪ್ಪತ್ತರ ಚರಿತ್ರೆಯಲ್ಲಿ ಈ ನಾಡನ್ನೊಳಗೊಂಡು ಇಡೀ ಸಾಮ್ರಾಜ್ಯಕ್ಕೆ ಸಾರ್ವಭೌಮ ರೆನಿಸಿದ

ಅರಸೊತ್ತಿಗೆಗಳ ಅರಸರು, ಬಾಗಡಗೆ ನಾಡಿನ ಆಡಳಿತಕ್ಕೆ ಅಥವಾ ಇತರ ನಾಡಾಡಳಿತ ದೊಂದಿಗೆ ಇದರ ಆಡಳಿತ ನೋಡಿಕೊಂಡವರ ಕುರಿತು ನಾವಿಲ್ಲಿ ಚರ್ಚಿಸಿದ್ದೇವೆ.

೩.೧. ಮೌರ್ಯರು

ಕ್ರಿ.ಪೂ. ಮೂರನೇ ಶತಮಾನದ ಉತ್ತರ ಭಾರತದಲ್ಲಿ ಮೌರ್ಯ ಚಂದ್ರಗುಪ್ತನಿಂದ. ಮಹಾ ಸಾಮ್ರಾಜ್ಯವೊಂದು ನಿರ್ಮಾಣವಾಯಿತು. ಇವನ ರಾಜಧಾನಿ ಪಾಟಲಿಪುತ್ರ, ೧೨ ವರ್ಷ ಉತ್ತರದಲ್ಲಿ ಬರಗಾಲ ಬಿದ್ದ ಪರಿಣಾಮ ಚಂದ್ರಗುಪ್ತನು ತನ್ನ ಗುರು ಭದ್ರಬಾಹು ಜೊತೆಗೂಡಿ ದಕ್ಷಿಣ ಭಾರತದ ಕರ್ನಾಟಕದ ಇಂದಿನ ಶ್ರವಣಬೆಳಗೊಳಕ್ಕೆ ಬಂದು ಕಾಲ ಕಳೆದನೆಂಬುದು ಚರಿತ್ರೆ, ಇವನ ನಂತರದ ಮೌರ್ಯ ದೊರೆ ಅಶೋಕ ಚಕ್ರವರ್ತಿ ಬೌದ್ಧಧರ್ಮ ಸ್ವೀಕರಿಸಿ ಅದರ ಪ್ರಸಾರಕ್ಕಾಗಿ ಹಾಗೂ ಸಾಮ್ರಾಜ್ಯ ವಿಸ್ತಾರಕ್ಕಾಗಿ ದಂಡಯಾತ್ರೆ ಕೈಗೊಂಡನು. ಅವನು ಕರ್ನಾಟಕದ ಮೇಲೆ ಸಂಪೂರ್ಣ ಅಧಿಕಾರ ಹೊಂದಿದ್ದನೆಂಬುದಕ್ಕೆ ಹಲವು ಆಧಾರಗಳು ಇಲ್ಲಿ ದೊರಕುವವು.[೧]

ಅಶೋಕನು ತನ್ನ ಧರ್ಮಪ್ರಚಾರಕ್ಕಾಗಿ ದಕ್ಷಿಣ ಭಾರತಕ್ಕೆ ಹಲವು ಜನ ಮಹಾಮಾತ್ಯರನ್ನು ಕಳುಹಿಸಿದನಲ್ಲದೆ, ಧರ್ಮದ ಶಾಸನಗಳನ್ನು ಗುಂಡು ಕಲ್ಲುಗಳ ಮೇಲೆ ಬರೆಯಿಸಿದನು. ಅವು ಇಂದಿನ ಸನ್ನತಿ, ಮಸ್ಕಿ, ಉದಗೋಳ, ನಿಟ್ಟೂರು, ಬ್ರಹ್ಮಗಿರಿ, ಜಟ್ಟಿಂಗರಾಮೇಶ್ವರ, ಕೊಪ್ಪಳ, ಗವಿಮಠ, ಪಾಲ್ಕಿಗುಂಡುಗಳಲ್ಲಿ ಕಂಡುಬರುವುವು.[೨] ಅಧ್ಯಯನ ಪ್ರದೇಶದ ಬಾಗಡಗೆ ಪರಿಸರದಲ್ಲಿ ಮೌರ್ಯರ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳಾವೂ ದೊರೆಯದಿದ್ದರೂ ಅವರ ಸಂಸ್ಕೃತಿಯನ್ನು ಬಿಂಬಿಸುವ ಪ್ರಾಕ್ತನ ಪಳೆಯುಳಿಕೆಗಳು ದೊರಕುತ್ತವೆ. ಮೂಲ ಮೌರ್ಯ ವಂಶ ಚರಿತ್ರೆಯಿಂದ ದೂರ ಸರಿದಿದ್ದರೂ ಅವರ ವಂಶಜರು ಕ್ರಿ.ಶ. ೭ನೇ ಶತಮಾನದವರೆಗೆ ಕರ್ನಾಟಕದ ಕರಾವಳಿಯಲ್ಲಿ ಆಡಳಿತ ನಡೆಸಿರುವುದು ತಿಳಿದುಬರುತ್ತದೆ.[೩]

೩.೨. ಶಾತವಾಹನರು

ಉತ್ತರ ಭಾರತದಲ್ಲಿ ಮೌರ್ಯ ಸಾಮ್ರಾಜ್ಯ ಪತನಗೊಂಡ ನಂತರ ದಕ್ಷಿಣದ ಮಹಾರಾಷ್ಟ್ರ ಪ್ರದೇಶದಲ್ಲಿ ಮೌರ್ಯರ ಮಾಂಡಳಿಕರಾದ ಶಾತವಾಹನರು ದಕ್ಷಿಣದ 'ಕುಂತಳ ಶಾತವಾಹನ'ರೆಂದು ಸ್ವತಂತ್ರಗೊಂಡು ಆಡಳಿತ ನಡೆಸಿದರು. ಇವರ ರಾಜ್ಯವು ಮಹಾರಾಷ್ಟ್ರದ ಗೋದಾವರಿ ನದಿಯಿಂದ ಕರ್ನಾಟಕದ ಕಾವೇರಿ ನದಿಯವರೆಗೂ ಹಬ್ಬಿತ್ತು.[೪] ದಕ್ಷಿಣ ಭಾರತದ ಪ್ರಸ್ಥಭೂಮಿಯಲ್ಲಿ ಸ್ವತಂತ್ರ ರಾಜ್ಯ ಕಟ್ಟಿದ ಶಾತವಾಹನರು ಸುಮಾರು ೪೦೦ ವರ್ಷ ಕಾಲ ಅಧಿಕಾರ ನಡೆಸಿರುವರು. ದೀರ್ಘಾವಧಿಯ ಕಾಲ ರಾಜ್ಯಬಾರ ಮಾಡಿದ ಶಾತವಾಹನರು ತಮ್ಮನ್ನು 'ಕುಂತಳ ಶಾತಕರ್ಣಿ'ಗಳೆಂದು ಕರೆದುಕೊಂಡರು.[೫]

ಬಾಗಡಗೆ ಪ್ರದೇಶದ ಶಾತವಾಹನರ ಚರಿತ್ರೆಗೆ ನಿಶ್ಚಿತ (ಶಾಸನ) ದಾಖಲೆಗಳು ದೊರೆಯದಿದ್ದರೂ, ಬಾಗಡಗೆ ಪರಿಸರದ ವ್ಯಾಪಿಯ ಪಟ್ಟದಕಲ್ಲು[೬], ಹೆರಕಲ್ಲು[೭] ಗ್ರಾಮಗಳಲ್ಲಿ ಇವರ ಕಾಲದ ಸಂಸ್ಕೃತಿಯನ್ನು ತಿಳಿಸುವ ಜನರು ಬಳಕೆ ಮಾಡಿದ ಅಂದಿನ ಮಡಿಕೆ, ಕುಡಿಕೆ, ಎಲುಬು, ಕಲ್ಲು, ಇತ್ಯಾದಿ ಪ್ರಾಕ್ತನ ಪಳೆಯುಳಿಕೆಗಳು ದೊರಕುವವು. ಆದ್ದರಿಂದ ಬಾಗಡಗೆ ಬಾಗಲಕೋಟ ಪ್ರದೇಶವು ಶಾತವಾಹನ ಅರಸರ ಅಧಿಕಾರ ವ್ಯಾಪ್ತಿಗೊಳ ಪಟ್ಟಿತ್ತೆಂದು ಹೇಳಬಹುದು.

೩.೩. ಕದಂಬರು

ಕರ್ನಾಟಕದ ಕುಂತಳದಲ್ಲಿ ಶಾತವಾಹನರ ನಂತರ ಅವರ ಸಾಮಂತ, ಮಂಡಳೇಶ್ವರರಾಗಿದ್ದ ಕದಂಬರು, ಅಧಿಕಾರಕ್ಕೆ ಬಂದರು. ಆದಾಗ್ಯೂ ಬಾಗಡಗೆ ಪ್ರದೇಶದಲ್ಲಿ ಇವರ ಕುರಿತು ತಿಳಿದು ಕೊಳ್ಳುವ ದಾಖಲೆಗಳು ದೊರಕುವುದಿಲ್ಲ. ಆದರೂ ಪ್ರಾಚೀನ ಬಾಗಡಗೆ(ಬಾಗಲಕೋಟ) ಪ್ರದೇಶ ಕದಂಬರ ಅಧಿಕಾರದ ವ್ಯಾಪ್ತಿಗೊಳಪಟ್ಟಿತ್ತು.

ಕ್ರಿ.ಶ. ೯೯೦-೧೦ರ ಭೈರನಮಟ್ಟಿ ಶಾಸನದಲ್ಲಿ ಬರುವ ಸಿಂಧರ ಮೊದಲ ಮೂಲಪುರುಷ ಸಿಂಧುಕುಮಾರ ಅಥವಾ ನಿಡುದೊಳಸಿಂಧನ ಉಲ್ಲೇಖ ದೊರಕುತ್ತದೆ. ಸಿಂಧುಕುಮಾರ ಕದಂಬ ಕುವರಿಯನ್ನು ವಿವಾಹವಾಗಿ ಬಾಗಡಗೆ ಪ್ರದೇಶದಲ್ಲಿ ಅಧಿಕಾರ ನಡೆಸುತ್ತಿದ್ದನೆಂಬುದಕ್ಕೆ ಸೂಕ್ಷ್ಮ ಮಾಹಿತಿ ನೀಡುತ್ತದೆ. ರಂಜೋಳದ(ಬೀದರ ಜಿಲ್ಲೆ) ಶಾಸನದಲ್ಲಿ ಕದಂಬ ಮಯೂರವರ್ಮನ ಮಗಳನ್ನು ಮದುವೆಯಾಗಿ ಅವನ ಸಾಮಂತನಾಗಿದ್ದನೆಂದು ಶಾಸನದಲ್ಲಿ ಬರುತ್ತದೆ. ಭೈರನಮಟ್ಟಿ ಶಾಸನ ಸಿಂಧರ ವಂಶಾವಳಿ ನೀಡುತ್ತದೆ.[೮]

ಹೀಗಾಗಿ ಕದಂಬರ ಅವಧಿಯಲ್ಲಿ ಬಾಗಡಗೆ (ಬಾಗಲಕೋಟ) ನಾಡು ಅವರ ಸಾಮಂತ ಸಿಂಧಕುಮಾರ (ನಿಡುದೊಳಸಿಂಧ) ಮತ್ತು ಅವನ ಮಗ ಕಮ್ಮರರು ಆಡಳಿತ ನಡೆಯಿಸಿರುವುದು ತಿಳಿದುಬರುತ್ತದೆ. ಕದಂಬರು ಬಾಗಡಗೆ ಪ್ರದೇಶದ ಮೇಲೆ ತಮ್ಮ ಅಧಿಕಾರ ಹೊಂದಿದ್ದ ರೆಂಬುದಕ್ಕೆ ಭೈರನಮಟ್ಟಿ ಶಾಸನವೇ ಸಾಕ್ಷಿಯಾಗಿದೆ.

೩.೪. ಬಾದಾಮಿ ಚಾಲುಕ್ಯರು

ಬಾಗಡಗೆ ಪ್ರದೇಶ ಬಾದಾಮಿ ಪರಿಸರವೇ ಆಗಿರುವುದು ಹಾಗೂ ಬಾಗಲಕೋಟೆಗೆ ಕೇವಲ ೨೫ ಕಿ.ಮೀ. ಅಂತರದಲ್ಲಿರುವುದರಿಂದ ಸಹಜವಾಗಿ ಇದು ಬಾದಾಮಿ ಚಾಲುಕ್ಯರ ಅಧಿಕಾರಕ್ಕೆ ಒಳಪಟ್ಟಿತ್ತು. ಈ ಬಾಗಡಗೆ ಪರಿಸರದ ನಿಶ್ಚಿತ ರಾಜಕೀಯ ಚರಿತ್ರೆ ಬಾದಾಮಿ ಚಾಲುಕ್ಯರಿಂದ

ಆರಂಭವಾಗುತ್ತದೆ. ಬಾಗಡಗೆ ಸಿಂಧ ವಂಶಸ್ಥರೇ ಕದಂಬರ ಸಾಮಂತರಾಗಿ ಅಧಿಕಾರ ನಡೆಸುತ್ತಿರುವ ವೇಳೆಯಲ್ಲಿ ವಾತಾಪಿ ಅಥವಾ ಬಾದಾಮಿಯನ್ನು ಕೇಂದ್ರವಾಗಿ ಮಾಡಿಕೊಂಡು ಕದಂಬರ ಮಾಂಡಳೀಕರಾಗಿ ಚಾಲುಕ್ಯರು ಅಧಿಕಾರ ನಡೆಯಿಸಿದ್ದು ಗಮನಿಸಬೇಕಾದ ಅಂಶವಾಗಿದೆ.

ತದನಂತರ ಪ್ರಬಲ ಕದಂಬರ ಮಾಂಡಳಿಕರಾಗಿದ್ದ ಚಾಲುಕ್ಯರು ಕದಂಬರನ್ನೇ ಸೋಲಿಸಿ ಸ್ವತಂತ್ರಗೊಂಡರು ಮತ್ತು ವಾತಾಪಿ(ಬಾದಾಮಿ)ಯಲ್ಲಿ ರಾಜ್ಯ ಸ್ಥಾಪಿಸಿದರು. ಬಾಗಲಕೋಟ ಪಟ್ಟಣದಲ್ಲಿ ದೊರೆತ ಚಾಲುಕ್ಯರ ೬ನೇ ಶತಮಾನದ ಒಂದು ತಾಮ್ರಪಟ ಶಾಸನದಲ್ಲಿ ಧರ್ಮ ಮಹಾರಾಜ ರಣವಿಕ್ರಮನ ಮಗ ಕತ್ತಿಯರಸನನ್ನು ವರ್ಣಿಸುತ್ತದೆ.[೯] ಜೊತೆಗೆ ವ್ಯಾಪ್ರಸ್ವಾಮಿಯ ವಿನಂತಿಯ ಮೇರೆಗೆ ರಾಜನ ೧೨ನೇ ವರ್ಷದಲ್ಲಿ ಕೃಷ್ಣಸ್ವಾಮಿ ಎಂಬುವವನು ಭೂಮಿದಾನ ನೀಡಿರುವುದನ್ನು ತಿಳಿಸುವುದು.

ಜಯಸಿಂಹ ರಣರಾಗರಿಂದ ಆರಂಭಗೊಂಡ ಚಾಲುಕ್ಯ ರಾಜ್ಯವು ೧ನೇ ಪುಲಿಕೇಶಿಯ ಸ್ವತಂತ್ರ ಆಡಳಿತದಿಂದ ಪ್ರಸಿದ್ಧಿಗೆ ಬಂದಿತು. ಕ್ರಿ.ಶ. ೫೪೦ರಲ್ಲಿ ಆರಂಭವಾದ ಚಾಲುಕ್ಯರಾಜ್ಯ ಕ್ರಿ.ಶ. ೭೫೭ರವರೆಗೆ ಅಸ್ತಿತ್ವದಲ್ಲಿತ್ತು ಮತ್ತು ಸು. ೨೦೦ ವರ್ಷ ಕಾಲ ರಾಜ್ಯಭಾರ ಮಾಡಿತು. ಈ ಅವಧಿಯಲ್ಲಿ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ ಹಾಗೂ ವಾಸ್ತುಶಿಲ್ಪ ಕಲೆಗಳ ಕ್ಷೇತ್ರಕ್ಕೆ ಹಲವು ಕೊಡುಗೆ ನೀಡಿದರು. ವಾಸ್ತುಶಿಲ್ಪ ಕ್ಷೇತ್ರಕ್ಕೆ ಚಾಲುಕ್ಯರ ಕೊಡುಗೆ ಅಪಾರವಾಗಿದ್ದು ಅವರು ಹುಟ್ಟುಹಾಕಿದ ವಾಸ್ತುಕಲೆಯನ್ನು ಕರ್ನಾಟಕದ ವಾಸ್ತುಶೈಲಿ ಅಥವಾ ಚಾಲುಕ್ಯ ಶೈಲಿಯೆಂದು ಪ್ರಸಿದ್ಧಿಗೊಂಡಿತು. ಇವರ ಕಾಲದ ವಾಸ್ತುಶಿಲ್ಪಕಲೆ ಬಾಗಲಕೋಟ (ಬಾಗಡಗೆ) ಪ್ರದೇಶದ ವ್ಯಾಪ್ತಿಯ ಹತ್ತಿರ ಬರುವ ಪಟ್ಟದಕಲ್ಲು, ಐಹೊಳೆ, ಬಾದಾಮಿ, ಮಹಾಕೂಟ ಇತ್ಯಾದಿ ಸ್ಥಳಗಳಲ್ಲಿ ಆವಿರ್ಭವಿಸಿದೆ.

೩.೫. ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಸಾಮಂತ ಮಂಡಳೇಶ್ವರರಾಗಿದ್ದು ಚಾಲುಕ್ಯ ಅಸಮರ್ಥ ರಾಜರ ಕಾಲದಲ್ಲಿ ಅದರ ಸದುಪಯೋಗ ಪಡೆದು ಸ್ವತಂತ್ರರಾದರು. ಮಳಖೇಡ ಅಥವಾ ಮಾನ್ಯಖೇಟವು ರಾಷ್ಟ್ರಕೂಟರ ಪಾರಂಪರಿಕ ರಾಜಧಾನಿಯಾಗಿ ಮೆರೆಯಿತು.

ಕ್ರಿ.ಶ. ೭೫೩ರಲ್ಲಿ ರಾಷ್ಟ್ರಕೂಟ ದಂತಿದುರ್ಗ ಬಾದಾಮಿ ಚಾಲುಕ್ಯ ೨ನೇ ಕೀರ್ತಿವರ್ಮನನ್ನು ಸೋಲಿಸಿ ಸ್ವತಂತ್ರಗೊಂಡನು. ತದನಂದರ ಕ್ರಿ.ಶ. ೭೫೭ರಲ್ಲಿ ೧ನೇ ಕೃಷ್ಣರಸನು ಸಿಂಹಾಸನವೇರಿದ ತಕ್ಷಣ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿ ಮಳಖೇಡದಲ್ಲಿ ರಾಜ್ಯ ಸ್ಥಾಪಿಸಿ ಚಾಲುಕ್ಯ ಸಾಮ್ರಾಜ್ಯದ ಮೇಲೆ ಹಿಡಿತ ಸಾಧಿಸಿದನು. ಹೀಗೆ ದಂತಿದುರ್ಗನಿಂದ ಬೆಳಕಿಗೆ ಬಂದ ರಾಷ್ಟ್ರಕೂಟ(ರಟ್ಟರು) ವಂಶವು ಧ್ರುವ, ೩ನೇ ಗೋವಿಂದ, ೧ನೇ ಅಮೋಘವರ್ಷ, ೩ನೇ ಕೃಷ್ಣರ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಬಹುವಿಸ್ತಾರವಾಗಿ ಬೆಳೆಯಿತು. ಇವರು ಬಾದಾಮಿ ಚಾಲುಕ್ಯರು ಹಾಕಿ ಕೊಟ್ಟ ದಾರಿಯಲ್ಲಿಯೇ

ನಡೆದು ಭಾರತೀಯ ಸಂಸ್ಕೃತಿಯನ್ನು ಮತ್ತಷ್ಟು ಶ್ರೀಮಂತಗೊಳಿಸಿದರು.

ಬಾಗಲಕೋಟ-ಬಾಗಡಗೆ ಪ್ರದೇಶ ರಾಷ್ಟ್ರಕೂಟರ ಅಧೀನಕ್ಕೊಳಪಟ್ಟರೂ ಅದರ ಬಗ್ಗೆ ಶಾಸನ ದಾಖಲೆಗಳು ದೊರಕುವುದಿಲ್ಲ. ಆದರೆ ಇವರ ವಾಸ್ತುಕಲೆಯ ಕುರುಹಾಗಿ ಇಂದಿನ ಬಾಗಲಕೋಟ ತಾಲೂಕಿನ ಹಳ್ಳೂರ ಗ್ರಾಮದಲ್ಲಿ ಕ್ರಿ.ಶ. ೯ನೇ ಶತಮಾನದ ಜೈನಬಸದಿ(ಮೇಲ್ಗುಡಿ) ಹಾಗೂ ಅದರ ಗೋಡೆಯಲ್ಲಿ ಚಿಕ್ಕ ಶಾಸನ ದೊರಕುತ್ತವೆ.[೧೦] ಶಾಸನ 'ತ್ರಿಮುಷ್ಟಿದೇವ' ಎಂಬಷ್ಟೇ ಉಚ್ಚಾರಣೆ ಹೊಂದಿದೆ. ಇದೇ ಬಸದಿಯ ಮತ್ತೊಂದು ಗೋಡೆಯಲ್ಲಿ ಇನ್ನೊಂದು ಶಾಸನವಿದ್ದು ರಾಜಕೀಯ ವಿಷಯ ಒಳಗೊಂಡಿಲ್ಲ.[೧೧] ಇನ್ನುಳಿದಂತೆ ಬಾದಾಮಿ, ಹುನಗುಂದ ತಾಲೂಕುಗಳಲ್ಲಿ ಈ ರಾಷ್ಟ್ರಕೂಟರ ಶಾಸನಗಳು ದೊರೆಯುತ್ತವೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ರಾಷ್ಟ್ರಕೂಟರು ಬಾಗಡಗೆ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿರುವುದು ಗೊತ್ತಾಗುತ್ತದೆ.

೩.೬. ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟರ ಮಾಂಡಳೇಶ್ವರ ಸಾಮಂತರಾಗಿದ್ದ ಕಲ್ಯಾಣದ ಚಾಲುಕ್ಯರು ಮೂಲತಃ ಬಾದಾಮಿ ಚಾಲುಕ್ಯರ ವಂಶಜರಾಗಿದ್ದಾರೆ. ಇವರು ಸಹ ೨೦೦ ವರ್ಷ ಕಾಲ ಕನ್ನಡ ಪ್ರದೇಶವನ್ನೊಳಗೊಂಡು ಇಡೀ ದಕ್ಷಿಣ ಭಾರತದ ಮೇಲೆ ಸಾಮ್ರಾಜ್ಯ ನಿರ್ಮಿಸಿದ್ದು ಈ ಹಿಂದಿನ ಬಾದಾಮಿ ಚಾಲುಕ್ಯರು ಆರಂಭಿಸಿದ ವಾಸ್ತುಶಿಲ್ಪಕಲೆಯನ್ನು ಇನ್ನಷ್ಟು ಶ್ರೀಮಂತಗೊಳಿಸಿದ ಕೀರ್ತಿಗೆ ಪಾತ್ರರಾದರು. ಇವರ ಅವಧಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹಾಸಾಧನೆಗೈದಿದ್ದು ಸಾಮ್ರಾಜ್ಯದ ತುಂಬೆಲ್ಲ ಹಾಕಿಸಿದ ಅವರ ಶಾಸನಗಳೇ ಅದನ್ನು ಜಾಹೀರುಪಡಿಸುತ್ತವೆ.

೨ನೇ ತೈಲಪ

ಇವನು ಕಲ್ಯಾಣ ಚಾಲುಕ್ಯರ ಮೊದಲ ಸ್ವತಂತ್ರದೊರೆ. ರಾಷ್ಟ್ರಕೂಟ ಕೊಟ್ಟಿಗನ ಕಾಲದಲ್ಲಿ ಅವನ ಸಾಮಂತನಾಗಿ ಬಾಗಡಗೆ ಪ್ರದೇಶದ ಕೃಷ್ಣಾನದಿಯ ಉತ್ತರ ಭಾಗದಲ್ಲಿ ತದಕವಾಡಿ ೧೦೦೦ ಅಥವಾ ಮೆಲ್ಪಾಟಿ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದನು. ರಾಷ್ಟ್ರಕೂಟರ ಅಸಮರ್ಥ ಅರಸ ೨ನೇ ಕರ್ಕನನ್ನು ಸೋಲಿಸಿ ಮೊದಲು ಮಳಖೇಡದಲ್ಲಿ ಸಿಂಹಾಸನವೇರಿದನು. ಈ ವಿಷಯವನ್ನು ೨ನೇ ತೈಲನ ನರಸಲಶಿ[೧೨] ಹಾಗೂ ಕಾರ್ಜೋಳ[೧೩] ಶಾಸನಗಳು ಅರಹುತ್ತವೆ. ಮುಂದೆ ಇವನು ಕ್ರಿ.ಶ. ೯೭೩ರಲ್ಲಿ ಕರ್ಕರಾಜನನ್ನು ಸೋಲಿಸಿ ಸ್ವತಂತ್ರ ಕಲ್ಯಾಣ ಚಾಲುಕ್ಯ ಮನೆತನಕ್ಕೆ ಅಸ್ತಿಭಾರ ಹಾಕಿದನು.

೨ನೇ ತೈಲಪ ಚಕ್ರವರ್ತಿಯಾದ ನಂತರ ಅವನ ಒಂದು ಶಾಸನ ಬಾಗಡಗೆ ನಾಡಿನ ಹಳ್ಳೂರದಲ್ಲಿ ದೊರಕುತ್ತದೆ. ಕ್ರಿ.ಶ. ೯೯೦-೧ರ ಕಾಲಮಾನ ಹೊಂದಿದ್ದು ಶಾಸನ ಬಸವೇಶ್ವರ

ದೇವಾಲಯದಲ್ಲಿ ಇಡಲಾಗಿದೆ.[೧೪] ಈ ಶಾಸನ ಬಹಳ ಮುಖ್ಯವಾಗಿದ್ದು ತೈಲಪ ಕ್ರಿ.ಶ. ೯೯೦-೧ರಲ್ಲಿ ರಾಜ್ಯವಾಳುತ್ತಿದ್ದಾಗ ಅವನ ಸಾಮಂತ(ಹೆಸರು ಅಳಿಸಿದೆ) ಸಿಂಧವಂಶದವನಾಗಿದ್ದಾನೆ. ಹೆಸರಿಲ್ಲದಿದ್ದರೂ ಸಿಂಧರ ಪಾರಂಪರಿಕ ಬಿರುದಾದ "ನಾಗಧ್ವಜ ಪ್ರತಾಪ ವಿಜಯ, ವ್ಯಾಘ್ರಲಾಂಛನ, ಭೋಗಾವತಿ ಪುರವೇಶ್ವರ"ವೆಂಬುದನ್ನು ತಿಳಿಸುತ್ತದೆ. ಶಾಸನದ ಪಾಠವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಬಾಗಡಗೆ ಹತ್ತಿರದ ಉತ್ತರ ಭಾಗಕ್ಕಿರುವ ತರ್ದವಾಡಿನಾಡಿನ ಮೇಲ್ಪಾಟಿ ಪ್ರದೇಶದಲ್ಲಿ ಸಾಮಂತ, ಮಹಾಸಾಮಂತನಾಗಿ ಅಣುಗಜೀವಿತವಾಗಿ ಆಳುತ್ತಿದ್ದನು ತೈಲಪ.[೧೫]

ತೈಲಪನ ಬಾಗಡಗೆ ೭೦ರಲ್ಲಿ ದೊರಕುವ ಹಳ್ಳೂರ ಭೈರನಮಟ್ಟಿ ಶಾಸನಗಳು, ಬಹಳ ಪ್ರಾಮುಖ್ಯತೆ ಹೊಂದಿವೆ. ಕ್ರಿ.ಶ. ೯೯೦-೧ರ ಭೈರನಮಟ್ಟಿ ಶಾಸನ[೧೬] ಇವನನ್ನು ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರ ಉತ್ತರೋತ್ತರಮಾಗೆ ತೈಲಪಯ್ಯಂ ರಾಜ್ಯಂಗೆಯ್ಯೆ ಸರವರ್ಷ ೯೧೧ ವಿಕ್ರಿತವೆಂಬ ಸಂವತ್ಸರ ಪ್ರವರ್ತ್ತಿಸೆ ಅರಿನ್ರಿಪತಿಕರಿಕುಂಭಿ ಕುಂಭಸ್ಥಳ ವಿನಿರ್ಗ್ಗಿತ ಕರವಾಳ ವಿಮುಕ್ತಿ ಮುಕ್ತಾಪಳೋಚ್ಚಿತ ಸಮರ ಸಂಘಟ್ಟಣಲಬ್ಧ ವೀರ ವಿಜಯ ರಾಜ್ಯ ಲಕ್ಷ್ಮೀ ವೃಕ್ಷಸ್ಥಳದಿಷ್ಟಿವಿಷ ಕುಳತಿಳಕ ಫಣಾಮಣಿ ಕಿರಣ ವಿಭಾಸುರ ನಾಗವಂಶೋದ್ಭವ ನಾಗಧ್ವಜ ಪ್ರತಾಪ ವಿಜಯಪ್ಪರೆ ಘೋಷಣ ವ್ಯಾಘ್ರಲಾಂಛನ ಭೋಗಾವತಿಪುರ ಪರಮೇಶ್ವರ ನನ್ನಿಗಾಸ್ರಯರಣರಂಗ ಕೇಶರಿ ವಿಶಿಷ್ಟ ಜನಪ್ರಿಯ ಆಶ್ರಿತ ಜನ ಕಲ್ಪವ್ರಿಕ್ಷ ಪುಸಿಗೆನಿಪ್ಪ ಸರಕ್ರಿತ ಮರಿಮತ ಮನ್ಯಜನ ಮನೋಜ ಸಿಂಧನಾರಾಯಣ ನಲ್ಲಿರ್ಣ್ಣಿನಲ್ಲಿ ಡಾಮರಮಲ್ಲ ಏಕಾಂಗ ಶುದ್ರಕ ಶ್ರೀ ಪುಲಿಕಾಲ"ನೆಂದು ಚಕ್ರವರ್ತಿ ೨ನೇ ತೈಲಪ ಮತ್ತು ಅವನ ಸಾಮಂತ ಪುಲಿಕಾಲ(ಸಿಂಧಕುಮಾರ)ನನ್ನು ಹೊಗಳುತ್ತದೆ.

ಮುಂದುವರಿದು ಶಾಸನ ಸಾಮಂತ ಪುಲಿಕಾಲನ ಸಿಂಧ ವಂಶದಲ್ಲಿ ಹುಟ್ಟಿನ ಕುರಿತು, ಅವನ ವಂಶಾವಳಿಯನ್ನು ನೀಡುವುದು. ಈ ಭೈರನಮಟ್ಟಿಶಾಸನ ಪ್ರಾಚೀನ ಸಿಂಧರ ವಂಶ, ವಂಶಾವಳಿ ಕುರಿತು ಹೇಳುವ ಮಹತ್ವದ ದಾಖಲೆಯಾಗಿ ನಿಲ್ಲುತ್ತದೆ. ಸಿಂಧರ ಕುರಿತು ವಿವರವಾಗಿ ಬಾಗಡಗೆ ೭೦ರ ನಾಡರಸರ ವಿಷಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಸತ್ಯಾಶ್ರಯ ೫ನೇ ವಿಕ್ರಮಾದಿತ್ಯ – ಅಯ್ಯಣದೇವರು

೨ನೇ ತೈಲಪನ ನಂತರ ಕಲ್ಯಾಣ ಚಾಲುಕ್ಯ ಸಿಂಹಾಸನವೇರಿದವನು ಅವನ ಮಗ ಸತ್ಯಾಶ್ರಯ. ಇವನ ಕುರಿತು ಹೇಳುವ ಶಾಸನ ದಾಖಲೆಗಳು ಬಾಗಡಗೆ ಪ್ರದೇಶದಲ್ಲಿ ದೊರಕುವುದಿಲ್ಲ. ಸತ್ಯಾಶ್ರಯನಿಗೆ ಮಕ್ಕಳಿರದ ಕಾರಣ ಸಹೋದರ ದಶವರ್ಮನ ಮಗ ೫ನೇ ವಿಕ್ರಮಾದಿತ್ಯನು ಸಿಂಹಾಸನವೇರಿದನು. ಕೆಲವು ಕಾಲದ ನಂತರ ಇವನ ಸಹೋದರ ಅಯ್ಯಣ ದೇವ ಕಲ್ಯಾಣದ ಸಿಂಹಾಸನವೇರಿ ಒಂದು ವರ್ಷ ಕಾಲ ಅಂದರೆ ಕ್ರಿ.ಶ. ೧೦೧೫ ರಲ್ಲಿ ಅಧಿಕಾರ ಮಾಡಿದನು. ಇದನ್ನು

ಸಮರ್ಥಿಸುವ ಶಾಸನವೊಂದು ತರ್ದವಾಡಿ-೧೦೦೦ರ ಗ್ರಾಮ ರೂಗಿಯಲ್ಲಿ ದೊರಕುತ್ತದೆ. ಕ್ರಿ.ಶ. ೧೦೧೫ರ ಶಾಸನ[೧೭] ಬಾದಾಮಿ ಚಾಲುಕ್ಯ ಮತ್ತು ಕಲ್ಯಾಣ ಚಾಲುಕ್ಯರ ಮಧ್ಯದ ೨೨೦ ವರ್ಷಗಳ ಅಂತರದ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತದೆ. ರನ್ನ ಕವಿಯು ಸಹ ಚಾಲುಕ್ಯರ ವಂಶಾವಳಿ ಹೇಳುತ್ತಿದ್ದು ಅಲ್ಪ ಬದಲಾವಣೆ ಕಂಡುಬಂದರೂ ಶಾಸನ ಹಾಗೂ ರನ್ನನ ಹೇಳಿಕೆಗಳು ಒಂದೇ ಆಗಿವೆ.[೧೮]

೧ನೇ ಜಗದೇಕಮಲ್ಲ

ಮೇಲಿನ ಭೈರನಮಟ್ಟಿ ಶಾಸನದ ಕೊನೆಯ ಭಾಗದಲ್ಲಿ ಅಯ್ಯಣ ದೇವನ ಸಹೋದರ ಜಯಸಿಂಹ ೧ನೇ ಜಗದೇಕಮಲ್ಲನ ಕಾಲದಲ್ಲಿ ಹಾಕಿಸಿದ ಕ್ರಿ.ಶ. ೧೦೩೩ರ ಕಾಲಮಾನದ ಶಾಸನ ಬರವಣಿಗೆಯಿರುವುದು. ಇದನ್ನು ಗಮನಿಸಿದಾಗ ಅಯ್ಯಣ ದೇವನ ನಂತರ ಬಾಗಡಗೆ ಪ್ರದೇಶದ ಮೇಲೆ ೧ನೇ ಜಗದೇಕಮಲ್ಲ ಸಹ ಅಧಿಕಾರ ಹೊಂದಿದ್ದನೆಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ.

ಶಾಸನದಲ್ಲಿ ೧ನೇ ಜಗದೇಕಮಲ್ಲನು ಕೊಲ್ಲಿಪಾಕೆಯಿಂದ ರಾಜ್ಯವಾಳುತ್ತಿದ್ದಾಗ ಅವನ ಮಹಾಸಾಮಂತನಾದ ನಾಗತಿಯರಸ ತೇಜೋರಾಶಿ ಪಂಡಿತನ ಕಾಲು ತೊಳೆದು ಅವನ ಕಾಲಕರ್ಚಿಗೆಂದು ಪುರದ ಕೇರಿಯ .... ದೇವರ್ಗ್ಗೆ ಬಿಟ್ಟ ಪರಿಸೂತ್ರದೊಳಗಿನ ದಂಡದೋಶ ಬಿಟ್ಟನೆಂದು, ದಾನವನ್ನು ಗಾವುಂಡಗಳು ಪ್ರತಿಪಾಳಿಸುವರೆಂದಿದೆ.[೧೯] ಇಲ್ಲಿಯ ನಾಗತಿಯರಸ ಇದೇ ಶಾಸನದ ೯೯೦-೧ರ ವಂಶವೃಕ್ಷದ ಕೊನೆಯ ತೈಲಪನ ಸಾಮಂತ ನಾಗಾದಿತ್ಯರಸನಾಗಿದ್ದಾನೆ.

ಜಗದೇಕಮಲ್ಲನ ಇನ್ನೊಂದು ದಾಖಲೆ ಬಾಗಡಗೆ-೭೦ರ ನಾಡಿನ ಹತ್ತಿರದ ಹಳ್ಳೂರ ಗ್ರಾಮದ ಬಸವೇಶ್ವರ ದೇವಾಲಯದಲ್ಲಿ ಇಡಲಾಗಿದೆ. ಇದು ಸಹ ಭೈರನಮಟ್ಟಿ ಗ್ರಾಮ ಶಾಸನದ ಕಾಲ ೧೦೩೩ರನ್ನು ಹೊಂದಿದ್ದು ಅದರ ವಿಷಯವನ್ನೇ ಹೇಳುತ್ತದೆ. ಈ ಶಾಸನವು ಕ್ರಿ.ಶ. ೧೦೩೩-೩೪ ರ ಕಾಲ ಹೊಂದಿದ್ದು ಜಗದೇಕಮಲ್ಲ ಕೊಲ್ಲಿಪಾಕೆಯಿಂದ ಆಳುತ್ತಿದ್ದಾಗ ಅವನ ಮಹಾಸಾಮಂತ ನಾಗತಿಯರಸ ಶ್ರೀತೇಜೊರಾಶಿ ಪಂಡಿತನ ಕಾಲು ತೊಳೆದು ಕಾಲಕರ್ಚಿಗೆಂದು ಪುರದ ಕೆರಿಯ ಬಾಗಡಗೆ ದೇಸೆಯ... ದೇವರ್ಗ್ಗೆ ಎಂದಷ್ಟೇ ಹೇಳುವುದು.[೨೦]

ಈ ಎರಡು ಶಾಸನಗಳನ್ನು ಹೊರತುಪಡಿಸಿದರೆ ಮತ್ಯಾವ ಶಾಸನಗಳು ಜಗದೇಕಮಲ್ಲನ ಕಾಲದಲ್ಲಿ ಇಲ್ಲಿ ದೊರೆಯುವುದಿಲ್ಲ. ಭೈರನಮಟ್ಟಿ ಮತ್ತು ಹಳ್ಳೂರದ ಶಾಸನಗಳಲ್ಲಿ ಉಕ್ತನಾದ ನಾಗತಿಯರಸ ಒಬ್ಬನೆಯಾಗಿದ್ದಂತೆ ಭೈರನಮಟ್ಟಿ ಮೂಲ(ಮೇಲಿನ ಭಾಗದ ಶಾಸನ) ಶಾಸನದ ೨ನೇ ತೈಲಪನ ಸಾಮಂತ ನಾಗಾದಿತ್ಯನೇ ನಾಗತಿಯರಸನಾಗಿರುವನು.

ಅಕ್ಕಾದೇವಿ

ಕಲ್ಯಾಣದಿಂದ ತಮ್ಮ ಸಾಮ್ರಾಜ್ಯದ ಮೇಲೆ ಅಧಿಕಾರ ಚಲಾಯಿಸಿದ ಚಾಲುಕ್ಯರು ಬಾಗಡಗೆ-೭೦ರ ಮೇಲೂ ಅಧಿಕಾರಹೊಂದಿದ್ದರು. ಆದರೆ, ಚಾಲುಕ್ಯ ವಂಶದ ಮಗಳಾದ ಅಕ್ಕಾದೇವಿ ಸಹ ಬಾಗಡಗೆ ಪ್ರದೇಶವನ್ನು ಆಳಿದ್ದು ಬಹಳ ಪ್ರಮುಖ ವಿಷಯವಾಗಿ ಕಾಣಿಸಿಕೊಳ್ಳುತ್ತದೆ. ಚಕ್ರವರ್ತಿಗೆ ಸಮಾನಳಾಗಿದ್ದುಕೊಂಡು ಅಧಿಕಾರ ಹೊಂದಿದ್ದಳಲ್ಲದೆ, ನಾಡಿಗಾಗಿ ಯುದ್ಧವನ್ನು ಮಾಡಿದ ಮೊದಲ ಮಹಿಳೆಯಾಗಿದ್ದಾಳೆ. ಇವಳನ್ನು ನೋಡಿದರೆ ಚಾಲುಕ್ಯರಸರು ತಮ್ಮ ಮಹಿಳೆಯರನ್ನು ಸಾಮ್ರಾಜ್ಯದ ಆಡಳಿತದಲ್ಲಿ ವಿಶಿಷ್ಟವಾಗಿ ತೊಡಗಿಸಿಕೊಂಡಿರುವುದು ಗಮನೀಯ.

ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದಲ್ಲಿ ಸ್ವತಂತ್ರ ರಾಜ್ಯಭಾರ ಮಾಡಿದ ಅಕ್ಕಾದೇವಿ ಒಬ್ಬ ಅದ್ವಿತೀಯ ಮಹಿಳೆಯಾಗಿರುವಳು. ಈಕೆ ದಶವರ್ಮ ಭಾಗಲದೇವಿಯರ ಮಗಳು.[೨೧] ದಶವರ್ಮನಿಗೆ ೫ನೇ ವಿಕ್ರಮಾದಿತ್ಯ, ಅಯ್ಯಣದೇವ, ೧ನೇ ಜಗದೇಕಮಲ್ಲ ಹಾಗೂ ಅಕ್ಕಾದೇವಿಯ ರೆಂಬ ನಾಲ್ಕು ಜನ ಮಕ್ಕಳು. ರನ್ನನ ಮತ್ತು ರೂಗಿ ಶಾಸನಗಳು ಇವಳ ಕುರಿತು ಏನನ್ನೂ ಹೇಳುವುದಿಲ್ಲ. ಇವಳು ಮೇಲಿನ ಚಾಲುಕ್ಯ ಮೂರು ಜನ ಅರಸರಿಗಿಂತ ಹಿರಿಯಳಾಗಿದ್ದು ಅವರಿಗೆ ಅಕ್ಕಳಾಗಿದ್ದಳು. ಬಹುಶಃ ಅದಕ್ಕಾಗಿಯೇ ಈಕೆಗೆ ಅಕ್ಕಾದೇವಿಯೆಂಬ ಹೆಸರು ಇಟ್ಟಿರ ಬೇಕು. ಈಕೆ ೧ನೇ ಸೋಮೇಶ್ವರನ ಅತ್ತೆಯಾಗಿ, ಅಳಿಯ ೨ನೇ ಸೋಮೇಶ್ವರನ ಕಾಲದಲ್ಲಿ ಬಹು ನಾಡುಗಳ ಮೇಲೆ ಸ್ವತಂತ್ರ ಆಳ್ವಿಕೆ ಮಾಡಿದ್ದಾಳೆ. ಕ್ರಿ.ಶ. ೧೦೧೦ ರ ಸೂಡಿ ಶಾಸನ ೨೨ ದಿಂದ ಹಿಡಿದು ಕ್ರಿ.ಶ. ೧೦೬೪ ರ ಹೊಟ್ಟೂರ ಶಾಸನದ ಕಾಲ[೨೩] ಅಂದರೆ ಸುಮಾರು ೫೪ ವರ್ಷಗಳ ಸ್ವತಂತ್ರ ಮತ್ತು ಗಂಡ ಕದಂಬರಸ ಹಾಗೂ ಮಗಳ ಕಾಲದಲ್ಲಿ ಆಡಳಿತ ನಡೆಸಿರುವಳು. ಈಕೆಯ ಅಧಿಕಾರದ ಕಾಲವನ್ನು ಗಮನಿಸಿದಾಗ ೬ನೇ ವಿಕ್ರಮಾದಿತ್ಯನಕ್ಕಿಂತ ನಾಲ್ಕು ವರ್ಷ ಕಾಲ ಹೆಚ್ಚಿನ ಆಡಳಿತ ನಡೆಸಿದ್ದು ತಿಳಿದುಬರುವುದು. ಇದನ್ನು ಗಮನಿಸಿದಾಗ ಪ್ರಾಚೀನ ಕರ್ನಾಟಕದ ರಾಜಕೀಯ ಜೀವನದಲ್ಲಿ ಕಲ್ಯಾಣ ಚಾಲುಕ್ಯರ ರಾಣಿಯರ(ಹೆಣ್ಣು ಮಕ್ಕಳ) ಪಾತ್ರ ಒಂದು ಪ್ರಮುಖ ಅಧ್ಯಾಯವಾಗಿ ಕಾಣಿಸಿಕೊಳ್ಳುತ್ತದೆ.

ಇವಳ ಚರಿತ್ರೆಯನ್ನು ಬಿಂಬಿಸುವ ಶಾಸನಗಳೆಂದರೆ, ಕ್ರಿ.ಶ. ೧೦೧೦ ಸೂಡಿ, ಕ್ರಿ.ಶ. ೧೦೨೨ ಬೇಲೂರ, ಕ್ರಿ.ಶ. ೧೦೩೭ ಹೊಟ್ಟೂರು, ಕ್ರಿ.ಶ. ೧೦೪೭ ಅರಸಿಬೀದಿ, ಕ್ರಿ.ಶ. ೧೦೫೦, ಸೂಡಿ, ಕ್ರಿ.ಶ. ೧೦೫೦ ಕೊರಲಹಳ್ಳಿ, ಕ್ರಿ.ಶ. ೧೦೫೩ ಅರಸಿಬೀದಿ, ಕ್ರಿ.ಶ. ೧೦೫೪ ಸೂಡಿ, ಕ್ರಿ.ಶ. ೧೦೫೮ ಸೂಡಿ, ಕ್ರಿ.ಶ. ೧೦೬೪ ಹೊಟ್ಟೂರ ಶಾಸನಗಳಾಗಿವೆ.

ಕ್ರಿ.ಶ. ೧೦೧೦ರ ಸೂಡಿ ಶಾಸನದಲ್ಲಿ ೫ನೇ ವಿಕ್ರಮಾದಿತ್ಯನ ಉಲ್ಲೇಖ ಬಂದರೆ, ಕ್ರಿ.ಶ. ೧೦೨೨ ರ ಬೇಲೂರ, ಕ್ರಿ.ಶ. ೧೦೩೭ ರ ಹೊಟ್ಟೂರ ಶಾಸನಗಳಲ್ಲಿ ೧ನೇ ಜಗದೇಕಮಲ್ಲ ಜಯಸಿಂಹನ ಉಲ್ಲೇಖ ಬರುವುದು. ಕ್ರಿ.ಶ. ೧೦೪೭ ರ ಅರಸಿಬೀದಿ, ಕ್ರಿ.ಶ. ೧೦೫೦ ರ ಸೂಡಿ, ಕೊರಲಹಳ್ಳಿ, ಅರಸಿಬೀದಿ, ಸೂಡಿ, ಹೊಟ್ಟೂರ ಶಾಸನಗಳಲ್ಲಿ ೧ನೇ ಸೋಮೇಶ್ವರನ ಉಲ್ಲೇಖ ದೊರಕುವುದು. ಈ ಮೂರು ಜನರ ಅವಧಿಯಲ್ಲಿ ರಾಜ್ಯಭಾರ ಮಾಡಿರುವುದು ವಿಶೇಷವಾಗಿದೆ.

ಸೂಡಿ ಮತ್ತು ಬೇಲೂರ ಶಾಸನಗಳ ಕಾಲಕ್ಕೆ ಅಕ್ಕಾದೇವಿ ಕಿಸುಕಾಡು ೭೦ನ್ನು ಆಳುತ್ತಿದ್ದರೆ, ಹೊಟ್ಟೂರ ಶಾಸನದ ಕಾಲಕ್ಕೆ ಬನವಾಸಿ ಪನ್ನಿಚ್ಛಾಸಿರವನ್ನು ಸುಸಂಖ ಕಥಾ ವಿಶೇಷದಿಂದ ಆಳುತ್ತ ಬನವಾಸಿ ಪುರವರೇಶ್ವರ ಮಯೂರವರ್ಮದೇವನು ಬನವಾಸಿ ಪನ್ನಿಚ್ಛಾಸಿರ, ಪಾನಂಗಲ್ಲು-೫೦೦, ಏಕಾಂತ ಪದಿನಾಲ್ಕುಗಳನ್ನು ಆಳುತ್ತಿದ್ದನು. ಇದನ್ನು ಗಮನಿಸಿದಾಗ ಕ್ರಿ.ಶ. ೧೦೩೭ ರ ಹಿಂದೆಯೇ ಅಕ್ಕಾದೇವಿ ಕದಂಬ ಮಯೂರವರ್ಮನನ್ನು ವಿವಾಹವಾಗಿ ಕೆಲಕಾಲ ಅವನೊಂದಿಗೆ ಆಡಳಿತ ನಡೆಸಿರಬೇಕೆನಿಸುತ್ತದೆ.

ತದನಂತರ ಕ್ರಿ.ಶ. ೧೦೪೭, ೧೦೫೦ ರ ಕಾಲಕ್ಕೆ ಆಕೆಯು ಬನವಾಸಿ ನಾಡು ಬಿಟ್ಟು ಕಿಸುಕಾಡು ೭೦, ಬಾಗಡಗೆ ೭೦, ತೊರಗಲೆ ನಾಡು, ಮಾನವಾಡಿ ೧೪೦, ಗಳ ವಿಭಾಗಗಳನ್ನು ದುಷ್ಟನಿಗ್ರಹದಿಂದ ರಾಜ್ಯವಾಳುತ್ತಿದ್ದದು ಗೊತ್ತಾಗುತ್ತದೆ.[೨೪] ಮೇಲಿನ ಕೆಲವು ಶಾಸನಗಳು ಬನವಾಸಿ, ಪಾನಂಗಲ್ಲು ನಾಡುಗಳನ್ನು ಆಳುತ್ತಿದ್ದ ತೋರಿಮರಸ ಇವಳ ಮಗನೆಂದು ಹೇಳುವವು. ಕ್ರಿ.ಶ. ೧೦೬೪ ರ ಹೊಟ್ಟೂರ ಶಾಸನ "ತೋಯಿಮದೇವರಟ್ಟೆಗಳ್ ಶ್ರೀಮತ್ ಅಕ್ಕಾದೇವಿಯರು" ಎಂದು ಹೇಳಿ ಅದನ್ನು ಸ್ಪಷ್ಟಪಡಿಸುತ್ತದೆ.[೨೫] ಬಾಗಡಗೆ ೭೦, ಕಿಸುಕಾಡು ೭೦ ನಾಡನ್ನೊಳಗೊಂಡು ಇತರ ನಾಡುಗಳನ್ನು ಆಳುತ್ತಿದ್ದಾಗ ಅಕ್ಕಾದೇವಿಯ ರಾಜಧಾನಿ ವಿಕ್ರಮಪುರ(ಅರಸಿಬೀದಿ)ವಾಗಿತ್ತೆಂದು ತೊರುತ್ತದೆ ಮತ್ತು ಸೂಡಿ ಸಹ ಇವಳ ಆಡಳಿತದ ಮತ್ತೊಂದು ಪ್ರಮುಖ ಕೇಂದ್ರವಾಗಿರುವಂತೆ ತೋರುವುದು. ಬೇಲೂರ ಶಾಸನವು ಅಕ್ಕಾದೇವಿ ಕೇವಲ ಆಡಳಿತ ನಡೆಸುವ ಸಾಮರ್ಥ ಹೊಂದಿರಲಿಲ್ಲ. ಯುದ್ಧದಲ್ಲಿಯೂ ತೊಡಗಿ ಜಯಿಸುವ ಸಾಮರ್ಥ್ಯವುಳ್ಳವಳಾಗಿದ್ದಳೆಂದು ಹೇಳುವುದು. ಅದು

"ಗುಣದ ಬೆಡಂಗಿಯನಲ್ ಸದ್ಗುಣಮಂ ನೆಗಳ್ದೇಕ

ವಾಕ್ಯೆಯೆನೆ ಸೂನೃತಮಂ ರಣ

ಭೈರವಿಯೆನೆ ಶೌರ್ಯದ ಗುಣ ಮನದೇವೆಂದು

ಬಣ್ಣಿಪಂ ನೃಪ ಸಂತೆಯಂ"ಯೆಂದು ಆಕೆಯ ಗುಣಗಾನವನ್ನು ಶೌರ್ಯವನ್ನು ಪರಿಚಯಿಸುತ್ತದೆ.

೧ನೇ ಸೋಮೇಶ್ವರ

ಬಾಗಡಗೆ-೭೦ ರ ಮೇಲೆ ಅಕ್ಕಾದೇವಿ, ಜಗದೇಕಮಲ್ಲರು ಆಡಳಿತ ನಡೆಸಿದ ನಂತರ ಚಾಲುಕ್ಯ ಸಿಂಹಾಸನಕ್ಕೆ ಬಂದ ಜಗದೇಕಮಲ್ಲನ ಮಗ ೧ನೇ ಸೋಮೇಶ್ವರನು ತ್ರೈಲೋಕ್ಯಮಲ್ಲ ದೇವನೆಂಬ ಬಿರುದಿನಿಂದ ಆಳಿದನು. ಇವನ ಆಳ್ವಿಕೆಯ ಕುರಿತು ಹೇಳುವ ಬಾಗಡಗೆ-೭೦ ರ ಮೊದಲ ಶಾಸನ ಶಿರೂರದ ಕ್ರಿ.ಶ. ೧೦೪೯ ರದ್ದಾಗಿದೆ.[೨೬] ಇದು ೧ನೇ ಸೋಮೇಶ್ವರನನ್ನು ಹೆಸರಿಸುವುದಿಲ್ಲವಾದರೂ ಶಾಸನದ ಮಧ್ಯದಲ್ಲಿ ಮಾತ್ರ, ಸೋಮೇಶ್ವರನನ್ನು ಉಲ್ಲೇಖಿಸಿ ಅವನ ಮಡದಿ ಲೀಳಾದೇವಿಯ ಹೆಸರನ್ನು ಹೇಳುವುದನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ. ಶಾಸನ "ಶ್ರೀ ಮತ್ರೈಲೋಕ್ಯಮಲ್ಲ ಪ್ರವರ ನರಪತಿ ರಾಜರಾಜಸ್ಯ ರಾಜ್ಞೆ ಲೀಳಾದೇವಿ ಭೂವನ ವಿಧಿತಾ ರೂಪ ಸೌಭಾಗ್ಯಯುಕ್ತ ತಸ್ಸಾ ಮಾತುರ್ಗ್ಗುರು ತರವರಃ" ಎಂಬುದನ್ನು ನೋಡಿದರೆ ಬಹುಶಃ ಲೀಳಾದೇವಿ ಬಾಗಡಗೆ ನಾಡಿನ ಮೇಲೆ ಅಥವಾ ಶಿರೂರ ಪುರದಲ್ಲಿ ಅಧಿಕಾರ ಹೊಂದಿರಬೇಕು. ಇಲ್ಲವೇ ಸೋಮೇಶ್ವರನ ಕಾಲದಲ್ಲಿ ಬಾಗಡಗೆ ನಾಡಿನತ್ತ ತಿರುಗಾಡುತ್ತಾ ರಾಜ್ಯ ಕಾರ್ಯಾರ್ಥವಾಗಿ ಬಂದಿರಬೇಕೆನಿಸುತ್ತದೆ. ಶಾಸನದಲ್ಲಿ ಪುರಪ್ರಭು ಮಾರಸಿಂಘನ ಕುರಿತು ಹಾಗೂ ಅವನ ವಂಶಾವಳಿ, ಅವನು ಕಟ್ಟಿಸಿದ ಸ್ಮಾರಕ ದೇವಾಲಯಗಳ ಕುರಿತು ನಿರ್ದಿಷ್ಟವಾಗಿ ವಿವರಣೆ ಮಾಡುವುದು. ಕ್ರಿ.ಶ. ೧೦೬೨ ರ ಮತ್ತೊಂದು ಶಿರೂರ ಶಾಸನ[೨೭] ಪ್ರಭುಮಾರಸಿಂಘನು ಸಿದ್ದೇಶ್ವರ ದೇವರ ಜೀರ್ಣೋದ್ಧಾರಕ್ಕೆಂದು, ಸುಣ್ಣ, ಬಣ್ಣಕ್ಕೆಂದು ಬ್ರಾಹ್ಮಣರ ಭೋಜನಕ್ಕೆ ಮಹಾಜನರ ಕೈಯಲ್ಲಿ ೨೨೦೦ ಗದ್ಯಾಣ ನೀಡಿ ಅದರಿಂದ ಬರುವ ಹಣ ೨ಕ್ಕೆ ಗದ್ಯಾಣವನ್ನು ವೆಚ್ಚಕ್ಕಾಗಿ ನೀಡಿರುವ ವಿಷಯವಿದೆ.

ಇದೇ ಶಿರೂರದಲ್ಲಿ ೧ನೇ ಸೋಮೇಶ್ವರನ ಕ್ರಿ.ಶ. ೧೦೬೮-೬೯ ರ ಮತ್ತೊಂದು ಶಾಸನ ದೊರಕುವುದು. ಕೊಲ್ಹಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪಜೀವಿ ಗೌರಕಬ್ಬೆಯನ್ನು ಹೆಸರಿಸಿ ಅವಳ ಗಂಡ ನಿಂಬಕುಲದ ಕೊಲ್ಹಾಪುರದ ಪ್ರಭುವಾಗಿದ್ದ. ಅವನು ಕರ್ಣನ ಶಿರವೂರ ಸಿದ್ಧದೇವರ್ಗ್ಗೆ ಭೂಮಿದಾನ ಮಾಡಿದ ಕುರಿತು ಹೇಳುವುದು. ೧ನೇ ಸೋಮೇಶ್ವರನ ಬಾಗಡಗೆ-೭೦ರ ಕೊನೆಯ ಶಾಸನ ಬೇವೂರದಲ್ಲಿ ಸಿಗುವುದು. ಸೋಮೇಶ್ವರನ ಸಾಮಂತ ನೊಳಂಬಾಧಿರಾಜ ಸುಭರಾಜನೆಂಬ ಬ್ರಾಹ್ಮಣನನ್ನು ಉಲ್ಲೇಖಿಸುವುದು. ಬಹುಶಃ ಇವನು ಸೋಮೇಶ್ವರನ ಕಾಲದಲ್ಲಿ ಸಾಮಂತನಾಗಿ ಬಾಗಡಗೆ ಪ್ರದೇಶದಲ್ಲಿ ಅಧಿಕಾರ ಚಲಾಯಿಸಿರಬೇಕು.[೨೮]

೬ನೇ ವಿಕ್ರಮಾದಿತ್ಯ

ಕ್ರಿ.ಶ. ೧೦೭೭ ರಲ್ಲಿ ಅಣ್ಣ ೨ನೇ ಸೋಮೇಶ್ವರನನ್ನು ಸಿಂಹಾಸನದಿಂದ ಕೆಳಗಿಳಿಸಿ ತಾನೇ ಸಿಂಹಾಸನಕ್ಕೆ ಬಂದನು. ಸುಮಾರು ಕ್ರಿ.ಶ. ೧೧೨೭ ರವರೆಗೆ ಚಾಲುಕ್ಯ ರಾಜ್ಯವಾಳಿದ ವಿಕ್ರಮಾದಿತ್ಯ ೫೦ ವರ್ಷಗಳಷ್ಟು ಸುದೀರ್ಘವಾಗಿ ಅಧಿಕಾರದಲ್ಲಿದ್ದನು. ಇವನ ಕಾಲದ ಒಂದು ಶಾಸನ ಶಿರೂರ ಗ್ರಾಮದಲ್ಲಿ ದೊರೆತಿದ್ದು ಕ್ರಿ.ಶ. ೧೧೦೦ ಕ್ಕೆ ಸೇರಿದೆ. ದತ್ತಿ ಶಾಸನವಾದ ಇದು ಸಿದ್ಧೇಶ್ವರ ದೇವರ ಸ್ಥಾನಾಚಾರ್ಯ ಪ್ರಸನರಾಶಿ ಪಂಡಿತದೇವನು ದೇವರ ಪೊಲದೊಳಗೆ ಬಾಚಿಸೆಟ್ಟಿಯ ಕೆರೆಗೆ ಬಿಟ್ಟ ಕೆರಿಯ ಕೆಳಗಣ ಕರಿಯ ಕೆಯಿ ಮತ್ತರು ನಾಲ್ಕು ನೀಡಿದ್ದನ್ನು ತಿಳಿಸುವುದು.[೫೯] "ತ್ರಿಭುವನಮಲ್ಲ" ಎಂಬುದು ವಿಕ್ರಮಾದಿತ್ಯನ ಪ್ರಸಿದ್ಧಬಿರುದಾಗಿದೆ.

೩ನೇ ಸೋಮೇಶ್ವರ

೬ನೇ ವಿಕ್ರಮಾದಿತ್ಯನ ಸುದೀರ್ಘ ಆಳ್ವಿಕೆಯ ನಂತರ ಕಲ್ಯಾಣದ ಸಿಂಹಾಸನಕ್ಕೆ ಅವನ ಮಗ ೩ನೇ ಸೋಮೇಶ್ವರ ಅಥವಾ 'ಭೂಲೋಕಮಲ್ಲ' 'ಸರ್ವಜ್ಞ ಚಕ್ರವರ್ತಿ' ಬಂದನು (ಕ್ರಿ.ಶ. ೧೧೨೭ ರಿಂದ ೧೧೩೯ ರ ವರೆಗೆ). ಬಾಗಡಗೆ-೭೦ರ ನಾಡಿನ ಹಳ್ಳೂರ ಗ್ರಾಮದಲ್ಲಿ ಇವನ ಒಂದು ಶಾಸನ ದೊರಕುವುದು. ಇವನ ಮಂಡಳೇಶ್ವರ, ದಂಡನಾಯಕ ತಿಕ್ಕಪಯ್ಯರಸು ೨೦೦ ನಾಡನ್ನು ಆಳುತ್ತಿದ್ದ ಬಗ್ಗೆ ಹೇಳುವುದು.[೬೦]

೨ನೇ ಜಗದೇಕಮಲ್ಲ

ಮೂರನೇ ಸೋಮೇಶ್ವರನ ನಂತರ ಕಲ್ಯಾಣದ ಸಿಂಹಾಸನಕ್ಕೆ ಬಂದವನು ಮಗ ಜಗದೇಕಮಲ್ಲ(ಕ್ರಿ.ಶ. ೧೧೩೯ ರಿಂದ ಕ್ರಿ.ಶ. ೧೧೪೯). ೧೦ ವರ್ಷ ಕಾಲ ರಾಜ್ಯವಾಳಿದ್ದು, ಬಾಗಡಗೆ-೭೦ರಲ್ಲಿ ಒಂದೇ ಒಂದು ಶಾಸನ ಶಿರೂರ ಗ್ರಾಮದಲ್ಲಿ ದೊರಕುವುದು(ಕ್ರಿ.ಶ. ೧೧೪೮). ಶಾಸನ ಶಿರೂರದ ಪ್ರಭು ಮಾರಸಿಂಘನ ವಂಶಾವಳಿ ನೀಡಿ ಅವನ ಮೊಮ್ಮಗಳು ಲಕ್ಷ್ಮೀದೇವಿ ಮಹಾಪ್ರಭುವಿಣಿಯಾಗಿ ಶಿರೂರ ಗ್ರಾಮವನ್ನು ಆಳುತ್ತಿದ್ದುದನ್ನು ಹೇಳುವುದು.[೬೧] ೨ನೇ ಜಗದೇಕಮಲ್ಲನ ನಂತರ ಚಾಲುಕ್ಯ ಸಿಂಹಾಸನವೇರಿದವನು ೩ನೇ ತೈಲಪ(ಮುಮ್ಮಡಿ). ಇವನ ಯಾವುದೇ ಶಾಸನಗಳು ಬಾಗಡಗೆ ಪ್ರದೇಶದಲ್ಲಿ ದೊರಕುವುದಿಲ್ಲ.

೪ನೇ ಸೋಮೇಶ್ವರ

೩ನೇ ತೈಲಪ ಸಿಂಹಾಸನಕ್ಕೆ ಬಂದ ತಕ್ಷಣದಲ್ಲಿಯೇ ಕಲಚುರಿ ಬಿಜ್ಜಳನು ಚಾಲುಕ್ಯ ರಾಜ್ಯವನ್ನು ಕಸಿದುಕೊಂಡನು. ಕಲಚುರಿಗಳ ೨೦ ವರ್ಷದ ಆಳ್ವಿಕೆಯಲ್ಲಿ ೪ನೇ ಸೋಮೇಶ್ವರನು ನಂಬಿಗಸ್ಥ

ಮಾಂಡಳಿಕರಲ್ಲಿ ತಲೆಮರೆಸಿಕೊಂಡು ಜೀವನ ನಡೆಸಿದನು. ತದನಂತರ ಮಾಂಡಲಿಕರ ಸಹಾಯದಿಂದ ಕ್ರಿ.ಶ. ೧೧೮೩ ರಲ್ಲಿ ಸಿಂಹಾಸನ ಪಡೆದನು. ಇವನ ಕಾಲದ ಒಂದು ಶಾಸನ ತುಳಸಿಗೇರಿ(ಕ್ರಿ.ಶ. ೧೧೮೫-೮೬) ಗ್ರಾಮದಲ್ಲಿ ದೊರಕುವುದು.[೨೨] ಇದರಲ್ಲಿ ಸೋಮಸಾಮಂತನ ಉಲ್ಲೇಖ ಬರುವುದು. ಯಾದವ ಭಿಲ್ಲಮ ಕ್ರಿ.ಶ. ೧೧೮೬ ರಲ್ಲಿ ಸೋಮೇಶ್ವರನನ್ನು ಸೋಲಿಸಿ ಚಾಲುಕ್ಯ ರಾಜ್ಯಕ್ಕೆ ಕೊನೆ ಹಾಡಿದನು. ಕ್ರಿ.ಶ. ೯೭೩ ರಲ್ಲಿ ಅಧಿಕಾರ ಗದ್ದುಗೆಗೇರಿದ ಈ ವಂಶ ೨೦೦ ವರ್ಷ ಕಾಲ ರಾಜ್ಯಭಾರ ಮಾಡಿತು.

೩.೭.. ಕಳಚುರಿಗಳು

೬ನೇ ವಿಕ್ರಮಾದಿತ್ಯನ ಸುದೀರ್ಘ ಆಡಳಿತದ ನಂತರ ಆತನ ಮಗ ೩ನೇ ಸೋಮೇಶ್ವರ ಮತ್ತು ಮೊಮ್ಮಗ ೨ನೇ ಜಗದೇಕಮಲ್ಲರು ಆಳ್ವಿಕೆ ಮಾಡಿದ್ದು ಇವರ ಕಾಲದಲ್ಲಿ ಕೆಲವೊಂದು ಘಟನೆಗಳನ್ನು ಹೊರತು ಪಡಿಸಿದರೆ ಯಾವುದೇ ವಿಶೇಷತೆ ಇರಲಿಲ್ಲ. ಇವರ ನಂತರ ಚಾಲುಕ್ಯ ಸಿಂಹಾಸನಕ್ಕೆ ಬಂದ ೩ನೇ ತೈಲಪ ಸಿಂಹಾಸನಕ್ಕೆ ಬರುವ ಹೊತ್ತಿಗೆ ಕಳಚುರಿ ಬಿಜ್ಜಳನು ತನ್ನ ಶಕ್ತಿ ಸಾಮರ್ಥ್ಯ ಹೆಚ್ಚಿಸಿಕೊಂಡು ಸ್ವತಂತ್ರನಾಗಲು ಹವಣಿಸುತ್ತಿದ್ದನು. ತೈಲಪನ ಅಸಮರ್ಥತೆಯ ಲಾಭ ಪಡೆದು ಅವನನ್ನು ಸೋಲಿಸಿ ಚಾಲುಕ್ಯ ಸಿಂಹಾಸನವೇರಿದನು. ಬಿಜ್ಜಳನಿಂದ ಆರಂಭಗೊಂಡ ಸ್ವತಂತ್ರ ಕಳಚುರಿ ಆಡಳಿತ ಸುಮಾರು ೨೦ ವರ್ಷಗಳ ಸಾರ್ವಭೌಮ ಅಧಿಕಾರದಲ್ಲಿ ಬಿಜ್ಜಳ, ಸೋವಿದೇವ, ಸಂಕಮರು ರಾಜ್ಯಭಾರ ಮಾಡಿದರು.

'ಪೃಥ್ವೀರಾಜವಿಜಯ' ಗ್ರಂಥವು ಕಳಚುರಿಗಳು ಮೂಲತಃ 'ಹೈಹಯಕುಲ'ದವರೆಂದು ಹೇಳುವುದು. ಇವರು ಭಾರತದ ಬೇರೆ ಬೇರೆ ಭಾಗಗಳಲ್ಲಿ ಸಾಮಂತ, ಮಂಡಳೇಶ್ವರರಾಗಿ ಕೊನೆಯಲ್ಲಿ ೨೦ ವರ್ಷ ಕಾಲ ಕರ್ನಾಟಕದಲ್ಲಿ ಸಾರ್ವಭೌಮರಾಗಿ ಆಳ್ವಿಕೆ ಮಾಡಿದ್ದಾರೆ. ಕ್ರಿ.ಶ. ೬ನೇ ಶತಮಾನದಿಂದ ಕ್ರಿ.ಶ. ೮ನೇ ಶತಮಾನದವರೆಗೆ ಅಧಿಕಾರ ನಡೆಸಿದವರಾಗಿದ್ದಾರೆ.[೨೩]

ಕರ್ನಾಟಕದಲ್ಲಿ ಆಡಳಿತ ನಡೆಸಿದ ಕಳಚುರಿಗಳು ಮೂಲತಃ ಮಧ್ಯಪ್ರದೇಶದ ಕಳಚುರಿ ವಂಶಕ್ಕೆ ಸೇರಿದವರು. ಇವರು ತಮ್ಮನ್ನು 'ಕಾಲಾಂಜರ ಪುರವರಾಧೀಶ್ವರ'ರೆಂದು ಕರೆದುಕೊಂಡಿದ್ದು 'ಸುವರ್ಣ ವೃಷಭಧ್ವಜ' ಇವರ ವಂಶದ ಲಾಂಛನವಾಗಿತ್ತು.[೨೪] ಬಾಗಡಗೆ-೭೦ ಪ್ರದೇಶದಲ್ಲಿ ಕಳಚುರಿಗಳ ಚರಿತ್ರೆಯನ್ನು ನಿರೂಪಿಸಲು ಒಂದೇ ಒಂದು ಶಾಸನ ಕಟಗೇರಿ(ಬಾದಾಮಿ ತಾ) ಗ್ರಾಮದಲ್ಲಿ ಸಿಗುವುದು. ಕ್ರಿ.ಶ. ೧೧೭೬ ರ ಕಾಲಮಾನದ ಇದು ಕಲಚುರಿ ಸಂಕಮನ ಕಾಲಕ್ಕೆ ಸೇರುವುದು. ಶಾಸನ ಸಂಕಮನ ಕಾಲದಲ್ಲಿ ಕಿಸುಕಾಡು ೭೦, ಬಾಗಡಗೆ ೭೦, ಹಂಗರಗಿ ೧೨, ನರೆಯಂಗಲ ೧೨ಗಳನ್ನು ಮಹಾಮಂಡಳೇಶ್ವರ ಸಿಂಧ ಚಾವುಂಡನ ಮಗನಾದ ವೀರ ವಿಕ್ರಮಾದಿತ್ಯ (ವಿಕ್ಕಯ್ಯಾ)ನು ಆಳುತ್ತಿದ್ದನೆಂದು

ಹೇಳುವುದು.[೩೫] ಇದರಿಂದ ಕಳಚುರಿಗಳು ಸಹ ಬಾಗಡಗೆ ಪ್ರದೇಶದ ಮೇಲೆ ಅಧಿಕಾರ ಹೊಂದಿದ್ದರೆಂಬುದು ವಿಧಿತವಾಗುತ್ತದೆ.

ಈ ಶಾಸನವು ಮಹತ್ವಪೂರ್ಣವಾಗಿದ್ದು ಸಿಂಧ ಚಾಮುಂಡನ ವಂಶಾವಳಿಯನ್ನು ನೀಡುತ್ತದೆ. ಇದೇ ಸಾಮಂತನ ಕಾಲದ ಮತ್ತೊಂದು ಶಾಸನ ಕಟಗೇರಿಯಲ್ಲಿ ದೊರಕುತ್ತಿದ್ದು ಅದು ಸಹ ಕ್ರಿ.ಶ. ೧೧೭೮ ರ ಕಾಲದ್ದಾಗಿದೆ. ಇವನು ಸಂಕಮನ ಮಹಾಮಂಡಳೇಶ್ವರನಾಗಿ ಸಿಂಧರ ವೀರ ವಿಕ್ರಮಾದಿತ್ಯ ಮತ್ತು ವೀರಬಿಜ್ಜಳ ದೇವರು ರಾಜಧಾನಿ ಯರಂಬರವಿಯಲ್ಲಿದ್ದು ಆಡಳಿತ ನಡೆಸುತ್ತ ಕರವಿಡಿ ೩೦ಕ್ಕೆ ಅಧಿಪತಿಯಾಗಿದ್ದರೆಂದು ಹೇಳುವುದು. ಇವರ ಸೇನಾನಿ ಸೋವಣ ಗಂಧವಾರಣ ಹೆಸರು ಪಡೆದು ತಿಕ್ಕರಸ ದಂಡನಾಯಕ ಬಾಗಡಗೆ ನಾಡನ್ನು ಆಳುತ್ತಿದ್ದನೆಂದು ತಿಳಿಸುವುದು.[೩೬] ಈ ಎರಡು ಶಾಸನಗಳಿಂದ ಕಳಚುರಿಗಳು ಬಾಗಡಗೆ ೭೦ರ ಮೇಲೆ ಸಾರ್ವಭೌಮಾಧಿಕಾರ ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ.

೩.೮. ದೇವಗಿರಿ ಯಾದವರು

ಇವರು ದೇವಗಿರಿಯ ಯಾದವ ಅಥವಾ ದೇವಗಿರಿಯ ಸೇವುಣರೆಂಬ ನಾಮದಿಂದ ಚರಿತ್ರೆಯಲ್ಲಿ ಗುರುತಿಸಿಕೊಂಡಿದ್ದಾರೆ. ಈ ಯಾದವರು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಪ್ರಾಂತೀಯ ಆಡಳಿತವನ್ನು ನಡೆಸುತ್ತಾ ೧೨ನೇ ಶತಮಾನದ ಕೊನೆಯ ಹೊತ್ತಿಗೆ ರಾಜಕೀಯ ಮುಖ್ಯವಾಹಿನಿಗೆ ಬಂದು ತಲುಪಿದರು. ಮೊದಲು ಸಾಮಂತರಾಗಿ ನಂತರ ಸಾರ್ವಭೌಮರಾಗಿ ಸ್ವತಂತ್ರ ಆಡಳಿತ ನಡೆಸಿದರು. ಇವರು ಮಹಾರಾಷ್ಟ್ರ ಪ್ರದೇಶ ವನ್ನೊಳಗೊಂಡು ಉತ್ತರ ಕರ್ನಾಟಕದ ತುಂಗಭದ್ರಾ ನದಿಯವರೆಗಿನ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿಕೊಂಡಿದ್ದರು.[೩೭]

ಕೃಷ್ಣನ ಯಾದವ ಕುಲಕ್ಕೆ ಸೇರಿದ ಇವರು ತಮ್ಮನ್ನು ದೇವಗಿರಿಯ ಯಾದವರೆಂದು, ದ್ವಾರಾವತಿ ಪುರವರಾಧೀಶ್ವರರೆಂದು ಕರೆದುಕೊಂಡಿರುವರು. ಈ ಮನೆತನದಲ್ಲಿ ೫ನೇ ಭಿಲ್ಲಮ, ಜೈತುಗಿ, ಸಿಂಘಣ ಹಾಗೂ ರಾಮಚಂದ್ರ, ಶಂಕರನಾರಾಯಣರು ಪ್ರಮುಖರಾಗಿದ್ದು, ಭಿಲ್ಲಮ ಸೇವುಣ ಮನೆತನಕ್ಕೆ ಸುಭದ್ರತೆ ತಂದುಕೊಟ್ಟರೆ, ಮೂಲಪುರುಷ ಸೇವುಣ ಚಂದ್ರನಾಗಿರುವನು, ಕ್ರಿ.ಶ. ೮೩೫ ರಿಂದ ಕ್ರಿ.ಶ. ೮೭೦ ರವರೆಗೆ ರಾಜ್ಯವಾಳಿದ ಸೇವುಣಚಂದ್ರ ಸಿಂಧಿಗೇರ ಪ್ರದೇಶದಲ್ಲಿ 'ಸೇವುಣಪುರ'ವನ್ನು[೩೮] ಕಟ್ಟಿಸಿದ ಕುರಿತು ದಾಖಲೆ ಸಿಗುತ್ತದೆ. ಆದ್ದರಿಂದಲೇ ಯಾದವರಿಗೆ ಸೇವುಣ ದೇಶ, ಸೇವುಣರೆಂದು ಕರೆಯುವ ವಾಡಿಕೆಯಿದೆ.

ಯಾದವ ೫ನೇ ಭಿಲ್ಲಮನು ಕ್ರಿ.ಶ. ೧೧೮೭ರಲ್ಲಿ ಕಲ್ಯಾಣ ಚಾಲುಕ್ಯ ೪ನೇ ವೀರ ಸೋಮೇಶ್ವರನನ್ನು ಕಲ್ಯಾಣದಲ್ಲಿ ಸೋಲಿಸಿ ಸ್ವತಂತ್ರ ಸೇವುಣ ಸಿಂಹಾಸನಕ್ಕೆ ಬಂದನು. ಆದರೆ ಇವರ ಕಾಲದ ಯಾವುದೇ ಶಾಸನ ದಾಖಲೆ ಬಾಗಡಗೆ ಪ್ರದೇಶದಲ್ಲಿ ದೊರಕುವುದಿಲ್ಲ. ಆದರೆ, ಇವನ ಮೊಮ್ಮಗ ಜೈತುಗಿಯ

ಮಗ ಸಿಂಘಣನ ಕಾಲದ ಶಾಸನ[೩೯] ಮಂಕಣಿ ಗ್ರಾಮದಲ್ಲಿ ದೊರಕುತ್ತದೆ. ಕ್ರಿ.ಶ. ೧೨೦೬ ರ ಕಾಲಮಾನ ಹೊಂದಿದ್ದು ಸಿಂಘಣನು ಗೋವೆ ಕದಂಬರಸ ಜಯಕೇಶಿಯ ಮಗಳು ಮೈಲಳದೇವಿಯನ್ನು ಕರೆದು ತರಲು ಹೋಗುವ ಸಂದರ್ಭದಲ್ಲಿ ದಕ್ಷಿಣ ದಿಕ್ಕಿನ ದಿಗ್ವಿಜಯ ಮಾಡುವ ಕೃಷ್ಣಾವೇಣ್ಣಾ ನದಿತೀರದ ಕೊಟ್ಟಬಾಗೆ ಎಂಬಲ್ಲಿ ಬಂದಾಗ ಕೇಶಾಪುರದ(ಮಂಕಣಿ) ಬ್ರಾಹ್ಮಣ ಹಾಗೂ ದೇವಾಲಯಗಳಿಗೆ ಭೂಮಿದಾನ ಮಾಡಿದ ಕುರಿತು ಹೇಳುವುದು. ಹಾಗೆಯೇ ಈ ಗ್ರಾಮದಲ್ಲಿ ಕ್ರಿ.ಶ. ೧೨೪೯ ರ ಕಾಲದ ಸಿಂಘಣನ ಕಾಲದ ಶಾಸನ ದೊರಕುವುದು. ಆದರೆ ಈ ಶಾಸನ ಸಿಂಘಣನನ್ನು ಹೆಸರಿಸುವುದಿಲ್ಲವಾದರು ಶಾಸನ ಮಾತ್ರ ಅವನ ಕಾಲದ್ದಾಗಿದೆ.

ಬಾಗಲಕೋಟ ಪ್ರದೇಶದ ಹತ್ತಿರದಲ್ಲಿಯೇ ಹಂಡರಗಲ್ ಎಂಬಲ್ಲಿ ಚಾಲುಕ್ಯರಿಗೂ ಯಾದವರಿಗೂ ನಡೆದ ಯುದ್ಧದ ಘಟನೆಯನ್ನು ತಿಳಿಸುವ ಶಾಸನ ಇಂದಿನ ಮುದ್ದೇಬಿಹಾಳ ತಾಲೂಕಿನ ಹಂಡರಗಲ್‌ದಲ್ಲಿ ದೊರಕುತ್ತದೆ. ಶಾಸನ ಚಾಲುಕ್ಯ ದಂಡನಾಯಕ ತೊಂಡಯ್ಯನನ್ನು ಸೇವುಣ ದಂಡನಾಯಕ ಸೋಮಯ್ಯನು ಸೋಲಿಸಿ ಸೇವುಣ ರಾಜ್ಯವನ್ನು ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ.[೪೦] ಹೀಗಾಗಿ ಯಾದವ ಚಾಲುಕ್ಯರನ್ನು ಬಾಗಡಗೆ ಪ್ರದೇಶದ ಉತ್ತರ ಭಾಗದಲ್ಲಿಯೇ ಸೋಲಿಸಿದ್ದು ಚರಿತ್ರೆಯಲ್ಲಿ ಮಹತ್ವದ ಘಟನೆಯಾಗಿ ನಿಲ್ಲುತ್ತದೆ.

೩.೯. ವಿಜಯನಗರದ ಅರಸರು

ದೇವಗಿರಿಯಾದವರ ಕೊನೆಗಾಲದಲ್ಲಿ ಉತ್ತರ ಭಾರತದ ಮುಸ್ಲಿಂ ದೊರೆಗಳಿಂದ ದಕ್ಷಿಣದತ್ತ ದಂಡಯಾತ್ರೆಗಳು ಜರುಗಹತ್ತಿದ್ದವು. ಆದರಲ್ಲಿ ಮೊದಲಬಾರಿಗೆ ಖಿಲ್ಜಿ ವಂಶದ ಅಲ್ಲಾವುದ್ದಿನನು ಮತ್ತು ತುಘಲಕ ವಂಶದ ಮಹ್ಮದ್‌ಬಿನ್ ಈ ದಕ್ಷಿಣ ದಂಡಯಾತ್ರೆ ಕೈಗೊಂಡವರಲ್ಲಿ ಪ್ರಮುಖರು. ಉತ್ತರದ ಈ ದಾಳಿಗಳಿಂದ ಬೇಸತ್ತ ಇಲ್ಲಿಯ ಸ್ಥಳೀಯ ನಾಯಕರು ತಮ್ಮ ಅಧಿಕಾರ ಮರುಸ್ಥಾಪನೆಗೆ ಪಣತೊಟ್ಟರು. ಅದರ ಫಲವೇ ಕ್ರಿ.ಶ. ೧೩೩೬ ರ ವಿಜಯನಗರ ಸ್ಥಾಪನೆ. ಹಂಪೆಯಲ್ಲಿ ಇದನ್ನು ನೆರವೇರಿಸಿದವರು ಸಂಗಮ ವಂಶದ ಸಂಗಮನ ಮಕ್ಕಳಾದ ಐದುಜನ ಸಹೋದರರು. ಅವರಲ್ಲಿ ಹರಿಹರ ಬುಕ್ಕರು ಪ್ರಮುಖರು. ಅಂದಿನ ತುಂಗಭದ್ರಾ ಕೃಷ್ಣಾ ನದಿಗಳ ಮಧ್ಯದ ದೋ ಅಬ್ ಪ್ರದೇಶದಲ್ಲಿ ಬರುವ ಬಾದಾಮಿಯವರೆಗೆ ಇವರು ತಮ್ಮ ರಾಜ್ಯ ವಿಸ್ತರಿಸಿದ್ದರು. ಉತ್ತರದತ್ತ ಈ ದೋ ಆಬ್ ಸಲುವಾಗಿ ಬಹಮನಿ ಸುಲ್ತಾನರು, ಬಿಜಾಪುರ ಆದಿಲ್‌ಶಾಹಿಗಳ ಜೊತೆಗೆ ವಿಜಯನಗರ ಅರಸರು ಯುದ್ಧ ಮಾಡಿದ್ದುಂಟು. ಬಾದಾಮಿಯಲ್ಲಿ ವಿಜಯನಗರದ ಅರಸರು ಕೋಟೆ ಭದ್ರಪಡಿಸಿ ಅಧಿಕಾರ ನಡೆಯಿಸಿದ ಕುರಿತು ಹೇಳುವ ದಾಖಲೆಗಳು ದೊರಕುತ್ತವೆ.

ಕ್ರಿ.ಶ. ೧೪ನೇ ಶತಮಾನದಿಂದ ೧೬-೧೭ನೇ ಶತಮಾನಗಳವರೆಗಿನ ಅವಧಿಯಲ್ಲಿ ಶಾಸನಗಳು ದೊರಕುತ್ತವೆ. ಸೂರಕೊಪ್ಪದ ಒಂದು ಶಾಸನ ೧೫ನೇ ಶತಮಾನಕ್ಕೆ ಸೇರಿದ್ದು ಬರಿಗೆ ಮಲ್ಲಿನಾಯಕ ಮತ್ತು ದೇಸಾಯಿ ಹೆಸರನ್ನು ಉಲ್ಲೇಖ ಮಾಡುತ್ತದೆ.[೧೧] ವೀರಾಪುರ ಶಾಸನವು ವಿಜಯನಗರದ ಕಾಲಕ್ಕೆ ಸೇರಿದ್ದು ಮಹಾಮಂಡಳೇಶ್ವರ ನರಸರಾಜಯದೇವ ಮಹಾ ಅರಸನನ್ನು ಹೆಸರಿಸುವುದು.[೧೨] ಇದೇ ಕಾಲಾವಧಿಯಲ್ಲಿ ಕೆಲವು ವೀರಗಲ್ಲು, ವೀರಗಲ್ಲು ಶಾಸನಗಳು ಸಹ ದೊರಕುವವು.

ಈ ಪ್ರದೇಶವು ವಿಜಯನಗರದ ಅರಸರು ಮತ್ತು ಆದಿಲ್‌ಶಾಹಿಗಳ ಅರಸರ ಮಧ್ಯೆ ಮೇಲಿಂದ ಮೇಲೆ ಯುದ್ಧಗಳು ಜರುಗುತ್ತಿದ್ದವು. ಏಕೆಂದರೆ ಇಲ್ಲಿ ಫಲವತ್ತಾದ ಭೂ ಪ್ರದೇಶವಿತ್ತು. ಮತ್ತು ಆರ್ಥಿಕವಾಗಿ ಸಮೃದ್ಧವಾಗಿಯೂ ಬೆಳೆದಿತ್ತು. ಬಾಗಲಕೋಟೆ ಪರಿಸರದಲ್ಲಿ ಎಲ್ಲ ರೀತಿಯ ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಗಳು ವಿಸ್ತಾರಗೊಂಡವು. ಹೀಗಾಗಿ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ ಬೆಳವಣಿಗೆಗೆ ಈ ಪರಿಸರದ ಅರಸರು ಹೆಚ್ಚು ಒತ್ತು ನೀಡಿದರು. ಅದರ ಪ್ರಯುಕ್ತವೇ ಇಲ್ಲಿ ಹೆಚ್ಚು ಪ್ರಮಾಣದ ದೇವಾಲಯಗಳು ರಚನೆಗೊಂಡವು.

ಟಿಪ್ಪಣಿಗಳು

೧. **Desai P.B. (Ed), A History of Karnataka,** ಪುಟ. ೪೭.

೨. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.** ೭, ರಾಯಚೂರು ಜಿಲ್ಲೆ, ಪ್ರಸ್ತಾವನೆ ಪುಟ. ೩೦.

೩. **Indian Antiquery,** ಸಂಪುಟ. ೮ ಪುಟ. ೨೩೭.

೪. **Desai P.B. (Ed.,), A.H.K.,** ಪುಟ ೪೭.

೫. ಅದೇ, ಪುಟ-೫೫.

೬. ಅಣ್ಣಿಗೇರಿ, ಎ.ಎಂ. **A Guide to Kannada Research Institute Musium,** ಪುಟ.

೭. **ಕರ್ನಾಟಕ ಭಾರತಿ,** ಸಂಪುಟ-೫, ಸಂಚಿಕೆ-೨, ಪುಟ. ೩೫.

೮. **South Indian Inscriptions,** ಸಂಪುಟ-೧೧, ಭಾಗ-೨, ನಂ-೭೦, ಹಾಗೂ ಸಂಪುಟ-೧೫, ನಂ-೩, ಭೈರನಮಟ್ಟಿ (ಬಾಗ ತಾ.) ಕ್ರಿ.ಶ.೯೯೦-೧.

೯. **Epigraphia Indica,** ಸಂಪುಟ-೧೮, ಪುಟ ೫೯-೬೨, ಬಾಗಲಕೋಟೆ, ೬ನೇ ಶತಮಾನ.

೧೦. **S.I.I,** ಸಂಪುಟ-೧೫, ನಂ-೪೯೪, ಹಳ್ಳೂರ, (ಬಾಗ-ತಾ), ೯ನೆ ಶತಮಾನ.

೧೧. ಅದೇ, ನಂ-೫೨೧, ಹಳ್ಳೂರ, (ಬಾಗ-ತಾ.), ೧೦ನೇ ಶತಮಾನ.

೧೨. ಅದೇ, ಸಂಪುಟ-೧೧, ಭಾಗ-೧, ನಂ-೪೦, ಸರಸಲಗಿ(ಬಾಗ-ತಾ.), ಕ್ರಿ.ಶ. ೯೬೫.

೧೩. ಅದೇ, ಸಂಪುಟ-೧೮, ನಂ-೨೭, ಕಾರಜೋಳ, (ಬಾಗ-ತಾ.), ಕ್ರಿ.ಶ. ೯೫೭.

೧೪. ಅದೇ, ಸಂಪುಟ-೧೧, ಭಾಗ-೧, ನಂ-೪೬, ಹಳ್ಳೂರ(ಬಾಗ-ತಾ.), ಕ್ರಿ.ಶ. ೯೯೦-೧.

೧೫. ಕೊಪ್ಪಾ, ಎಸ್.ಕೆ. **'ತರ್ದವಾಡಿನಾಡು: ಒಂದು ಅಧ್ಯಯನ'** ಪುಟ. ೫೫.

೧೬. **S.I.I,** ಸಂಪುಟ-೧೧, ಭಾಗ-೧, ನಂ-೭೦, ಹಾಗೂ **S11**, ಸಂಪುಟ-೧೫, ನಂ-೩, ಭೈರಗಮಟ್ಟಿ (ಬಾಗ-ತಾ.) ಕ್ರಿ.ಶ. ೯೯೦-೧.

೧೭. ಅದೇ, ಸಂಪುಟ-೨೦, ನಂ-೧೯,(ಇಂಡಿ ತಾ.), ರೂಗಿ ಕ್ರಿ.ಶ. ೧೦೧೫

೧೮. **Gopal B.R., The Chalukyas of Kalyana and the Kalachuries,** ಪುಟಗಳು-೩೦-೩೧.

೧೯. **S.I.I,** ಸಂಪುಟ-೧೫, ನಂ-೩, ಭೈರನಮಟ್ಟಿ(ಬಾಗ-ತಾ.), ಕ್ರಿಶ. ೯೯೦-೧ ಕ್ರಿ.ಶ. ೧೦೩೩.

೨೦. ಅದೇ, ಸಂಪುಟ-೧೧, ಭಾಗ-೧, ನಂ-೭೧, ಹಳ್ಳೂರ(ಬಾಗ-ತಾ.), ಕ್ರಿ.ಶ. ೧೦೩೩-೪.

೨೧. ಎಲಿಗಾರ., ಚೆನ್ನಕ್ಕ **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ,** ಪುಟ-೧೮೯.

೨೨. **E.I.,** ಸಂಪುಟ-೧೫, ನಂ-೬, ಸೂಡಿ(ರೋಣ ತಾ.), ಕ್ರಿ.ಶ. ೧೦೧೦.

೨೩. ಅದೇ, ಸಂಪುಟ-೧೬, ನಂ-೧೧, ಹೊಟ್ಟೂರ(ಶಿಗ್ಗಾಂವಿ ತಾ.), ಕ್ರಿ.ಶ. ೧೦೬೪.

೨೪. ಎಲಿಗಾರ ಚೆನ್ನಕ್ಕ, ಪೂರ್ವೋಕ್ತ, ಪುಟ ೧೪೭-೮.

೨೫. **E.I.**, ಸಂಪುಟ-೧೬, ನಂ-೧೧, ಹೊಟ್ಟೂರ(ಶಿಗ್ಗಾಂವಿ-ತಾ), ಕ್ರಿ.ಶ. ೧೦೬೪.

೨೬. **S.I.I.**, ಸಂಪುಟ-೧೧, ಭಾಗ-೧, ನಂ-೮೫, ಶಿರೂರ(ಬಾಗ-ತಾ.), ಕ್ರಿ.ಶ. ೧೦೬೨.

೨೭. ಅದೇ, ನಂ-೯೯, ಶಿರೂರ(ಬಾಗ-ತಾ.), ಕ್ರಿ.ಶ. ೧೦೬೨.

೨೮. ಅದೇ, ನಂ-೧೦೫, ಬೇವೂರ (ಬಾಗ-ತಾ.), ೧೧ನೇ ಶತಮಾನ.

೨೯. ಅದೇ, ಸಂಪುಟ-೧೫, ನಂ-೮೦, ಶಿರೂರ(ಬಾಗ-ತಾ.), ಕ್ರಿ.ಶ. ೧೧೦೦.

೩೦. ಅದೇ, ನಂ-೧೯, ಹಳ್ಳೂರ(ಬಾಗ–ತಾ.), ೧೨ನೇ ಶತಮಾನ.

೩೧. ಅದೇ, ಸಂಪುಟ-೧೫, ನಂ-೩೯, ಶಿರೂರ(ಬಾಗ-ತಾ.), ಕ್ರಿ.ಶ. ೧೧೪೮.

೩೨. ಅದೇ, ನಂ-೫೪೮, ತುಳಸಿಗಿರಿ (ಬಾಗ-ತಾ.), ಕ್ರಿ.ಶ. ೧೧೮೫-೬.

೩೩. **Sharma R.K., The Kalachuries and their Time's, P. 1**

೩೪. **Desai P.B. (Ed.,), A.H.K, P. 195.**

೩೫. **S.I.I.**, ಸಂಪುಟ-೧೫, ನಂ-೧೪೨, ಕಟಗೇರಿ (ಬಾದಾ-ತಾ.), ಕ್ರಿ.ಶ. ೧೧೭೬.

೩೬. ಅದೇ, ನಂ-೧೩೪, ಕಟಗೇರಿ (ಬಾದಾ-ತಾ.), ಕ್ರಿ.ಶ. ೧೧೭೮.

೩೭. **Desai P.B. (Ed.,) A.H.K, P. 233**

೩೮. **Ritti Shrinivas, The Seunas,** Pp. 28-29

೩೯. **S.I.I.**, ಸಂಪುಟ-೧೫, ನಂ-೧೧೫, ಮಂಕಣಿ (ಬಾಗ-ತಾ.), ಕ್ರಿ.ಶ. ೧೨೦೬.

೪೦. ಅದೇ, ನಂ-೪೫, ಹಂಡರಗಲ್ಲ (ಮುದ್ದೇ-ತಾ.), ತದಿಯಿಲ್ಲ.

೪೧. ಅದೇ, ನಂ-೬೮೧, ಸೋರಕೊಪ್ಪ (ಬಾಗ-ತಾ.), ೧೫ನೇಶತಮಾನ.

೪೨. ಅದೇ, ನಂ-೭೦೪, ವೀರಾಪುರ (ಬಾಗ-ತಾ.), ೧೫ನೇಶತಮಾನ.

ಅಧ್ಯಾಯ ನಾಲ್ಕು

ಪ್ರಾಚೀನ ಬಾಗಡಗೆ-೭೦ : ಒಂದು ಆಡಳಿತ ವಿಭಾಗ

ಕಾಲ ಮತ್ತು ದೇಶಗಳನ್ನು ಛೇದಿಸುವಲ್ಲಿ ಪರಿಸರ ನಿರ್ಮಾಣವಾಗುತ್ತದೆ. ಅದು ಜನವರ್ಗವನ್ನೊಳಗೊಂಡರೆ ಮಾತ್ರ ಸಮಾಜವೆನಿಸಿಕೊಳ್ಳುತ್ತದೆ. ಹೀಗಾಗಿ ಸಮಾಜವನ್ನು ರೂಪಿಸುವಲ್ಲಿ ಕಾಲವೆಂಬ ಚರಿತ್ರೆಯಲ್ಲಿ ದೇಶವೆಂಬ ಪ್ರದೇಶವು ಮುಖ್ಯ ಪಾತ್ರ ವಹಿಸುತ್ತದೆ. ಈ ಪ್ರದೇಶವೆನ್ನುವುದು ನಿಸರ್ಗನಿಯಂತ್ರಿತವಾಗಿದ್ದರೆ, 'ನೈಸರ್ಗಿಕ ಭೂಗೋಳ'ವೆಂದು, ಚರಿತ್ರೆ ನಿಯಂತ್ರಿತವಾಗಿದ್ದರೆ 'ಚಾರಿತ್ರಿಕ ಭೂಗೋಳ'ವೆಂದು ಅವುಗಳನ್ನು ಹೆಸರಿಸಬಹುದಾಗಿದೆ. ಇವುಗಳಲ್ಲಿ ಚಾರಿತ್ರಿಕ ಭೂಗೋಳವೆಂಬುದು ಆಡಳಿತಕ್ಕೆ ಸಂಬಂಧಪಟ್ಟಿದ್ದಾದರೆ, ಅದನ್ನು 'ಆಡಳಿತ ವಿಭಾಗ'ವೆಂದು ಕರೆಯಬೇಕಾಗುತ್ತದೆ. ಇವೆರಡು ಸಮಾಜದ ಪ್ರಗತಿ ಮತ್ತು ವಿಗತಿಗಳಿಗೆ ಕಾರಣವಾಗುತ್ತವೆ.[೧]

ನಾಡಾಡಳಿತದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದವರು ಮಹಾಮಂಡಳೇಶ್ವರ, ಸಾಮಂತ, ಗಾವುಂಡ ಪೆರ್ಗ್ಗಡೆಗಳು ಅಧಿಕಾರ ನಿರ್ವಹಿಸಿದ್ದಾರೆ.

ಕುಂತಳ ಕರ್ನಾಟಕದ ಮಧ್ಯವರ್ತಿ ನಾಡಾದ ಬಾಗಡಗೆನಾಡು ಚರಿತ್ರೆಯಲ್ಲಿ ತನ್ನದೇ ಪಾತ್ರ ನಿರ್ವಹಿಸಿದೆ. ಇಂತಹ ಚರಿತ್ರೆಯ ಸಾಧನೆಯಲ್ಲಿ ರಾಜರೊಂದಿಗೆ ಬಾಗಡಗೆ ನಾಡಿನ ಆಡಳಿತವನ್ನು ನಿರ್ವಹಿಸಿದ ಪ್ರಭುಗಳು, ಅಧಿಕಾರಿಗಳು ಮತ್ತು ನಾಡಾಳಸರ ಪಾತ್ರವು ಮುಖ್ಯವಾಗಿದೆ.

೪.೧. ಬಾಗಡಗೆ ಎಪ್ಪತ್ತು

'ಬಾಗಡಗೆ' ಎಂಬ ಊರು ಇಂದಿನ ಬಾಗಲಕೋಟೆ ಪಟ್ಟಣವಾಗಿದ್ದು ಬಾದಾಮಿ ಚಾಲುಕ್ಯರ ಕಾಲಕ್ಕಾಗಲೇ ಆಡಳಿತದ ಘಟಕವಾಗಿ ರೂಪು ಪಡೆದಿತ್ತು. ಬಹುಶಃ ಈ ಬಾದಾಮಿ ಚಾಲುಕ್ಯರಸರ ಕಾಲದಲ್ಲಿಯೇ ರಾಜಕೀಯ ಕ್ಷೇತ್ರಕ್ಕೆ ಬಂದ ಸಿಂಧವೆಂಬ ವಂಶ ಸಿಂಧವಾಡಿಯೆಂಬ ನಾಡಿನಲ್ಲಿ ರಾಜಕೀಯ ನಿರ್ವಹಿಸಿದ್ದಾರಲ್ಲದೆ ಹಲವಾರು ಕಡೆ ಅನೇಕ ಪಂಗಡಗಳಾಗಿ ಕನ್ನಡ ನಾಡಿನ, ಆಂಧ್ರಪ್ರದೇಶದ ಬಹುಭಾಗದಲ್ಲಿ ತಮ್ಮ ರಾಜಕೀಯ ಜೀವನವನ್ನು ಮಾಂಡಲಿಕರಾಗಿಯೇ ಕಳೆದಿದ್ದು, ಚರಿತ್ರೆಯಲ್ಲಿ ಯರಂಬರಿಗೆ, ಬೆಳಗುತ್ತಿ, ಕುರುಗೋಡು, ಪ್ರತ್ಯಾಂಕ, ರೆಂಜೇರಿ ಹಾಗೂ ಬಾಗಡಗೆ ಸಿಂಧರೆಂದು ಹೆಸರುವಾಸಿಯಾಗಿದ್ದಾರೆ. ಇವಷ್ಟೇ ಅಲ್ಲದೆ ಇನ್ನೂ ಹಲವು ಸಿಂಧ ವಂಶದ ಮನೆತನಗಳು, ಇದ್ದುದರ ಕುರಿತು ತಿಳಿದುಬರುತ್ತದೆ. ಈ ಬಾಗಡಗೆ ಪ್ರದೇಶ ವನ್ನು ಸಿಂಧರ ಒಂದು ಶಾಖೆಯು ಆಡಳಿತ ಮಾಡಿದಂತೆ ಯರಂಬರಿಗೆ ಸಿಂಧಶಾಖೆಯ ವ್ಯಕ್ತಿಗಳು ಇದನ್ನು ಕೆಲವು ಕಾಲ ಆಳಿದ್ದಾರೆ.

ಬಾಗಡಗೆ ಪ್ರದೇಶ ಬಾದಾಮಿ ಚಾಲುಕ್ಯರ ಕಾಲದಲ್ಲಿ ಆಡಳಿತದ ಘಟಕವಾಗಿ ರೂಪು ಗೊಂಡಂತೆ ರಾಷ್ಟ್ರಕೂಟರ ಕಾಲದಲ್ಲಿ ಹಾಗೆಯೇ ಮುಂದುವರೆದಿತ್ತು. ಇದಕ್ಕೆ ನಿರ್ದಿಷ್ಟ ರೂಪ ಬಂದಿದ್ದು ಕಲ್ಯಾಣ ಚಾಲುಕ್ಯರಸರ ಕಾಲಕ್ಕೆ. ಅದರ ವಿಸ್ತಾರದ ವ್ಯಾಪ್ತಿ ಮತ್ತು ಉಲ್ಲೇಖಗಳು ಮುಂದಿನ ಯಾದವ, ವಿಜಯನಗರದಸರ ಅವಧಿಯಲ್ಲಿ ಮುನ್ನಡೆದಿತ್ತು. ತದನಂತರ ಹೆಸರಿಗೆ ಮಾತ್ರ ನಾಡಾಗಿ ಹಿಂದಿನ ಒಂದು ವ್ಯಾಪ್ತಿಯನ್ನು ಕಳೆದುಕೊಂಡಿರುವುದನ್ನು ಕಾಣುತ್ತೇವೆ. ಬ್ರಿಟಿಷ್ ಸುಪರ್ದಿಗೆ ಒಳಪಟ್ಟಾಗ ಮತ್ತೆ ಕಂದಾಯ ಉಪವಿಭಾಗವಾಗಿ ಹಿಂದಿನ ಹೆಸರನ್ನು ಬದಲಾಯಿಸಿಕೊಂಡು ಬಾಗಲಕೋಟೆ ಹೊರಹೊಮ್ಮಿತು.

ಸಿಂಧರು ಮತ್ತು ಬಾಗಡಗೆ ೭೦ ರ ವಿಭಾಗದ ಕುರಿತು ಮೊದಲಬಾರಿಗೆ ಸ್ಪಷ್ಟಪಡಿಸುವ ಶಾಸನವೆಂದರೆ ಕ್ರಿಶ ೯೯೦-೧ ಹಾಗೂ ಕ್ರಿ.ಶ. ೧೦೩೩ ರ(ಎರಡು ಕಾಲಮಾನ) ಭೈರನಮಟ್ಟಿ ಶಾಸನವಾಗಿದೆ[೨] ಇದು ಕಲ್ಯಾಣ ಚಾಲುಕ್ಯರಸ ೨ನೇ ತೈಲಪ ಮತ್ತು ೧ನೇ ಜಗದೇಕಮಲ್ಲರ ಕಾಲದ್ದಾಗಿದೆ. ಮೊದಲ ಬಾರಿಗೆ ೨ನೇ ತೈಲಪನ ಸಾಮಂತನಾಗಿ ಸಿಂಧವಂಶದ ೨ನೇ ನಾಗಾದಿತ್ಯನು ಆಳುತ್ತಿದ್ದನು. ಸಿಂಧರ ಈ ನಾಗಾದಿತ್ಯ ಶಾಸನದ ಪ್ರಕಾರ ೨ನೆಯವನಾಗಿದ್ದಾನೆ. ಅಂದರೆ ಈ ಶಾಸನ ಸಿಂಧವಂಶದ ವಂಶವೃಕ್ಷವನ್ನು, ಅವರ ವಂಶದ ಮೂಲಪುರುಷ ಅವನ ನಂತರ ಹಲವರು ಇದೇ ಭಾಗದ ಮೇಲೆ ಅಧಿಕಾರ ನಡೆಯಿಸಿರುವುದರ ಸೂಚನೆ ನೀಡುತ್ತದೆ.

ತದನಂತರದ ಕ್ರಿ.ಶ. ೧೦೪೯ರ ಚಾಲುಕ್ಯ ಒಂದನೇ ಸೋಮೇಶ್ವರನ ಶಿರೂರ ಶಾಸನ ಮೊದಲ ಬಾರಿಗೆ ಬಾಗಡಗೆ-೭೦ ವಿಭಾಗವನ್ನು ಹೆಸರಿಸುತ್ತದೆ.[೩]ಶಾಸನದ ಮಧ್ಯದಲ್ಲಿ ೧ನೇ ಸೋಮೇಶ್ವರನ

ಮಡದಿ ಲೀಳಾದೇವಿಯ ಉಲ್ಲೇಖ ಬರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಹುಶಃ ಲೀಳಾದೇವಿ ಬಾಗಡಗೆ ೭೦ರ ಮೇಲೆ ಅಥವಾ ಶಿರೂರ ಅಗ್ರಹಾರ ಪಟ್ಟಣದಲ್ಲಿ ಆಡಳಿತ ಹೊಂದಿರಬೇಕೆನಿಸುತ್ತದೆ.

ಮೇಲಿನ ಭೈರವಮಟ್ಟಿ ಶಾಸನದ ೨ನೇ ನಾಗಾದಿತ್ಯರಸನ ವ್ಯಾಘ್ರಲಾಂಛನ, ಭೋಗಾವತಿ ಪುರವರಾಧೀಶ್ವರವೆಂಬ ಬಿರುದನ್ನು ಪಾರಂಪರಿಕವಾಗಿ ಪ್ರತಿಯೊಂದು ಸಿಂಧಕುಲದ ಶಾಖೆಗಳು ಅನುಸರಿಸಿಕೊಂಡು ಬಂದಿವೆ. ಈ ಶಾಸನ ಸಿಂಧರ ಮೊದಲ ಮೂಲ ಸಿಂಧವಂಶವೃಕ್ಷ ನೀಡುವ ದಾಖಲೆಯಾಗಿದ್ದು ಮಹತ್ವ ಪಡೆದಿದೆ. ಅದರ ಪ್ರಕಾರ

ಕ್ರಿ.ಶ. ೯೯೦-೧ರ ಶಾಸನ

↓

ಸಿಂಧೂ ನದಿ ತಟದಲ್ಲಿ ಧರಣೇಂದ್ರ - ಭೂಲೋಕವನಿತೆಯರಿಂದ

↓

ಸಿಂಧೂಕುಮಾರ ಅಥವಾ ನಿಡುದೊಳಸಿಂದ (ಪುಲಿಕಾಲಸಿಂಧ) ಹುಟ್ಟಿದ
(ಇವನ ರಾಣಿ ಕದಂಬ ಕುಲದವಳು)

↓

ಕಮ್ಮರ(ಹೆಂಡತಿ–ಸಂಗಬ್ಬರಸಿ)

↓

ಪುಲಿಕಾಲ(ಹೆಂಡತಿ–ರೇವಕಬ್ಬೆ)

↓

೧ನೇ ನಾಗಾದಿತ್ಯ(ಹೆಂಡತಿ–ಪೊಲೆಯಬ್ಬರಸಿ)

↓

ಪೊಲಸಿಂಧ(ಖಾಂಡವ ಮಂಡಳೇಶ್ವರನ ಮಗಳು ಬಿಜ್ಜಲದೇವಿ ಹೆಂಡತಿ)

↓

ಪ್ರಭು ಸೇವ್ಯರಸ

↓

೨ನೇ ನಾಗಾದಿತ್ಯ(ನಾಗತಿಯರಸ)

ಮೊದಲಬಾರಿಗೆ ಸಿಂಧವಂಶದ ಹೆಸರಿನಿಂದ ಬಾಗಡಗೆ ಪ್ರದೇಶದಲ್ಲಿ ಅಧಿಕಾರ ಪ್ರಾರಂಭಿಸಿದ ಮೊದಲನೇ ಅರಸ ಸಿಂಧಕುಮಾರ ಅಥವಾ ನಿಡುದೊಳಸಿಂಧ (ಪುಲಿಕಾಲಸಿಂಧ).

ನಂತರ ಕಮ್ಮರ ಕೆಲವು ಕಾಲ, ತದನಂತರ ಪುಲಿಕಾಲ, ೧ನೇ ನಾಗಾದಿತ್ಯ, ನಂತರ ಧರೆಯೊಳಗೆ ಸಿಂಧ ಕುಲತಿಲಕನೆನಿಸಿದ ಪೊಲಸಿಂಧ ಅಧಿಕಾರ ಮಾಡಿದನು. ಇವನ ನಂತರ ಪ್ರಭುಸೆವ್ಯಭೂಪನು ಅಧಿಕಾರ ಮಾಡಿದ. ಕೊನೆಯದಾಗಿ ಇವನ ಮಗ ೨ನೇ ನಾಗಾದಿತ್ಯರಸ ಅಥವಾ ನಾಹತಿಯರಸ ಬಾಗಡಗೆ ಪ್ರದೇಶದ ಮೇಲೆ ಅಧಿಕಾರ ಮಾಡಿದನು. ಸುಮಾರು ಕ್ರಿ.ಶ. ೯೯೦-೧ ರಿಂದ ಕ್ರಿ.ಶ. ೧೦೩೩ ರವರೆಗೆ ಅಂದರೆ ೩೨ ವರ್ಷಕಾಲ ಆಡಳಿತ ಮಾಡಿದ ಕುರಿತು ತಿಳಿದುಬರುವುದು. ಈ ಶಾಸನದಲ್ಲಿ ೨ನೇ ತೈಲಪ ಮತ್ತು ೧ನೇ ಜಗದೇಕಮಲ್ಲರ ಕಾಲಮಾನಗಳಿದ್ದು ಎರಡರಲ್ಲಿಯೂ ನಾಗಾದಿತ್ಯ ಮತ್ತು ನಾಗತಿಯರಸನೆಂದು ಕರೆಯಿಸಿಕೊಂಡಿದ್ದಾನೆ.

ಈ ಶಾಸನವು ಬಹಳ ಪ್ರಾಮುಖ್ಯತೆಯುಳ್ಳದ್ದಾಗಿದೆ. ಏಕೆಂದರೆ ಒಂದು ಕಡೆ ಇಡೀ ಸಿಂಧ ಕುಲದ ಮೂಲವನ್ನು, ಬಾಗಡಗೆ ಪ್ರದೇಶದ ಮೇಲೆ ಅವರ ಅಧಿಕಾರ ಮೊದಲ ಬಾರಿಗೆ ದೊರೆತದ್ದನ್ನು ಹೇಳುತ್ತದೆ. ಹಾಗೆಯೇ ಈ ನಾಗಾದಿತ್ಯನು ಸಿಂಹರಾಶಿ ಭಟ್ಟಾರಕ ನೆಂಬುವವನ ಕಾಲು ತೊಳೆದು ಸಮಯ ಪತ್ತಿಯ ಮತ್ತುರಿನ ದಂಡಿನಲ್ಲಿದ್ದಾಗ ಕಿರಿಯ ಶಿರವೂರದ ಸಿಂಧೇಶ್ವರ ದೇವರಿಗೆ(ಸಿದ್ಧೇಶ್ವರ) ಸಾವಿರ ಮತ್ತರು ಭೂಮಿಯನ್ನು ದಾನವಾಗಿ ನೀಡಿದ್ದನ್ನು ತಿಳಿಸುವುದು.

ಶಾಸನದ ಮುಂದಿನ ಭಾಗ ೧ನೇ ಜಗದೇಕಮಲ್ಲನ ಕಾಲ ಕ್ರಿ.ಶ. ೧೦೩೩ರಲ್ಲಿ ಹಾಕಿಸಿದ್ದಾಗಿದೆ. ಇದರಲ್ಲಿ ೧ನೇ ಜಗದೇಕಮಲ್ಲ ದೇವನು ಕೊಲ್ಲಿಪಾಕೆಯಿಂದ ರಾಜ್ಯಾವಾಳುತ್ತಿದ್ದಾಗ ಇದೇ ನಾಗಾದಿತ್ಯ ಅಥವಾ ನಾಗಾತಿಯರಸನು ಇದೇ ದೇವರಿಗೆ ಪುರದ ಕೆರಿಯ ದಂಡ ದೋಷ ಮುಂತಾದವುಗಳನ್ನು ತೇಜೋರಾಶಿ ಪಂಡಿತನ ಕಾಲನ್ನು ತೊಳೆದು ದಾನ ಬಿಡುತ್ತಾನೆ. ಈ ತೇಜೋರಾಶಿ ಪಂಡಿತ ಸಿಂಧೇಶ್ವರದ ಆಚಾರ್ಯನಾಗಿದ್ದು ಇವನು ಸಿಂಧೇಶ್ವರ ದೇವಾಲಯವನ್ನು ಜೀರ್ಣೋದ್ದಾರ ಮಾಡಿ ಪುನಃ ಪ್ರತಿಷ್ಠಾಪಿಸಿ ಮಾಡಿದ ಕುರಿತು ಶಾಸನ ತಿಳಿಸುತ್ತದೆ.

ಕ್ರಿ.ಶ. ೧೦೪೯ ರ ಶಿರೂರ ಶಾಸನದ ಮುಂಚೆಯೇ ಹಳ್ಳೂರ ಬಸವೇಶ್ವರ ದೇವಾಲಯದ ಕ್ರಿ.ಶ. ೧೦೩೩-೩೪ ರ ಚಾಲುಕ್ಯ ೧ ನೇ ಜಗದೇಕಮಲ್ಲನ ಶಾಸನ[೪] ಅವನು ಕೊಲ್ಲಿಪಾಕೆಯಿಂದ ರಾಜ್ಯವಾಳುತ್ತಿದ್ದಾಗ ಅವನ ಸಾಮಂತ ಭೈರನಮಟ್ಟಿ ಶಾಸನದ ನಾಗಾತಿಯರಸ (ನಾಗಾದಿತ್ಯ) ಶ್ರೀ ತೇಜೋರಾಶಿ ಪಂಡಿತನ ಕಾಲಕರ್ಚಿಗೆ ಹಾಗೂ ಪುರದ ಕೆರಿಯ ಬಾಗಡೆ ದೇಶೆಯ...... ದೇವರ್ಗ್ಗೆ ದಾನ ನೀಡಿದ ಕುರಿತು ಹೇಳುವಾಗ ಬಾಗಡಗೆಯ ಹೆಸರನ್ನು ಹೊರ ಹಾಕುವುದು.

ಕ್ರಿ.ಶ. ೧೦೪೯ ರ ಶಿರೂರ ಗ್ರಾಮದ ಮತ್ತೊಂದು ಶಾಸನ[೫] ಬಾಗಡಗೆ-೭೦ ನಾಡನ್ನು ಹೆಸರಿಸಿ

ಅದರಲ್ಲಿ ಬರುವ ಮುಲವಳ್ಳಿ ಗ್ರಾಮವಿರುವುದನ್ನು ತಿಳಿಸುತ್ತದೆ. ಇದೇ ಸಮಯದ ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಕೋರಲ ಹಳ್ಳಿಯ ಕ್ರಿ.ಶ. ೧೦೫೦ ರ ಶಾಸನವು ಸಹ ಬಾಗಡಗೆ-೭೦ನ್ನು ಹೆಸರಿಸಿ ಕಲ್ಯಾಣ ಚಾಲುಕ್ಯರ ಮಗಳಾದ ಅಕ್ಕಾದೇವಿ ಕಿಸುಕಾಡು-೭೦, ತೊರಗಲೆ-ನಾಡು, ಮಾಸವಾಡಿ-೧೪೦ ಗಳ ಜೊತೆಯಲ್ಲಿ ಈ ಬಾಗಡಗೆ-೭೦ ನ್ನು ದುಷ್ಟನಿಗ್ರಹದಿಂದ ಆಳುತ್ತಿದ್ದುದನ್ನು ಹೇಳುವುದು.[೬] ಇದನ್ನು ಗಮನಿಸಿದರೆ ಬಾಗಡಗೆ ಸಿಂಧರ ಅರಸರು ಕ್ರಿ.ಶ. ೧೦೫೦ರ ಹೊತ್ತಿಗೆ ರಾಜಕೀಯದಿಂದ ಹಿಂದೆ ಸರಿದಿರುವ ಸೂಚನೆ ನೀಡುತ್ತದೆ. ಕೋರಲಹಳ್ಳಿಯ ಶಾಸನದ ಹೇಳಿಕೆಯನ್ನು ಕ್ರಿ.ಶ. ೧೦೫೩ ರ ಅರಸಿಬೀದಿಶಾಸನ ಮತ್ತು ಕ್ರಿ.ಶ. ೧೦೫೪ ರ ಸೂಡಿ ಶಾಸನಗಳು ಬೆಂಬಲಿಸುತ್ತವೆ. ಕ್ರಿ.ಶ. ೧೦೮೩ ರ ಸವಡಿ ಶಾಸನ[೭] ಸಹ 'ಬಾಗಡಗೆ ಯೆಪ್ಪತ್ತುಮಂ' ಎಂದು ತಿಳಿಸುತ್ತಾ ಅದನ್ನು ಉಲ್ಲೇಖನ ಮಾಡಿವೆ. ಶಾಸನದ ಪೆರ್ಮಾಡಿದೇವ ಯರಂಬರಿಗೆ ಸಿಂಧರ ೨ ನೇ ಅಚುಗಿಯ ಮಗನಾಗಿ ಕಿಸುಕಾಡು-೭೦, ನರೆಗಲ್-೧೨, ಬಾಗಡಗೆ- ೭೦ ಗಳನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನು.

ಕ್ರಿ.ಶ. ೧೧೬೨ ರ ಪಟ್ಟದಕಲ್ಲು ಶಾಸನವು[೮] ಪೆರ್ಮಾಡಿಯ ನಂತರ ಅವನ ಮಗ ಚಾಮುಂಡನು ಮಂಡಳೇಶ್ವರನಾಗಿ ಕಿಸುಕಾಡು-೭೦, ಬಾಗಡಗೆ-೭೦, ಕೆಲವಾಡಿ-೩೦೦ ಹಾಗೂ ಅನೇಕ ನಾಡುಗಳನ್ನು ಆಳುತ್ತಿದ್ದನೆಂದು ಹೇಳುವುದು. ಇದರಲ್ಲಿಯೂ ಬಾಗಡಗೆ-೭೦ರ ಉಲ್ಲೇಖ ಬರುವುದು. ಕ್ರಿ.ಶ. ೧೧೬೯-೭೦ರ ಕಲಚುರಿ ಶಾಸನವು ಸಹ ಬಾಗಡಗೆ-೭೦ನ್ನು ಹೆಸರಿಸುವುದು. ಈ ಶಾಸನದ ಕಾಲದಲ್ಲಿ ಚಾವುಂಡ ಸಿರಿಯಾದೇವಿಯರ ಮಕ್ಕಳಾದ ವೀರ ಬಿಜ್ಜಲದೇವ ಮತ್ತು ವೀರ ವಿಕ್ರಮಾದಿತ್ಯರು ಕಿಸುಕಾಡು-೭೦, ಬಾಗಡಗೆ-೭೦, ಕಳವಾಡಿ ೩೦೦ ನಾಡುಗಳನ್ನು ಆಳುತ್ತಿದ್ದರೆಂಬುದನ್ನು ಮೇಲಿನ ಐಹೊಳೆಯ ಶಾಸನದಿಂದ ತಿಳಿದುಬರುವುದು.[೯] ಈ ಶಾಸನದ ಪ್ರಕಾರ ಚಾವುಂಡ ಸಿರಿಯಾದೇವಿಯರಿಗೆ ವೀರಬಿಜ್ಜಲ ಮತ್ತು ವೀರವಿಕ್ರಮಾದಿತ್ಯರು ಇಬ್ಬರು ಮಕ್ಕಳು.

ಮೇಲಿನ ಪಟ್ಟದ ಕ್ರಿ.ಶ. ೧೧೬೨ ರ ಶಾಸನವು ಚಾವುಂಡನ ವಂಶಾವಳಿ ಹೇಳಿ ಚಾವುಂಡ–ದೇಮಲ–ದೇವಿಯರ ಮಕ್ಕಳು ಆಚಿದೇವ ಮತ್ತು ಪೆರ್ಮಾಡಿಯರು. ಇದರಿಂದ ಚಾವುಂಡನಿಗೆ ಅನೇಕ ಮಡದಿಯರು ಇದ್ದುದು ತಿಳಿದುಬರುತ್ತದೆ. ಕಳಚುರಿ ಸಂಕಮನ ಸೂಡಿಯ ಶಾಸನವು ವಂಶಾವಳಿ ಹೇಳುತ್ತಾ ಚಾವುಂಡನಿಗೆ ಕಳಚುರಿ ಬಿಜ್ಜಳನ ಪುತ್ರಿ ಏಚಲದೇವಿಯನ್ನು ಹೆಸರಿಸುತ್ತದೆ. ಜೊತೆಗೆ ಸಿರಿಯಾದೇವಿಯನ್ನು ಹೆಸರಿಸಿ ಆಕೆಯ ಮಕ್ಕಳು ವೀರಬಿಜ್ಜಳ ಮತ್ತು ವೀರವಿಕ್ರಮಾದಿತ್ಯರನ್ನು ಹೆಸರಿಸುವುದು.[೧೦]

ಬಾದಾಮಿ ತಾಲೂಕು ಕಟಗೇರಿ ಗ್ರಾಮದ ಕ್ರಿ.ಶ. ೧೧೭೯ ರ ಶಾಸನವು ಬಾಗಡಗೆ-೭೦ನ್ನು ಹೆಸರಿಸುತ್ತದೆ. ಜೊತೆಗೆ ಸಿರಿಯಾದೇವಿಯು ಸಹ ಕಲಚುರಿ ವಂಶದವಳೆಂದು ಹೇಳಿ ಚಾವುಂಡ ಮತ್ತು ಸಿರಿಯಾದೇವಿಯ ಮಕ್ಕಳಾದ ವೀರಬಿಜ್ಜಳ ಮತ್ತು ವೀರವಿಕ್ರಮಾದಿತ್ಯರು ಕಿಸುಕಾಡು-೭೦, ಬಾಗಡಗೆ-

೭೦, ಹಂಗರಗೆ-೧೨, ನರೆಯಂಗಲ-೧೨ ನಾಡುಗಳಿಗೆ ಅಧಿಪತಿ ಗಳಾಗಿದ್ದಂತೆ ಅವರು ಯರಂಬರಿಗೆಯ ರಾಜಧಾನಿಯಿಂದ ಆಳುತ್ತಿದ್ದುದನ್ನು ಹೇಳುವುದು.[೧೧] ಇದೇ ಕಟಗೇರಿಯ ಮತ್ತೊಂದು ಕ್ರಿ.ಶ. ೧೧೭೮ ರ ಶಾಸನ ಬಿಜ್ಜಳ ಮತ್ತು ವಿಕ್ರಮಾದಿತ್ಯರು ರಾಜಧಾನಿ ಯರಂಬರಿಗೆ ಯಿಂದ ರಾಜ್ಯವಾಳುತ್ತಿದ್ದಾಗ ಕರಿವಿಡಿ ೩೦ಕ್ಕೂ ಅಧಿಪತಿಯಾಗಿದ್ದರೆಂದು ಹೇಳುವುದು. ಇದರಲ್ಲಿಯೂ ಬಾಗಡಗೆಯ ಉಲ್ಲೇಖ ಬರುತ್ತಿದ್ದು ಬಿಜ್ಜಲ ಮತ್ತು ವಿಕ್ರಮಾದಿತ್ಯರ ಸೇನಾನಿಯಾಗಿ ಸೇವಣ ಗಂಧವಾರಣ ಎಂದು ಹೊಗಳಿಸಿಕೊಂಡ ತಿಕ್ಕರಸ ದಂಡನಾಯಕನು ಬಾಗಡಗೆ ನಾಡಿನ ಅಧಿಕಾರಿಯಾಗಿ ಆಡಳಿತ ನಡೆಯಿಸಿದ್ದಾನೆ.[೧೨] ಇನ್ನೂ ಹಲವಾರು ಶಾಸನ ದಾಖಲೆಗಳು ಯರಂಬರಿಗೆ ಸಿಂಧರಸರು ಬಾಗಡಗೆ ಎಪ್ಪತ್ತರ ಮೇಲೆ ಅಧಿಕಾರ ನಡೆಯಿಸಿರುವುದನ್ನು ವಿವರವಾಗಿ ಹೇಳುವವು.

೪.೧.೧. ಬಾಗಡಗೆ–೭೦ರ ವ್ಯಾಪ್ತಿ

ಹೀಗೆ ಮೇಲಿನ ಹಲವು ದಾಖಲೆಗಳು ಬಾಗಡಗೆ ನಾಡನ್ನು ಅದರ ವ್ಯಾಪ್ತಿಯ ೭೦ ಗ್ರಾಮವೆಂಬುದನ್ನು ತಿಳಿಸುತ್ತಿದ್ದರೂ ಅದರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಮಾತ್ರ ಹೆಸರಿಸುವುದಿಲ್ಲ. ಆದಾಗ್ಯೂ ಮೇಲಿನ ಶಾಸನಗಳನ್ನು ತಿರುವಿಹಾಕಿದಾಗ ಬಾಗಡಗೆ ಎಪ್ಪತ್ತರಲ್ಲಿ ಶಿರೂರ, ಹಳ್ಳೂರ, ಭೈರನಮಟ್ಟಿ, ಬೇವೂರ, ಮಲ್ಲಾಪುರ, ಬಾಗಲಕೋಟ, ಕಿರಸೂರ, ಬಿಲ್‌ಕೆರೂರ, ಕಲಾದಗಿ ಗ್ರಾಮಗಳು, ಬಾದಾಮಿ ತಾಲೂಕಿನ ಕಟಗೇರಿ, ತುಳಸಿಗೇರಿ ಇತ್ಯಾದಿ ಗ್ರಾಮಗಳು ಸೇರಿ ಬಾಗಡಗೆ-೭೦ ನಾಡು ರೂಪುಗೊಂಡಿತ್ತು. ಇದರ ಮುಖ್ಯಕೇಂದ್ರ ಸ್ಥಳ ಇಂದಿನ ಬಾಗಲಕೋಟೆ ಪಟ್ಟಣವಾಗಿದ್ದಿತು. ಈ ಬಾಗಡಗೆ–೭೦ ಗ್ರಾಮಗಳ ಆಡಳಿತದ ಕೇಂದ್ರವಾದರೂ ಸಾಂಸ್ಕೃತಿಕವಾಗಿ ಅದರ ಪರಿಸರದ ಶಿರೂರ, ಬೇವೂರ, ಹಳ್ಳೂರ, ಕಟಗೇರಿ ಗ್ರಾಮಗಳು ಅಗ್ರಹಾರ, ಪುರಪಟ್ಟಣಗಳಾಗಿ ಪ್ರಮುಖ ಆರ್ಥಿಕ ವ್ಯಾಪಾರಿ ಕೇಂದ್ರಗಳಾಗಿ ಮೆರೆದಿದ್ದು ಶಾಸನಗಳ ಉಲ್ಲೇಖದಿಂದಲೇ ತಿಳಿದುಬರುವುದು.

೪.೧.೨. ಆಧುನಿಕ ಬಾಗಲಕೋಟೆ

ಪ್ರಾಚೀನ ಕಾಲದಿಂದ ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೫೬೫ ರಲ್ಲಿ ಕೊನೆಗೊಳ್ಳುವವರೆಗೂ ಬಾಗಡಗೆಯಾಗಿ, ತದನಂತರದ ಕೆಲವು ವರ್ಷಗಳವರೆಗೆ ಅಲ್ಪ ಬದಲಾವಣೆಯೊಂದಿಗೆ ಮುನ್ನಡೆದಿತ್ತು. ಕ್ರಿ.ಶ. ೧೮೦೦ ರ ವೇಳೆಗೆ ಭಾರತದಲ್ಲಿ ಬ್ರಿಟಿಷರು ರಾಜಕೀಯ ಪ್ರಬಲಶಕ್ತಿಯಾಗಿ ಕರ್ನಾಟಕ ಪ್ರದೇಶದಲ್ಲಿಯೂ ಬೆಳೆದು ನಿಂತರು. ಪರಿಣಾಮ ಕ್ರಿ.ಶ. ೧೮೧೭ ರ ವೇಳೆಗೆ ಮರಾಠಾ ಪೇಶ್ವೆ ಹಾಗೂ ಬ್ರಿಟಿಷರ ಮಧ್ಯದ ಸಂಬಂಧ ಹದಗೆಟ್ಟಿತು. ಈಗ ಯುದ್ಧ ಇಬ್ಬರ ಮಧ್ಯೆ ಅನಿವಾರ್ಯವಾಯಿತು. ಕರ್ನಾಟಕದಲ್ಲಿದ್ದ ಜನರಲ್ ಮನ್ರೋ ದೊಡ್ಡದಾದ ಸೈನ್ಯ ಕಟ್ಟಿಕೊಂಡು ಉತ್ತರ ಕರ್ನಾಟಕದ ಬಾದಾಮಿಗೆ ಮುತ್ತಿಗೆ ಹಾಕಿದನು. ೨೦ ದಿನಗಳ ಕಾಲ ಯುದ್ಧ ಮುಂದುವರಿದು ನಂತರ ಬಾದಾಮಿ

ಬಾಗಲಕೋಟೆಗಳು ಮನ್ರೋನ ಕೈವಶವಾದವು. ಇದರಿಂದ ಮತ್ತಷ್ಟು ಉತ್ತೇಜನಕನಾಗಿ ಮನ್ರೋ ಕೃಷ್ಣಾನದಿಯ ಉತ್ತರ ಭಾಗವನ್ನು ಕ್ರಿ.ಶ. ೧೮೧೮ ಮೇ, ೧೭ರಂದು ವಶಪಡಿಸಿಕೊಂಡನು. ಇದರೊಂದಿಗೆ ಹಿಂದಿನ ಬಿಜಾಪುರ ಪ್ರದೇಶ ಬ್ರಿಟಿಷರ ಕೈವಶವಾಯಿತು.

ಕಂದಾಯದ ವಸೂಲಿಗಾಗಿ ಬ್ರಿಟಿಷರು ಬಿಜಾಪುರ ಪ್ರದೇಶವನ್ನು ಕ್ರಿ.ಶ. ೧೮೬೪ ಡಿಸೆಂಬರ್‌ನಲ್ಲಿ ಕಲಾದಗಿ ಗ್ರಾಮವನ್ನು ಜಿಲ್ಲಾ ಕೇಂದ್ರ ಮಾಡಿ ಕಲಾದಗಿ ಕಲೆಕ್ಟರೇಟ್ ಎಂದು ಕರೆದರು. ಅದರಲ್ಲಿ ಉಪಕಂದಾಯ ಕೇಂದ್ರಗಳಾಗಿ ಹಿಪ್ಪರಗಿ, ವಿಜಾಪುರ, ಮನಗೂಳಿ, ಮುದ್ದೇಬಿಹಾಳ, ಬಾಗಲಕೋಟ, ಬಾದಾಮಿ ಹಾಗೂ ಹುನಗುಂದಗಳನ್ನು ಸೇರಿಸಿದರು. ಕರ್ನಲ್ ಸೆಂಟ್ ಕ್ಲಾರ್ ವಿಲ್ಕಿನ್ಸನು ಆಡಳಿತದ ಹಿತದೃಷ್ಟಿಯಿಂದ ಕಲಾದಗಿಗಿಂತ ವಿಜಾಪುರವೇ ಜಿಲ್ಲಾ ಕೇಂದ್ರವಾಗಲು ಹೆಚ್ಚು ಸೂಕ್ತವೆಂದು ವರದಿ ನೀಡಿದನು. ನಂತರದಲ್ಲಿ ಕ್ರಿ.ಶ. ೧೮೮೫ರಲ್ಲಿ ಬ್ರಿಟಿಷ್ ಸರಕಾರ ಅಂತಿಮವಾಗಿ ವಿಜಾಪುರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿತು.[೧೩]

ಕಾಲಕಾಲಕ್ಕೆ ಆಡಳಿತದಲ್ಲಿ ಬದಲಾವಣೆಗಳು ನಡೆದು ಅನೇಕ ಪಟ್ಟಣಗಳು ತಮ್ಮ ಹಿಂದಿನ ಅಧಿಕಾರ ಅಂತಸ್ತುಗಳನ್ನು ಕಳೆದುಕೊಂಡು ಹೊಸ ಹೊಸ ಪಟ್ಟಣಗಳು(ಸ್ಥಳಗಳು) ಆಡಳಿತದ ವ್ಯಾವಹಾರಿಕ ಪಟ್ಟಣ ಕೇಂದ್ರಗಳಾಗಿ ಮಾರ್ಪಟ್ಟವು. ಅದಕ್ಕೆ ಬಾಗಲಕೋಟೆಯು ಹೊರತಾಗಿಲ್ಲ. ಈಗಿನ ಘನ ಸರಕಾರಗಳು ದೊಡ್ಡದಾಗಿದ್ದ ಜಿಲ್ಲಾ ಕೇಂದ್ರಗಳನ್ನು ಇಬ್ಭಾಗಿಸಿ ಆಡಳಿತದ ಅನುಕೂಲದ ದೃಷ್ಟಿಯಿಂದ ಹೊಸ ಜಿಲ್ಲೆಗಳನ್ನು ಸೃಷ್ಟಿಸಿದರು. ಅದರ ಪ್ರಕಾರವೇ ಕ್ರಿ.ಶ. ೧೯೯೭ ಅಗಸ್ಟ್ ತಿಂಗಳ ೧೫ ರಂದು ಬಾಗಲಕೋಟ ಹೊಸ ಜಿಲ್ಲೆಯಾಗಿ ಹೊರ ಹೊಮ್ಮಿತು.

೪.೧.೩. ಕೋಟೆ ನಿರ್ಮಾಣ

ಜಿಲ್ಲಾ ಕೇಂದ್ರವಾಗುವುದಕ್ಕಿಂತ ಮುಂಚೆಯೇ ಕಂಪನಿ ಸರಕಾರದಲ್ಲಿ ಅಧಿಕಾರಿಯಾದ ಶ್ರೀಪತ ವಿಠಲ ಮಾಮಲೇದಾರನ ಕಾಲದಲ್ಲಿ ಬಾಗಲಕೋಟೆಯ ಟಂಕಸಾಲೆಯ ಕಾರಕೂನನಾದ ಕೃಷ್ಣಾಜಿ ತಂಮಾಜಿ ಬಾಗಲಕೋಟೆಯಲ್ಲಿ ಕೋಟೆಯ ಅಗಸಿದ್ವಾರವನ್ನು ಕಟ್ಟಿಸಿದನೆಂದು ಕಲಾದಗಿ ಶಾಸನ ಹೇಳುವುದು.[೧೪] ಅಂದರೆ ಈಗಾಗಲೇ ಬಾಗಲಕೋಟೆಗೆ ಕೋಟೆಯಿದ್ದುದು ಇದರಿಂದ ತಿಳಿದುಬರುವುದು. ಕ್ರಿ.ಶ. ೧೭ನೇ ಶತಮಾನದವರೆಗೆ ಇದನ್ನು ಬಾಗಡಗೆಯೆಂದೇ ಕರೆಯಲಾಗುತ್ತಿತ್ತು. ಕ್ರಿ.ಶ. ೧೮೨೨ ಹಾಗೂ ಕ್ರಿ.ಶ. ೧೮೨೮ ರ ಶಾಸನಗಳಲ್ಲಿ ವಾಡವಾಡಿಸಿ, ಬಾಗಡಿಕೋಟೆ ಎಂಬ ಹೆಸರು ಕಂಡುಬರುವವು.[೧೫] ಹೊನ್ನಿಹಾಳ ಶಾಸನವು ಸಹ ಬಾಗಡಗೆಯಂದೇ ಸಂಬೋಧಿಸುತ್ತದೆ.[೧೬]

ಹೀಗೆ ಪ್ರಾಚೀನ ಕಾಲದಿಂದ ಬಾಗಡಗೆ-೭೦ ಆಡಳಿತ ಘಟಕ (ವಿಭಾಗ)ವಾಗಿ ಹಲವಾರು

ಏಳುಬೀಳುಗಳನ್ನು ಕಂಡುಕೊಂಡಿದೆ. ಮುಖ್ಯವಾಗಿ ಸಿಂಧ ಮನೆತನವು ಹಲವು ಶತಮಾನಗಳ ಕಾಲ ಇದನ್ನು ಅಳಿದ್ದು ಇದರ ಮಹತ್ವ ಎಷ್ಟೆಂಬುದು ಗೊತ್ತಾಗುವುದು.

೪.೨. ಬಾಗಡಗೆ ನಾಡಿನ ನಾಡರಸರು

ವಿಸ್ತಾರವಾದ ಸಾಮ್ರಾಜ್ಯಗಳನ್ನು ತಮ್ಮ ಸಾಮರ್ಥ್ಯದಿಂದ ಕಟ್ಟಿದ ಅರಸು ವಂಶಗಳು ಸಾಮ್ರಾಜ್ಯ ನಿರ್ಮಾಣ ಮಾಡಿ ಅಧಿಕಾರ ನಡೆಸಲು ತಮ್ಮ ಕೈಕೆಳಗೆ ನಾಲ್ಕು ವರ್ಗದ ಪ್ರಭುವರ್ಗವನ್ನು ನೇಮಿಸಿಕೊಂಡಿದ್ದರು. ಪ್ರಭುವರ್ಗವನ್ನು ಮುಖ್ಯವಾಗಿ ನಾಡರಸರೆಂದು ಕರೆಯಲಾಗಿದೆ. ಇವರಲ್ಲಿ ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭು, ಪ್ರಭುಗಾವುಂಡ ಹಾಗೂ ಗಾವುಂಡರು ಪ್ರಮುಖರು. ಇವರ ಮಧ್ಯದ ಅಧಿಕಾರದ ವ್ಯಾಪ್ತಿ ತಿಳಿದುಬರದಿದ್ದರೂ ಇವರೆಲ್ಲ ಸಾಮ್ರಾಜ್ಯಕ್ಕೆ ಅಧಿಪತಿಯಾದ ಚಕ್ರವರ್ತಿಯ ಪಾದಪದ್ಮೋಪಜೀವಿಗಳಾಗಿದ್ದರು. ತಮ್ಮ ಆಳ್ವಿಕೆಗೊಳಪಟ್ಟಿದ್ದ ಪ್ರದೇಶದಲ್ಲಿ ಅಧಿಕಾರ ನಡೆಸಲು ಸ್ವತಂತ್ರರು. ಇವರು ತಮ್ಮ ಮೇಲಿನ ಪ್ರಭುಗಳಿಗೆ ಅಧೀನರಾಗಿ, ವಿಧೇಯಕರಾಗಿ ಇರುತ್ತಿದ್ದರು. ಮಂಡಳೇಶ್ವರರು ಚಕ್ರವರ್ತಿಗಳ ಕೈಕೆಳಗಿದ್ದರೆ, ಸಾಮಂತರು ಮಂಡಳೇಶ್ವರರ ಕೆಳಗೆ ಪ್ರಭುಗಾವುಂಡರು ಸಾಮಂತರ ಕೆಳಗೆ, ಗಾವುಂಡರು ಪ್ರಭುಗಾವುಂಡರ ಕೈಕೆಳಗೆ ಅವರಿಗೆ ವಿಧೇಯರಾಗಿ ಆಡಳಿತ ನಡೆಸುತ್ತಿದ್ದರು.[೧೭]

ಇಂತಹ ಮಹಾಮಂಡಳೇಶ್ವರ, ಮಹಾಸಾಮಂತರಲ್ಲಿ ಬಾಗಡಗೆ ಸಿಂಧರು ಪ್ರಸಿದ್ಧರಾಗಿದ್ದು ಇವರ ಮನೆತನದ ಇತರ ವಂಶಸ್ಥರು ಬೇರೆ ಬೇರೆ ಭಾಗಗಳಲ್ಲಿ ಆಡಳಿತ ನಡೆಸಿರುವರು. ಇವರೆಲ್ಲರಿಗೂ ಮೂಲ ಬಾಗಡಗೆ ಸಿಂಧರಾಗಿದ್ದು ಚರಿತ್ರೆಯಲ್ಲಿ ಇವರ ಪಾತ್ರ ಹಿರಿದಾಗಿದೆ. ಸಿಂಧರು ಮಂಡಳೇಶ್ವರರಾಗಿದ್ದುಕೊಂಡು ಬಾಗಡಗೆ ಪ್ರದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮ ಕೊಡುಗೆ ನೀಡಿರುವರು. ಬಾಗಡಗೆ ೭೦ ರ ಮಹಾಮಂಡಳೇಶ್ವರರಾಗಿ ಸಿಂಧರು ಹೆಚ್ಚು ಪ್ರಸಿದ್ಧಿಗೆ ಬಂದಿದ್ದು, ಸಿಂಧರಾಳಿದ ಪ್ರದೇಶಗಳು (ನಾಡುಗಳು) ಸಿಂಧರ ರಾಜಕೀಯ ವಿಷಯ ಹಾಗೂ ಸಿಂಧರ ಇತರ ವಂಶಸ್ಥ ಮನೆತನಗಳ ಆಳ್ವಿಕೆ ಪ್ರದೇಶ ಹಾಗೂ ಅವರ ಚರಿತ್ರೆಯನ್ನು ವಿಸ್ತೃತವಾಗಿ ನಾವಿಲ್ಲಿ ಚರ್ಚಿಸಿದ್ದೇವೆ.

೪.೨.೧. ಸಿಂಧವಾಡಿ ಅಥವಾ ಸಿಂಧವಾಡಿ ೧೦೦೦

ಹಲವು ಸಿಂಧ ಮನೆತನಗಳು ಅಧಿಕಾರ ನಡೆಸಿದ್ದು ಕೆಲವು ವಂಶಸ್ಥರು ಆಡಳಿತ ಮಾಡಿದ ಭೂಭಾಗವನ್ನು ಅವರ ವಂಶದ ಹೆಸರಾದ ಸಿಂಧದಿಂದಲೆ ಕರೆಯಲಾಗಿದೆ. ಅದನ್ನು ಸ್ಥೂಲವಾಗಿ ಸಿಂಧವಾಡಿ ಅಥವಾ ಸಿಂಧವಾಡಿ ೧೦೦೦ ಪ್ರದೇಶ ವಿಭಾಗವೆಂದು ಕರೆಯಲಾಗಿದೆ. ಶಾಸನಗಳ

ಉಲ್ಲೇಖಿತ ಈ ಸಿಂಧರ ಆಡಳಿತ ವಿಭಾಗ ಮುಖ್ಯವಾಗಿ ಇಂದಿನ ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಬಳ್ಳಾರಿ, ಸೊಂಡೂರು, ಹೊಸಪೇಟೆ ತಾಲೂಕುಗಳಲ್ಲಿನ ಹಲವು ಗ್ರಾಮಗಳನ್ನು, ಆಂಧ್ರದ ಅನಂತಪುರ ಜಿಲ್ಲೆಯ ಆದೋನಿ, ಗುತ್ತಿ, ಆಲೂರ ತಾಲೂಕಿನ ಕೆಲವು ಗ್ರಾಮಗಳನ್ನೊಳಗೊಂಡಿತ್ತು. ಸಿಂಧವಾಡಿ ನಾಡಿನ ರಾಜಧಾನಿ 'ತುಂಬಳ' ನಗರವಾಗಿದ್ದು, ೬ನೇ ವಿಕ್ರಮಾದಿತ್ಯನ ಕಾಲದ ನಂತರ ಈ ರಾಜಧಾನಿ ಕುರುಗೋಡಿಗೆ ಸ್ಥಳಾಂತರಗೊಂಡಿರಬೇಕು. ಈ ಸಿಂಧಸಾಸಿರ ನಾಡಿನಲ್ಲಿ ಬಲ್ಲಕುಂದೆ ೩೦೦(ಮುನ್ನೂರು), ತೆಕ್ಕೆಕಲ್ಲು ೧೨, ಆದವಾನಿ ೫೦೦, ಚಿದ್ದವಾಡಿ ೮೬ ಗಳು ಅದರ ಉಪ ಆಡಳಿತದ ಘಟಕಗಳು.[೧೮]

೪.೨.೨. ವಿವಿಧ ಸಿಂಧ ಮನೆತನಗಳು

ಬಾಗಡಗೆ ಸಿಂಧರ ಕುರಿತು ತಿಳಿದುಕೊಳ್ಳುವ ಮೊದಲು ಈ ವಂಶಸ್ಥರ ಇತರ ಮನೆತನಗಳ ಕುರಿತು ವಿವರವಾಗಿ ಚರ್ಚಿಸುವುದು ಸೂಕ್ತವೆನಿಸುತ್ತದೆ. ಏಕೆಂದರೆ ಹಲವಾರು ವಿದ್ವಾಂಸರು, ಹಲವು ಶಾಸನ ಸಂಪುಟಗಳಲ್ಲಿ ಬರುವ ಶಾಸನಗಳನ್ನು ಬಳಕೆ ಮಾಡಿಕೊಂಡು ಆಯಾಕಾಲಕ್ಕೆ ತಕ್ಕಂತೆ ಅವರ ಅಭ್ಯಾಸಕ್ಕೆ ಬೇಕಾದ ವಿಷಯವನ್ನಷ್ಟೇ ಚರ್ಚಿಸಿದ್ದರಿಂದ ಮತ್ತು ದಾಖಲೆ, ವಿದ್ವಾಂಸರ ಅಭಿಪ್ರಾಯ ಒಟ್ಟುಗೂಡಿಸಿ ಎಲ್ಲಾ ಸಿಂಧ ವಂಶಗಳಿಗೆ ಬಾಗಡಗೆ ಸಿಂಧವಂಶವೇ ಮೂಲವಾಗಿದ್ದರಿಂದ ಒಟ್ಟು ಸಿಂಧರ ಪರಿಪೂರ್ಣ ವಂಶಾವಳಿಗಳು ಹಾಗೂ ಅವರ ರಾಜಕೀಯ ಚರಿತ್ರೆಗೆ ಹೆಚ್ಚು ಒತ್ತು ಕೊಟ್ಟು ಬರೆಯಲು ಪ್ರಯತ್ನಿಸಲಾಗಿದೆ.

ಸಿಂಧ ವಂಶಸ್ಥರಲ್ಲಿ ಬಾಗಡಗೆ ಸಿಂಧರು, ಯರಂಬರಿಗೆ ಸಿಂಧರು, ಬೆಳ್ಳುತ್ತಿಯ ಸಿಂಧರು, ಪ್ರತ್ಯಂಡಕದ ಸಿಂಧರು, ರಂಜೇರು ಸಿಂಧರು, ಕುರುಗೊಡು ಸಿಂಧರೆಂಬ ೬ ಶಾಖೆಗಳು ಕಂಡುಬರುತ್ತಿದ್ದು ಇತ್ತೀಚೆಗೆ ರಾಯಚೂರು ಜಿಲ್ಲೆಯಲ್ಲಿ ಒಂದು ಸಿಂಧ ವಂಶ ಅಧಿಕಾರ ನಡೆಯಿಸಿದ ಕುರಿತು ಶಾಸನಗಳಿಂದ ತಿಳಿದುಬರುತ್ತದೆ.[೧೯] ಅವರನ್ನು ನಾವು ಮುಕ್ಕುಂದೆ ಸಿಂಧರೆಂದು ಕರೆಯಲಾಗಿದೆ.

೪.೨.೩. ಸಿಂಧರ ಪಾರಂಪರಿಕ ನೆಲೆ, ಧ್ವಜ, ಲಾಂಛನಗಳು

ಸಿಂಧ ವಂಶಸ್ಥ ಮನೆತನಗಳ ಧ್ವಜ, ಲಾಂಛನಗಳು ಹೆಚ್ಚು ಕಡಿಮೆ ಒಂದೇ ತೆರನಾಗಿದ್ದರೂ ಕೆಲವು ಮನೆತನಗಳು ಅಲ್ಪ ಪ್ರಾದೇಶಿಕ ಬದಲಾವಣೆ ಮಾಡಿಕೊಂಡಿರುವುದು ಕಂಡುಬರುತ್ತದೆ.

ಹಳ್ಳೂರ ಶಾಸನ ಕ್ರಿ.ಶ. ೯೯೦-೯೧ ಕ್ಕೆ ಸೇರಿದ್ದು ಕಲ್ಯಾಣ ಚಾಲುಕ್ಯ ೨ನೇ ತೈಲಪನು ರಾಜ್ಯವಾಳುತ್ತಿದ್ದನು. ಶಾಸನ ತ್ರುಟಿತಗೊಂಡಿದ್ದು ಸಿಂಧರ ಕುರಿತು ಕೇವಲ ಅವರ ನೆಲೆ, ಧ್ವಜ

ಲಾಂಛನದ ಕುರಿತು ಮಾತ್ರ ಹೇಳುತ್ತದೆ. ಬಾಗಡಗೆ ಸಿಂಧರು ಪಾರಂಪರಿಕವಾಗಿ ಇಟ್ಟುಕೊಂಡ 'ನಾಗಧ್ವಜ', 'ವ್ಯಾಘ್ರಲಾಂಛನ', ನೆಲೆಯಾದ 'ಭೋಗಾವತಿ ಪುರವರೇಶ್ವರ'ವೆಂಬ ಹೆಸರುಗಳು ಶಾಸನದಲ್ಲಿ ಉಳಿದುಕೊಂಡಿವೆ.[೨೦] ಸಿಂಧರ ವಂಶಾವಳಿ ಹೇಳುವ ಭೈರನಮಟ್ಟಿ ಶಾಸನವು[೨೧] ಕಲ್ಯಾಣ ಚಾಲುಕ್ಯ ೨ನೇ ತೈಲಪನ ಸಾಮಂತನಾಗಿ ಸಿಂಧ ವಂಶದ ನಾಗಾದಿತ್ಯರಸನು ಭಾಗಡಗೆ ನಾಡನ್ನು ಆಳುತ್ತಿದ್ದನು. ಶಾಸನ ವಂಶಾವಳಿ ಹೇಳುವಾಗ "ನಾಗವಂಶ, ನಾಗಧ್ವಜ, ವ್ಯಾಘ್ರಲಾಂಛನ, ನೆಲೆ ಭೋಗಾವತಿಪುರವರೇಶ್ವರ"ರೆಂದು ಕರೆಯುವುದು ಶಾಸನಗಳಲ್ಲಿ ಭೋಗಾವತಿಪುವರೇಶ್ವರರೆಂದು ಕರೆದುಕೊಂಡಿದ್ದರೂ ತಾವು 'ಅಹಿಚ್ಛತ್ರ'ದಿಂದ ಬಂದವರೆಂದು ಹೇಳಿಕೊಂಡಿದ್ದಾರೆ.

ರಂಜೋಳದ ಸಿಂಧರು (ರಂಜೇರ) ಸಹ ತಮ್ಮ ಪಾರಂಪರಿಕ ಬಿರುದು ಲಾಂಛನಗಳನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡಂತೆ ಬಾಗಡಗೆ ಸಿಂಧರಂತೆ ಅದನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ರಂಜೇರುವಿನ ಸಿಂಧರು ತಮ್ಮನ್ನು 'ಭೋಗಾವತಿಪುರವರೇಶ್ವರ, ಅಹಿಚ್ಛತ್ರಪುರದ ರಾಮರಕ್ಷೆ, ಪದ್ಮಾವತಿ ಲಬ್ದವರ ಪ್ರಸಾದ ಪಾತಾಳಚಕ್ರವರ್ತಿ(ನಾಗವಂಶ), ಉತ್ತರೇಶ್ವರ ಪಾದಕಮ ಬ್ರಿಂಗ'ರೆಂದು ಕರೆದುಕೊಂಡಿದ್ದಾರೆ.[೨೨]

ಕುರುಗೊಡು ಸಿಂಧರು ಸಹ 'ಧರಣೇಂದ್ರ (ಫಣೀಂದ್ರ) ಕುಲಸಂಭವ, ಅಹಿಂದ್ರ ಮಕರಧ್ವಜ, ವ್ಯಾಘ್ರಮೃಗ ಲಾಂಛನ, ಭೋಗಾವತಿ ಪುರವರೇಶ್ವರ'ರೆಂದು ಕರೆದುಕೊಂಡಿರುವರು.[೨೩] ಇನ್ನು ಯಲಬರ್ಗಿ ಸಿಂಧರು ಸಹ ಬಾಗಡಗೆ ಸಿಂಧರ ಧ್ವಜ, ಲಾಂಛನಗಳನ್ನು, ಭೋಗಾವತಿಪುರವರೇಶ್ವರ, ವ್ಯಾಘ್ರಲಾಂಛನ, ನಾಗಧ್ವಜಗಳನ್ನು ಧರಿಸಿದ್ದರು. ರಾಯಚೂರು ಜಿಲ್ಲೆಯ ಮುಕ್ಕುಂದೆಯ ಸಿಂಧರು ಇವರ ಹಲವು ಶಾಸನಗಳಲ್ಲಿ ಭೋಗಾವತಿಪುರವರೇಶ್ವರ, ಶಾರ್ದೂಲ ಲಾಂಛನ, ನಾಗರಧ್ವಜ, ರೂಪಮಕರಧ್ವಜ, ಮೃಗಲಾಂಛನ, ಫಣೀಂದ್ರ ರುಂಧ್ರಧ್ವಜ[೨೪]ವೆಂಬ ವಿವಿಧ ರೀತಿಯ ಧ್ವಜಲಾಂಛನಗಳನ್ನು ಬಳಸಿರುವರು.

ಪ್ರಾದೇಶಿಕವಾಗಿ ಇವುಗಳ ಹೆಸರು ಅಲ್ಪ ಬದಲಾವಣೆಯಂತೆ ಕಂಡುಬಂದರೂ ಅವುಗಳ ಮೂಲ ಒಂದೇ ಎಂಬುದನ್ನು ತೋರಿಸುತ್ತವೆ. ಇಂತಹ ನೆಲೆ, ಲಾಂಛನ, ಧ್ವಜಗಳನ್ನು ಇಟ್ಟುಕೊಂಡು ಹಲವಾರು ಆಡಳಿತದ ವಿಭಾಗಗಳ ಮೇಲೆ ಸಾಮಂತರಾಗಿ, ಮನ್ನೆಯರಾಗಿ, ಮಹಾಮಂಡಳೇಶ್ವರರಾಗಿ ಅಧಿಕಾರವನ್ನು ಕರ್ನಾಟಕದ ದಖ್ಖನ್ ಪ್ರಸ್ಥಭೂಮಿಯಲ್ಲಿ ಚಲಾಯಿಸಿರುವರು. ಅಂತವರ ಕುರಿತು ಕೆಳಗೆ ಚರ್ಚಿಸಲಾಗಿದೆ.

೪.೨.೪. ಬಾಗಡಗೆ ಸಿಂಧರು

ಬಾಗಡಗೆ ೭೦ ವಿಭಾಗವನ್ನು ಆಳಿದ ಸಿಂಧ ವಂಶಸ್ಥರಲ್ಲಿ ಬಾಗಡಗೆ ಸಿಂಧರು ಪ್ರಮುಖರು.

ಈ ಪ್ರದೇಶದಲ್ಲಿ ಸಿಂಧರ ಕುರಿತು ಹೇಳುವ ಶಾಸನ ದಾಖಲೆಗಳೆಂದರೆ ಕ್ರಿ.ಶ. ೯೯೦-೯೧ರ ಹಳ್ಳೂರ ಶಾಸನ[೨೫], ಕ್ರಿ.ಶ ೯೯೦-೯೧ ರ ಭೈರನಮಟ್ಟಿ ಶಾಸನ[೨೬], ಕ್ರಿ.ಶ. ೧೦೩೩-೩೪ರ ಹಳ್ಳೂರ ಶಾಸನ[೨೭]ಗಳು ಪ್ರಮುಖವಾದವುಗಳು,

ಕ್ರಿ.ಶ. ೯೯೦-೯೧ ರ ಹಳ್ಳೂರ ಶಾಸನ ಕಲ್ಯಾಣ ಚಾಲುಕ್ಯ ಅರಸ ೨ನೇ ತೈಲಪನು ರಾಜ್ಯ ವಾಳುತ್ತಿದ್ದಾಗ ಸಿಂಧವಂಶದ ಸಾಮಂತ(ಹೆಸರು ಅಳಿಸಿದೆ)ನನ್ನು ಉಲ್ಲೇಖಿಸಿ ಅವನ ಬಿರುದುಗಳಾದ 'ನಾಗಧ್ವಜ, ಪ್ರತಾಪ ವಿಜಯಪರ ಘೋಷಣ, ವ್ಯಾಘ್ರಲಾಂಛನ, ಭೋಗಾವತಿ ಪುರವರೇಶ್ವರ'ನೆಂದು ಹೇಳುವುದು. ಬಹುಶಃ ಶಾಸನದ ಕಾಲ ಭೈರನಮಟ್ಟಿ ಶಾಸನದ ಕ್ರಿ.ಶ. ೯೯೦-೯೧ ರ ಕಾಲಮಾನ ಹೊಂದಿದ್ದರಿಂದ ಈ ಶಾಸನದ ನಾಗಾದಿತ್ಯರಸನೇ ಹಳ್ಳೂರ ಶಾಸನದ ಸಿಂಧಸಾಮಂತನಾಗಿ ರುವುದರಲ್ಲಿ ಯಾವ ಸಂಶಯವಿಲ್ಲ. ಈ ಭೈರನಮಟ್ಟಿ ಶಾಸನವು ಬಾಗಡಗೆ ಸಿಂಧರ ವಂಶಾವಳಿಯನ್ನೇ ನೀಡುತ್ತದೆ. ಈ ಶಾಸನದ ಅರಸ ೨ನೇ ತೈಲಪನೇ ಆಗಿದ್ದು ಶಾಸನದ ಕೊನೆಯಲ್ಲಿ ಕ್ರಿ.ಶ. ೧೦೩೩ ರ ೧ನೇ ಜಗದೇಕಮಲ್ಲನ ಶಾಸನ ಕಂಡುಬರುವುದು.

ವಂಶಾವಳಿ

ನಿಡುದೊಳ ಸಿಂಧ (ಕದಂಬ ಪುತ್ರಿ- ಹೆಂ.)

↓

ಪ್ರಭುಸೆವ್ಯ

↓

ನಿಡುದೊಳಸಿಂಧ

↓

ಕಮ್ಮರ (ಕಮ್ಮಯ್ಯರಸ) (ಹೆಂ. ಸಂಗಬ್ಬರಸಿ)

↓

ಪುಲಿಕಾರಿ (ಹೆಂ. ರೇವಕಬ್ಬೆ)

↓

ನಾಗಾದಿತ್ಯ (ಹೆ. ಪೊಲೆಯಬ್ಬರಿಸಿ)

↓

ಪೊಲಸಿಂಧ (ಹೆಂ. ಬಿಜ್ಜಳದೇವಿ ಖಂಡವ ಮಂಡಲ)

↓ ↓

ಪ್ರಭುಸೆವ್ಯ ಆಚುಗಿ?

↓

ನಾಗಾದಿತ್ಯ (ನಾಗತಿಯರಸ)

ಇದನ್ನು ಕ.ವಿ.ವಿ.ಶಾ.ಸಂ-೯. ಬಾಗಲಕೋಟ ಜಿಲ್ಲೆ ಶಾಸನ ಸಂಪುಟದ ಸಂಪಾದಕರು ತಮ್ಮ ಪುರವಣಿ ಪುಟದಲ್ಲಿ ಕೊಟ್ಟ ವಂಶಾವಳಿಯಾಗಿದೆ. ಆದರೆ, ಭೈರನಮಟ್ಟಿಯ ಶಾಸನದ ವಂಶಾವಳಿಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುವುದು. ಶಾಸನವು ಕಲ್ಯಾಣ ಚಾಲುಕ್ಯರಸ ೨ನೇ ತೈಲಪ ರಾಜ್ಯವಾಳುತ್ತಿದ್ದಾಗ ಅವನ ಸಾಮಂತನಾಗಿ ಸಿಂಧವಂಶದ ನಾಗಾದಿತ್ಯರಸ ಆಳುತ್ತಿದ್ದುದನ್ನು ಹೇಳುತ್ತದೆ. ಜೊತೆಗೆ ನಾಗಾದಿತ್ಯರಸನ ವಂಶಾವಳಿಯನ್ನು ತಿಳಿಸುವುದು. ಅದರ ಪ್ರಕಾರ ಧರಣೇಂದ್ರ ಮತ್ತು ಭೂಲೋಕವನಿತೆ ಭೂಮಿಗೆ ಬಂದಾಗ ಇಲ್ಲಿ ಅವರಿಗೆ ಸಿಂಧ ಕುಮಾರ ನೆಂಬುವವನು ಜನಿಸಿದನು. ಅವನೇ ನಿಡದೊಳಸಿಂಧ, ಪುಲಿಕಾಲಸಿಂಧ, ಸಿಂಧ ಕುಮಾರ ನಾಗಿದ್ದಾನೆ. ಇದರಲ್ಲಿ ನಿಡದೊಳಸಿಂಧನಿಂದ ನಾಗಾದಿತ್ಯರಸನವರೆಗೆ ವಂಶಾವಳಿ ಬರುವುದು.

ವಂಶಾವಳಿ

ನಿಡದೊಳಸಿಂಧ(ಕದಂಬ ರಾಜಪುತ್ರಿ,ಹೆಂ.)

↓ (ರಂಜೇರು ಶಾಸನ
ಕ್ರಿ.ಶ.೧೧೯೯
ಕದಂಬ ಮಯೂರವರ್ಮನ
ಮಗಳು ಲಕ್ಷ್ಮೀಮತಿ)

ಮೂರುಜನ ಮಕ್ಕಳು(ಹೆಸರಿಲ್ಲ.)

↓

ಕಮ್ಮರ (ಹೆಂ. ಸಂಗಬ್ಬರಸಿ)

↓

ಪುಲಿಕಾಲ (ಹೆಂ. ರೇವಕಬ್ಬೆ)

↓

೧ನೇ ನಾಗಾದಿತ್ಯ (ಹೆಂ. ಪೊಲೆಯಬ್ಬರಸಿ)

↓

ಪೊಲಿಸಿಂಧ (ಹೆಂ. ಬಿಜ್ಜಲದೇವಿ)

↓

ಪ್ರಭುಸೆವ್ವಾರಸ

೨ನೇ ನಾಗಾದಿತ್ಯ (ನಾಗತಿಯರಸ)

ಶಾಸನ ಸಂಪುಟ ಸಂಪಾದಕರು ಕೊಟ್ಟ ವಂಶಾವಳಿಯಲ್ಲಿ ಮೂಲಪುರುಷ ನಿಡುದೊಳ ಸಿಂಧನ ಮಗ ಪ್ರಭುಸೆವ್ವನೆಂದು ಅವನು ಬಾಗಡಗೆ ಪ್ರದೇಶಕ್ಕೆ ನಿಂತು ಆಡಳಿತ ನಡೆಸಿದನೆಂದು ಹೇಳುವರು. ಭೈರನಮಟ್ಟಿ ಶಾಸನ ನಿಡದೊಳಸಿಂಧನ ಮಕ್ಕಳು ಮೂರು ಜನರೆಂದು ಹೇಳುವುದು. ಕ್ರಿ.ಶ. ೧೦೯೦ ರ ರಂಜೋಳದ ಶಾಸನ ನಿಡದೊಳಸಿಂಧನ ಮಕ್ಕಳು ನಾಲ್ಕು ಜನರೆಂದು ಹೇಳಿ ಅವರ ಹೆಸರುಗಳಾದ ಪ್ರಭುಸೆವ್ವ, ಸತ್ಯಸೆವ್ವ, ಜಗತಸೆವ್ವ, ಬುದಸೆವ್ವರನ್ನು ಹೆಸರಿಸುತ್ತದೆ ಮತ್ತು ಮುಂದುವರಿದು ಕ್ರಮವಾಗಿ ಬಾಗಡಗೆ, ಫಳಿಯಂಡ(ಬಹುಶಃ ಪ್ರತ್ಯಾಂಡಕ), ಕ್ಷಿತಿ ಮಂಡಲ, ಅಟ್ಟಳೆನಾಡು ಮತ್ತು ಬಳ್ಳರೆನಾಡು ಹೆಸರಿಸಿ ಅಲ್ಲಿ ಇವರು ಆಳ್ವಿಕೆ ಪ್ರಾರಂಭಿಸಿರುವುದನ್ನು ಹೇಳುವುದು.

ಕ್ರಿ.ಶ. ೯೯೦-೧ರ ಭೈರನಮಟ್ಟಿ ಶಾಸನದ ಮೂರು ಜನರು ನಿಡದೊಳಸಿಂಧನ ಮಕ್ಕಳು ಬಹುಶಃ ಕ್ರಮವಾಗಿ ರಂಜೋಳ ಶಾಸನದ ಪ್ರಭುಸೆವ್ವ, ಸತ್ಯಸೆವ್ವ ಮತ್ತು ಜಗತಸೆವ್ವರಾಗಿರಬೇಕು. ರಂಜೋಳ ಶಾಸನ ಪ್ರಭುಸೆವ್ವನು ಬಾಗಡಗೆ ಪ್ರದೇಶಕ್ಕೆ ನಿಯುಕ್ತಗೊಂಡ ಅರಸನೆಂದು ಹೇಳುವುದನ್ನು ಗಮನಿಸಬೇಕು. ಶಾಸನ ಸಂಪಾದಕರು ಸಹ ಪ್ರಭುಸೆವ್ವ ನಿಡದೊಳಸಿಂಧನ ಮಗನೆಂದು ಕರೆಯುವುದನ್ನು, ರಂಜೋಳ, ಭೈರನಮಟ್ಟಿ ಶಾಸನಗಳ ಹೇಳಿಕೆಗಳನ್ನು ಒಟ್ಟುಗೂಡಿಸಿ ಈ ನಿಡದೊಳಸಿಂಧ ಪ್ರಥಮ ಬಾರಿಗೆ ಕದಂಬ ರಾಜಪುತ್ರಿ ಲಕ್ಷ್ಮೀಮತಿಯನ್ನು ವಿವಾಹವಾಗಿ ಮಯೂರವರ್ಮನ ಸಾಮಂತನಾಗಿ ಪ್ರಥಮ ಸಿಂಧಕುಮಾರ ಬಾಗಡಗೆ ನಾಡಲ್ಲಿ ಅಧಿಕಾರ ನಡೆಯಿಸಿದನೆಂದು ಹೇಳಬಹುದಾಗಿದೆ.

ತದನಂತರ ನಿಡದೊಳಸಿಂಧನನ್ನು ಮೂರು ಅಥವಾ ನಾಲ್ಕು ಜನ ಮಕ್ಕಳನ್ನು ಕನ್ನಡ ಪ್ರದೇಶದ ಸಾರ್ವಭೌಮರಾಗಿದ್ದ ಕದಂಬ, ಬಾದಾಮಿ ಚಾಲುಕ್ಯರಸರ ಕಾಲದಲ್ಲಿ ಬೇರೆ ಬೇರೆ ಆಡಳಿತ ಉಪವಿಭಾಗಕ್ಕೆ ಅರಸರೇ ನಿಯುಕ್ತಿಗೊಳಿಸಿರಬೇಕು. ಹೀಗೆ ನಿಯುಕ್ತಗೊಂಡ ಮಕ್ಕಳು ತಾವು ಅಧಿಕಾರ ನಡೆಸುವ ಪ್ರದೇಶದಲ್ಲಿ ತಮ್ಮ ವಂಶಾವಳಿಗಳನ್ನು ಶಾಸನಗಳಲ್ಲಿ ಹಾಕಿಸಿಕೊಂಡಿದ್ದು, ಇವರಲ್ಲಿ ರಂಜೋಳ, ಬಾಗಡಗೆ, ಪ್ರತ್ಯಂಡಕ, ಬೆಳಗುತ್ತಿ, ಕುರುಗೋಡು, ಯರಂಬರಿಗೆ, ಮುಕ್ಕುಂದೆ, ಬಳ್ಳಾರೆ, ಸಿಂಧವಾಡಿ ಇತ್ಯಾದಿ ವಿಭಾಗಗಳಲ್ಲಿ ಆಡಳಿತ ನಡೆಯಿಸಿದ್ದಾರೆ. ಆದರೆ ಸಮಸ್ಯೆ ಇರುವುದು ಯರಂಬರಿಗೆ, ಮುಕ್ಕುಂದೆ, ಸಿಂಧ ಮನೆತನಗಳಲ್ಲಿ ಈ ಚರ್ಚೆಯನ್ನು ಅಂದಿನ ಸಿಂಧ ಮನೆತನಗಳಲ್ಲಿ ಕ್ರಮವಾಗಿ ಚರ್ಚಿಸಲಾಗಿದೆ.

ಬಾಗಡಗೆ ಸಿಂಧರ ರಾಜಕೀಯ ಚರಿತ್ರೆಯು ನಿಡದೊಳ ಸಿಂಧನಿಂದ ಕದಂಬರ ಕಾಲದಲ್ಲಿ ಆರಂಭವಾಗುತ್ತದೆ. ತದನಂತರ ಅವನ ಮಕ್ಕಳು ಕದಂಬರ ಕಾಲದಲ್ಲಿ ಅಥವಾ ಬಾದಾಮಿ ಚಾಲುಕ್ಯರ

ಕಾಲದಲ್ಲಿ ಬೇರೆಬೇರೆ ಭಾಗಗಳಿಗೆ ನಿಯುಕ್ತಿಗೊಂಡಿರಬೇಕು. ಬಾಗಡಗೆ ಪ್ರದೇಶಕ್ಕೆ ಮಾತ್ರ ಪ್ರಭುಸೆವ್ವನು ತಂದೆಯ ನಂತರ ಮುಂದುವರೆದನು. ತದನಂತರ ಬಾದಾಮಿ ಚಾಲುಕ್ಯರ ರಾಷ್ಟ್ರಕೂಟರ ಕಾಲದಲ್ಲಿ ಈ ವಂಶದ ಕಮ್ಮರ, ಪುಲಿಕಾಲ, ನಾಗಾದಿತ್ಯ, ಪೊಲಸಿಂಧ, ಪ್ರಭುಸೆವ್ವರು ಕ್ರಮವಾಗಿ ಆಡಳಿತ ನಡೆಯಿಸಿರಬೇಕು.

ಕ್ರಿ.ಶ. ೯೯೦-೯೧ ರ ಭೈರನಮಟ್ಟಿ ಕ್ರಿ.ಶ. ೧೦೩೩-೩೪ರ ಶಾಸನಗಳ ಕಾಲಕ್ಕೆ ಸಿಂಧವಂಶದ ನಾಗಾದಿತ್ಯನು ಆಡಳಿತ ನಡೆಸುತ್ತಿದ್ದನು. ಇವನು ಒಂದನೇ ನಾಗಾದಿತ್ಯನಾಗಿದ್ದು ಅವನ ಮಡದಿ ಪೊಲೆಯಬ್ಬರಸಿಯಾಗಿದ್ದಾಳೆ. ಈ ವೇಳೆಯಲ್ಲಿ ಚಾಲುಕ್ಯ ೨ನೇ ತೈಲಪನು ರಾಜ್ಯವಾಳುತ್ತಿದ್ದನು. ಅವನ ಸಾಮಂತನಾಗಿ ೧ನೇ ನಾಗಾದಿತ್ಯರಸ ಬಾಗಡಗೆ ನಾಡಿನಲ್ಲಿ ಆಡಳಿತ ನಡೆಸುತ್ತಿದ್ದನು. ಆಗ ಇವನು ಪತ್ತಿಯ ಮತ್ತೂರಿನ ದಂಡಿನಲ್ಲಿದ್ದಾಗ ಕಿರಿಯ ಶಿರವೂರದಲ್ಲಿ ಸಿಂಹರಾಶಿ ಭಟ್ಟಾರದ ಕಾಲು ತೊಳೆದು ಅದರ ಕಾಲಕರ್ಚಿಗೆ ಅಲ್ಲಿಯ ಸಿಂಧೇಶ್ವರ ದೇವರಿಗೆ ಸಾವಿರ ಮತ್ತರು ಭೂಮಿಯನ್ನು ದಾನವಾಗಿ ನೀಡಿದ ಕುರಿತು ಹೇಳುವುದು. ೨ನೇ ತೈಲಪನ ಕಾಲದ ಕ್ರಿ.ಶ. ೯೯೦-೯೧ರ ಅವಧಿಯ ಹಳ್ಳೂರ ಶಾಸನವು ತೈಲಪನ ಸಾಮಂತ ಸಿಂಧ ವಂಶದವನಾಗಿದ್ದು(ಹೆಸರು ಅಳಿಸಿದೆ) ಅವನ ಬಿರುದು ಬಾವಲಿಗಳು ಕಂಡುಬರುತ್ತವೆ.

ಇದೇ ಭೈರನಮಟ್ಟಿ ಶಾಸನದ ಕೊನೆಯ ಭಾಗದಲ್ಲಿ ಚಾಲುಕ್ಯ ೧ನೇ ಜಗದೇಕಮಲ್ಲನ ಕ್ರಿ.ಶ. ೧೦೩೩ ಕಾಲವಿದ್ದ ಶಾಸನ ಸಾಲುಗಳು ಕಂಡುಬರುತ್ತಿದ್ದು ಅದರಲ್ಲಿ ಜಗದೇಕಮಲ್ಲನ ಮಹಾಸಾಮಂತನಾಗಿ ನಾಗತಿಯರಸನು ತೇಜೋರಾಶಿಪಂಡಿತನ ಕಾಲು ತೊಳೆದು ಅವನ ಕಾಲಕರ್ಚಿಗೆ, ದೇವರಿಗೆ(ಹೆಸರು ಅಳಿಸಿದೆ) ಪುರದ ಕೆರಿಯ ದಂಡದೋಷ ಮುಂತಾದವುಗಳನ್ನು ದಾನವಾಗಿ ನೀಡುತ್ತಾನೆ. ಇದರಲ್ಲಿ ತೇಜೋರಾಶಿ ಪಂಡಿತನನ್ನು ಸಿಂಧೇಶ್ವರದಾಚಾರ್ಯನೆಂದು ಕರೆಯಲಾಗಿದೆ. ಈ ಆಚಾರ್ಯನು ಸಿಂಧೇಶ್ವರ ದೇವಾಲಯವನ್ನು ಪುನಃ ಜೀರ್ಣೋದ್ಧಾರ ಮಾಡಿಸಿ ಲಿಂಗಪ್ರತಿಷ್ಠೆ ಮಾಡಿಸಿದನು. ಕ್ರಿ.ಶ. ೧೦೩೩-೩೪ ರ ಹಳ್ಳೂರದ ಶಾಸನವು ೧ನೇ ಜಗದೇಕನ ಕಾಲಕ್ಕೆ ಸೇರಿದ್ದು[೨೮] ರಾಜನು ಕೊಲ್ಲಿಪಾಕೆಯಿಂದ ರಾಜ್ಯವಾಳುತ್ತಿದ್ದಾಗ ಅವನ ಸಾಮಂತನಾಗಿ ನಾಗತಿಯರಸ ಶ್ರೀ ತೇಜೋರಾಶಿ ಪಂಡಿತರ ಕಾಲು ತೊಳೆದು ಕಾಲಕರ್ಚಿಗೆಂದು ಪುರದ ಕೇರಿಯ ಬಾಗಡಗೆ ದೇಸೆಯ...... ಬೇವರ್ಗ್ಗೆ ಎಂದಷ್ಟೇ ಹೇಳುವುದು. ಈ ಸಮಯದಲ್ಲಿ ತೇಜೋರಾಶಿ ಪಂಡಿತ ಹಳ್ಳೂರ ಹಾಗೂ ಶಿರೂರ ಪುರಗಳ ದೇವರುಗಳ ಆಚಾರ್ಯನಾಗಿ ಎರಡನ್ನು ನೋಡಿಕೊಂಡುದು ತಿಳಿದುಬರುವುದು. ಈ ಭೈರನಮಟ್ಟಿ ಹಾಗೂ ಹಳ್ಳೂರ ಶಾಸನಗಳ ಮೇಲಿಂದ ೧ನೇ ಜಗದೇಕನ ಮಹಾಸಾಮಂತ ೨ನೇ ನಾಗತಿಯರಸನಾಗಿದ್ದು (ನಾಗಾದಿತ್ಯರಸ) ಪೊಲಸಿಂಧ ಮತ್ತು ಪ್ರಭುಸೆವ್ವರು ೨ನೇ ತೈಲಪ ಮತ್ತು ೧ನೇ ಜಗದೇಕಮಲ್ಲನ ಕಾಲಗಳ ಮಧ್ಯದಲ್ಲಿ ಆಳ್ವಿಕೆ ಮಾಡಿರಬೇಕು. ಕ್ರಿ.ಶ. ೧೦೩೩ರ ಕಾಲಕ್ಕೆ ೨ನೇ ನಾಗಾದಿತ್ಯ ಬಾಗಡಗೆ

ನಾಡಿನ ಆಡಳಿತ ವಹಿಸಿಕೊಂಡಿರಬೇಕು.

ಕಲ್ಯಾಣ ಚಾಲುಕ್ಯ ೩ನೇ ಸೋಮೇಶ್ವರನ ಕಾಲದ ಹಳ್ಳೂರದ[17] ಶಾಸನವು ಇವನ ಮಂಡಳೇಶ್ವರ ದಂಡನಾಯಕ ತಿಕ್ಕಪಯ್ಯರಸ ಎರಡುನೂರು ನಾಡನ್ನು ಆಳುತ್ತಿದ್ದನೆಂದು ಹೇಳುತ್ತದೆ. ಆಗ ಇವನ ವಿಷಯಾಧಿಕಾರಿಯಾಗಿ ಪ್ರಧಾನ ದಂಡನಾಯಕ ಸೋಮರಸ ಬೆಸದಿಂದ ಬೆಳ್ವಲನಾಡ ಬಳಿಯ ಬಾಡ ಗ್ರಾಮ ಹಳ್ಳಹುರದ(ಹಳ್ಳೂರ) ಪೆರ್ಗ್ಗಡೆ ದೇವರಸ ಪ್ರಮುಖ ಕರಣರು ಸೇರಿ ಗ್ರಾಮದ ಪಡುವಣ (ಪಶ್ಚಿಮ)ದ ನಾಗೇಶ್ವರ ದೇವರಂಗಭೋಗಕ್ಕೆ ಎಂದಷ್ಟೇ ಶಾಸನ ತಿಳಿಸುವುದು. ಈ ಶಾಸನದ 'ನಾಗೇಶ್ವರ' ದೇವಾಲಯವನ್ನು ಬಹುಶಃ ಮೇಲಿನ ನಾಗತಿಯರಸನೆ ಕಟ್ಟಿಸಿರಬೇಕು. ಏಕೆಂದರೆ ಹಳ್ಳೂರದ ಮೇಲಿನ ಶಾಸನವು ತೇಜೋರಾಶಿ ಪಂಡಿತ, ಬಾಗಡಗೆ ದೇಸೆಯ ದೇವರೆಂದು ಹೇಳುವುದನ್ನು ಗಮನಿಸಿದಾಗ ಶಾಸನದ ಬಾಗಡಗೆ ದೇಸೆ ಹಳ್ಳೂರದ ಪಶ್ಚಿಮಭಾಗವೆಂದಾಗುತ್ತದೆ. ಹೀಗಾಗಿ ನಾಗೇಶ್ವರ ದೇವರನ್ನು ನಾಗತಿಯರಸನೆ ತನ್ನ ಹೆಸರಿನಲ್ಲಿ ಕಟ್ಟಿಸಿರಬೇಕೆಂದು ಸ್ಪಷ್ಟವಾಗುತ್ತದೆ.

ಸಿಂಧ ೨ ನೇ ನಾಗತಿಯರಸನು ಬಾಗಡಗೆ ಸಿಂಧ ವಂಶದ ಕೊನೆಯ ಸಾಮಂತರಸನೆಂದು ಕಾಣುತ್ತದೆ. ಏಕೆಂದರೆ, ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಕೊರಲಹಳ್ಳಿ ಗ್ರಾಮದ ಶಾಸನ ಕಲ್ಯಾಣಚಾಲುಕ್ಯ ದಶವರ್ಮ ಬಾಗಲದೇವಿಯರ ಮಗಳಾದ ಅಕ್ಕಾದೇವಿ ಕ್ರಿ.ಶ. ೧೦೫೦ ರ ಸುಮಾರಿಗೆ ಕಿಸುಕಾಡು ೭೦, ಬಾಗಡಗೆ ೭೦, ತೊಂಗಲೆನಾಡು, ಮಾಸವಾಡಿ ೧೪೦ ವಿಭಾಗಗಳನ್ನು ದುಷ್ಟನಿಗ್ರಹದಿಂದ ಆಳುತ್ತಿದ್ದಳೆಂದು ಹೇಳುತ್ತದೆ. ಜೊತೆಗೆ ಯರಂಬರಿಗೆ ಸಿಂಧರು ಬಾಗಡಗೆ ಪ್ರದೇಶದ ಮೇಲೆ ಚಾಲುಕ್ಯರಿಂದ ಅಧಿಕಾರ ಪಡೆದಂತೆ ಕಂಡುಬರುವುದು.

೪.೨.೫. ಯರಂಬರಿಗೆ ಸಿಂಧರು

ಸಿಂಧರ ಇನ್ನೊಂದು ಶಾಖೆ ಯರಂಬರಿಗೆ (ಈಗಿನ ಯಲಬುರ್ಗಿ ತಾ.) ಯಾಗಿದ್ದು ಅಲ್ಲಿಂದಲೇ ಕಲ್ಯಾಣ ಚಾಲುಕ್ಯರಸರ ಸಾಮಂತ, ಮಹಾಮಂಡಳೇಶ್ವರರಾಗಿ ಹಲವು ನಾಡುಗಳನ್ನು ಆಳಿದ್ದಾರೆ. ಈ ಅಧ್ಯಯನದಲ್ಲಿ ಯರಂಬರಿಗೆ ಸಿಂಧರು ಸಹ ಬಾಗಡಗೆ ಪ್ರದೇಶದ ಮೇಲೆ ಅಧಿಕಾರ ನಡೆಸಿರುವುದರಿಂದ. ಇವರ ಕುರಿತು ಹೆಚ್ಚಿಗೆ ಒತ್ತು ಕೊಟ್ಟು ಚರ್ಚಿಸುವ ಉದ್ದೇಶವಿದೆ. ಯರಂಬರಿಗೆ ಸಿಂಧರು ತಾವು ಆಡಳಿತ ನಡೆಸಿದ ವಿಭಾಗಗಳಲ್ಲಿ ಅನೇಕ ಶಾಸನಗಳು ವಿಸ್ತೃತ ಮಾಹಿತಿ ನೀಡುವಂತೆ ಇಂದಿನ ಬಾಗಲಕೋಟ ಜಿಲ್ಲೆಯಲ್ಲಿ ಬರುವ ಬಾದಾಮಿ, ಹುನಗುಂದ, ಬಾಗಲಕೋಟ, ಬೀಳಗಿ, ಮುಧೋಳ ಹಾಗೂ ಜಮಖಂಡಿ ತಾಲೂಕುಗಳಲ್ಲಿಯ ಅವರ ಶಾಸನಗಳು ಮಾಹಿತಿ ನೀಡುತ್ತವೆ. ಅಲ್ಲಿಯ ಶಾಸನಗಳಲ್ಲಿ ಯರಂಬರಿಗೆಯ ಸಿಂಧರಸರ ಹೆಸರುಗಳು, ಅವರು ಆಡಳಿತ ನಡೆಸಿರುವ ವಿಭಾಗಗಳ ಹಾಗೂ ಆಯಾ ಪ್ರದೇಶ ವ್ಯಾಪ್ತಿಯಲ್ಲಿ ಅವರು ಕಟ್ಟಿಸಿದ ದೇವಾಲಯ, ಅವುಗಳ ಪೂಜೆ, ಜೀರ್ಣೋದ್ಧಾರ,

ಅದರ ಆಚಾರ್ಯ ಪಂಡಿತರ, ಕೆರೆ, ಕಟ್ಟೆ, ಅನ್ನಸತ್ರ, ಅರವಂಟಿಗೆ ಇತ್ಯಾದಿಗಳು ನಡೆಯಲು ಭೂಮಿ-ಹಣದಾನಗಳನ್ನು ನೀಡಿ ತಮ್ಮ ಧರ್ಮವನ್ನು ಉಳಿಸಿ ಬೆಳೆಸಿದ್ದಾರೆ. ಇಂತಹ ಮಹಾಮಂಡಳೇಶ್ವರ ವಂಶಾವಳಿಯನ್ನು ದಿನಕರ ದೇಸಾಯಿಯವರು ಕೆಳಗಿನಂತೆ ಗುರುತಿಸಿದ್ದಾರೆ.[೬೧]

ವಂಶವೃಕ್ಷ

↓ ↓ ↓ ↓ ↓ ↓ ↓

೧ನೇ ಆಚುಗಿ ನಾಕ ಸಿಂಗ೧ ದಾಸ ದಾಮ ಚಾವುಂಡ ಚಾವ

(೧೦೫೦-೧೦೬೧)

↓

↓ ↓

ಬೊಮ್ಮ ಸಿಂಗ-೧

(೧೦೫೦-೬೧) (೧೦೭೭-೧೧೦೦)

↓

೨ನೇ ಆಚುಗಿ

(೧೧೦೦-೧೧೨೪)

ಪೆರ್ಮಾಡಿ-೧ ಚಾವುಂಡ

(೧೧೨೪-೧೧೪೭) ↓

↓ ↓ ↓ ↓

೩ಆಚುಗಿ ೨ಪೆರ್ಮಾಡಿ ಬಿಜ್ಜಳ ವಿಕ್ರಮ

(೧೧೬೨-೧೧೬೯)

ಈ ವಂಶಾವಳಿಯಲ್ಲಿ ದಿನಕರ ದೇಸಾಯಿಯವರು ಕೆಲವರ ಕುರಿತು ಕಾಲಮಾನವನ್ನೊಳಗೊಂಡು ಅದರ ಹೆಸರುಗಳನ್ನು ಗುರುತಿಸಿದ್ದಾರೆ. ಇದು ಪರಿಪೂರ್ಣವಾದ ವಂಶವಕ್ಷ ಅನಿಸುವುದಿಲ್ಲ. ಕ್ರಿ.ಶ. ೧೧೬೨ರ ಪಟ್ಟದಕಲ್ಲಿನ ೩ನೇ ತೈಲಪನ ಮಂಡಳೇಶ್ವರ ಚಾವುಂಡನ ಮನೆತನದ ವಂಶವೃಕ್ಷವನ್ನು ಈ ರೀತಿ ನೀಡುತ್ತದೆ.[೬೨]

ವಂಶವೃಕ್ಷ

೧ನೇ ಆಚುಗಿ ನಾಕರಸ ಸಿಂಗ೧ ದಾಸಭೂಪ ದಾಮಮಡಿಪ ೧ನೇ ಚಾವುಂಡ

↓

ಚಾವಭೂಪ

↓

ಬಮ್ಮರಸ ೨-ನೆಸಿಂಗ

↓

ಪೆಮ್ಮ-೧

↓

ಚಾವುಂಡ-೨ (ಹೆಂ. ದೇಮಲದೇವಿ)

↓

ಪೆರ್ಮಾಡಿ ೩ ಆಚುಗಿ ೩

ಈ ಶಾಸನದ ಪ್ರಕಾರ ಚಾವುಂಡನು ಮಹಾಮಂಡಳೇಶ್ವರನಾಗಿ ಕಿಸುಕಾಡು ೭೦, ಬಾಗಡಗೆ ೭೦, ಕೆಳವಾಡಿ ೩೦೦ ಜೊತೆಗೆ ಅನೇಕ ನಾಡುಗಳನ್ನು ಆಳುತ್ತಿದ್ದನು. ಮಡದಿ ದೇಮಲದೇವಿ ಮತ್ತು ೨ನೇ ಮಗ ೩ನೇ ಆಚುಗಿಯರು ಪಟ್ಟದ ಕಿಸುವೊಳಲನ್ನು ಕುಮಾರ ವೃತ್ತಿಯಿಂದ ಆಳುತ್ತಿದ್ದುದನ್ನು ಹೇಳುವುದು.

ಈ ವಂಶಾವಳಿಯಲ್ಲಿ ಬರುವ ೧ನೇ ಆಚುಗಿಯ ಹಿರಿಯ ಮಗ ಸಿಂಧವಂಶದ ಬರ್ಮ್ಮದೇವನನ್ನು ಕ್ರಿ.ಶ. ೧೦೮೫ರ ಅರಸಿಬಿದಿ ಶಾಸನ ಉಲ್ಲೇಖಿಸುವುದು.[೨೨] ಕ್ರಿ.ಶ. ೧೧೫೫ರ ಹೊಸೂರ ಶಾಸನ[೨೩] ಚಾಲುಕ್ಯ ೩ನೇ ತೈಲಪನ ಕಾಲಕ್ಕೆ ಸೇರಿದ್ದು ಸಿಂಧವಂಶದ ಮೇಲಿನ ಚಾವುಂಡ ಮತ್ತು ಲಕ್ಷ್ಮೀದೇವಿ(ಸಿಂಧಮುಕುಂದೆ)ಯರನ್ನು ಉಲ್ಲೇಖಿಸಿ ಈ ಲಕ್ಷ್ಮೀದೇವಿ ಸೂಡಿ, ಹೊಸವೂರ, ಕಡಕೆರೆ ಮಂಡಲದ ಕೆಲವು ಊರುಗಳನ್ನು ಚಾವುಂಡನಿಂದ ಪಡೆದು ಆಳುತ್ತಿದ್ದಳೆಂದು ತಿಳಿಸುತ್ತದೆ. ಈ ಮೇಲಿನ ಶಾಸನಗಳನ್ನು ತಿರುವಿಹಾಕಿದಾಗ ಚಾವುಂಡನಿಗೆ ಹಲವು ಜನ ಮಡದಿಯರಿರುವುದು ತಿಳಿದುಬರುವುದು.

ಅವನ ಪತ್ನಿಯರು

↓

ದೇಮಲೆ ಸಿಂಧಾದೇವಿ ಲಕ್ಷ್ಮೀದೇವಿ ಸಿರಿಯಾದೇವಿ ಏಚಲದೇವಿ

↓

ಮಕ್ಕಳು (ಕುಳಚುರಿಬಿಜ್ಜಳ)

↓

ಪೆರ್ಮ್ಮಾಡಿ ಆಚುಗಿ ವೀರಬಿಜ್ಜಳ ವೀರವಿಕ್ರಮ

ಈ ಚಾವುಂಡ ಮಂಡಳೇಶ್ವರನು ಯರಂಬರಿಗೆಯನ್ನು ತನ್ನ ರಾಜಧಾನಿ ಮಾಡಿಕೊಂಡು ಹಲವು ಆಡಳಿತ ವಿಭಾಗಗಳನ್ನು ಆಳುತ್ತಿದ್ದನೆಂದು ಅನೇಕ ಶಾಸನಗಳು ತಿಳಿಸುತ್ತವೆ.

ಬೇರೆ ಬೇರೆ ಕಾಲಘಟ್ಟದ ಹಲವಾರು ಶಾಸನಗಳು ಸಿಂಧ ಚಾವುಂಡನಕ್ಕಿಂತ ಮೊದಲು ಮತ್ತು ಚಾವುಂಡನ ಮಕ್ಕಳಾದ ವೀರಬಿಜ್ಜಳ, ವೀರ ವಿಕ್ರಮಾದಿತ್ಯರು ಆಡಳಿತ ನಡೆಸಿದ್ದನ್ನು ತಿಳಿಸುವವು. ೧ ನೇ ಆಚುಗಿ ಹಾಗೂ ಅವನ ಸಹೋದರರ ಕಾಲದ ಶಾಸನಗಳು ಮಾತ್ರ ಯರಂಬರಿಗೆಯ ಸಿಂಧರ ವಂಶಾವಳಿಯನ್ನು ಮಾತ್ರ ತಿಳಿಸುತ್ತವೆ. ೧ನೇ ಅಚುಗಿ ಯಾವ ಸಿಂಧಮನೆತನಕ್ಕೆ ಸೇರಿದವನೆಂಬುದು ತಿಳಿದುಬರುವುದಿಲ್ಲ. ಕ.ವಿ.ವಿ.ಶಾ.ಸಂ-೯ ರ ಸಂಪಾದಕರು ನೀಡಿದ ವಂಶಾವಳಿಯಲ್ಲಿ ಪೊಲಸಿಂಧ ಮತ್ತು ಬಿಜ್ಜಳದೇವಿಯರ ಮಕ್ಕಳು ಪ್ರಭುಸೆವ್ಯ ಮತ್ತು ಆಚುಗಿ ಅಗಿದ್ದರೆಂದು ಹೇಳಿ ಅಚುಗಿ ಮುಂದೆ ಪ್ರಶ್ನಾರ್ಥಕ ಚಿಹ್ನೆ ನೀಡಿದ್ದಾರೆ. ಈ ಪ್ರಭುಸೆವ್ಯನ ಮಗ ೨ನೇ ನಾಗಾದಿತ್ಯ ೧೦೩೩-೩೪ ರ ೧ ನೇ ಜಗದೇಕಮಲ್ಲನ ಹಳ್ಳೂರ ಶಾಸನದ ಕಾಲಕ್ಕೆ ಬಾಗಡಗೆ ನಾಡನ್ನು ಆಳುತ್ತಿದ್ದನು. ಮುಂದೆ ಕ್ರಿ.ಶ. ೧೦೫೦ ರ ಹೊತ್ತಿಗೆ ಚಾಲುಕ್ಯ ಅಕ್ಕಾದೇವಿ ಈ ಭಾಗದ ಮೇಲೆ ಅಧಿಕಾರಕ್ಕೆ ಬಂದಳು.

ದಿನಕರ ದೇಸಾಯಿಯವರು ಯರಂಬರಿಗೆಯ ೧ನೇ ಆಚುಗಿ ಕ್ರಿ.ಶ. ೧೦೫೦-೧೦೬೧ ರಲ್ಲಿ ಆಳುತ್ತಿದ್ದನೆಂದು ತಿಳಿಸುವರು. ಮೇಲಿನ ಶಾಸನಸಂಪುಟದ ಸಂಪಾದಕರ ವಂಶಾವಳಿಯಲ್ಲಿ ಪೊಲಸಿಂಧನ ಮಕ್ಕಳು ಪ್ರಭುಸೆವ್ಯ ಹಾಗೂ ಆಚುಗಿ ಎಂಬುದನ್ನು ಗಮನಿಸಬೇಕಾಗುತ್ತದೆ. ಈ ಆಚುಗಿ ಯಾವ ಶಾಸನದಲ್ಲಿ ಉಲ್ಲೇಖವಾಗಿದ್ದನೆಂಬುದನ್ನು ಅವರು ತಿಳಿಸುವುದಿಲ್ಲ. ಸ್ವಲ್ಪ ತೀಕ್ಷ್ಣವಾಗಿ ಗಮನಿಸಿದಾಗ ಆಚುಗಿಯೆಂಬ ಅರಸನ ಹೆಸರು ಬೇರೆ ಯಾವ ಸಿಂಧ ವಂಶಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಕೇವಲ ಬಾಗಡಗೆ ಸಿಂಧ, ವಂಶದಲ್ಲಿ ಒಬ್ಬ ಸಿಂಧ ಆಚುಗಿ ಯರಂಬರಿಗೆ ಸಿಂಧವಂಶದಲ್ಲಿ ಮೂರು ಜನ ಆಚುಗಿಗಳು ಆಗಿಹೋಗಿದ್ದಾರೆ. ಬಹುಶಃ ಬಾಗಡಗೆ ಸಿಂಧರ ಆಚುಗಿ ಯರಂಬರಿಗೆ ಸಿಂಧರ ವಂಶವನ್ನು ಮುನ್ನಡೆಸಿದವನಾಗಿರಬೇಕು. ಇದರ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಯರಂಬರಿಗೆ ಸಿಂಧರಲ್ಲಿ ೧ನೇ ಆಚುಗಿ ಮೊದಲನೆಯವನಾಗಿ ಅಧಿಕಾರ ನಡೆಸಿರುವನು. ಯರಂಬರಿಗೆ ಇವನ ರಾಜಧಾನಿಯಾಗಿತ್ತು. ತದನಂತರ ಸಿಂಗಣ, ಬರ್ಮ್ಮಭೂಪ, ೨ ನೇ ಆಚುಗಿ, ಪೆರ್ಮಾಡಿ, ಚಾವುಂಡರು ಕ್ರಮವಾಗಿ ಯರಂಬರಿಗೆಯೊಳಗೊಂಡು ಬಾಗಡಗೆ ಪ್ರದೇಶದ ಮೇಲೆ ಅಧಿಕಾರ ಹೊಂದಿದ್ದರು. ಕೊನೆಯಲ್ಲಿ ಬಾಗಡಗೆ ಪ್ರದೇಶ ಹಾಗೂ ಇತರ ಕೆಲವು ನಾಡುಗಳ ಮೇಲೆ

ಅಂದರೆ ಕಲ್ಯಾಣ ಚಾಲುಕ್ಯ ೩ನೇ ತೈಲಪ ಹಾಗೂ ಕಲಚುರಿ ಸಂಕಮರ ಕಾಲಾವಧಿಯಲ್ಲಿ ಚಾವುಂಡ ಸಿರಿಯಾದೇವಿಯರ ಮಕ್ಕಳಾದ ವೀರಬಿಜ್ಜಳ ಮತ್ತು ವೀರ ವಿಕ್ರಮಾದಿತ್ಯರು ಮಹಾಮಂಡಳೇಶ್ವರರಾಗಿ ಜೊತೆಯಾಗಿಯೇ ಆಡಳಿತ ನಡೆಸಿರುವರು. ಅದೇ ರೀತಿ ಚಾವುಂಡ ದೇಮಲದೇವಿಯರ ಮಕ್ಕಳಾದ ೩ನೇ ಪೆರ್ಮಾಡಿ, ೩ನೇ ಆಚುಗಿಯರು ಕೆಲವು ಪ್ರದೇಶದಲ್ಲಿ ಅಧಿಕಾರ ನಡೆಸಿರುವರು. ಆಚುಗಿ ಮತ್ತು ತಾಯಿ ದೇಮಲದೇವಿಯರು ಕೂಡಿ ಕುಮಾರವೃತ್ತಿಯಿಂದ ಪಟ್ಟದ ಕಿಸುವೊಳಲನ್ನು ಆಳುತ್ತಿದ್ದರು. ಇವರನ್ನು ಹೊರತುಪಡಿಸಿದರೆ ಮತ್ತಾವ ಸಿಂಧರಸರು ಇರುವ ಕುರಿತು ಹಾಗೂ ಅವರ ಆಡಳಿತದ ಕುರಿತು ಮುಂದಿನ ಶಾಸನಗಳು ಏನನ್ನೂ ಹೇಳುವುದಿಲ್ಲ.

೪.೨.೬. ಪ್ರತ್ಯಂಡಕದ ಸಿಂಧರು

ಬಾಗಡಗೆ, ಯರಂಬರಿಗೆ ಸಿಂಧರ ಹಾಗೆ ಕಲ್ಯಾಣ ಚಾಲುಕ್ಯರಸರ ಕಾಲದಲ್ಲಿ ಸಾಮಂತ, ಮಂಡಳೇಶ್ವರರಾಗಿ ಪ್ರತ್ಯಂಡಕದ ಸಿಂಧರು ಅಧಿಕಾರ ನಡೆಸಿರುವರು. ಪ್ರತ್ಯಂಡಕ ೪೦೦೦ ವಿಭಾಗವನ್ನು ತಿಡಗುಂದಿ ತಾಮ್ರಪಟ ಶಾಸನ ಸಿಂಧರ ಕುರಿತು ಹೇಳಿ, ಅವರ ವರ್ಣನೆ ಮಾಡುತ್ತದೆ.[೩೫] ಈ ಸಿಂಧವಂಶದಲ್ಲಿ ಭೀಮ, ಸಿಂಧರಾಜ, ಮಂಜರು ಆಗಿಹೋಗಿದ್ದನ್ನು ಇದು ತಿಳಿಸುವುದು. ಮಂಜನು ಚಾಲುಕ್ಯ ೬ ನೇ ವಿಕ್ರಮಾದಿತ್ಯನ ಮಂಡಳೇಶ್ವರನಾಗಿ ಆಳುತ್ತಿದ್ದನು. ಹಾಗೆಯೇ ಸಿಂಧರ ಪಾರಂಪರಿಕ ಭೋಗಾವತಿಪುರವರೇಶ್ವರ, ಫಣೀಂದ್ರ ವಂಶೋದ್ಭವ, ನಾಗಕುಲತಿಲಕ, ಸಿಂಧ ಕುಲಕಮಲ ಮಾರ್ತಾಂಡನೆಂಬ ಬಿರುದು ಬಾವಲಿಗಳನ್ನು ವರ್ಣಿಸಿದೆ. ಈ ಪ್ರತ್ಯಂಡಕವು ಪಳಿಯಂಡವಾಗಿದ್ದು ಅದು ಇಂದಿನ ಮಹಾರಾಷ್ಟ್ರದ ಸಾಂಗಲಿ, ಕೊಲ್ಹಾಪುರ ಜಿಲ್ಲೆಗಳನ್ನು ಒಳಗೊಂಡಿತ್ತು.[೩೬]

೪.೨.೭. ಬೆಳಗುತ್ತಿಯ ಸಿಂಧರು

ಬೆಳಗುತ್ತಿ ಸಿಂಧರು ಸಹ ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರರಾಗಿ ಆಡಳಿತ ನಡೆಸಿದ್ದಾರೆ. ಈ ವಂಶದ ವಂಶಾವಳಿಯನ್ನು ದಿನಕರ ದೇಸಾಯಿ ನೀಡಿದ್ದಾರೆ.[೩೭] ಇಂದಿನ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ಬೆಳಗುತ್ತಿ ಇವರ ರಾಜಧಾನಿಯಾಗಿತ್ತು. ಈ ವಂಶದಲ್ಲಿಯೂ ಸಹ ಹಲವಾರು ಜನರು ಅಧಿಕಾರ ನಡೆಸಿರುವರು.[೩೮]

೪.೨.೮. ಕುರುಗೋಡು ಸಿಂಧರು

ಬಳ್ಳಾರಿ ಜಿಲ್ಲೆಯಲ್ಲಿ ಬರುವ ಬಲ್ಲಕುಂದೆ ನಾಡಿನಲ್ಲಿ ಈ ಸಿಂಧರ ಅಧಿಕಾರ ಕಂಡುಬರುತ್ತದೆ. ನೆರೆಯ ಆಂಧ್ರಪ್ರದೇಶದಲ್ಲಿಯೂ ಇವರ ಅಧಿಕಾರ ವ್ಯಾಪಿಸಿತ್ತು. ಕುರುಗೋಡು ಸಿಂಧರು ಸಹ

ತಮ್ಮನ್ನು ನಾಗವಂಶೋದ್ಭವ, ಫಣೀಂದ್ರ ವಂಶೋದ್ಭವ, ಫಣಿವಂಶಜನೆಂದು ಇತ್ಯಾದಿಯಾಗಿ ಕರೆದುಕೊಂಡಿದ್ದಾರೆ. ಈ ವಂಶಕ್ಕೂ ಬಾಗಡಗೆಯ ಸಿಂಧರ ನಿಡದೊಳಸಿಂಧನೆ ಮೂಲ ಪುರುಷನಾಗಿದ್ದಾನೆ.

ಕ್ರಿ.ಶ. ೧೧೮೯ ರ ರಂಜೋಳದ ಶಾಸನ ಇವನಿಗೆ ನಾಲ್ಕು ಜನ ಮಕ್ಕಳೆಂದು ಹೇಳುತ್ತದೆ. ಅಲ್ಲಿ ಅವರ ಹೆಸರು ಹಾಗೂ ಅವರಾಳಿದ ನಾಡಿನ ಹೆಸರುಗಳನ್ನು ತಿಳಿಸುವುದು.[೫೯] ಶಾಸನದ ಪ್ರಕಾರ ಕುರುಗೋಡು ಸಿಂಧವಂಶ ಸ್ಥಾಪಕ ಬುಧಸೆವ್ಯನಾಗಿದ್ದಾನೆ ಆದರೆ, ಇವನ ಆಳ್ವಿಕೆಯ ಕುರಿತು ಕುರುಗೋಡು ಪ್ರದೇಶದಲ್ಲಿ ಸ್ಪಷ್ಟ ದಾಖಲೆಗಳಿಲ್ಲ. ಈ ಸಿಂಧರ ವಂಶಾವಳಿಯನ್ನು ರಂಜೋಳ ಶಾಸನ ಹಾಗೂ ಕುರುಗೋಡಿನ ಸುತ್ತಮುತ್ತಲಿನ ಶಾಸನಗಳ ಸಹಾಯದಿಂದ ವಂಶಾವಳಿಯನ್ನು ಈ ರೀತಿಯಾಗಿ ರಚಿಸಬಹುದಾಗಿದೆ.

ವಂಶವೃಕ್ಷ[೬೦]

(ಶಾಸನಗಳ ಆಧಾರ)

↓

ಬುಧಸೆವ್ಯ (ರಂಜೋಳ ಶಾಸನ ೧೧೮೯)

↓

ಅರಿಬಲ್ಲಿದಾಗ್ರ (ಕುಡತಿನಿ ಶಾಸನ ೯೮೭)

↓

೭೮ ವರ್ಷ ಅಸ್ಪಷ್ಟ

ವಿದಯಾದಿತ್ಯ (ಹಾವಿನಾಳ ಶಾಸನ ೧೦೪೫)

↓

೧ನೇ ಭೀಮ

ಚೊತರಸ (ಸಿರಗುಪ್ಪ ಶಾಸನ ೧೧೯೨)

೨ನೇ ಭೀಮ (ಕೊಳೂರ ಶಾಸನ ೧೧೪೨)

(ಹೆಂ. ಮಾಕಣಾಂಬಿಕೆ) (ಕೊಂಚಗೇರಿ ಶಾಸನ ಹಾಗೂ ೧೧೦೨ ರ ಸಿರಗುಪ್ಪ ಶಾಸನ)

ಸೋವಿದೇವ

ಬಿವರಸ ೧ನೇ ರಾಚಮಲ್ಲ ದೇವ ಫಣಿರಾಜ ಅಸ್ಪಷ್ಟ

೨ನೇ ಭೀಮ. ೧೧೩೧ ರ ಭೈಲೂರು ಶಾಸನ)

(ಹೆಂ. ಮಾಕಲದೇವಿ) (ಹೆಂ. ಸೋವಲದೇವಿ)

ಕೊಂಚಗೇರಿ ಶಾಸನ ೧೧೪೨ ಇರಂಗೋಳ (ಹೆಂ. ಬಲದೇವಿರಾಣಿ)

(೧೧೭೩ ಕುರುಗೋಡು ಶಾಸನ)

ಸೋಮ ಭೂಪಾಲ ೨ನೇ ರಾಚಮಲ್ಲ (ಹೆಂ. ಏಚಲದೇವಿ)

ಬಲ್ಲಕುಂದೆ ನಾಡಿನಲ್ಲಿ ಆಡಳಿತ. ಸುರುವಾಯಿಯ ಕ್ರಿ.ಶ. ೧೧೯೫ ರ ಶಾಸನ

ವೀರಕಲಿದೇವರಸ (ಹಂಪೆ ಶಾಸನ ೧೧೯೯)

(೪೫ ವರ್ಷ ಆಡಳಿತ. ಹೊಯ್ಸಳ ದಾಳಿಯಿಂದ ಕೊನೆ)

ಕುರುಗೋಡು ಸಿಂಧರ ವಂಶಾವಳಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದು ಮೇಲಿನ ವಂಶಾವಳಿಯು ಶಾಸನಗಳಿಂದ ರಚಿಸಿರುವುದಾಗಿದೆ. ಜೊತೆಗೆ ಅವರು ಅಧಿಕಾರ ಹೊಂದಿದ ಪ್ರದೇಶದ ಕುರಿತು ಶಾಸನಾಧಾರಗಳಿಂದ ನೋಡಲಾಗಿದೆ.

ಕುರುಗೋಡು ಸಿಂಧರ ಮೊದಲ ಮೂಲಪುರುಷ ನಿಡದೊಳಸಿಂಧನಾದರೆ, ಅವನ ನಾಲ್ಕು ಜನ ಮಕ್ಕಳಲ್ಲಿ ಒಬ್ಬನಾದ ಬುಧಸೆವ್ವನು ಕುರುಗೋಡು ವಂಶದ ಸ್ಥಾಪಕ. ಇವನ ನಂತರ ಕುಡತಿನಿಯ ಕ್ರಿ.ಶ. ೯೮೭ ರ ಶಾಸನದಲ್ಲಿ ಅರಿಬಲ್ಲಿದಾಗ್ರನ ಹೆಸರು ಕಾಣಸಿಗುತ್ತದೆ. ಅವನು ೨೦ ವರ್ಷ ಆಡಳಿತ ನಡೆಸಿದನು. ಶಾಸನ ಇವನನ್ನು ಫಣೀಂದ್ರ ಕುಲಸಂಭವ, ಅಹಿಂಧ್ರ ಮಕರಧ್ವಜ, ವ್ಯಾಘ್ರಮೃಗ ಲಾಂಛನನೆಂಬ ಬಿರುದು ಹೊಂದಿದ ಕುರಿತು ಹೇಳುವುದು.

ಅರಿಬಲ್ಲಿದಾಗ್ರನ ನಂತರ ಸುಮಾರು ೭೮ ವರ್ಷ ಕಾಲ ಕುರುಗೋಡು ಸಿಂಧವಂಶದಲ್ಲಿ ಅಸ್ಪಷ್ಟ ಚರಿತ್ರೆ ಕಂಡುಬರುವುದು. ನಂತರ ಚೋಕರಸ ಸಿಂಧ ವಂಶದಲ್ಲಿ ಬಂದಿದ್ದು ಕ್ರಿ.ಶ. ೧೦೯೨ ರ ಸಿರಗುಪ್ಪ ಶಾಸನ ಇವನನ್ನು ಹೆಸರಿಸುತ್ತದೆ. ತದನಂತರ ೧ನೇ ಭೀಮ ಕ್ರಿ.ಶ. ೧೧೪೨ ರ ಕೋಳೂರ ಶಾಸನದಲ್ಲಿ ಕೊಂಚಗೆರೆ ಶಾಸನದಲ್ಲಿ ಕಾಣಿಸಿಕೊಳ್ಳುವನು. ಅವನ ಮಡದಿಯಾದ ಮಾಕಣಾಂಬಿಕೆಯನ್ನು ಕ್ರಿ.ಶ. ೧೧೦೨ ರ ಸಿರಗುಪ್ಪ ಶಾಸನ ಉಲ್ಲೇಖಿಸುವುದು. ಇವರ ಉದರದಿಂದ ಸೋವಿದೇವ ಹುಟ್ಟಿದ. ತಂದೆಯ ನಂತರ ೧೦ ವರ್ಷಕಾಲ ಅಧಿಕಾರ ನಡೆಸಿದನು. ಇಲ್ಲಿಯವರೆಗೆ ಕುರುಗೋಡು ಸಿಂಧರು ಮನ್ನೆಯರ ಅಧಿಕಾರ ಹೊಂದಿ ಆಡಳಿತ ನಡೆಸಿದ್ದರು. ಸೋವಿದೇವನ ಕಾಲದಿಂದ ಮಹಾಮಂಡಳೇಶ್ವರರಾಗಿ ಮುನ್ನಡೆದರು.

ಸೋವಿದೇವನಿಗೆ ೫ ಜನ ಮಕ್ಕಳು. ಇವರಲ್ಲಿ ೨ನೇ ಭೀಮನ ಕುರಿತು ಕ್ರಿ.ಶ. ೧೧೩೧ ರ ಬೈಲೂರು ಶಾಸನ, ೨ನೇ ಮಗ ೧ನೇ ರಾಚಮಲ್ಲನನ್ನು ಕ್ರಿ.ಶ. ೧೧೪೨ ರ ಕೊಂಚಗೆರೆ ಶಾಸನಗಳು ಉಲ್ಲೇಖ ಮಾಡುವವು. ಈ ರಾಚಮಲ್ಲನು ಬಳ್ಳಾರಿ ನಾಡಿನಲ್ಲಿ ಆಡಳಿತ ನಿರ್ವಹಿಸಿದಂತೆ ತೋರುತ್ತದೆ. ರಾಚಮಲ್ಲನ ಮಡದಿಯರು ಮಾಕಲದೇವಿ ಮತ್ತು ಸೋವಲದೇವಿಗೆ ಇರುಂಗೋಳ ಹುಟ್ಟಿದ. ಇರುಂಗೋಳನ

ಕುರಿತು ಕ್ರಿ.ಶ. ೧೧೭೩ ರ ಕುರುಗೋಡು ಶಾಸನ ಉಲ್ಲೇಖನ ನೀಡುವುದು. ಇವನಿಗೆ ಬಲದೇವಿ ಮತ್ತು ಏಚಲದೇವಿ ಹೆಂಡಂದಿರು. ಬಲದೇವಿಯಿಂದ ಸೋಮಭೂಪಾಲ ಹುಟ್ಟಿದರೆ, ಏಚಲದೇವಿಯಿಂದ ೨ನೇ ರಾಚಮಲ್ಲ ಹುಟ್ಟಿದನು.

೨ ನೇ ರಾಚಮಲ್ಲ ಬಲ್ಲಕುಂದೆ ನಾಡಿನಲ್ಲಿ ಆಡಳಿತ ನಡೆಸಿರುವನು. ಓರುವಾಯಿಯ ಕ್ರಿಶ ೧೧೯೫ ರ ಶಾಸನ ಸಹ ಇವನು ಬಲ್ಲಕುಂದೆ ನಾಡಿನಲ್ಲಿ ಆಳುತ್ತಿದ್ದನೆಂದು ಹೇಳುವುಧು. ಇವನ ತರುವಾಯದಲ್ಲಿ ಮಗನಾದ ವೀರ ಕಲಿದೇವರಸ ೪೫ ವರ್ಷ ಅಧಿಕಾರ ನಡೆಸಿದನು. ಕ್ರಿ.ಶ. ೧೧೯೯ ರ ಶಾಸನ ಇವನನ್ನು ಉಲ್ಲೇಖಿಸುವುದು. ವೀರ ಕಲಿದೇವರಸನ ಕಾಲದಲ್ಲಿ ಕುರುಗೋಡು ಪ್ರದೇಶದ ಮೇಲೆ(ಬಲ್ಲಕುಂದೆ ನಾಡು) ಹೊಯ್ಸಳರಸರು ದಾಳಿ ಮಾಡಿ ಸೋಲಿಸಿದ್ದರಿಂದ ಇಲ್ಲಿಗೆ ಕುರುಗೋಡು ಸಿಂಧ ಮನೆತನ ಕೊನೆಗೊಂಡಿತು.

ಕುರುಗೋಡು ಸಿಂಧರು ಆಡಳಿತ ನಡೆಯಿಸಿದ ಪ್ರದೇಶ ನೊಳಂಬವಾಡಿ ೩೨,೦೦೦ ಆಗಿದ್ದು ಅದರ ಒಂದು ಉಪವಿಭಾಗ ಈ ಬಲ್ಲಕುಂದೆಯಾಗಿತ್ತು. ಇದರಲ್ಲಿ ದೊರವಡಿ ೭೦, ಇದರ ಉಪವಿಭಾಗ ಆರುಂಬಾಡ, ಸಬಾಲ ೭೦, ತೆಕ್ಕೆಕಲ್ಲು (ತೆಕ್ಕಲಕೋಟೆ) ೧೨, ನಲ್ವಡಿ ೧೨ಗಳು ಸೇರುತ್ತವೆ.[೧೧]

೪.೨.೯. ರಂಜೋಳದ ಸಿಂಧರು

ಹಲವು ಸಿಂಧ ಮನೆತನಗಳಂತೆ ರಂಜೋಳದ ಸಿಂಧರ ವಂಶವು ಪ್ರಮುಖವಾಗಿದೆ. ಇವರು ಸಹ ಕಲ್ಯಾಣ ಚಾಲುಕ್ಯ, ಕಲಚುರಿ ಹಾಗೂ ಯಾದವ ಕಾಕತೀಯರ, ಮಹಾಮಂಡಳೇಶ್ವರ ರಾಗಿದ್ದರು. ರಂಜೋಳದ(ರಂಜೇರ) ಸಿಂಧರು ಅಟ್ಟಳೆ ನಾಡಿನಲ್ಲಿ ರಂಜೇರುವನ್ನು ರಾಜಧಾನಿ ಮಾಡಿಕೊಂಡು ಅಧಿಕಾರ ನಡೆಸಿರುವರು. ಅಟ್ಟಳೆನಾಡು ಇಂದಿನ ಬೀದರ, ಗುಲಬರ್ಗಾ ಹಾಗೂ ಆಂಧ್ರದ ಮೇಡಕ್ ಜಿಲ್ಲೆಗಳಲ್ಲಿ ವ್ಯಾಪಿಸಿತ್ತು. ಕ್ರಿ.ಶ. ೧೧೯೯ ರ ರಂಜೋಳದ ಶಾಸನ ಈ ವಂಶದ ಕುರಿತು ತಿಳಿಸುವ ಮಹತ್ವದ ದಾಖಲೆಯಾಗಿದೆ.[೧೨] ಈ ಶಾಸನದ ನಿಡದೊಳು ಸಿಂಧನ ನಾಲ್ಕು ಜನ ಮಕ್ಕಳಲ್ಲಿ ೩ನೆಯವನಾದ ಜಗತಸೆವ್ವನು ರಂಜೋಳ ಸಿಂಧ ವಂಶದ ಸ್ಥಾಪಕ. ಇದನ್ನು ಅಣದೂರದ ಶಾಸನ ಸಹ ಉಲ್ಲೇಖಿಸುವುದು. ಈ ವಂಶಸ್ಥರು ಕ್ರಿ.ಶ. ೪೦೦ ರಿಂದ ೧೧ನೇ ಶತಮಾನದ ತನಕ ಅಧಿಕಾರ ನಿರ್ವಹಿಸಿದ್ದು, ಸುಮಾರು ೧೮ ಶಾಸನಗಳು ಇವರ ಅಳ್ವಿಕೆಯ ಕುರಿತು ಹೇಳುವವು.

ಕ್ರಿ.ಶ. ೧೧೯೯ ರ ರಂಜೋಳದ ಶಾಸನದ ಪ್ರಕಾರ ನಿಡದೊಳು ಸಿಂಧನು ಕದಂಬ ಮಯೂರವರ್ಮನ ಮಗಳಾದ ಲಕ್ಷ್ಮೀಮತಿಯನ್ನು ವಿವಾಹವಾಗಿ ಕದಂಬರ ಸಾಮಂತನಾಗಿ ರಾಜಕೀಯ

ಅಧಿಕಾರವನ್ನು ಆರಂಭಿಸಿದನು. ಇವನ ಮೂರನೇ ಮಗ ಜಗತಸೆವ್ಯನಾಗಿದ್ದು ಈತನು ಅಹಿಚ್ಛತ್ರದಿಂದ ಅಟ್ಟಳೆನಾಡಿಗೆ ಬಂದು ಆಡಳಿತ ನಡೆಸಿದ ಮೊದಲ ಸಿಂಧ ವಂಶಜನಾಗಿರುವನು. ಜಗತಸೆವ್ಯನ ನಂತರ ಕುನ್ನಲ ಬೊಪ್ಪಲ, ತೇಜದುರ್ಗತಿ, ಹರಕತಿ, ಅಲ್ಲಮರು ಅಧಿಕಾರ ಚಲಾಯಿಸಿದ್ದರ ಕುರಿತು ತಿಳಿದುಬರುವುದಿಲ್ಲ. ಅಲ್ಲಮನ ನಂತರ ಬಂದ ಬದ್ದೇಗಭೂಪನ ಕುರಿತು ಅಣಂದೂರು ಶಾಸನ ಹೇಳುವುದು. ಇವನಿಗೆ ಎರಡು ಜನ ಮಕ್ಕಳು. ಗೊಣ್ಣ ಮತ್ತು ಗೊಂಕರು.[೪೩]

ಗೊಂಕನು ಚಾಲುಕ್ಯ ೬ ನೇ ವಿಕ್ರಮಾದಿತ್ಯನ ಸಾಮಂತನಾಗಿ ಅಧಿಕಾರ ನಡೆಸಿದ್ದ. ತದನಂತರ ಹಜ್ಜರಸನು ಅಧಿಕಾರ ನಡೆಸಿದನು. ಈತನೇ ಕ್ರಿ.ಶ. ೧೦೯೯ ರ ರಂಜೋಳ ಶಾಸನದ ಕರ್ತೃವಾಗಿದ್ದಾನೆ. ಹಜ್ಜರಸನ ನಂತರ ಹೆಮ್ಮೆ ಪೆರ್ಮ್ಮಾಡಿದೇವನು ೬ ನೇ ವಿಕ್ರಮಾದಿತ್ಯ ಹಾಗೂ ೩ ನೇ ಸೋಮೇಶ್ವರರ ಕಾಲದಲ್ಲಿ ಅವರ ಸಾಮಂತರಾಗಿ ಅಧಿಕಾರ ನಡೆಸಿರುವರು. ತದನಂತರ ರಂಜೋಳದ ಮಂಡಳೇಶ್ವರನಾಗಿ ಭೈರವನು ಅಧಿಕಾರ ನಡೆಸಿದ. ಇದನ್ನು ಕಾಲಮಾನವಿಲ್ಲದ ರಂಜೋಳ ಶಾಸನ ತಿಳಿಸುವುದು. ಇವನಿಗೆ ೨ನೇ ಹೆಮ್ಮಾಡಿಯೆಂಬ ಮಗನಿದ್ದ. ಇವನಿಗೆ ಬೀಚದೇವ ಮತ್ತು ಬರ್ಮ್ಮದೇವರೆಂಬ ಮಕ್ಕಳು. ಇವರು ಕಲಚುರಿ ರಾಯಮುರಾರಿ ಸೋವಿದೇವನ ಮಂಡಳೇಶ್ವರರಾಗಿ ಅಧಿಕಾರ ಹೊಂದಿದ್ದರು. ಇವರಿಬ್ಬರ ನಂತರ ಆದ್ಯರಸ ಅಧಿಕಾರ ನಡೆಸಿದ್ದು ಕ್ರಿ.ಶ. ೧೨೯೦ ರ ರಂಜೋಳದ ಶಾಸನವು ತಿಳಿಸುವುದು. ಇವನ ನಂತರ ನೂರ್ಮ್ಮಡಿ ಗಂಡಭೈರವ ಅಧಿಕಾರಕ್ಕೆ ಬಂದು ಕಾಕತೀಯ ರುದ್ರಮ್ಮದೇವಿಗೆ ನಿಷ್ಠೆಯನ್ನು ತೋರಿಸಿದನು. ಇದನ್ನು ಬೀದರ ಶಾಸನ ಹೇಳುವುದು. ಇವನ ಜೊತೆಗೆ ಇದೇ ಶಾಸನದಲ್ಲಿ ದುಗ್ಗರಸ, ಗೊಂಕರಸ, ಹಿರಿಯ ಭೈರವರ ಹೆಸರುಗಳು ಕಾಣಿಸಿಕೊಳ್ಳುತ್ತವೆ. ಈ ಹಿರಿಯ ಭೈರವನೆ ರಂಜೋಳದ ಸಿಂಧ ವಂಶದ ಕೊನೆಯ ಅಧಿಕಾರಸ್ಥನಾಗಿದ್ದಾನೆ.[೪೪]

ಹೀಗೆ ಬೀದರ, ಗುಲಬರ್ಗಾ, ಆಂಧ್ರದ ಮೇಡಕ್ ಜಿಲ್ಲೆಗಳಲ್ಲಿ ಆಟ್ಟಳೆನಾಡು ವ್ಯಾಪಿಸಿದ್ದು, ಅದರಲ್ಲಿ ಇವರ ಚರಿತ್ರೆ ಬಿಂಬಿಸಲು ಒಟ್ಟು ೧೮ ಶಾಸನಗಳು ಅಟ್ಟಳೆನಾಡಿನ ರಂಜೋಳದ ಸಿಂಧರ ಕುರಿತು ಮಾಹಿತಿ ನೀಡುತ್ತವೆ. ಉಳಿದ ಸಿಂಧರಂತೆ ಇವರು ಸಹ ತಾವು ಭೋಗಾವತಿ ಪುರವೇಶ್ವರ, ಅಹಿತ್ಛತ್ರಪುರರಾಮರಕ್ಷೆ, ಪದ್ಮಾವತಿಲಬ್ಧವರಪ್ರಸಾದ, ಪಾತಾಳ ಚಕ್ರವರ್ತಿ (ನಾಗಲೋಕ) ಹಾಗೂ ಉತ್ತರೇಶ್ವರ ಪಾದ ಕಮಳಬ್ರಿಂಗರೆಂದು ಕರೆದುಕೊಂಡಿದ್ದಾರೆ.[೪೫]

೪.೨.೧೦. ಮುಕ್ಕುಂದೆ-ಸಾಲಗುಂದೆ ಸಿಂಧರು, ನಿಟ್ಟರವೆ ಸಿಂಧರು

ಮೇಲಿನ ಸಿಂಧ ಮನೆತನಗಳ ಜೊತೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಮತ್ತೊಂದು ಸಿಂಧ ಮನೆತನ ಕಂಡುಬರುವುದು. ಉಳಿದವರಂತೆ ಇವರು ತಮ್ಮ ನಾಡಿನ ಮತ್ತು ಸ್ಥಳದ ಹೆಸರು

ಹೇಳಿಕೊಂಡಿಲ್ಲ. ಆದರೆ ಸಿಂಧರ ಲಾಂಛನ, ಬಿರುದು ಧ್ವಜನಾಮಗಳು ಒಂದೇಯಾಗಿವೆ. ಇವರು ನಾಗೇಂದ್ರ–ನಾಗಿಣಿವಂಶಕ್ಕೆ ಸೇರಿದ್ದು ಭೋಗಾವತಿ ಪುರವರಾಧೀಶ್ವರ ಶಾರ್ದೂಲ ಲಾಂಛನ, ಸಿಂಧನಾರಾಯಣ, ನಾಗರಾಜಧ್ವಜ, ರೂಪಮಕರಧ್ವಜ ಮೃಗಲಾಂಛನ, ಫಣೀಂದ್ರರುದ್ರ ಧ್ವಜರೆಂದು ಕರೆದುಕೊಂಡಿದ್ದಾರೆ.[೪೬]

ಸಿಂಧರ ವಂಶಜರಾದ ಇವರು ಉಳಿದ ಸಿಂಧರಂತೆ ಅಧಿಕಾರ ನಡೆಯಿಸಿದ್ದಾರೆ. ಇವರ ಆಳ್ವಿಕೆಯ ಪ್ರದೇಶ ಇಂದಿನ ರಾಯಚೂರು ಜಿಲ್ಲೆಯ, ಸಿಂಧನೂರ ತಾಲೂಕಿಗೆ ಸೇರಿದ ಪ್ರದೇಶ ಎಡದೊರೆ ೨೦೦೦ ದ ಉಪವಿಭಾಗ ನಿಟ್ಟರವೇ ಇವರ ಆಡಳಿತ ಪ್ರದೇಶ. ಇದರ ರಾಜಧಾನಿ ಕೇಂದ್ರ ಅಗ್ರಹಾರ ಮುಕ್ಕುಂದೆ ಮತ್ತು ಸಾಲಗುಂದೆಗಳು. ಇವೆರಡು ಅಂದಿನ ಪ್ರಸಿದ್ಧ ಅಗ್ರಹಾರ ಕೇಂದ್ರಗಳು ನಿಟ್ಟರವೆ ೭೦ ರ ಕೇಂದ್ರ ಮುಖ್ಯ ಕೇಂದ್ರ ಮುಕ್ಕುಂದೆಯಾಗಿದ್ದು ಅಲ್ಲಿಂದಲೇ ಅಧಿಕಾರ ನಡೆಯಿಸಿದ್ದಾರೆ. ತಮ್ಮ ಆಡಳಿತದ ಕೇಂದ್ರ ಸ್ಥಳದ ಕುರಿತು, ಎಲ್ಲಿಂದ ಬಂದವರೆಂದು ಹೇಳಿಕೊಂಡಿಲ್ಲ. ಈ ಸಿಂಧರ ಕುರಿತು ರವಡೆಕುಂದೆ, ಸಾಲಗುಂದೆ, ಮುಕ್ಕುಂದೆ, ದೇವರಗುಡಿ, ಜಾಲಿಹಾಳ ಗ್ರಾಮಗಳಲ್ಲಿ ಸುಮಾರು ೧೦ ಶಾಸನಗಳು ವಿವರಣೆ ನೀಡುವವು.

ಮುಕ್ಕುಂದೆ ಸಿಂಧರ ಮೂಲ ಮತ್ತು ಮೊದಲರಸ ಗೊನರಸನಾಗಿರುವನು. ೧ನೇ ಗೊನರಸನಾಗಿ ಕ್ರಿ.ಶ. ೧೦೯೭ ರ ಮುಕ್ಕುಂದೆ ಶಾಸನದ ವಂಶಾವಳಿಯಲ್ಲಿ ಕಾಣಿಸಿಕೊಂಡಿದ್ದಾನೆ.[೪೭] ಇವನ ಮಗ ಕಣ್ಣರಸನಾಗಿದ್ದು ಕ್ರಿ.ಶ. ೧೦೨೧ ರ ಮತ್ತೊಂದು ಮುಕ್ಕುಂದೆ ಶಾಸನದಲ್ಲಿ ಕಾಣಿಸಿಕೊಂಡಿರುವನು.[೪೮] ಶಾಸನ ಕಣ್ಣರಸನ ಕುರಿತು ಹೇಳಿ, ಮುಕ್ಕುಂದೆಯಲ್ಲಿ ದೀಪ ಸ್ತಂಭ ವನ್ನು ಕಟ್ಟಿಸಿದನೆಂದಿದೆ. ೧ ನೇ ಕಣ್ಣರಸನ ನಂತರ ಅವನ ಮಗ ೨ ನೇ ಗೊನರಸನು ಅಧಿಕಾರಕ್ಕೆ ಬಂದಿದ್ದು ಕ್ರಿ.ಶ. ೧೦೪೯ ರ ಮುಕ್ಕುಂದೆ ಶಾಸನ ತಿಳಿಸುವುದು.[೪೯] ರಾವಡ ತುಂದೆಯ ಕ್ರಿ.ಶ. ೧೦೫೩ ರ ಶಾಸನವು ೨ನೇ ಕಣ್ಣರಸನ ಕುರಿತು ಉಲ್ಲೇಖ ಮಾಡುತ್ತಾ ೧ ನೇ ಸೋಮೇಶ್ವರ ಸಾಮಂತನಾಗಿ ಆಳುತ್ತಿದ್ದನೆಂದು ತಿಳಿಸುವುದು.[೫೦]

ವಂಶವೃಕ್ಷ

(ಕ್ರಿ.ಶ. ೧೦೯೭ರ ಮುಕ್ಕುಂದೆ ಶಾಸನದ ಪ್ರಕಾರ)

↓

ನಾಗೇಂದ್ರ-ನಾಗಿಣಿ

↓

ಗೊನ

↓

ಕಣ್ಣರಸ (ಹೆ. ಕಾವಬ್ಬರಸಿ)

↓

ಬಾಚಿಗ (ಬಾಚರಸ)

ವಂಶವೃಕ್ಷ

(ಕ್ರಿ.ಶ. ೧೦೮೮ ರ ಮುಕ್ಕುಂದೆ ಶಾಸನ)

↓

ನಾಗೇಂದ್ರ-ನಾಗಿಣಿ

↓

ಗೊನಭೂಪ

↓

ಕಣ್ಣರಸ–ಕಾವಬ್ಬರಸಿ (ಕಾವಲದೇವಿ)

↓

ಗೊನ ಬಾಚಭೂಪ

ಇವೆರಡು ಶಾಸನಗಳು ಒಂದೇ ರೀತಿಯಾದ ವಂಶಾವಳಿ ನೀಡುತ್ತವೆಯಾದರೂ ಕಣ್ಣರಸನ ಹಿರಿಯ ಮಗ ಗೊನನ್ನು ಒಂದು ಶಾಸನ ತಿಳಿಸದೆ ಇದ್ದರೆ, ಮತ್ತೊಂದು ಶಾಸನ ಗೊನ ಹೆಸರನ್ನು ಉಲ್ಲೇಖಿಸುವುದು. ಕ.ವಿ.ವಿ.ಶಾ.ಸಂಪುಟ-೯, ರಾಯಚೂರು ಜಿಲ್ಲೆಯ ಸಂಪುಟದ ಸಂಪಾದಕರು ಮತ್ತೊಂದು ರೀತಿಯ ವಂಶಾವಳಿ ಕೊಡುತ್ತಾರೆ.

ವಂಶವೃಕ್ಷ

೧ನೇ ಕಣ್ಣರಸ

↓

೧ನೇ ಗೊಣರನ

↓

೨ನೇ ನೆಲಗುತ್ತಿನ ಕಣ್ಣರಸ (ಹೆಂ. ಕಾಲಬ್ಬರಸಿ)

↓ ೨ನೇ ಗೊನರಸ

↓ ೧ನೇ ಬಾಬಭೂಪ

↓

೩ನೇ ಕಣ್ಣರಸ (ಹೆಂ. ಯಗಲದೇವಿ)

↓

೨ನೇ ಬಾಚಿದೇವ

ವಂಶಾವಳಿ ನೋಡಿದ ನಂತರ ೨ನೇ ಕರ್ಣನಿಗೆ ಕಾವಬ್ಬರಸಿ ಮಡದಿಯಾಗಿದ್ದು ಇವರಿಂದ ೨೩ ಗೊನರಸ ಹಾಗೂ ಬಾಚಭೂಪರು ಹುಟ್ಟಿದರು. ೨ ನೇ ಗೊನರಸನ ಕುರಿತು ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಕ್ರಿ.ಶ. ೧೦೮೮ ರ ಶಾಸನದ ವಂಶಾವಳಿ ೨ ನೇ ಗೊನರಸ ಹಾಗೂ ಬಾಚರಸರು ಸಹೋದರರೆಂದು ಹೇಳುವುದು.[೫೧] ಗೊನನ ಸಹೋದರ ಬಾಚಭೂಪನು ಹೆಚ್ಚು ಪ್ರಖ್ಯಾತಿ ಹೊಂದಿದ್ದನು. ಏಕೆಂದರೆ ಇವನ ಕಾಲದಲ್ಲಿ ೬ ಶಾಸನಗಳು ಹಾಕಿಸಲ್ಪಟ್ಟಿದ್ದು ಬಾಚನ ಮಹಿಮೆ ಹೊಗಳುತ್ತವೆ.

ಕ್ರಿ.ಶ. ೧೦೬೩ ಹಾಗೂ ಕ್ರಿ.ಶ. ೧೦೮೫ ರ ನಾಲಗುಂದೆ ಶಾಸನಗಳು ಬಾಚನು ಕಲ್ಯಾಣ ಚಾಲುಕ್ಯರಸ ೬ ನೇ ವಿಕ್ರಮಾದಿತ್ಯನ ಕಾಲದಲ್ಲಿ ಎಡದೊರೆ ೨೦೦೦ ದ ಉಪವಿಭಾಗ ನಿಟ್ಟರವೆ ೭೦ ನ್ನು ಆಳುತ್ತಿದ್ದನೆಂದು ಹೇಳುತ್ತವೆ.[೫೨] ಕ್ರಿ.ಶ. ೧೦೮೮ ರ ಮುಕ್ಕುಂದೆ ಶಾಸನವು ೬ ವಿಕ್ರಮಾದಿತ್ಯನ ಮಂಡಳೇಶ್ವರನಾಗಿ ಅಗ್ರಹಾರ ಮುಕ್ಕುಂದೆಯಲ್ಲಿ ಆಳುತ್ತಿದ್ದನೆಂದು ಹೇಳುವುದು.[೫೩] ಇದೇ ಗ್ರಾಮದ ಕ್ರಿ.ಶ. ೧೦೯೭ ರ ಶಾಸನ ಮಹಾಮಂಡಳೇಶ್ವರನಾಗಿದ್ದ ಬಾಚರಸ ಅಗ್ರಹಾರ ಮುಕ್ಕುಂದೆಯಲ್ಲಿ ತನ್ನ ಹೆಸರಿನ ದೇವಾಲಯ ಕಟ್ಟಿಸಿ ದಾನ ನೀಡಿದನೆಂದು ಹೇಳುವುದು.[೫೪] ಇದೇ ಗ್ರಾಮದ ಕ್ರಿ.ಶ. ೧೧೩೪ ರ ಶಾಸನ[೫೫] ಇವನು ಕಣ್ಣರಸದ ಮಗನಾಗಿದ್ದು ಚಾಲುಕ್ಯ ೩ನೇ ಸೋಮೇಶ್ವರನ ಸಾಮಂತನಾಗಿ ಅಧಿಕಾರ ನಡೆಸುತ್ತಿದ್ದನೆಂದು ಹೇಳಿ ಬಾಚರಸನನ್ನು 'ಕುರುವಡದರಾಮ'ನೆಂದು ಸಂಬೋಧಿಸುತ್ತದೆ. ಹಾಗೆಯೇ ಇನ್ನೊಂದು ಶಾಸನ ಕ್ರಿ.ಶ. ೧೧೩೪ ರ ಕಾಲದ್ದಾಗಿದ್ದು ಬಾಚರಸನು ಮಹಾಮಂಡಳೇಶ್ವರನಾಗಿದ್ದನೆಂದು ಹೇಳುವುದು.[೫೬] ಕ್ರಿ.ಶ. ೧೧೫೯ ರ ಜಾಲಿಹಾಳ ಶಾಸನ ೬ನೇ ವಿಕ್ರಮಾದಿತ್ಯನ ಮಂಡಳೇಶ್ವರನಾಗಿ ಹೆಮ್ಮಾಡಿ ಇರುವಾಗ, ಹೆಮ್ಮಾಡಿಯ ಕೈಕೆಳಗೆ ಬಾಚರಸನು ನಿಟ್ಟರವೆ ೭೦ ನ್ನು ಆಳುತ್ತಿದ್ದನೆಂದು ಹೇಳುವುದು. ಇಲ್ಲಿ ಮನ್ನೆಯ ಕುರುವರ ಬಾಚರಸನೆಂದು ಸಂಬೋಧಿಸುವುದು.[೫೭]

ಇವರಲ್ಲದೆ ರಾಯಚೂರು ಜಿಲ್ಲೆಯಲ್ಲಿ ಅಂದು ಸಿಂಧ ಕುಲದ ಹೆಸರಿನಲ್ಲಿ ಸಿಂಧರ ಚಾಣಕ್ಯನೆಂದು ಪ್ರಸಿದ್ಧನಾಗಿದ್ದ ಹರಿಹರದೇವನನ್ನು ಕ್ರಿ.ಶ. ೧೧೦೧, ೧೧೦೮ ಕಾಲಮಾನವುಳ್ಳ ಶಾಸನಗಳು ಉಲ್ಲೇಖಿಸುವವು.[೫೮] ಇವನು ಯಾವ ಸಿಂಧ ವಂಶಸ್ಥನೆಂಬುದು ತಿಳಿದುಬರುವುದಿಲ್ಲ. ಈ ಹರಿಹರ ದೇವನು ದೇವರ ಗುಡಿಯಲ್ಲಿ ಚಿಕ್ಕಯ್ಯ ಪಂಡಿತನಿಗೆ ನಾಲ್ಕು ಮತ್ತರು ಭೂಮಿ ಯನ್ನು ನೀಡಿದನೆಂದಿದೆ. ಇವನ ಜೊತೆಗೆ ಕುರುಗೋಡಿನ ಸಿಂಧ ರಾಚಮಲ್ಲ ಮಂಡಳೇಶ್ವರನಾಗಿ ಬಲ್ಲಕುಂದೆ ೩೦೦ ನ್ನು ಆಳುತ್ತಿದ್ದನೆಂದು ತಿಳಿಸುವುದು.

ಹೀಗೆ ಬಾಗಡಗೆ ಸಿಂಧರು ತಮ್ಮ ಪ್ರದೇಶದಲ್ಲಿ ಸಾಮಂತ, ಮಹಾಮಂಡಳೇಶ್ವರರಾಗಿ ಆಡಳಿತ ನಡೆಸಿದ್ದು, ಅವರಂತೆ ಇದೇ ಸಿಂಧ ವಂಶಕ್ಕೆ ಸೇರಿರುವ ಇತರ ಸಿಂಧರು ಸಹ ಕನ್ನಡ ನಾಡಿನಲ್ಲಷ್ಟೆಯಲ್ಲದೆ ಆಂಧ್ರ, ಮಹಾರಾಷ್ಟ್ರ ರಾಜ್ಯಗಳ ಪ್ರದೇಶದಲ್ಲಿಯೂ ಅಧಿಕಾರವನ್ನು ವ್ಯಾಪಿಸಿಕೊಂಡಿದ್ದರು. ದೊಡ್ಡ,

ಚಿಕ್ಕ, ಮಧ್ಯಮ ಯಾವುದೇ ಇರಲಿ ಅಂತಹ ಆಡಳಿತದ ವಿಭಾಗಗಳನ್ನು ಕದಂಬರ ಕಾಲದಿಂದ ಯಾದವ, ಕಾಕತೀಯರ ಕಾಲದವರೆಗೆ ಆಳಿದ್ದಾರೆ. ಮನ್ನೆಯರಾಗಿ, ಸಾಮಂತರಾಗಿ, ನಂತರ ಮಹಾಮಂಡಳೇಶ್ವರರಾಗಿ ಚಕ್ರವರ್ತಿಗಳ ಅಧೀನರಾಗಿ ಅಧಿಕಾರ ನಡೆಸಿರುವರು. ಕೇವಲ ಸಿಂಧ ವಂಶಸ್ಥರು ರಾಜಕೀಯ ಅಧಿಕಾರವನ್ನಷ್ಟೇ ಮಾಡಿರಲಿಲ್ಲ. ತಮ್ಮ ಪ್ರದೇಶದಲ್ಲಿ ಸ್ವಂತ ಹೆಸರಿನ, ಇಲ್ಲವೇ ಬೇರೆಯವರು ಕಟ್ಟಿಸಿದ ವಿವಿಧ ಧರ್ಮದ ದೇವಾಲಯಗಳಿಗೆ ಹೇರಳವಾಗಿ ಭೂಮಿದಾನ, ಹಣದಾನವನ್ನು ಕೈಕೊಂಡು ಧರ್ಮವಂತರಾಗಿ ಬಾಳಿದ್ದಾರೆ. ಒಟ್ಟಿನಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಸಿಂಧ ಮನೆತನಗಳ ಪಾತ್ರ ಬಹಳ ಹಿರಿದಾಗಿ ಕಾಣಿಸಿಕೊಳ್ಳುತ್ತದೆ.

೪.೨.೧೧. ಪ್ರಭುಗಳು ಅಥವಾ ಪ್ರಭುಗಾವುಂಡರು, ಮಾರಸಿಂಘ, ಲಕ್ಷ್ಮೀದೇವಿ ಇತ್ಯಾದಿ

ಸಿಂಧ ಸಾಮಂತ ಮಂಡಳೇಶ್ವರರಂತೆ ಬಾಗಡಗೆ-೭೦ ವಿಭಾಗದಲ್ಲಿ, ಅಗ್ರಹಾರ ಪಟ್ಟಣಗಳಲ್ಲಿ (ಪುರ) ಪ್ರಭುಗಳಾಗಿ ಕೆಲವರು ಅಧಿಕಾರ ನಡೆಸಿರುವರು. ಶಿರೂರ ಹಾಗೂ ಇತರ ಶಾಸನಗಳಲ್ಲಿ ಉಲ್ಲೇಖಗೊಂಡಿರುವರು. ಈ ಪ್ರಭು ಅಥವಾ ಪ್ರಭುಗಾವುಂಡರು ಗ್ರಾಮದ ಗಾವುಂಡ (ಗೌಡ) ರಿಗಿಂತ ಭಿನ್ನರಾಗಿದ್ದಾರೆ. ಪ್ರಭುವೆಂಬುದು ಗಾವುಂಡವೆಂಬುದಕ್ಕಿಂತ ಹೆಚ್ಚಿನ ಹುದ್ದೆ ಎಂಬುದನ್ನು ತೋರಿಸುತ್ತದೆ. ಇವರು ಮಹಾಸಾಮಂತರ ಕೆಳಗಿನ ಅಧಿಕಾರಿಗಳು. ಪ್ರಭುವರ್ಗಕ್ಕೆ ಸೇರಿದ ಇವರು ಸಾಮಂತರಸರಿಂದ ನಿಯುಕ್ತಗೊಂಡು ಅವರು ಕೊಡಮಾಡಿದ ಅಗ್ರಹಾರ, ಪುರ, ಪಟ್ಟಣ, ಗ್ರಾಮಗಳ ಮೇಲೆ ಅಧಿಕಾರ ನಡೆಸಿರುವರು. ಪ್ರತಿಯೊಂದು ಗ್ರಾಮದಲ್ಲಿ ಒಬ್ಬ ಅಥವಾ ಹೆಚ್ಚು ಗಾವುಂಡರಿರುತ್ತಿದ್ದರು. ಇವರ ಮೇಲೆ ಅನೇಕ ಗ್ರಾಮಗಳಿಗೆ ಪ್ರಭುಗಾವುಂಡರು ಇರುತ್ತಿದ್ದರು.[೫೯] ಇಂತಹ ಪ್ರಭುಗಳಲ್ಲಿ ಶಿರೂರ ಗ್ರಾಮದ ಕೆಲವು ಪ್ರಭುಗಳು ಶಾಸನದಲ್ಲಿ ಕಾಣಿಸಿಕೊಳ್ಳುತ್ತಾರೆ.

ಕ್ರಿ.ಶ. ೧೧೪೯ ರ ಶಿರೂರ ಶಾಸನವು "ಕೊಲ್ಹಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪ ಜೀವಿಯಾದ" ಮಾರಸಿಂಘನನ್ನು 'ಪ್ರಭು'ವೆಂದು ಸಂಬೋಧಿಸಿ ಅವನ ವಂಶಾವಳಿ ನೀಡುತ್ತದೆ.[೬೦]

ಮಾರಸಿಂಘಪ್ರಭುವಿನ ವಂಶಾವಳಿ

↓

ಪ್ರಭುರಾಜವರ್ಮ

↓

ಮೂಕಣ

↓

ಗೌರಬ್ಬೆ

↓

ಮಾರಸಿಂಘ

ಈ ಮಾರಸಿಂಘನು ಪೊನ್ನಗುಂದ ಹುನಗುಂದ ೩೦ರ ಮಧ್ಯವರ್ತಿ ಸ್ಥಳವಾದ ಶಿರೂರ ಗ್ರಾಮದಲ್ಲಿ ಪ್ರಭುವಾಗಿ ಅಧಿಕಾರ ನಡೆಸುತ್ತಿದ್ದನು. ಆಗ ಶ್ರೀಪುರದಲ್ಲಿ ೨೦೦ ನಿವರ್ತನ ಭೂಮಿಯನ್ನು ಸಿದ್ಧೇಶ್ವರ ದೇವರ ಧೂಪ, ದೀಪ, ಗಂಧ, ನೈವೇದ್ಯ ಇತ್ಯಾದಿಗಳಿಗೆಂದು, ವಿದ್ಯಾರ್ಥಿಗಳ ಅನ್ನಸತ್ರ, ದೇವರ ಜೀರ್ಣೋದ್ಧಾರಗಳಿಗೆಂದು ದಾನ ನೀಡಿದನು.

ಇದೇ ಮಾರಸಿಂಘ ಕ್ರಿ.ಶ. ೧೦೬೨ ರ ವೇಳೆಯಲ್ಲಿ ಅದೇ ಸಿದ್ಧೇಶ್ವರ ದೇವರ ಸುಣ್ಣ ಬಣ್ಣಕ್ಕೆಂದು ಬ್ರಾಹ್ಮಣ ಜೀವಿತಕ್ಕೆಂದು ೨,೨೦೦ ಗದ್ಯಾಣಗಳನ್ನು ನೀಡಿ ಅದರಿಂದ ಬರುವ ಹಣ ೨ರ ಗದ್ಯಾಣವನ್ನು ವೆಚ್ಚಕ್ಕಾಗಿ ನೀಡಿದನೆಂದು ಹೇಳುವುದು.[೬]

ಕ್ರಿ.ಶ. ೧೦೬೮-೬೯ ರ ಮತ್ತೊಂದು ಶಿರೂರ ಶಾಸನ ಪ್ರಭುಮಾರಸಿಂಘನ ತಾಯಿ ಗೌರಕಬ್ಬೆಯ ಗಂಡ ಕೊಲ್ಲಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪಜೀವಿಯಾದ ನಿಂಬ ಕುಲದ ಶ್ರೀ ಕೊಲ್ಲಾಪುರದ ಪ್ರಭು ದೇವರಾಯನಾಯಕ ಕರ್ಣ್ನನ ಸಿರವೂರ ಸಿದ್ಧದೇವರಿಗೆ ಭೂಮಿ ದಾನ ಮಾಡಿರುವುದನ್ನು ತಿಳಿಸುವುದು.[೭] ಈ ಹೊತ್ತಿಗೆ ಮಾರಸಿಂಘನು ಶ್ರೀಪುರದ ಅಧಿಕಾರ ನಡೆಸುತ್ತಿರಬೇಕು.

ಪ್ರಭು ಮಾರಸಿಂಘನ ವಂಶಾವಳಿಯನ್ನು ಕ್ರಿ.ಶ. ೧೧೪೮ ರ ಮತ್ತೊಂದು ಶಿರೂರ ಶಾಸನ ಹೀಗೆ ತಿಳಿಸುತ್ತದೆ.

ವಂಶಾವಳಿ

↓

ಪ್ರಭು ಮಾರಸಿಂಘ(ಹೆಂ. ರೆಬ್ಬಲದೇವಿ)

↓

ಸೋವನಯ್ಯ(ಹೆಂ. ಲಿಂಗಾದೇವಿ)

↓

ಅಕ್ಕಾದೇವಿ(ಗಂ. ಚೌಡೆಯನಾಯಕ)

↓

ಲಕ್ಮಾದೇವಿ(ಗಂಡ ದೇವರಸ)

ಈ ವಂಶಾವಳಿಯ ಕೊನೆಯ ಅರಸಿ ಲಕ್ಮಾದೇವಿಯನ್ನು "ಶಿರೂರದ ಮಹಾಪ್ರಭುವಿಣಿಯೆಂದು ಸಂಬೋಧಿಸುತ್ತದೆ.[೬೩] ಆಗ ಇವಳ ಬಳಿ ಆದಿಯಣ್ಣನು ಕುಲಕರಣಿಯಾಗಿದ್ದನು. ಅವನ ಮಡದಿ ಚಂಡಿಯಕ್ಕ. ಆದಿಯಣ್ಣ ಸೂರ್ಯದೇವಾಲಯ. ಕಟ್ಟಿಸಿದ್ದರಿಂದ ದೇವಾಲಯ ಕ್ಕೆಂದು ಮಹಾಪ್ರಭುವಿಣಿ ಲಕ್ಮಾದೇವಿಯು ೩೨ ಗೇಣ ಕೋಲಿನಿಂದ ಅಳೆದು ಭೂಮಿ ದಾನ ಮಾಡಿ ತನ್ನ ಔದಾರ್ಯ ಮೆರೆದ ಕುರಿತು ಶಾಸನ ಬಹಳವಾಗಿ ವರ್ಣಿಸಿದೆ.

ಇವರಲ್ಲದೆ ಬಾಗಡಗೆ ವಿಭಾಗದ ಗ್ರಾಮಗಳಲ್ಲಿ ಗಾವುಂಡರು, ದಂಡನಾಯಕರು ಅಧಿಕಾರ ಚಲಾಯಿಸಿದ್ದಾರೆ. ತಿಕ್ಕರಸ ದಂಡನಾಯಕ ಬಾಗಡಗೆ ನಾಡಿನ ಅಧಿಕಾರಿಯಾಗಿ, ಕಾರ್ಯ ನಿರ್ವಹಿಸಿದ ಕುರಿತು ಕ್ರಿ.ಶ. ೧೧೭೮ ರ ಕಟಗೇರಿ ಗ್ರಾಮ ಶಾಸನದಿಂದ ತಿಳಿದುಬರುವುದು.[೬೪] ದಂಡನಾಯಕರ ಜೊತೆ ಅವ್ರರ ಕೈಕೆಳಗಿನ ಅಧಿಕಾರಿಗಳು ಗ್ರಾಮದ ಆಡಳಿತ ನೋಡಿಕೊಂಡಿದ್ದಾರೆ. ಇವರಲ್ಲಿ ಪೆರ್ಗ್ಗಡೆಗಳು, ಗಾವುಂಡಗಳು ಪ್ರಮುಖರು.

ಹಳ್ಳೂರು ಶಾಸನವು ಬೆಳ್ವಲನಾಡಿನ ಬಳಿಯ ಬಾಡ ಗ್ರಾಮವಾಗಿದ್ದ ಹಳ್ಳಹುರದಲ್ಲಿ ದೇವರಸನು ಪೆರ್ಗ್ಗಡೆಯಾಗಿ ಕೆಲಸ ನಿರ್ವಹಿಸುತ್ತಿದ್ದನೆಂದು ಹೇಳುವುದು.[೬೫] ಆಗ ಗ್ರಾಮದಲ್ಲಿರುವ ಪ್ರಮುಖ ಕರಣರ ಜೊತೆ ಸೇರಿ ಪಡುವಣ ನಾಗೇಶ್ವರ ದೇವರ ರಂಗಭೋಗಕ್ಕೆ ದಾನ ನೀಡಿದ್ದನ್ನು ತಿಳಿಸುವುದು.

ಬಾಗಡಗೆ ೭೦ ಬೆಳಗಲಿ ೫೦೦ ನಾಡಿನ ಆಡಳಿತದ ಉಪವಿಭಾಗವಾಗಿತ್ತು. ಆದಾಗ್ಯೂ ಸಿಂಧರು ಬಾಗಡಗೆ ನಾಡಿನಲ್ಲಿ ಮಾತ್ರ ಅಧಿಕಾರ ನಡೆಯಿಸಿರುವರು. ಯರಂಬರಿಗೆ ಸಿಂಧರು ಮಾತ್ರ ಬಾಗಡಗೆ ನಾಡನ್ನೊಳಗೊಂಡು, ಕಿಸುಕಾಡು, ಶೆಲವಡಿ, ಮಾಸವಾಡಿ ಇತ್ಯಾದಿ ಪ್ರದೇಶಗಳನ್ನು ಆಳಿದ್ದಾರೆ. ಬಾಗಡಗೆ (ಬಾಗಲಕೋಟ) ಪರಿಸರದಲ್ಲಿ ಸಾಮಂತ, ಮಂಡಳೇಶ್ವರ ಸಿಂಧರಂತೆ ಇವರ ಅಧೀನರಾಗಿದ್ದ ಪ್ರಭುಗಳು, ದಂಡನಾಯಕರು, ಗಾವುಂಡರು, ಪೆರ್ಗ್ಗಡೆ, ಕುಲಕರ್ಣಿಗಳು ಅಧಿಕಾರ ನೋಡಿಕೊಂಡು ಹೋಗಿದ್ದಾರೆ ಹಾಗೂ ಇವರು ಅಂದಿನ ಸಮಾಜದ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಂಡಿರುವರು.

ಇವರು ಬಾಗಡಗೆ ಪರಿಸರದ ಕಟಗೇರಿ, ಹಳ್ಳೂರ, ಶಿರೂರ, ಬೇವೂರ, ಇತ್ಯಾದಿ ಗ್ರಾಮಗಳಲ್ಲಿ ದೇವಾಲಯಗಳನ್ನು ನಿರ್ಮಿಸಿ, ಅವುಗಳ ನಿರ್ವಹಣೆಗೆಂದು ಭೂಮಿ, ಹಣದಾನ ಗಳನ್ನು ನೀಡಿ ಧರ್ಮವನ್ನು ಉಳಿಸಿ ಬೆಳೆಸಿ ಇಲ್ಲಿ ಸಲ್ಲುವುದರ ಜೊತೆಗೆ ಅಲ್ಲಿಯೂ ಸಲ್ಲುವ ಸಲುವಾಗಿ(ಸ್ವರ್ಗ) ಧರ್ಮವಂತರಾಗಿ ಬಾಳಿದ್ದಾರೆ.

ಟಿಪ್ಪಣಿಗಳು

೧. ಕಲಬುರ್ಗಿ ಎಂ.ಎಂ. (ಸಂ.), **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು,** ಭಾಗ-೧, ಪುಟ. ೫.

೨. **South Indian Inscriptions,** ಸಂಪುಟ-೧೧, ಭಾಗ-೧, ನಂ೭೦, ಭೈರನಮಟ್ಟಿ, ಕ್ರಿ.ಶ. ೯೯೦-೯೧.

೩. ಅದೇ, ನಂ-೮೫, ಶಿರೂರ, ಕ್ರಿ.ಶ. ೧೦೪೯.

೪. ಅದೇ, ನಂ-೭೧, ಹಳ್ಳೂರ, ಕ್ರಿ.ಶ. ೧೦೩೩-೪.

೫. ಅದೇ, ನಂ-೮೫, ಶಿರೂರ.

೬. **Bombay Karnataka Inscriptions,** ಸಂಪುಟ-೧, ಭಾಗ-೧, ನಂ-೮೬, ಶಿರೂರ, ಕ್ರಿ.ಶ. ೧೦೫೦.

೭. **S.I.I.,** ಸಂಪುಟ-೧೧, ಭಾಗ-೨, ನಂ-೧೨೯, ಸೂಚಿ, ಕ್ರಿ.ಶ. ೧೦೮೩.

೮. **Journal of the Bambay Branch of Royal Asiatic Society,** ಸಂಪುಟ-೧೧, ಪುಟ-೨೫೯, ಪಟ್ಟದಕಲ್ಲು, ಕ್ರಿ.ಶ. ೧೧೬೨.

೯. ಅಣ್ಣಿಗೇರಿ ಎ.ಎಂ., **ಐಹೊಳೆ ಸಂಸ್ಕೃತಿ ಮತ್ತು ಕಲೆ,** ಪುಟ- ೧೫೯-೬೦, ಐಹೊಳೆ, ಕ್ರಿ.ಶ. ೧೧೬೯-೭೦.

೧೦. **Epigraphia Indica,** ಸಂಪುಟ-೧೫, ನಂ-೬೧, ಸೂಚಿ.

೧೧. S.I.I., ಸಂಪುಟ-೧೫, ನಂ-೧೪೭, ಕಟಗೇರಿ, ಕ್ರಿ.ಶ. ೧೧೭೯.

೧೨. ಅದೇ, ನಂ-೧೩೪, ಕಟಗೇರಿ, ಕ್ರಿ.ಶ. ೧೧೭೮.

೧೩. **ಭಾರತದ ಗ್ಯಾಜೆಟಿಯರ್, ಕರ್ನಾಟಕ ರಾಜ್ಯ, ಬಿಜಾಪುರ ಜಿಲ್ಲೆ**(ಪರಿಷ್ಕೃತ ಆವೃತ್ತಿ), ೧೯೯೯, ಪುಟ. ೧೭೧.

೧೪. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೯**, ಬಾಗಲಕೋಟೆ ಜಿಲ್ಲೆ, ನಂ-೧೭, ಕಲಾದಗಿ.

೧೫. ಅದೇ, ಪ್ರಸ್ತಾವನೆ ಪುಟ. ೫೮.

೧೬. **S.I.I.,** ಸಂಪುಟ೧೫, ನಂ-೬೭೫, ಹೊನ್ನಿಹಾಳ, ೧೭ನೇ ಶತಮಾನ.

೧೭. ನಾಗಯ್ಯ, ಜೆ.ಎಂ. **ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ**, ಪುಟ-೧೫೧.

೧೮. ಅದೇ, ಪುಟ-೧೨೩.

೧೯. **Inscriptions of Karnataka**, ಸಂಪುಟ-೩, ನಂ-೨೯೯, ಮುಕ್ಕುಂದೆ(ಸಿಂ-ತಾ.).

೨೦. **S.I.I.,** ಸಂಪುಟ-೧೧, ಭಾಗ-೧, ನಂ-೪೬, ಹಳ್ಳೂರ(ಬಾಗ-ತಾ.), ಕ್ರಿ.ಶ. ೯೯೦-೯೧

೨೧. ಅದೇ, ನಂ-೭೦, ಭೈರನಮಟ್ಟಿ(ಬಾಗ-ತಾ.), ಕ್ರಿ.ಶ. ೯೯೦-೯೧.

೨೨. ಕೊಟ್ರೇಶ ಎಂ. (ಸಂ), **ಕಲ್ಯಾಣ ಕರ್ನಾಟಕದ ಅರಸುಮನೆತನಗಳು, ರಂಜೋಳದ ಸಿಂಧರು**, ಪುಟ. ೩೨.

೨೩. ಅದೇ, ಪುಟ. ೧೬.

೨೪. ಕ.ವಿ.ವಿ.ಶಾ ಸಂ-೭, ರಾ.ಜಿ. **ಪ್ರಸ್ತಾವನೆ**, ಪುಟ. ೧೧.

೨೫. **S.I.I.,** ಸಂಪುಟ-೧೧, ಭಾಗ-೧, ನಂ-೪೬, ಹಳ್ಳೂರ(ಬಾಗ-ತಾ.), ಕ್ರಿ.ಶ. ೯೯೦-೯೧.

೨೬. ಅದೇ, ನಂ-೭೦, ಭೈರನಮಟ್ಟಿ(ಬಾಗ-ತಾ.), ಕ್ರಿ.ಶ. ೯೯೦-೧, ಕ್ರಿ.ಶ. ೧೦೩೩.

೨೭. ಅದೇ, ನಂ-೭೧, ಹಳ್ಳೂರ(ಬಾಗ-ತಾ.), ಕ್ರಿ.ಶ. ೧೦೩೩-೩೪.

೨೮. ಅದೇ ನಂ-೭೧, ಹಳ್ಳೂರ(ಬಾಗ-ತಾ.), ಕ್ರಿ.ಶ. ೧೦೩೩-೩೪.

೨೯. ಅದೇ, ಸಂಪುಟ-೧೫, ನಂ-೧೯, ಹಳ್ಳೂರ(ಬಾಗ–ತಾ.), ३ನೇ ಸೋಮೇಶ್ವರ ಕಾಲ.

೩೦. **Bombay Karnataka Inscriptions,** ಸಂಪುಟ-೧, ಭಾಗ-೧, ನಂ-೮೬, ಕೊರಲಹಳ್ಳಿ (ಮುಂಡ-ತಾ.) ಕ್ರಿ.ಶ. ೧೦೫೦.

೩೧. **Desai Dinakar, Mauamandalesuatas under the Chalukyas of Kalyani,** ಪುಟ.೮೮.

೩೨. **Journal of the Bambay Branch of Royal Asiatic Society,** ಸಂಪುಟ-೧೧, ಪುಟ.೨೫೯, ಪಟ್ಟದಕಲ್ಲು(ಬಾದಾ-ತಾ.), ಕ್ರಿ.ಶ. ೧೧೬೨.

೩೩. **S.I.I.,** ಸಂಪುಟ-೧೧, ಭಾಗ-೨, ನಂ-೧೭೮, ಅರಸಿಬೀದಿ (ಹುನ-ತಾ.)

೩೪. ಅದೇ, ಸಂಪುಟ-೧೫, ನಂ-೨೩೬, ಹೊಸೂರ(ಬಾದಾ-ತಾ.), ಕ್ರಿ.ಶ. ೧೧೫೫.

೩೫. **E.I.,** ಸಂಪುಟ-೩, ನಂ-೪೩, ತಿಡಗುಂದಿ (ಬಿಜಾ-ತಾ.), ಕ್ರಿ.ಶ. ೧೦೮೩.

೩೬. ನಾಗಯ್ಯ ಜೆ.ಎಂ., ಆ.ವಿ.ಶಾ.ಒಂ.ಅ, ಪುಟ. ೧೦೩.

೩೭. **Desai Dinakar, M.U.Ch. of K,** ಪುಟ. ೬೪.

೩೮. ಕೊಟ್ರೇಶ ಎಂ. (ಸಂ), ಕ.ಕ.ಅ.ಮ, ಪುಟ. ೧೭೧.

೩೯. **ಕರ್ನಾಟಕ ಭಾರತಿ,** ಸಂಪುಟ-೧, ಸಂಚಿಕೆ-೧, ಪುಟ. ೧೫, ಕ್ರಿ.ಶ. ೧೦೯೯.

೪೦. ಕೊಟ್ರೇಶ ಎಂ.(ಸಂ), ಕ.ಕ.ಅ.ಮ, ಪುಟ. ೧೬ರಿಂದ ೨೧.

೪೧. ಅದೇ, ಪುಟ-೨೩.

೪೨. ಕ.ಭಾ, ಸಂಪುಟ-೧, ಸಂಚಿಕೆ-೧, ಪುಟ-೧೫೨, ರಂಜೇರ, ಕ್ರಿ.ಶ. ೧೦೯೯.

೪೩. ಕೊಟ್ರೇಶ ಎಂ. (ಸಂ), ಕ.ಕ.ಅ.ಮ, ಪುಟ. ೧೦.

೪೪. ಅದೇ, ಪುಟ. ೧೧-೧೨.

೪೫. ಅದೇ ಪುಟ. ೧೨.

೪೬. ಕ.ವಿ.ವಿ.ಶಾ.ಸಂ.-೨, ರಾ.ಜಿ. ಪುರವಣಿ- ಪುಟ. ೧೧.

೪೭. **I.K.** ಸಂಪುಟ-೩, ನಂ-೨೯೯, ಮುಕ್ಕುಂದ(ಸಿಂಧ-ತಾ.), ಕ್ರಿ.ಶ. ೧೧೯೭.

೪೮. ಕ.ವಿ.ವಿ.ಶಾ. ಸಂ-೭, ರಾ.ಜಿ. ನಂ-೧೨, ಮುಕ್ಕುಂದೆ(ಸಿಂಧ-ತಾ.), ಕ್ರಿಶ. ೧೦೨೧.

೪೯. ಅದೇ, ನಂ-೯, ಮುಕ್ಕುಂದೆ(ಸಿಂಧ-ತಾ.), ಕ್ರಿಶ. ೧೦೪೯.

೫೦. **I.K.,** ಸಂಪುಟ-೩, ನಂ-೩೦೯, ರವಡಕುಂಡಿ(ಸಿಂಧ-ತಾ.), ಕ್ರಿ.ಶ. ೧೦೫೩.

೫೧. ಅದೇ, ನಂ-೩೦೧, ಮುಕ್ಕುಂದೆ(ಸಿಂಧ-ತಾ.), ಕ್ರಿ.ಶ. ೧೦೮೮.

೫೨. ಅದೇ, ನಂ-೩೦೫, ೩೦೬, ಸಾಲಗುಂದೆ(ಸಿಂಧ-ತಾ.), ಕ್ರಿ.ಶ. ೧೦೬೩ ಕ್ರಿ.ಶ. ೧೦೮೫.

೫೩. ಅದೇ, ಸಂ-೩೦೧, ಮುಕ್ಕುಂದೆ(ಸಿಂಧ-ತಾ.), ಕ್ರಿ.ಶ. ೧೦೮೮.

೫೪. ಅದೇ, ನಂ-೨೯೯, ಮುಕ್ಕುಂದೆ(ಸಿಂಧ-ತಾ.), ಕ್ರಿ.ಶ. ೧೧೯೭.

೫೫. ಅದೇ, ನಂ-೨೯೯, ಮುಕ್ಕುಂದೆ(ಸಿಂಧ-ತಾ.), ಕ್ರಿ.ಶ. ೧೦೩೪.

೫೬. ಕ.ವಿ.ವಿ.ಶಾ.ಸಂ-೭, ರಾ.ಜಿ, ಸಂ-೬, ಮುಕ್ಕುಂದೆ(ಸಿಂಧ-ತಾ.), ಕ್ರಿ.ಶ. ೧೧೩೪.

೫೭. ಅದೇ, ಸಂ-೨೩, ಮುಕ್ಕುಂದೆ(ಸಿಂಧ-ತಾ.), ಕ್ರಿ.ಶ. ೧೧೦೫-೬.

೫೮. **I.K.,** ಸಂಪುಟ-೩, ನಂ-೨೯೯, ೨೯೯, ದೇವರಗುಡಿ (ಸಿಂಧ-ತಾ) ಕ್ರಿ.ಶ.೧೧೦೧,
ಕ್ರಿ.ಶ. ೧೧೦೮.

೫೯. ಡಾ. ನಾಗಯ್ಯ, ಜೆ.ಎಂ, ಆ.ವಿ.ಶಾ.ಒಂ.ಅ, ಪುಟ-೨೪೯.

೬೦. **S.I.I.,** ಸಂಪುಟ-೧೧, ಭಾಗ-೧, ನಂ-೮೫, ಶಿರೂರ(ಬಾಗ-ತಾ.), ಕ್ರಿ.ಶ. ೧೦೪೯.

೬೧. ಅದೇ, ಸಂ-೯೯, ಶಿರೂರ(ಬಾಗ-ತಾ.), ಕ್ರಿ.ಶ. ೧೦೬೨.

೬೨. ಅದೇ, ಸಂಪುಟ-೧೫, ನಂ-೫೩೧, ಶಿರೂರ(ಬಾಗ-ತಾ.), ಕ್ರಿ.ಶ. ೧೦೬೮-೯.

೬೩. ಅದೇ, ನಂ-೩೯, ಶಿರೂರ(ಬಾಗ-ತಾ.), ಕ್ರಿ.ಶ. ೧೧೪೯.

೬೪. ಅದೇ, ನಂ-೧೩೪, ಕಟಗೇರಿ(ಬಾದಾ-ತಾ.), ಕ್ರಿ.ಶ. ೧೧೭೮.

೬೫. ಅದೇ, ನಂ-೧೯, ಹಳ್ಳೂರ(ಬಾಗ-ತಾ.), ೩ನೇ ಸೋಮೇಶ್ವರನ ಕಾಲ.

ಅಧ್ಯಾಯ ಐದು

ಬಾಗಲಕೋಟೆ ಪರಿಸರದ ದೇವಾಲಯಗಳು

"ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ
ಮಾಡಿಸಜ್ಜೆರೆಯೊಳ್ಸಿಲ್ಕಿದನಾಥನಂ ಬಿಡಿಸು ಮಿತ್ರರ್ಗ್ಗಿಂಬುಕೆಯ್
ನಂಬಿದರ್ಗ್ಗೆರೆವಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ ಐಂದೆ
ತಾಯೆರದಳ್ವಾಲೆರೆ ವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾ ಮಾತ್ಯನಾ"

'ಹಂಪೆ ಶಾಸನ ಕ್ರಿ.ಶ. ೧೪೧೧'

"ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯವನ್ನು ಮಾಡಿಸು, ಸೆರೆಸಿಕ್ಕವರನ್ನು ಬಿಡಿಸು, ಮಿತ್ರರನ್ನು ಬಗೆ, ನಂಬಿದವರನ್ನು ಕೈಬಿಡಬೇಡ, ಶಿಷ್ಟರನ್ನು ರಕ್ಷಿಸು, ದುಷ್ಟರನ್ನು ಶಿಕ್ಷಿಸು" ಎಂದು ಲಕ್ಷ್ಮೀಧರ ಮಾತ್ಯನ ತಾಯಿ ಅವನ ಕಿವಿಯಲ್ಲೊಂದು ತೊಟ್ಟು ಹಾಲನೆರಳು ಎಂದು ಹೇಳುವಲ್ಲಿ ನಮ್ಮ ಪ್ರಾಚೀನ ತಾಯಿಯರ ಮನಸ್ಸಿನಲ್ಲಿ ಮಗನಾದವನು ಹೇಗಿರ ಬೇಕೆಂಬುದನ್ನು, ಮಗನಾಗಿ ಹುಟ್ಟಿದ ಬಳಿಕ ಅವನ ಕರ್ತವ್ಯಗಳೇನು ಎಂಬುದನ್ನು ಎಚ್ಚರಿಸಿದ್ದಾಳೆ.

ಮಾದರಸ-ಸಾಯಣರ ಸಿಂಗಲೆಯ ಅಯ್ವರು ಮಕ್ಕಳಲ್ಲಿ ಲಕ್ಷ್ಮೀಧರನು ಹಿರಿಯ. ಇವನು ವಿಜಯನಗರದರಸ ಸಂಗಮ ವಂಶದ ಪ್ರೌಢದೇವರಾಯನ ಮಂತ್ರಿ. ಮಧುರ ಕವಿ ಮೇಲಿನ ಶಾಸನ ಬರೆದಿದ್ದು ಕವಿಯ ಪ್ರೌಢಿಮೆ ಶಾಸನದಲ್ಲಡಗಿದೆ. ಕವಿಯು ಅಂದಿನ ಧಾರ್ಮಿಕ, ಸಾಮಾಜಿಕ ಜೀವನದ ಚಿತ್ರಣವನ್ನು ಸಹ ಇದರಲ್ಲಿ ನೀಡಿದ್ದಾನೆ.[೧] ಕವಿಯ ಕಲ್ಪನೆ ಸರ್ವವಿಧದಲ್ಲೂ ಲೋಕೋಪಕಾರವನ್ನೆಸಗುವುದೇ ಮನುಷ್ಯ ಜನ್ಮದ ಸಾಫಲ್ಯ, ಸಾರ್ಥಕವೆಂಬ ಸಂಸ್ಕಾರದಲ್ಲಿಯೇ ನಿಂತಿದೆಯೆಂಬುದನ್ನು ತೋರಿಸಿಕೊಟ್ಟಿದ್ದಾನೆ.

ಹಂಪೆ ಶಾಸನದ ಆದರ್ಶವು ಭಾರತೀಯ ಸಂಪ್ರದಾಯದ ವಾಸ್ತುಶಿಲ್ಪಕ್ಕೆ ವಿಶಾಲವಾದ ಅರ್ಥವಿದೆಯೆಂಬುದನ್ನು ತೋರಿಸಿದೆ. ಇಲ್ಲಿ ವಾಸ್ತುಶಿಲ್ಪವೆಂದರೆ ಸ್ಮಾರಕ ಅಥವಾ ಕಟ್ಟಡ ನಿರ್ಮಾಣ. ಅದು ದೇವಸ್ಥಾನ, ಕೋಟೆ, ಪಟ್ಟಣ, ತೋಟ, ಬಾವಿ, ಕೆರೆ, ಕಟ್ಟೆ, ರಸ್ತೆ, ಅರವಟ್ಟಿಗೆ, ಅನ್ನಸತ್ರ, ವೀರಗಲ್ಲು, ಮಾಸ್ತಿಗಲ್ಲು, ನಿಸಿದಿಗೆ ನಿರ್ಮಿಸುವುದಾಗಿದೆ.[೨]

ನಮ್ಮ ನಾಡಿನ ಶಾಸನಗಳು ಬಹುಮಟ್ಟಿಗೆ ದೇವಾಲಯ ನಿರ್ಮಾಣ ಮತ್ತು ಅವುಗಳಿಗೆ ಕೊಟ್ಟ

ದಾನ ದತ್ತಿಗಳನ್ನು ತಿಳಿಸುವಂತವುಗಳಾಗಿವೆ. ಅವನ್ನು ಉಲ್ಲೇಖಿಸುವ ನೆಪದಿಂದ ಪೂರ್ವಭಾವಿಯಾಗಿ ಅನೇಕ ವಿಷಯಗಳನ್ನು ಶಾಸನಕವಿಗಳು ಬಣ್ಣಿಸುತ್ತಾ ಬಂದಿದ್ದಾರೆ. ಊರೂರುಗಳಲ್ಲಿ ಕಂಗೊಳಿಸುವ ದೇವಾಲಯ ನಿರ್ಮಿತಿಗಳ ಹಿನ್ನೆಲೆಗೆ ಇಂತಹ ಉದಾತ್ತ ಸಂಸ್ಕೃತಿಯ ಚರಿತ್ರೆಯಿದೆ ಎಂಬುದನ್ನು ಶಾಸನ ಕಲ್ಬರಹಗಳು ಕೂಗಿ ಹೇಳುತ್ತಲಿವೆ. ಇಂತಹ ನಗಣ್ಯವಾದ ಶಾಸನಗಳ ಸಹಾಯದಿಂದ ನಮ್ಮ ದೇವಾಲಯಗಳ ವಾಸ್ತು ಪರಂಪರೆಯನ್ನು ಅಧ್ಯಯನದ ಪರಿಸರದಲ್ಲಿಯೇ ಚರ್ಚಿಸಿದ್ದೇವೆ.

ಮುಖ್ಯವಾಗಿ ದೇವಾಲಯಗಳ ರೂಪದಲ್ಲಿ ಧರ್ಮವನ್ನು ನಿಲ್ಲಿಸುವ (ಬೆಳೆಸುವ) ಪರಂಪರೆಗೆ ಪೂರ್ವಭಾವಿಯಾಗಿ ಇತಿಹಾಸಕಾಲದ ಅರಸರು, ಅಧಿಕಾರಿಗಳು ಧರ್ಮ ಪ್ರಸಂಗವನ್ನು ನಡೆಸುತ್ತ ಬಂದ ಉಲ್ಲೇಖಗಳು ಶಾಸನಗಳಲ್ಲಿ ಸಾಕಷ್ಟು ಬರುತ್ತವೆ. ಯರಂಬರಿಗೆಯಲ್ಲಿ ರಾಜ್ಯವಾಳುತ್ತಿದ್ದ (ಕ್ರಿ.ಶ. ೧೧೭೯ ರ) ಮಹಾಮಂಡಳೇಶ್ವರ ಸಿಂಧ ವಿಕ್ರಮಾದಿತ್ಯನು ತನ್ನ ಧರ್ಮ ಪ್ರಸಂಗದಲ್ಲಿ ಧರ್ಮದ ಬಗೆಗಿದ್ದ ಸುಭಾಷಿತಗಳನ್ನು ಕೇಳಿ ತನ್ನ ತಂದೆಗೆ ಪರೋಕ್ಷ ವಿನಯ ಪ್ರಾಪ್ತವಾಗಲಿಯೆಂಬ ನಂಬಿಕೆಯಿಂದ ಹೊಲ, ಮನೆ, ಹಸು, ಹೊನ್ನುಗಳನ್ನು ದಾನವಾಗಿ ನೀಡುತ್ತಾನೆ.[೩]

ದೇವಾಲಯ ನಿರ್ಮಾಣದಲ್ಲಿ ಧರ್ಮವನ್ನು ನಿಲ್ಲಿಸುವ ಸಂಪ್ರದಾಯದ ಜೊತೆಗೆ ಧರ್ಮದ ನೆಲೆಯಲ್ಲಿ ದಾನ ನೀಡಿ ತನ್ನ ಅರ್ಥವ್ಯವಸ್ಥೆಯ ಒಂದು ಭಾಗವನ್ನು ದಾನ ರೂಪದಲ್ಲಿ ಸವೆಸಿ ಭೂಮಿಯ ಮೇಲೆ ತಾನೊಬ್ಬ ಕಾಮಧೇನು, ಕಲ್ಪವೃಕ್ಷ ಇತ್ಯಾದಿಯಾಗಿ ಹೊಗಳಿಸಿಕೊಂಡು ಅಮರರಾದವರನ್ನು ಶಾಸನಗಳು ಬಣ್ಣಿಸುತ್ತವೆ.

ಈ ಹಿನ್ನೆಲೆಯಾಗಿ ನೋಡುವುದಾದರೆ, ಸಮಾಜಕ್ಕೆ ಮುಖ್ಯವಾಗಿ ಅಪೇಕ್ಷಿತವಾದ ನಾಲ್ಕು ದಾನಗಳು ಪರಿಗಣಿತವಾಗಿವೆ. ಅವು ಯಾವುವೆಂದರೆ, ಮಾರ್ಗಸ್ಥರಿಗೆ, ವಿದ್ಯಾರ್ಥಿಗಳಿಗೆ, ದೀನರಿಗೆ ಆಹಾರ, ಪೀಡಿತರಿಗೆ ಅಭಯ, ಸಂರಕ್ಷಣೆಯ ಭರವಸೆ, ರೋಗಿಗಳಿಗೆ ಭೈಷಜ್ಯದಾನ, ಎಲ್ಲರಿಗೂ ವಿದ್ಯಾದಾನ.[೪] ಇದನ್ನು ಆಯಾ ಕಾಲಘಟ್ಟದ ಚಕ್ರವರ್ತಿ, ಅರಸ, ಅಧಿಕಾರಿ, ಮಹಾಜನ, ನಕರ, ಪೆರ್ಗ್ಗಡೆ, ಗಾವುಂಡರೆನ್ನದೆ ಸಮಾಜದ ಹೆಣ್ಣು-ಗಂಡೆನ್ನದೆ ಜನಸಾಮಾನ್ಯರು ಸೇರಿ ದಾನಗಳನ್ನು ನೀಡಿದ್ದನ್ನು ಬಾಗಲಕೋಟೆ ಪರಿಸರದ ಶಾಸನಗಳು ಸಾಕಷ್ಟು ವರ್ಣಿಸುತ್ತವೆ.

ಈ ಶಾಸನಗಳ ವರ್ಣನೆಯ ಹೇಳಿಕೆಗಳು ದೇವಾಲಯ ಮತ್ತು ಸಾರ್ವಜನಿಕ ಕಲ್ಯಾಣಕಾರಕ ಸ್ಮಾರಕಗಳನ್ನು ಕಟ್ಟಿಸುವ ಮುಖ್ಯ ಉದ್ದೇಶ ವ್ಯಕ್ತಿ ಧಾರ್ಮಿಕ ಅರ್ಹತೆಯನ್ನು ಪಡೆಯುವುದಾಗಿತ್ತು. ಜೊತೆಗೆ ದೀರ್ಘಾಯುಷ್ಯ, ಆರೋಗ್ಯಸಂಪತ್ತು ಮತ್ತು ಸಮಾಜದಲ್ಲಿ ಉತ್ಕರ್ಷ ಹೊಂದುವುದು ಮತ್ತೊಂದು ಉದ್ದೇಶವಾಗಿತ್ತು.[೫] ಹೀಗಾಗಿ ದೇವಾಲಯ, ಇತರ ಸ್ಮಾರಕಗಳು ಜನರ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕಗಳಾಗಿ ಬೆಳೆದುಬಂದಿವೆ.

ಧರ್ಮದ ನೆಲೆಯಲ್ಲಿ ದೇವಾಲಯ ಕಟ್ಟುವುದು, ಮೂರ್ತಿ ಪ್ರತಿಷ್ಠಾಪಿಸುವುದು, ಕೀರ್ತಿಸ್ತಂಭ ನಿಲ್ಲಿಸುವುದು, ಕೆರೆ, ಕಾಲುವೆ, ಅನ್ನಸತ್ರ, ಅರವಟ್ಟಿಗೆಯಂತಹ ವಿವಿಧ ಕೆಲಸ ಕಾರ್ಯಗಳನ್ನು ಮಾಡುವ ಹಾಗೂ ಮಾಡಿದ ಕಾರ್ಯಗಳನ್ನು ಉಳಿಸುವ ಸಲುವಾಗಿ ಭೂಮಿದಾನ ಹಾಗೂ ಹಣದಾನ ಇತ್ಯಾದಿಗಳನ್ನು ನೀಡುವುದು ಮೊದಲಾದ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಮಾಡುವುದರ ಮೂಲಕ ಇಲ್ಲಿಯೂ ಅಲ್ಲಿಯೂ ಸಲ್ಲುವ ಉದ್ದೇಶಕ್ಕೆ ಪ್ರೇರಣೆಯಾಯಿತು.

ದೇವಾಲಯವೆಂದಾಕ್ಷಣ ಕೇವಲ ಒಂದು ಧರ್ಮಕ್ಕೆ ಸೀಮಿತವಾದುದಲ್ಲ. ಭಾರತೀಯರು ಸರ್ವಧರ್ಮ ಸಮನ್ವಯದಲ್ಲಿ ನಂಬಿಕೆ ಇಟ್ಟವರು. ಅದಕ್ಕಾಗಿಯೇ ಇಲ್ಲಿ ಹಿಂದೂಧರ್ಮದ ಸಿದ್ಧಾಂತದಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ, ಶಾಕ್ತ, ಇತ್ಯಾದಿ ಧರ್ಮಗಳು ಹುಟ್ಟು ಪಡೆದು ಪರಸ್ಪರ ಸಹಕಾರದೊಂದಿಗೆ ಮುನ್ನಡೆದು ಬಂದಿವೆ. ಅದಕ್ಕೆ ಭಾರತೀಯ ಬಹುಧರ್ಮೀಯ, ಬಹುಭಾಷಿಕ, ವಿಭಿನ್ನ ಆಚಾರ ವಿಚಾರ ಹೊಂದಿದ ಜನರ ಪ್ರೋತ್ಸಾಹವು ಕಾರಣವಾಗಿದೆ. ಅದಕ್ಕಾಗಿಯೇ ಭಾರತದೇಶ ಪ್ರತಿಯೊಂದು ಧರ್ಮಗಳ ಮನೆಯಂತಾಗಿ ಅವುಗಳನ್ನು ಬೆಳೆಸಿಕೊಂಡು ಬಂದಿದೆ.

ಈ ಹಿನ್ನೆಲೆಯಲ್ಲಿ ಸಕಲ ಧರ್ಮಗಳು ಒಂದೇ ಗುರಿಯತ್ತ ಜನರನ್ನು ಕರೆದೊಯ್ಯುವ ಬೇರೆ ಬೇರೆ ದಾರಿಗಳೆಂಬ ಸಮಭಾವನೆಯಿಂದ ಕಾಣುವ ಮಹಾನುಭಾವರು ಯಾವ ಕಾಲದಲ್ಲಿಯೂ ಇರುತ್ತಾರೆ ಎಂಬುದಕ್ಕೆ ಕ್ರಿ.ಶ. ೧೧೫೧ ರ ಮುರಗೆರೆ ನಾಡನ್ನಾಳುತ್ತಿದ್ದ ಮಹಾ ಸಾಮಂತ ಗೂಳಿ ಬಾಚಿದೇವನು ಒಳ್ಳೆಯ ನಿದರ್ಶಕನಾಗಿದ್ದಾನೆ.[೬] ಅವನು ಜೈನ, ಬೌದ್ಧ, ಶೈವ, ವೈಷ್ಣವ ಧರ್ಮ ಸಂಪ್ರದಾಯಸ್ಥರಿಗೆಂದು ಗುಡಿಗಳನ್ನು ಕಟ್ಟಿಸಿ, ದಾನಗಳನ್ನು ಇತ್ತು ಪ್ರೋತ್ಸಾಹಿಸಿ 'ಚತುಸ್ಸಮಯ ಧರ್ಮೋದ್ಧಾರ ಧೌರೆಯ'ನೆನಿಸಿಕೊಂಡಿದ್ದನು. ಅದೇ ರೀತಿ ಇವನ ಸಾಲಿಗೆ ಸೇರುವ ವ್ಯಕ್ತಿ ಶಿರೂರ (ಶ್ರೀಪುರ) ಗ್ರಾಮದ ಪ್ರಭುಮಾರಸಿಂಘನಾಗಿದ್ದು ಅವನು ಹಲವು ದೇವಾಲಯ, ಶಿಲ್ಪ ನಿರ್ಮಿಸಿ ಅವುಗಳಿಗೆಂದೇ ವಿಶೇಷ ದಾನಗಳನ್ನು ಕೈಗೊಂಡು ಹೆಸರು ಪಡೆದಿದ್ದಾನೆ.[೭]

೫.೧. ಧರ್ಮ-ದೇವಾಲಯ ಪೋಷಕರು

ಮೇಲೆ ಉಲ್ಲೇಖಿಸಿದಂತೆ ಧಾರ್ಮಿಕ ಹಿನ್ನೆಲೆಯುಳ್ಳ ವ್ಯಕ್ತಿ ಸಮಾಜದಲ್ಲಿ ಕೀರ್ತಿವಂತನೆನಿಸಿ ಕೊಳ್ಳಲು ತಾನು ಕೂಡಿಟ್ಟ ಧನವನ್ನು(ಸಂಪತ್ತು), ಭೂಮಿಯನ್ನು ಧರ್ಮ ಮಾರ್ಗದ ಮುಖಾಂತರ ಸಮಾಜಕ್ಕೆ ಬೇಕಾದ ಕಾರ್ಯಕ್ಕೆ ಉಪಯೋಗಿಸಿ ಮೋಕ್ಷ ಸಂಪಾದಿಸಿಕೊಳ್ಳಲು ಮುಂದಾದಾಗ ದೇವಾಲಯ ಹುಟ್ಟಿಗೆ ಕಾರಣವಾಯಿತು. ಮುಂದೆ ಅದರ ಪೋಷಣೆಗೂ ಬದ್ಧನಾಗಬೇಕಾಯಿತು. ಒಬ್ಬ ವ್ಯಕ್ತಿ ಸಮಾಜದಲ್ಲಿ ಮಾಡಿದ ಕೆಲಸ ಮುನ್ನಡೆಯಲು ಮತ್ತೊಬ್ಬ ವ್ಯಕ್ತಿ ನಿಂತಾಗ ಮನುಷ್ಯ ಸಂಸ್ಕೃತಿ

ಇಂದಿಗೂ ಉಳಿದುಕೊಂಡು ಬಂದಿದೆ. ಸಮಾಜದ ಇತರರು ಸಹ ಧರ್ಮಕಾರ್ಯದಲ್ಲಿ ಭಾಗಿಗಳಾಗಬೇಕೆಂದಾಗ ಧರ್ಮ ಅವರಿಗೆ ದಾರಿದೀಪವಾಗಿ ನಿಂತಿದೆ. ಅಂಥವರ ಕುರಿತು ಬಾಗಲಕೋಟೆ ಪರಿಸರದ ಶಾಸನಗಳನ್ನು ಅನುಲಕ್ಷಿಸಿ ಬಾದಾಮಿ ಚಾಲುಕ್ಯರಿಂದ ಹಿಡಿದು ವಿಜಯನಗರದ ಕೊನೆಗಾಲದವರೆಗೆ ಬರುವ ಶಾಸನಗಳನ್ನು ಅವಲೋಕಿಸಲಾಗಿದೆ. ಈ ಅವಧಿಯಲ್ಲಿ ಬರುವ ಚಕ್ರವರ್ತಿ, ಪಟ್ಟದ ರಾಣಿಯರು, ಸಾಮಂತರು, ಅವರ ಮಡದಿಯರು, ಮಂಡಳೇಶ್ವರರು, ನಾಡಪ್ರಭುಗಳು, ಪೆರ್ಗ್ಗಡೆ, ದಂಡನಾಯಕ, ಗಾವುಂಡ, ಕುಲಕರ್ಣಿಗಳಲ್ಲದೆ ಇತರ ಸಾಮಾನ್ಯರು ದೇವಾಲಯಗಳಿಗೆ ದತ್ತಿದಾನ ನೀಡಿ ಕೃತಾರ್ಥರಾಗಿದ್ದಾರೆ. ಇಲ್ಲಿ ಜೈನ, ವೈಷ್ಣವ, ಶೈವ, ಶಾಕ್ತ, ಗಾಣಪತ್ಯವೆಂಬ ಇತರ ಧರ್ಮ ಪಂಗಡಗಳ ದೇವರ ದೇವಾಲಯಗಳು ನಿರ್ಮಾಣವಾಗಿವೆ.

ಪ್ರಥಮ ಬಾರಿಗೆ ಬಾಗಡಗೆ ನಾಡಿನ ಹತ್ತಿರದ ಮುಧೋಳದಲ್ಲಿ ಬಾದಾಮಿ ಚಾಲುಕ್ಯರ ಕಾಲದ ಕ್ರಿ.ಶ. ೫೬೦ ರ ತಾಮ್ರಪಟ ದೊರೆತಿದ್ದು ಪ್ರಥಮವಾಗಿ ದಾನ ನೀಡುವ ಪ್ರಕ್ರಿಯೆ ಈ ಭಾಗದಲ್ಲಿ ಪ್ರಾರಂಭವಾಗಿತ್ತೆಂಬುದನ್ನು ತಿಳಿಸುವ ಶಾಸನವಾಗಿದೆ. ಇದು ಬಾದಾಮಿ ಚಾಲುಕ್ಯ ಪ್ರಥ್ವಿವಲ್ಲಭನ (೧ನೇ ಪುಲಿಕೇಶಿ) ಮಗ ಪುರವರ್ಮ ಮಳಖೇಡ ಗ್ರಾಮದಲ್ಲಿ ಭೂಮಿಯನ್ನು ದಾನವಾಗಿ ನೀಡಿದ ಕುರಿತು ಹೇಳುತ್ತದೆ.[೮]

ಕಲ್ಯಾಣ ಚಾಲುಕ್ಯ ದೊರೆ ೨ ನೇ ತೈಲಪನು ರಾಜ್ಯವಾಳುತ್ತಿರುವಾಗ ಅವನ ಸಾಮಂತ ಸಿಂಧವಂಶದ ನಾಗಾದಿತ್ಯ (ಕ್ರಿ.ಶ. ೯೯೦-೯೧) ರಸನು ತಾನು ಪತ್ತಿಯ ಮತ್ತೂರಿನ ಬೀಡಿನಲ್ಲಿ ಬೀಡು ಬಿಟ್ಟಾಗ ಅದರ ನೆನಪಿಗಾಗಿ (ಗೆದ್ದ ಪ್ರಯುಕ್ತ) ಕಿರಿಯ ಶಿರವೂರ ಸಿಂಧೇಶ್ವರ ದೇವರಿಗೆಂದು ಸಾವಿರ ಮತ್ತರು ಭೂಮಿಯನ್ನು ದಾನವಾಗಿ ನೀಡಿದನು.[೯] ಶಾಸನದ ಸಿಂಧ ಸಾಮಂತ ೨ ನೇ ನಾಗಾದಿತ್ಯ (ನಾಗತಿಯರಸ) ನಾಗಿದ್ದು ಶಿರೂರ ಸಿಂಧೇಶ್ವರನಿಗೆ ದಾನ ನೀಡಿದ್ದನ್ನು ಗಮನಿಸಬೇಕು. ಸಿಂಧವಂಶಸ್ಥರಲ್ಲಿ ಯಾರಾದರೊಬ್ಬರು ತಮ್ಮ ವಂಶದ ಸಿಂಧ ಹೆಸರಿನ ದೇವಾಲಯ ನಿರ್ಮಿಸಿರಬೇಕು ಅಥವಾ ಸಿಂಧವಂಶದ ಮೊದಲ ಪುರುಷ ಸಿಂಧಕುಮಾರ (ನಿಡದೊಳಸಿಂಧ)ನ ಹೆಸರಿನಲ್ಲಿ ಕಟ್ಟಿಸಿರಬೇಕು. ಈ ದೇವಾಲಯದ ವಾಸ್ತು ಗಮನಿಸಿದಾಗ ಕಲ್ಯಾಣ ಚಾಲುಕ್ಯ ಶೈಲಿಯ ಔತ್ತರೇಯ ದ್ರಾವಿಡ ಶೈಲಿಯಲ್ಲಿ ಮೂಲ ಗರ್ಭಗೃಹ ಕಂಡು ಬರುವುದು. ಹೀಗಾಗಿ ೨ ನೇ ಸಿಂಧ ನಾಗಾದಿತ್ಯನೇ ದೇವಾಲಯ ನಿರ್ಮಿಸಿರುವ ಸಾಧ್ಯತೆ ಹೆಚ್ಚು.

ಶಾಸನ ಸಿಂಹರಾಶಿ ಭಟ್ಟಾರಕನ ಕಾಲನ್ನು ತೊಳೆದು ಅವನ ಕಾಲ ಖರ್ಚಿಗೆಂದು ದಾನ ಬಿಟ್ಟಿರುವುದನ್ನು ಹೇಳುವುದು. ಇದೇ ಶಾಸನದ ಕೊನೆಯ ಭಾಗದಲ್ಲಿ ಕ್ರಿ.ಶ. ೧೦೩೩ ರ ಚಾಲುಕ್ಯ ೧ ನೇ ಜಗದೇಕಮಲ್ಲನ ಅವಧಿಯ ಶಾಸನ ಬರೆಯಲಾಗಿದೆ. ಜಗದೇಕಮಲ್ಲ ಕೊಲ್ಲಿಪಾಕೆಯಿಂದ ರಾಜ್ಯಭಾರ ಮಾಡುತ್ತಿರುವಾಗ ಮೇಲಿನ ಶಾಸನದ ನಾಗತಿಯರಸ ಸಿಂಧೇಶ್ವರ ದೇವರ ಆಚಾರ್ಯ

ತೇಜೋರಾಶಿ ಪಂಡಿತನ ಕಾಲು ತೊಳೆದು, ಅವನ ಕಾಲ ಕರ್ಚಿಗೆಂದು ಪುರದ ಕೆರಿಯ ಪರಿಸೂತ್ರದ ದಂಡದೋಷಗಳಿಂದ ಬಂದ ಆದಾಯವನ್ನು ದಾನವಾಗಿ ಕೊಟ್ಟನು. ಶಾಸನದ ಕೊನೆಯಲ್ಲಿ ತೇಜೋರಾಶಿ ಪಂಡಿತದೇವನು ದೇವಾಲಯ ಜೀರ್ಣೋದ್ಧಾರ ಮಾಡಿಸಿ ಪುನಃ ಪ್ರತಿಷ್ಠೆ ಮಾಡಿದ್ದು ಸಿಂಧೇಶ್ವರ ದೇವಾಲಯ ದ್ವಿಕೂಟವಾಗಿ ಮಾರ್ಪಟ್ಟಿರಬೇಕೆಂದು ತಿಳಿಯಲು ಅವಕಾಶವಿದೆ. ಸಿಂಧೇಶ್ವರವೆಂಬುದು ಮುಂದಿನ ದಿನಗಳಲ್ಲಿ ಸಿದ್ಧೇಶ್ವರವಾಗಿ ಮಾರ್ಪಟ್ಟಿದೆ. ಕ್ರಿ.ಶ. ೯೯೦-೯೧೭ ಹಳ್ಳೂರದ ಬಸವೇಶ್ವರ ದೇವಾಲಯದ ಶಾಸನ ೨ನೇ ತೈಲಪನ ಕಾಲದ್ದಾಗಿದ್ದು ಇದು ಸಿಂಧ ವಂಶದ ಅರಸನ ಬಿರುದುಗಳನ್ನು ಹೊಗಳುತ್ತದೆ. ಈ ಶಾಸನದ ಸಿಂಧ ಅರಸ ೧ನೇ ನಾಗಾದಿತ್ಯನಾಗಿದ್ದು ಇವನು ರಾಷ್ಟ್ರಕೂಟರ ಅವಧಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿಯಲು ಅವಕಾಶವಿದ್ದು, ಇದು ಹಳ್ಳೂರ ಪೂರ್ವಮುಖದ ಗುಡಿಯಾಗಿದೆ.

ಭೈರನಮಟ್ಟಿಯ ಶಾಸನದ ನಾಗತಿಯರಸ (ಶಿರೂರ ಶಾಸನದ ಅರಸ)ನ ಹಳ್ಳೂರದಲ್ಲಿರುವ (ಕ್ರಿ.ಶ. ೧೦೩೩-೩೪) ಶಾಸನವು ಸಹ ೧ ನೇ ಜಗದೇಕಮಲ್ಲ ಕೊಲ್ಲಿಪಾಕೆಯಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಸಾಮಂತ ಸಿಂಧ ನಾಗತಿಯರಸನು ಶ್ರೀ ತೇಜೊರಾಶಿ ಪಂಡಿತನಿಗೆ ಕಾಲಕರ್ಚಿಗೆ ಪುರದ ಕೆರಿಯ ಬಾಗಡಗೆ ದೆಸೆಯ... ದೇವರಿಗೆ ದಾನ ನೀಡಿದ್ದನ್ನು ಹೇಳುವುದು.[೧೦] ಈ ಎರಡು ಶಾಸನಗಳು ಒಂದೇ ಕಾಲಕ್ಕೆ, ಒಬ್ಬನೇ ಅರಸನಿಗೆ ಸಂಬಂಧಪಟ್ಟಿದ್ದನ್ನು ಗಮನಿಸಬೇಕು.

ಈ ಶಾಸನದ ಕಾಲಕ್ಕೆ ಬಾಗಡಗೆ ಸಿಂಧವಂಶ ಕೊನೆಗೊಂಡಂತೆ ತೋರುತ್ತದೆ. ಏಕೆಂದರೆ ಮುಂದಿನ ಶಿರೂರ ಶಾಸನವು ಶಿರೂರ ಹಾಗೂ ಇತರ ಶಾಸನಗಳು ಬಾಗಡಗೆ ಪ್ರದೇಶದ ಅಧಿಕಾರವನ್ನು ಬೇರೆಯವರು ನಡೆಸುತ್ತಿರುವ ವಿಷಯವನ್ನು ತಿಳಿಸುತ್ತವೆ. ೨ನೇ ನಾಗಾದಿತ್ಯರಸನೇ ಕೊನೆಯ ಬಾಗಡಗೆ ನಾಡಿನ ಶ್ರೇಷ್ಠ ಸಿಂಧರಸನಾಗಿದ್ದಾನೆ.

ಕ್ರಿ.ಶ. ೧೦೪೯ ರ ಶಿರೂರ ಶಾಸನ[೧೧] ಪೊನಗುಂದ-೩೦ ರ ಮಧ್ಯದ ಶ್ರೀಪುರದ ಆಡಳಿತವನ್ನು ಮಾರಸಿಂಘ ಪ್ರಭು ನಿರ್ವಹಿಸುತ್ತಿದ್ದುದನ್ನು ಹೇಳುತ್ತದೆ. ಶಾಸನವು ಮಾರಸಿಂಘನ ವಂಶಾವಳಿ ನೀಡುತ್ತಿದ್ದು ಮೊದಲು ಕೊಲ್ಲಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪ ಜೀವಿ ಪ್ರಭುರಾಜ ವರ್ಮನನ್ನು ಹೆಸರಿಸಿ ಅವನ ಮಗ ಮಾಕಣ, ಅವನ ಮಗಳು ಗೌರಬ್ಬೆ, ಈಕೆಯ ಮಗ ಮಾರಸಿಂಘನೆಂದು ಹೇಳುತ್ತದೆ.

ಸಿಂಧ ನಾಗತಿಯರಸನಂತೆ ದಾನ ನೀಡುವುದರಲ್ಲಿ ಮಾರಸಿಂಘ ಪ್ರಭು ಕೊಡುಗೈ ದಾನಿಯಾಗಿದ್ದನ್ನು ಶಾಸನ ತಿಳಿಸುವುದು. ಸಿಂಧರು ಶಿರೂರ ಹಾಗೂ ಹಳ್ಳೂರದಲ್ಲಿ ಒಂದರಂತೆ ಎರಡು ಗುಡಿಗಳನ್ನು ಕಟ್ಟಿಸಿದ್ದಾರೆ. ಆದರೆ ಮಾರಸಿಂಘ ಪ್ರಭು ಶಿರೂರದಲ್ಲಿ ಸಿದ್ಧೇಶ್ವರ ದೇವರ ಧೂಪ, ದೀಪ, ಗಂಧ,

ನೈವೇದ್ಯ, ನೃತ್ಯೋಪಹಾರ, ಯತಿಗಳಿಗೆ, ವಿದ್ಯಾರ್ಥಿಗಳ ಸತ್ರ, ದೇವಾಲಯದ ಜೀರ್ಣೋದ್ಧಾರಕ್ಕೆಂದು ೩೦೦ ನಿವರ್ತನ ಭೂಮಿಯನ್ನು ಬಿಟ್ಟನು. ಅದರ ಜೊತೆಗೆ ಊರ ಪೂರ್ವದಲ್ಲಿರುವ ಅವನ ತಾಯಿ ಹೆಸರಿನ(ಗೌರಬ್ಬೆ) ತಟಾಕ(ಕೆರೆ)ದ ಹತ್ತಿರ ೨ ನಿವರ್ತನ ಭತ್ತದ ಗದ್ದೆ, ಅದರ ಸಮೀಪದಲ್ಲಿ ೧ ನಿವರ್ತನ ಗದ್ದೆ, ಬಾಗಡಗೆ-೭೦ರಲ್ಲಿದ್ದ ಮುಲವಳ್ಳಿ ಗ್ರಾಮದ ಪೂರ್ವಕ್ಕಿರುವ ಪಳ್ಳವೂರ(ಹಳ್ಳೂರ)ದ ಸಮೀಪ ೫೦ ನಿವರ್ತನ ಭೂಮಿಯನ್ನು ಬಿಟ್ಟು ಇದಕ್ಕೆ ೨ ಗದ್ಯಾಣ ತೆರಿಗೆ ಹಾಕುತ್ತಾನೆ.

ಇದಲ್ಲದೆ, ಬಾಗಡಗೆ ದಾರಿಯಲ್ಲಿ ೩೦ ಮತ್ತರು ಭೂಮಿ ನೀಡಿ ಅದಕ್ಕೆ ೭ ಗದ್ಯಾಣ ಸುಂಕ ಹಾಕಿದನು. ನಂತರ ಬೇರೆ ಬೇರೆ ದೇವಾಲಯ, ದೇವರ ಮೂರ್ತಿಗಳಿಗೆಂದು ಬೇರೆ ಬೇರೆ ಕಡೆಗೆ ಭೂಮಿದಾನ ಮಾಡಿ ಅದನ್ನು ಗದ್ಯಾಣ ನೀಡಿ ಇದಕ್ಕೆ ತಲಾ ಒಂದು ಪಣ ಬಡ್ಡಿ ಬರುವಂತೆ ವ್ಯವಸ್ಥೆ ಮಾಡಿದ ಕುರಿತು ಶಾಸನ ತಿಳಿಸುವುದು.

ಇಷ್ಟಕ್ಕೆ ಮಾರಸಿಂಘ ಪ್ರಭುವಿನ ದಾನ ಧರ್ಮಗಳು ನಿಲ್ಲಲಿಲ್ಲ. ಮೂಲ ಸಿಂಧೇಶ್ವರ (ಸಿದ್ಧೇಶ್ವರ) ದೇವಾಲಯದ ಜೀರ್ಣೋದ್ಧಾರ ಮಾಡಲು ಕ್ರಮ ಕೈಗೊಂಡು ಅಲ್ಲಿ ವಿಷ್ಣು, ವಿನಾಯಕ, ಚಂಡಿ, ಹನುಮ, ಹಟಕೇಶ್ವರ, ಮಲ್ಲಿಕಾರ್ಜುನ, ತುಂಬಾ ತೋರಣ, ಮಂಟಪ, ವಿತಾನ, ಕಪಿಲತೀರ್ಥ, ಸಮಕಾಳಿಮಠ (ಆಲಮೇಲ ಮಲಯಾಳ ಪಂಡಿತನ ಶಿಷ್ಯಪರಂಪರೆ, ನಂದಿಮಂಟಪ, ಮಾಡ (ಪ್ರಾಕಾರಗೋಡೆ)ಗಳನ್ನು ಮಾಡಿಸಲು ಕ್ರಮ ಕೈಗೊಂಡನು. ಹಾಗೆಯೇ ದೇವಾಲಯ ಪರಿಸರದಲ್ಲಿ ನಂದಿ, ಕಾಳಿ, ಭೈರವ, ದುರ್ಗೆ, ಆದಿತ್ಯ, ಚಂಡೇಶ, ಷಣ್ಮುಖ, ಸರಸ್ವತಿ ವಿಗ್ರಹಗಳನ್ನು, ಶಿಲಾಸ್ತಂಭ ಹಾಗೂ ಮೂರು ತಟಾಕ(ಕೆರೆ)ಗಳನ್ನು ನಿರ್ಮಿಸಿದನೆಂದು ಹೇಳುವ ಶಾಸನದ ಉಲ್ಲೇಖ ಗಮನಿಸಿ ಗ್ರಾಮವನ್ನು ಪರಿಶೀಲಿಸಿದಾಗ ಇಂದೂ ಸಹ ಕೇಳಲು ಶಿಲ್ಪ ಹೊರತುಪಡಿಸಿ ಉಳಿದೆಲ್ಲ ಸ್ಮಾರಕ, ಕೆರೆಗಳು ಕಂಡುಬರುತ್ತವೆ.

ಮುಂದುವರಿದು ಶಾಸನವು ಶ್ರೀಮಠದಮೇಲ (ಆಲಮೇಲ) ಉತ್ತರೇಶ್ವರ ಮಠದ ಮಲಯಾಳ ಮುನಿಸಂತತಿಗೆ ಸೇರಿದ ಸಿಂಘಪರ್ಷೆ (ಸಿಂಹವರ್ಷೆ) ಸೇರಿದ ತೇಜೋರಾಶಿ ಪಂಡಿತನಿಗೆ ಮಾರಸಿಂಘ ತಾಮ್ರಪಟ ಶಾಸನ ಹಾರೈಸಿ ಕೊಟ್ಟಿರುವುದನ್ನು ಹೇಳುತ್ತದೆ. ತರ್ದವಾಡಿ ನಾಡಿನ ಇಂಗಳೇಶ್ವರ, ಮನಗೂಳಿ ಶಾಸನಗಳು ಈ ಮಲಯಾಳ ಪಂಡಿತನನ್ನು ಹೆಸರಿಸುತ್ತವೆ. ಕರ್ನಾಟಕದ ಬೇರೆ ಕಡೆಯ ಶಾಸನಗಳು ಸಹ ಈ ಸಿಂಹಪರ್ಷೆಯನ್ನು ಉಲ್ಲೇಖ ಮಾಡುತ್ತಿದ್ದು ಶೈವ ಸಂಪ್ರದಾಯದ ಗುರುಪರಂಪರೆಗಳಲ್ಲಿ ಶಾಖೆಗಳು ತಲೆದೋರಿದ್ದು ಅವರು ತಮ್ಮ ಶಿಷ್ಯ ಪರಂಪರೆಯನ್ನು ಬೆಳೆಸಿದ್ದರೆಂದು ಗೊತ್ತಾಗುತ್ತದೆ.[೨]

ಇದೇ ಚಾಲುಕ್ಯ ೧ ನೇ ಸೋಮೇಶ್ವರನ ಕ್ರಿ.ಶ. ೧೦೬೨ ರ ಶಾಸನ ಸಿದ್ಧೇಶ್ವರ ದೇವಾಲಯದ ಗೋಡೆಯ ಶಾಸನ ಕೊಲ್ಹಾಪುರದ ಮಹಾಲಕ್ಷ್ಮಿಯ ಪಾದಪದ್ಮಜೀವಿಯಾದ ಗೌರಬ್ಬೆಯ ಮಗ ಮಾರಸಿಂಘ ಪ್ರಭು ತಾನೆ ನೀಡಿದ ಸಿದ್ಧೇಶ್ವರ ದೇವಾಲಯ ಹಾಗೂ ಇತರ ದೇವಾಲಯಗಳ ಸುಣ್ಣ ಬಣ್ಣಕ್ಕೆಂದು, ಬ್ರಾಹ್ಮಣ ಭೋಜನಕ್ಕೆಂದು ಮಹಾಜನರ ಕೈಯಲ್ಲಿ ೨೨೦೦ ಗದ್ಯಾಣ ನೀಡಿ ಅದರಿಂದ ಬರುವ ಹಣ ೨೯೦ ಗದ್ಯಾಣವನ್ನು ವೆಚ್ಚಕ್ಕಾಗಿ ನಿಗದಿ ಪಡಿಸಿದ್ದನ್ನು ತಿಳಿಸುವುದು.[೧೩] ಇಲ್ಲಿಯೂ ಸಹ ಶಾಸನ ಜೀರ್ಣೋದ್ಧಾರವೆಂದಿದ್ದು ಸುತ್ತಲಿನ ಪ್ರಾಕಾರ ಅಥವಾ ಇತರ ಸ್ಮಾರಕಗಳನ್ನು ಕಟ್ಟಲು ವ್ಯವಸ್ಥೆಯನ್ನು ಮಾರಸಿಂಘನು ಮಾಡಿರಬೇಕು.

ಕ್ರಿ.ಶ. ೧೦೬೮-೬೯ ರ ಮತ್ತೊಂದು ಸಿದ್ಧೇಶ್ವರ ಗುಡಿಯ ಗೋಡೆ ಶಾಸನ ಕೊಲ್ಹಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪಜೀವಿ ನಿಂಬಕುಳದ ಗೌರಬ್ಬೆಯ ಗಂಡ ಹಾಗೂ ಮಾರಸಿಂಘನ ತಂದೆಯಾದ ಕೊಲ್ಹಾಪುರದ ಪ್ರಭುದೇವರಾಯ ನಾಯಕನು ಈ ಕರ್ಣ್ನನ ಶಿರವೂರ ಸಿದ್ಧೇಶ್ವರ ದೇವರಿಗೆಂದು ಭೂಮಿದಾನ ಮಾಡಿದ್ದನ್ನು ತಿಳಿಸುವುದು.[೧೪] ಇಲ್ಲಿ ಶಾಸನದ ಉಲ್ಲೇಖಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಮಾರಸಿಂಘನ ದಾನ, ದಾನದ ಗುಣಗಳನ್ನು ತಿಳಿಸುತ್ತಿದ್ದುದ್ದರಿಂದಲೇ ಮುಂದೆ ಗ್ರಾಮಕ್ಕೆ ಶಾಸನ ಕರ್ಣ್ನನ ಶಿರವೂರವೆಂದು ಕರೆಯುವುದು. ಕರ್ಣ್ನವೆಂದರೆ ದಾನಕ್ಕೆ ಹೆಸರಾದ ಮಹಾಭಾರತದ ಕರ್ಣ್ನನಾಗಿದ್ದು ದಾನಕ್ಕೆ ಶಿರೂರ ಗ್ರಾಮವು ಅಷ್ಟೇ ಪ್ರಾಮುಖ್ಯತೆ ನೀಡಿತ್ತೆಂಬುದು ಶಾಸನದಿಂದ ತಿಳಿದು ಬರುತ್ತದೆ.

ಕಾಲಾಂತರದಲ್ಲಿ ಕೊಲ್ಹಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪಜೀವಿಯಾದ ಮಾರಸಿಂಘನ ವಂಶಾವಳಿಯನ್ನು ಶಾಸನ ತಿಳಿಸುವುದು. ಗೌರಬ್ಬೆ ಹಾಗೂ ದೇವರಾಯನ ಮಗನಾದ ಮಾರಸಿಂಘ, ಇವನ ಮಡದಿ ರೆಬ್ಬರದೇವಿ, ಮಗ ಸೋವನಯ್ಯ, ಹೆಂಡತಿ ಲಿಂಗಾದೇವಿ, ಇವರ ಮಗಳು ಅಕ್ಕಾದೇವಿ ಗಂಡ ಚೌಡೆಯನಾಯಕ, ಇವರ ಮಗಳು ಲಕ್ಮಾದೇವಿ ಗಂಡ ದೇವರಸರನ್ನು ಹೆಸರಿಸುತ್ತದೆ. ಶಾಸನ ಮೊದಲ ಭಾಗದಲ್ಲಿ ಮಾರಸಿಂಘನು ಶಿರೂರದಲ್ಲಿ ಮಲ್ಲಿಕಾರ್ಜುನ ಹೆಸರಿನ ದೇವಾಲಯ, ಶಿಲಾಸ್ತಂಭ ಹಾಗೂ ಮೂರು ಕೆರೆಗಳನ್ನು ಕಟ್ಟಿಸಿದ ಕುರಿತು ತಿಳಿಸುತ್ತದೆ. ನಂತರ ಮಾರಸಿಂಘನ ಮರಿಮೊಮ್ಮಗಳಾದ ಲಕ್ಮಾದೇವಿಯನ್ನು ಮಹಾ ಪ್ರಭುವಿಣಿಯೆಂದು ಹೊಗಳುತ್ತಾ, ಅವಳ ಕುಲಕರಣಿ ಆದಿಯಣ್ಣನನ್ನು, ಅವನ ಮಡದಿ ಚಂಡಿಯಕ್ಕನನ್ನು ಉಲ್ಲೇಖಿಸುತ್ತದೆ. ಶಿರೂರದಲ್ಲಿ ಆದಿಯಣ್ಣನು ಸೂರ್ಯ ದೇವಾಲಯ ಕಟ್ಟಿಸಿದನು. ಇದಕ್ಕೆ ಲಕ್ಮಾದೇವಿಯು ೩೨ ಗೇಣು ಕೋಲಿನಿಂದ ಅಳೆದು ಭೂಮಿದಾನ ನೀಡಿದಳು.[೧೫]

ಶಿರೂರ ಗ್ರಾಮವನ್ನೊಳಗೊಂಡು ಬಾಗಡಗೆ ನಾಡಿನ ಮೇಲೆ ಚಾಲುಕ್ಯ ಅಕ್ಕಾದೇವಿ ಆಳಿದ್ದರೆ,

ಅದೇ ಕಾಲದಲ್ಲಿದ್ದ ಮಾರಸಿಂಗನ ತಾಯಿ ಗೌರಬ್ಬೆ ಸಹ ಕೆಲವು ಕಾಲ ಶಿರೂರನ್ನು ಆಳಿದ್ದನ್ನು ಸಹಜವಾಗಿ ಊಹಿಸಲು ಸಾಧ್ಯವಿದೆ. ಶಾಸನದ ಪ್ರಕಾರ ಮಾರಸಿಂಘ– ರೆಬ್ಬಲದೇವಿಯರ ಮಗನಾದ ಸೋವನಯ್ಯನ ನಂತರ ಮಗಳಾದ ಅಕ್ಕಾದೇವಿ ಆಡಳಿತ ನಡೆಯಿಸಿರಬೇಕು. ತದನಂತರ ಈಕೆಯ ಮಗಳಾದ ಲಕ್ಮಾದೇವಿ ಮಹಾಪ್ರಭುವಿಣಿಯಾಗಿ ಶಿರೂರನ್ನು ಆಳಿದ್ದು ಚರಿತ್ರೆಯ ಅಧ್ಯಯನದಲ್ಲಿ ಬಾಗಡಗೆ ಪ್ರದೇಶವು ಹೊಂದಿದ ಪ್ರಾಮುಖ್ಯತೆ ಕುರಿತು ತಿಳಿದುಬರುವುದು. ಏಕೆಂದರೆ ೧೦೦ ವರ್ಷಗಳ ಅವಧಿಯಲ್ಲಿ ಚಾಲುಕ್ಯ ಅಕ್ಕಾದೇವಿಯನ್ನೊಳಗೊಂಡು ಮಾರಸಿಂಘನ ತಾಯಿ ಗೌರಬ್ಬೆ, ಮೊಮ್ಮಗಳು ಅಕ್ಕಾದೇವಿ ಮಗಳು ಲಕ್ಮಾದೇವಿಯನ್ನು ಹಿಡಿದು ಒಟ್ಟು ನಾಲ್ಕು ಸ್ತ್ರೀಯರು ಶಿರೂರ ಪುರವನ್ನು ಆಳಿದ್ದು, ಕೆಲವು ಕಾಲ ಕ್ರಿ.ಶ. ೧೦೪೯ ರ ಸುಮಾರಿನಲ್ಲಿ ಚಾಲುಕ್ಯ ೧ ನೇ ಸೋಮೇಶ್ವರನ ಮಡದಿ ಲೀಳಾದೇವಿ ಸಹ ಇಲ್ಲಿದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದನ್ನು ಗಮನಿಸಿದರೆ, ಚಾಲುಕ್ಯ ಹಾಗೂ ಅವರ ಅಧೀನ ಪ್ರಭುಗಳು ತಮ್ಮ ಹೆಣ್ಣುಮಕ್ಕಳಿಗೆ ಶಿರೂರ ಪುರ ಗ್ರಾಮ ರಕ್ಷಣೆ ನೀಡುವ ಸ್ಥಳವಾಗಿ ಹೊರಹೊಮ್ಮಿತ್ತಲ್ಲದೆ ಅವರ ಆಡಳಿತದ ಮುಖ್ಯ ಘಟಕವಾಗಿ ರುವುದೆಂದು ಹೇಳಬಹುದು.

ಶಿರೂರ ಗ್ರಾಮದಂತೆ ಬೇವೂರ ಗ್ರಾಮವು ಸಹ ದೇವಾಲಯಗಳ ಸಮುಚ್ಚಯವಾಗಿದ್ದು ಇಲ್ಲಿ ನಾಲ್ಕು ದೇವಾಲಯ, ಶಿಲ್ಪಗಳು ಕಂಡುಬರುವುವು. ಸೋಮೇಶ್ವರ ದೇವಾಲಯದ ಎದುರಿನ ಶಾಸನ ಚಾಲುಕ್ಯ ೧ ನೇ ಸೋಮೇಶ್ವರನ ಸಾಮಂತ ನೊಳಂಭಾದಿ ರಾಜನನ್ನು ಹೆಸರಿಸುತ್ತದೆ. ಜೊತೆಗೆ ಸುಭರಾಜನೆಂಬ ಬ್ರಾಹ್ಮಣ ಕಿರಿಯ ಬೆಹೂರದಲ್ಲಿ ದೇವಾಲಯ ನಿರ್ಮಿಸಿದ ವಿಷಯವನ್ನು ಉಲ್ಲೇಖಿಸುವುದು.[೬] ಶಾಸನ ತ್ರುಟಿತಗೊಂಡಿದ್ದರಿಂದ ಹೆಚ್ಚಿನ ವಿಷಯ ಗೊತ್ತಾಗುವುದಿಲ್ಲ. ಇವತ್ತಿನ ಸೋಮೇಶ್ವರ ಹೆಸರಿನ ದೇವಾಲಯವು ಅಂದು ಸುಭರಾಜನೆಂಬ ಬ್ರಾಹ್ಮಣ ೧ ನೇ ಕಲ್ಯಾಣ ಚಾಲುಕ್ಯ ೧ನೇ ಸೋಮೇಶ್ವರನ ಹೆಸರಿನಲ್ಲಿ ಕಟ್ಟಿಸಿರಬೇಕು.

ಕ್ರಿ.ಶ. ೧೧೦೦ ರ ಶಿರೂರದ ಸಿದ್ಧೇಶ್ವರ ದೇವಾಲಯದ ದಕ್ಷಿಣ ಗೋಡೆಯ ಶಾಸನವು, ಸಿದ್ಧೇಶ್ವರ ದೇವರ ಸ್ಥಾನಾಚಾರ್ಯ ಪ್ರಸನ್ನರಾಶಿ ಪಂಡಿತ ದೇವನನ್ನು ಉಲ್ಲೇಖಿಸುತ್ತಿದ್ದು, ಮಲಯಾಳ ಪಂಡಿತನ ಶಿಷ್ಯ ಪರಂಪರೆ ಮುಂದುವರಿದುಕೊಂಡು ಬಂದಿದ್ದು ಗೊತ್ತಾಗುತ್ತದೆ. ಈ ಪ್ರಸನ್ನರಾಶಿ ಪಂಡಿತನು ದೇವರ ಪೊಲದೊಳಗೆ ಬಾಚಿಸೆಟ್ಟಿಯ ಕೆರೆಗೆಂದು ಕೆರೆಯ ಕೆಳಗಿನ ಕರಿಯನೆಲ ಕೆಯಿಮತ್ತರು ನಾಲ್ಕು ನೀಡಿ ತಾನು ಸಹ ಉಳಿದವರಂತೆ ಧರ್ಮವಂತ ನೆಂಬುದನ್ನು ತಿಳಿಸಿಕೊಟ್ಟಿದ್ದಾನೆ.

ತ್ರುಟಿತ ಕಾಲಮಾನವಿಲ್ಲದ ಹಳ್ಳೂರ ಮೇಲಗುಡಿ(ಬಸದಿ) ಮುಂದೆ ಬಿದ್ದಿರುವ ಶಾಸನ ಕಲ್ಯಾಣ ಚಾಲುಕ್ಯ ೩ ನೇ ಸೋಮೇಶ್ವರ ರಾಜ್ಯವಾಳುತ್ತಿದ್ದಾಗ ಅವನ ಮಂಡಳೇಶ್ವರ ದಂಡನಾಯಕ ಲೆಕ್ಕ

ಪಯ್ಯರಸ ಎರಡುನೂರು ನಾಡನ್ನು ಆಳುತ್ತಿದ್ದನು. ಅವನ ವಿಷಯಾಧಿಕಾರಿ ಪ್ರಧಾನ ದಂಡನಾಯಕನಾಗಿ ಸೋವರಸನ ಹೇಳಿಕೆಯಂತೆ ಬೆಳ್ವಲನಾಡಿನ ಬಳಿಯ ಬಾಡ ಹಳ್ಳೂಹೂರದ ಪೆರ್ಗ್ಗಡೆ ದೇವರಸ ಹಾಗೂ ಕರಣರು ಸೇರಿ ಪಶ್ಚಿಮದ ನಾಗೇಶ್ವರ ದೇವರ ರಂಗಭೋಗಕ್ಕೆಂದು ದಾನ ನೀಡಿದ ಕುರಿತು ಶಾಸನ ತಿಳಿಸುವುದು (ದಾನದ ವಿವರ ಹಾಳಾಗಿದೆ.)[೧೬] ಇಲ್ಲಿ ಪಶ್ಚಿಮ ನಾಗೇಶ್ವರ ದೇವರೆಂದರೆ ಇಂದಿನ ಬಸವೇಶ್ವರ ದೇವಾಲಯವಾಗಿದೆ.

ಪ್ರಾಚೀನ ಕಾಲದಲ್ಲಿ ದೇವಾಲಯದ ಸುತ್ತಲೂ ಉದ್ಯಾನವನವನ್ನು ನಿರ್ಮಿಸಿದ ಕುರಿತು ಕ್ರಿ.ಶ. ೧೧೮೫-೬ ರ ತುಳಸಿಗಿರಿ ಶಾಸನ ತಿಳಿಸುತ್ತದೆ. ಜನರು ಉದ್ಯಾನವನ ನಿರ್ಮಿಸಿ ಅದರಲ್ಲಿ ಸಂತೋಷ ಕಾಣುತ್ತಿದ್ದರೆಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆಯಾಗಿದೆ. ಚಾಲುಕ್ಯ ನಾಲ್ಕನೇ ಸೋಮೇಶ್ವರ ರಾಜ್ಯವಾಳುತ್ತಿದ್ದರೆ ಅವನ ಸಾಮಂತ ಸೋಮನು ಈ ಭಾಗದಲ್ಲಿ ಆಳುತ್ತಿದ್ದನು. ತುಳಸಿಗಿರಿ ಗ್ರಾಮದ ಶಿವಾಲಯದ ಸುತ್ತಲೂ ಕಿತ್ತಳೆ, ವಕುಳ, ಹಲಸು, ಹೊಂಗೆ, ಬಾಳೆ ಗಿಡಗಳಿಂದ ಕೂಡಿದ ಉದ್ಯಾನವನವನ್ನು ಮಾಡಲಾಗಿತ್ತೆಂದು ಶಾಸನ ತಿಳಿಸುವುದು. ಜೊತೆಗೆ ಶಿವಾಲಯದ ಖಂಡಸ್ಫೂಟಿತ ಜೀರ್ಣೋದ್ಧಾರ, ದೇವಾಲಯ ಕಾರ್ಯಕ್ಕೆಂದು ಜಗದ್ದಾನಿ ಜಗತಾಪ ಅಮ್ಮ ಸಾಮಂತನು ಭೂಮಿದಾನವನ್ನು ನೀಡಿದ್ದನು.[೧೭]

ಬಾಗಡಗೆ ನಾಡಿನ ಪರಿಸರದಲ್ಲಿ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರಂತೆ, ದೇವಗಿರಿ ಯಾದವರ ಕಾಲದಲ್ಲಿ ದೇವಾಲಯಗಳು ನಿರ್ಮಾಣವಾಗಿರುವ ವಿಷಯವನ್ನು ಶಾಸನಗಳು ತಿಳಿಸುವುವು. ಕ್ರಿ.ಶ. ೧೨೦೬ ರ ಸೇವುಣ ಸಿಂಘಣನ ಮಂಕಣಿ ಶಾಸನ[೧೮] ಸಾದೇವನು (ಸಹದೇವ) ಮಂಕಣಿಯಲ್ಲಿ ಬಾಸ್ಕರದೇವ ಹೆಸರಿನ ತ್ರಿಕೂಟ ದೇವಾಲಯವನ್ನು ಮಾಡಿಸಿ ೫೦೦ ಜನ ಮಹಾಜನರಿಗೆ ಭೂಮಿದಾನ ನೀಡಿದನು. ಜೊತೆಗೆ ಮಾರ್ಕಂಡೇಯ ಪುರವೆಂಬ ಪುರವನ್ನು ಕಟ್ಟಿಸಿದ. ಬ್ರಾಹ್ಮಣರಿಗಾಗಿ ಈ ಪುರದ ಮಧ್ಯ ಲಕ್ಷ್ಮೀನರಸಿಂಹ ದೇವಾಲಯವಿತ್ತು. ಇವುಗಳ ಜೊತೆಗೆ ಶ್ರೀಧರ, ವಾಸುದೇವ, ಕ್ಷೇತ್ರಾಧಿಪತಿ ಭೈರವ, ಚಂಡಿ, ಮಾತೃಕೆ, ನಂದಿ, ಗಣಪತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನೆಂದು ಹೇಳುವುದು.

ಹೀಗಿರುವಾಗ ಯಾದವ ಸಿಂಘಣ ಗೋವೆ ಕದಂಬ ಅರಸ ಜಯಕೇಶಿಯ ಮಗಳು ಮೈಳಲದೇವಿಯನ್ನು ಕರೆದುತರಲು ಹೋಗುವ ಸಂದರ್ಭದಲ್ಲಿ ದಕ್ಷಿಣ ದಿಕ್ಕಿನ ದಿಗ್ವಿಜಯ ಮಾಡುತ್ತಾ ಕೃಷ್ಣಾವೇಣ್ಣಾ ನದಿ ತೀರದ ಕೊಟ್ಟಂಬಾಗೆ (ಕೊಟಬಾಗಿ) ಎಂಬಲ್ಲಿ ಬಂದಾಗ ಕೇಶಾಪುರಿಯ ಬ್ರಾಹ್ಮಣರಿಗೆ ಮತ್ತು ದೇವರುಗಳಿಗೆ ಭೂಮಿದಾನ ನೀಡಿದನು.

ಈ ಶಾಸನದ ನಂತರದ ಭಾಗದಲ್ಲಿ ಶಾಸನ ಭರತ ಕ್ಷೇತ್ರಕ್ಕೆ ಕುಂತಳದೇಶ, ಕುಂತಳಕ್ಕೆ

ತರ್ದವಾಡಿ, ಇದಕ್ಕೆ ಮುಕುಟವಿದ್ದ ಹಾಗೆ ಮಂಕಣಿಯಿತ್ತು. ಸಿಂಘಣನ ದಂಡನಾಥ ಸಹದೇವ. ಇವನು ಕಾಶ್ಮೀರದ ಸಹವಾಸಿ ವಂಶಕ್ಕೆ ಸೇರಿದವನು. ಇವನ ವಂಶಾವಳಿಯಲ್ಲಿ ನಾರಾಯಣಭಟ್ಟ, ಇವನ ಮಗ ಭೈಸ್ಯಭಟ್ಟ, ಇವನ ಮಕ್ಕಳು ಶ್ರೀಧರಭಟ್ಟ ಮತ್ತು ಸಿಷ್ಟಭಟ್ಟರು, ಶ್ರೀಧರಭಟ್ಟನ ಪತ್ನಿ ಲಕ್ಷ್ಮಾಂಬಿಕೆ. ಇವರ ಮಗ ಸಹದೇವನು ಮಗನಾಗಿ ಹುಟ್ಟಿದ. ಸಿಷ್ಟಭಟ್ಟನ ಪತ್ನಿ ಸೋವಲದೇವಿಗೆ ತಿಕ್ಕರಾಜ ಮತ್ತು ಕೇಶವ ದೇವರು ಹುಟ್ಟಿದರು. ಈ ಕೇಶವದೇವನು ಕೇಶಾಪುರದಲ್ಲಿ ಲಕ್ಷ್ಮೀನರಸಿಂಹ, ಹರಿಹರ ತ್ರಿಕೂಟ ದೇವಾಲಯ ಮಾಡಿಸಿದ ಕುರಿತು ವಿವರವಾಗಿ ತಿಳಿಸುವುದು.

ಯಾದವ ಸಿಂಘಣನ ಕ್ರಿ.ಶ. ೧೨೪೯ರ ಕಾಲದ ಶಾಸನ ಶಿರೂರದ ರಾಮಲಿಂಗೇಶ್ವರ ದೇವಾಲಯದಲ್ಲಿದ್ದು, ಅದು ಬಿಲ್ಲಹರಳ ಗ್ರಾಮದ ಗಾವುಂಡನ ಪತ್ನಿಯರಾದ ದೇಕಿ ಗಾವುಂಡಿ ಮತ್ತು ಸುಗ್ಗಿ ಗಾವುಂಡಿಯರು ಸೇರಿ ಎರಡು ಗದ್ಯಾಣಗಳನ್ನು ಬಡ್ಡಿಗೆ ಬಿಟ್ಟು ಅದರಿಂದ ಬರುವ ಬಡ್ಡಿಯಿಂದ ಮೂಲಸ್ಥಾನ ದೇವರ ಮಠದಲ್ಲಿ ವರ್ಷಕ್ಕೊಮ್ಮೆ ಅಲ್ಲಿನ ತಪೋಧನರ ಊಟದ ವ್ಯವಸ್ಥೆ ಮಾಡುತ್ತಾರೆ. ಇದರಲ್ಲಿ ೧೨ ಗಾವುಂಡರೆಂಬ ಉಲ್ಲೇಖ ಶಾಸನದಲ್ಲಿದೆ.[೨೦] ಗಮನಿಸಬೇಕಾದ ಅಂಶವೆಂದರೆ ಬಿಲ್ಲಹರಳ ಗ್ರಾಮವೆಂಬುದು ಇಂದಿನ ಬಿಲ್ಲಕೆರೂರ ಗ್ರಾಮವಾಗಿದೆ ಮತ್ತು ಆ ಗ್ರಾಮದ ಗಾವುಂಡನ ಪತ್ನಿಯರಾದ ದೇಕಿ ಮತ್ತು ಸುಗ್ಗಿಯರು ಗಾವುಂಡಿಯರೆಂದು ಕರೆಯಿಸಿಕೊಳ್ಳುತ್ತಿದ್ದು ಬಹುಶಃ ಬಿಲ್ಲಹರಳದ ಗಾವುಂಡಗಳಾಗಿ ಆಡಳಿತ ನಡೆಸಿರುವುದರ ಜೊತೆಗೆ ಶಿರೂರದ ಮೂಲಸ್ಥಾನ ದೇವರಿಗೆಂದು ೨ ಗದ್ಯಾಣಗಳನ್ನು ಬಡ್ಡಿಗೆ ನೀಡಿ ಅದರಿಂದ ಬರುವ ಬಡ್ಡಿಯ ಹಣವನ್ನು ದೇವರಿಗೆ ದಾನವಾಗಿ ನೀಡಿದ್ದನ್ನು ಕಾಣುತ್ತೇವೆ. ಶಾಸನದ ಮೂಲಸ್ಥಾನ ದೇವರೆಂದರೆ ಇಂದಿನ ರಾಮಲಿಂಗೇಶ್ವರ ದೇವಾಲಯ ವಾಗಿರುವ ಸಾಧ್ಯತೆಯಿದೆ.

ಬಾಗಡಗೆಯ ಕೆಲವು ಶಾಸನಗಳನ್ನು ತಿರುವಿಹಾಕಿದಾಗ ತಿಳಿದುಬರುವ ಒಂದು ಅಂಶವೆಂದರೆ ಬಡ್ಡಿರೂಪದಲ್ಲಿ ಭೂಮಿಯ ಮೇಲಿನ ಆದಾಯ, ಹಣದ ರೂಪದ ಬಡ್ಡಿಯ ಮೇಲಿನ ಆಧಾರಗಳನ್ನು ಸುಂಕದ ರೂಪವಾಗಿ ದೇವಾಲಯ, ಅದರ ಕಾರ್ಯಕ್ಕಾಗಿ ನೀಡಿರುವುದನ್ನು ಕಾಣುತ್ತೇವೆ. ಇಲ್ಲಿ ಶಿರೂರ ದೇವಾಲಯಗಳ ಪ್ರಾಮುಖ್ಯತೆ ಹೇಗಿತ್ತೆಂಬುದನ್ನು ಈ ಶಾಸನಗಳು ತಿಳಿಸುತ್ತವೆ. ಅಂದರೆ, ಬೇರೆ ಗ್ರಾಮದ ಹೆಣ್ಣುಮಕ್ಕಳಾದ ಗಾವುಂಡಿಗಳು ಶಿರೂರ ಮೂಲಸ್ಥಾನ ದೇವರಿಗೆ ದಾನ ನೀಡಿದ್ದು ತಿಳಿದುಬರುತ್ತದೆ. ಇದರ ಜೊತೆಗೆ ಬಾಗಡಗೆ ನಾಡಿನ ಅಧಿಕಾರದಲ್ಲಿ ಮಹಿಳೆಯರು ಪ್ರಭುವಿಣಿಯಾಗಿ ಚಾಲುಕ್ಯ ಅಕ್ಕಾದೇವಿ, ಮಾರಸಿಂಘನ ತಾಯಿ ಗೌರಬ್ಬೆ, ಮಗಳು ಅಕ್ಕಾದೇವಿ, ಮೊಮ್ಮಗಳು ಲಕ್ಕಾದೇವಿಯರ ಜೊತೆಯಲ್ಲಿ ಈ ಬಿಲ್ಲಹರಳದ ಗಾವುಂಡಿಯರು ಗಂಡನ ಅಧಿಕಾರದಲ್ಲಿ ಅಧಿಕಾರ ಪಡೆದು ಗಾವುಂಡಿಗಳಾಗಿ ಅಧಿಕಾರ ನಡೆಸಿರುವುದು ಕಂಡುಬರುತ್ತಿದ್ದು ಮೇಲಿನ ಸ್ತ್ರೀಯರ ಸಾಲಿನಲ್ಲಿ ಸೇರುವರು. ಇದರಿಂದ ಬಾಗಡಗೆ ನಾಡನ್ನು ಕಲ್ಯಾಣ ಚಾಲುಕ್ಯರಿಂದ ಹಿಡಿದು ಯಾದವರ ಕಾಲದ ಮಧ್ಯೆ ಮಹಿಳೆಯರೇ ಅಧಿಕಾರ ನಡೆಸಿರುವುದು ಕಂಡುಬರುವುದು.

ಶಿರೂರ ಗ್ರಾಮದಲ್ಲಿರುವ ಮಾರುತಿ ಗುಡಿ ಹತ್ತಿರದ ಬಂಡೆಯ ಹತ್ತಿರ ಬಿದ್ದ ಕ್ರಿ.ಶ. ೧೬ ನೇ ಶತಮಾನದ ಶಾಸನ ಹೊನ್ನಾಯಕನಕಟ್ಟಿ (ಹೊನ್ನಕಟ್ಟಿ) ಗ್ರಾಮದ ಸಂಗಣ್ಣಗೌಡ ಬಿಟ್ಟ ಹಣ ಮತ್ತು ಎಣ್ಣೆದಾನದ ಕುರಿತು ತಿಳಿಸುವುದು.[೨೧]

ಶಿರೂರ, ಹಳ್ಳೂರ, ಬೇವೂರ, ಮಂಕಣಿ, ತುಳಸಿಗಿರಿ ಗ್ರಾಮದ ಶಾಸನಗಳು ವೈಷ್ಣವ, ಶೈವ, ಶಾಕ್ತ ದೇವಾಲಯಗಳನ್ನು ಹೆಸರಿಸಿ ಇವನ್ನು ಕಟ್ಟಲು, ಜೀರ್ಣೋದ್ಧಾರ ಮಾಡಲು, ಅವುಗಳ ಇತರ ಪೂಜಾಕಾರ್ಯಕ್ಕೆಂದು ಶೈವ ಸ್ಥಾನಾಚಾರ್ಯರು, ಅರಸರು, ಸಾಮಂತರು, ದಂಡನಾಯಕರು, ಗಾವುಂಡ, ಪ್ರಭುವಿಣಿಯರು, ಗಾವುಂಡಿಯರೆಲ್ಲರು ಹಣ, ಭೂಮಿದಾನಗಳನ್ನು ನೀಡಿ ದೇವಾಲಯ ವಾಸ್ತುಶಿಲ್ಪದ ಪೋಷಕರಾಗಿ ಹೊರಹೊಮ್ಮಿದ್ದಾರೆ.

೫.೨. ದೇವಾಲಯಗಳ ವಾಸ್ತು ತಲವಿನ್ಯಾಸಗಳು

ಬಾಗಲಕೋಟೆ ಪರಿಸರದಲ್ಲಿ ಹಲವು ಜನರ ಪೋಷಣೆಯಿಂದ ನಿರ್ಮಾಣವಾದ ಪ್ರಾಚೀನ ದೇವಾಲಯಗಳು ವಿವಿಧ ತಲವಿನ್ಯಾಸವನ್ನು ಹೊಂದಿವೆ. ಮುಖ್ಯವಾಗಿ ಮೂರು ರೀತಿಯ ತಲಛಂದ ಹೊಂದಿದ್ದು ಏಕಕೂಟ, ದ್ವಿಕೂಟ, ತ್ರಿಕೂಟ ತಲವಿನ್ಯಾಸದಲ್ಲಿ ಕಂಡುಬರುತ್ತವೆ.

೫.೨.೧. ಏಕಕೂಟ ತಲವಿನ್ಯಾಸದ ದೇವಾಲಯಗಳು

ಏಕಕೂಟ ತಲವಿನ್ಯಾಸ ದೇವಾಲಯಗಳು ಬಾಗಲಕೋಟೆ ಪರಿಸರದ ದೇವಾಲಯಗಳು ಶಿರೂರದ ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿ ಒಟ್ಟು ಐದು ಗುಡಿಗಳಿದ್ದು ನಾಲ್ಕು ಚೌಕ ತಲಛಂದದಲ್ಲಿದ್ದರೆ, ಒಂದು ಆಯತಾಕಾರವಾಗಿದೆ. ಇದರ ಜೊತೆಯಲ್ಲಿ ಇದೇ ಗ್ರಾಮದ ಗಣೇಶ ಗುಡಿಯು ಒಂದಾಗಿದ್ದು ಇವೆಲ್ಲವೂ ಗರ್ಭಗೃಹ, ಅಂತರಾಳ ಹೊಂದಿವೆ. ಶಾಸನಗಳಲ್ಲಿ ಉಲ್ಲೇಖವಾದಂತೆ ಹಾಟಕೇಶ್ವರ, ವಿನಾಯಕ, ಭೈರವ, ವಿಷ್ಣುದೇವ, ಸೂರ್ಯ, ಚಂಡಿಕಾ ದೇವಾಲಯಗಳು ಪ್ರಮುಖವಾದ ಕೇವಲ ಗರ್ಭಗೃಹ ಮತ್ತು ಅಂತರಾಳ ಹೊಂದಿವೆ. ಇವುಗಳಲ್ಲಿ ಚಂಡಿಕಾ ದೇವಾಲಯವು ದೊಡ್ಡದಾಗಿದ್ದು ಗರ್ಭಗೃಹವೆನಿಸಿದ ಗುಡಿ ನಾಲ್ಕು ಸ್ತಂಭಗಳನ್ನು ಹೊಂದಿದ್ದು ಮುಂದುಗಡೆ ೨ ಸ್ತಂಭದ ಮುಖಮಂಟಪ ಹೊಂದಿದೆ. ಇದೊಂದು ಆಯತಾಕಾರದಲ್ಲಿರುವ ತಲವಿನ್ಯಾಸವಾಗಿದೆ. ಮತ್ತೊಂದು ಗಣೇಶ ಗುಡಿ ಶಿರೂರದ ಕೆರೆಯ ದಂಡೆಯ ಮೇಲೆ ಕಟ್ಟಲಾಗಿದ್ದು ತಲವಿನ್ಯಾಸದಲ್ಲಿ ಕೇವಲ ಗರ್ಭಗೃಹ ಮಾತ್ರ ಹೊಂದಿದೆ.

ಬೇವೂರದಲ್ಲಿರುವ ಕಾಳಿಕಾದೇವಿ ಗುಡಿಯು ಏಕಕೂಟ ಮಾದರಿ ತಲವಿನ್ಯಾಸ ಹೊಂದಿದ್ದು

ಗರ್ಭಗೃಹ, ನವರಂಗಮಂಟಪ ಮತ್ತು ಆಯತಾಕಾರದ ಮುಖಚತುಷ್ಕಿಗಳಿವೆ. ಇದೇ ಗ್ರಾಮದ ರಾಮೇಶ್ವರ ದೇವಾಲಯ ಸಹ ಏಕಕೂಟ ಮಾದರಿಯಲ್ಲಿದ್ದು ಶಿರೂರದ ಚಂಡಿಕಾ ಗುಡಿಯ ಹಾಗೆ ಆಯತಾಕಾರದ ತಲಛಂದವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ ಚೌಕಾದ ನವರಂಗಮಂಟಪ ಹೊಂದಿದೆ. ಮಂಕಣಿ ಗ್ರಾಮದಲ್ಲಿರುವ ಈಶ್ವರ ಗುಡಿಯು ಏಕಕೂಟ ತಲವಿನ್ಯಾಸ ಹೊಂದಿದ್ದು ಕೇವಲ ಗರ್ಭಗೃಹ, ಅಂತರಾಳ ಹೊಂದಿದೆ. ಬೊಮ್ಮಣಗಿ ಗ್ರಾಮದಲ್ಲೊಂದು ಈಶ್ವರ ಅಥವಾ ಬೊಮ್ಮಲಿಂಗ ಹೆಸರಿನ ದೇವಾಲಯವಿದ್ದು ಏಕಕೂಟ ತಲಛಂದದಲ್ಲಿದೆ. ಇದು ಗರ್ಭಗೃಹ, ಅಂತರಾಳ, ನವರಂಗಮಂಟಪ ಹೊಂದಿದೆ. ಹಾಗೆಯೇ ಬಿಲ್‌ಕೆರೂರದಲ್ಲಿರುವ ಈಶ್ವರ ಗುಡಿಯು ಏಕಕೂಟ ತಲಛಂದದಲ್ಲಿ ಗರ್ಭಗೃಹ, ಮುಖಮಂಟಪ ಹೊಂದಿದೆ.

ಏಕಕೂಟ ತಲವಿನ್ಯಾಸ ಗುಡಿಗಳಲ್ಲಿ ವಿಶಿಷ್ಟ ಹಾಗೂ ಸಾಂಧಾರ ಪ್ರಕಾರಕ್ಕೆ ಸೇರಿದ್ದಾಗಿದೆ. ಹಳ್ಳೂರದ ಮೇಲ್ಗುಡಿ ಬಸದಿ ಏಕಕೂಟ ತಲವಿನ್ಯಾಸದ ಸಾಂಧಾರ ಬಸದಿಯಾಗಿದ್ದು ಗರ್ಭಗೃಹ, ಪ್ರದಕ್ಷಿಣಾಪಥ, ಅಂತರಾಳ, ನವರಂಗಮಂಟಪಗಳನ್ನು ಹೊಂದಿದೆ.

೫.೨.೨. ದ್ವಿಕೂಟ ತಲವಿನ್ಯಾಸದ ದೇವಾಲಯಗಳು

ಏಕಕೂಟದಂತೆ ದ್ವಿಕೂಟ ತಲವಿನ್ಯಾಸದ ದೇವಾಲಯಗಳು ಬಾಗಲಕೋಟೆ ಪರಿಸರದಲ್ಲಿ ಕಂಡುಬರುತ್ತವೆ. ಶಿರೂರಿನ ಸಿದ್ಧೇಶ್ವರ ದೇವಾಲಯ ಒಂದು ಸಂಕೀರ್ಣ ದೇವಾಲಯವಾಗಿದ್ದು ಮಧ್ಯದ ಮೂಲ ದೇವಾಲಯವು ದ್ವಿಕೂಟ ತಲವಿನ್ಯಾಸದಲ್ಲಿದೆ. ಇದರಲ್ಲಿ ಎರಡು ಗರ್ಭಗೃಹಗಳು, ಒಂದು ಅಂತರಾಳ, ಒಂದು ಅರ್ಧಮಂಟಪ, ನವರಂಗ, ತೆರೆದ ಸಭಾಮಂಟಪ ಹೊಂದಿದೆ. ಇದೇ ಗ್ರಾಮದ ಮಧ್ಯವಿರುವ ರಾಮೇಶ್ವರ ದೇವಾಲಯವು ಸಹ ದ್ವಿಕೂಟ ತಲವಿನ್ಯಾಸದಲ್ಲಿದ್ದಂತೆ ಎರಡು ಗರ್ಭಗೃಹ, ಒಂದು ಅಂತರಾಳ, ಒಂದು ನವರಂಗ ಹಾಗೂ ಒಂದು ತೆರೆದ ಸಭಾಮಂಟಪ ಹೊಂದಿರುವುದು. ಹಾಗೆಯೇ ಇದೇ ಗ್ರಾಮದ ಮಧ್ಯದಲ್ಲಿ ಮತ್ತೊಂದು ದ್ವಿಕೂಟ ತಲವಿನ್ಯಾಸದ ಲಕ್ಷ್ಮೀನಾರಾಯಣ ದೇವಾಲಯವಿದ್ದು, ಎರಡು ಗರ್ಭಗೃಹ, ಒಂದು ಅಂತರಾಳ, ನವರಂಗ ಮಂಟಪಗಳನ್ನು ಹೊಂದಿರುವುದು. ಇವನ್ನು ಹೊರತು ಪಡಿಸಿದರೆ ಹಳ್ಳೂರದ ಬಸವೇಶ್ವರ ದೇವಾಲಯವು ಸಹ ದ್ವಿಕೂಟ ತಲವಿನ್ಯಾಸದಲ್ಲಿದೆ. ಇದರಲ್ಲಿ ಒಂದು ರಾಷ್ಟ್ರಕೂಟರ ಕಾಲದಲ್ಲಿ ಕಟ್ಟಲ್ಪಟ್ಟರೆ ಇನ್ನೊಂದನ್ನು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ. ಇಲ್ಲಿ ಎರಡು ಗರ್ಭಗೃಹ, ಮುಖಮಂಟಪಗಳನ್ನು ಹೊಂದಿದ್ದು ಮಧ್ಯದ ನಂದಿಮಂಟಪಕ್ಕೆ ಎರಡನ್ನು ಜೋಡಿಸಿ ದ್ವಿಕೂಟವನ್ನಾಗಿ ಮಾರ್ಪಡಿಸಲಾಗಿದೆ. ಇಲ್ಲಿ ನಂದಿಯನ್ನು ಹೆಚ್ಚು ಪೂಜಿಸುವುದರಿಂದ ನಂದಿ ಬಸವಣ್ಣನ ಪ್ರತೀಕವೆಂದು ಬಸವ, ಬಸವಣ್ಣ, ಬಸವೇಶ್ವರ ಹೆಸರಿನಿಂದ ಕರೆಯುವರು.

೫.೨.೩. ತ್ರಿಕೂಟ ತಲವಿನ್ಯಾಸದ ವಿನ್ಯಾಸದ ದೇವಾಲಯಗಳು

ಏಕಕೂಟ, ದ್ವಿಕೂಟ ತಲವಿನ್ಯಾಸದ ದೇವಾಲಯಗಳ ಜೊತೆಗೆ ಬಾಗಲಕೋಟೆ ಪರಿಸರದಲ್ಲಿ ಎರಡು ತ್ರಿಕೂಟ ದೇವಾಲಯಗಳು ಕಂಡುಬರುವುವು.

ಬೇವೂರದ ಸಂಗಮೇಶ್ವರ ದೇವಾಲಯವು ತ್ರಿಕೂಟ ತಲವಿನ್ಯಾಸದಲ್ಲಿದ್ದು ಮೂರು ಗರ್ಭಗೃಹ, ಮೂರು ಅಂತರಾಳಗಳು, ಒಂದು ನವರಂಗಮಂಟಪ ಮತ್ತು ಮುಖ ಚತುಷ್ಕಿಗಳಿವೆ. ಇದೇ ರೀತಿಯ ಮತ್ತೊಂದು ತ್ರಿಕೂಟ ತಲವಿನ್ಯಾಸದ ದೇವಾಲಯ ಮಂಕಣಿ ಗ್ರಾಮದಲ್ಲಿದ್ದು ಈಶ್ವರ ಹೆಸರಿನಿಂದ ಕರೆಯಲಾಗುತ್ತಿದೆ. ಇದು ಶಾಸನೋಕ್ತ ಹರಿಹರ ದೇವಾಲಯವಾಗಿದ್ದು, ತಲವಿನ್ಯಾಸದಲ್ಲಿ ಮೂರು ಗರ್ಭಗೃಹ, ನಾಲ್ಕು ಅರ್ಧಮಂಟಪ ಹಾಗೂ ನವರಂಗಮಂಟಪ ಮತ್ತು ಮುಖಮಂಟಪ ವನ್ನು ಹೊಂದಿದೆ.

ತ್ರಿಕೂಟಗಳಂತೆ ಮುಂದಿನ ಚತುಷ್ಕೂಟ, ಪಂಚಕೂಟ ತಲವಿನ್ಯಾಸದ ದೇವಾಲಯಗಳು ಕಂಡುಬರುವುದಿಲ್ಲ. ಮೇಲಿನ ದೇವಾಲಯ ಗುಡಿಗಳು ತಲವಿನ್ಯಾಸದ ವಿನ್ಯಾಸದಲ್ಲಿ ವೈವಿಧ್ಯತೆ ಹೊಂದಿದಂತೆ ಅವುಗಳ ವಿವಿಧ ಭಾಗಗಳು ಸಹ ಅಷ್ಟೇ ವೈವಿಧ್ಯಮಯ ಮತ್ತು ಸುಂದರ ಆಲಂಕಾರಿಕ ಲಕ್ಷಣಗಳಿಂದ ಕೂಡಿವೆ. ಇಂತಹ ಲಕ್ಷಣಗಳ ಕುರಿತು ದೇವಾಲಯಗಳ ವಿವರಣೆಯಲ್ಲಿ ಚರ್ಚಿಸಲಾಗಿದೆ.

೫.೩. ದೇವಾಲಯ ವಾಸ್ತುಶಿಲ್ಪದ ಹುಟ್ಟು ಬೆಳವಣಿಗೆ

ಪ್ರಾಚೀನ ಕಾಲದಿಂದಲೂ ವಾಸ್ತುಶಿಲ್ಪ ಕಲೆಯ ಹುಟ್ಟುಬೆಳವಣಿಗೆ ಬಗ್ಗೆ ವಿದ್ವಾಂಸರು ಮತ್ತು ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಉತ್ತರ ಭಾರತದ ದೇವಾಲಯಗಳ ವಾಸ್ತುಶಿಲ್ಪಕ್ಕೂ ದಕ್ಷಿಣ ಭಾರತದ ವಾಸ್ತುಶಿಲ್ಪಕ್ಕೂ ಭಿನ್ನತೆಯನ್ನು ಕಾಣಬಹುದು. ಉತ್ತರ ಭಾರತದ ದೇವಾಲಯಗಳು ನಾಗರ ಔತ್ತರ್ಯ ನಾಗರ ವಾಸ್ತುಶೈಲಿಯಲ್ಲಿ ನಿರ್ಮಾಣವಾಗಿವೆ. ದಕ್ಷಿಣ ಭಾರತದಲ್ಲಿ ದ್ರಾವಿಡ ವಾಸ್ತುಶಿಲ್ಪ ಶೈಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು. ಇದು ಬಾಗಲಕೋಟೆ ಜಿಲ್ಲೆಯ ಬಾದಾಮಿ, ಪಟ್ಟದಕಲ್ಲು, ಐಹೊಳೆ ದೇವಾಲಯಗಳಲ್ಲಿ ಕಾಣಬಹುದು. ಅಲ್ಲದೇ ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಾಗರ ಮತ್ತು ದ್ರಾವಿಡ ಶೈಲಿಯ ಮಿಶ್ರಣದಿಂದ ವೇಸರ ಶೈಲಿ ಬೆಳೆಯಿತು. ಇದು ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ಕಾಣಬಹುದು. ಇದು ಬಾಗಲಕೋಟೆ ಪರಿಸರದ ದೇವಾಲಯಗಳಲ್ಲಿಯೂ ಕಾಣಬಹುದು. ಉದಾ: ಶಿರೂರಿನ ಲಕ್ಷ್ಮೀನಾರಾಯಣ ದೇವಾಲಯ, ಗಣೇಶ ಮತ್ತು ಸಿದ್ಧೇಶ್ವರ

ದೇವಾಲಯಗಳು ಹಳ್ಳೂರಿನ ಬಸವೇಶ್ವರ (ವಿಶ್ವೇಶ್ವರ) ಬೇವೂರಿನ ಸಂಗಮೇಶ್ವರ ದೇವಾಲಯಗಳು ವಾಸ್ತುಶಿಲ್ಪ ದೃಷ್ಟಿಯಿಂದ ಉತ್ತಮ[೨೩] ಉದಾಹರಣೆಗಳಾಗಿವೆ. ಈ ದೇವಾಲಯಗಳು ಇತರೆ ದೇವಾಲಯಗಳ ಹುಟ್ಟು ಬೆಳವಣಿಗೆಗೆ ಕಾರಣವಾದವು. ಏಕೆಂದರೆ ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣ ಚಾಲುಕ್ಯರ ದೇವಾಲಯಗಳ ಲಕ್ಷಣ ಹೋಲುವ ದೇವಾಲಯಗಳು ಹೆಚ್ಚು ಬಾಗಲಕೋಟೆ ಪರಿಸರದಲ್ಲಿ ಕಂಡುಬರುತ್ತವೆ. ಇಲ್ಲಿ[೨೪] ಶಾಸ್ತ್ರಗ್ರಂಥಗಳ ಪ್ರಕಾರವೇ ದೇವಾಲಯ ನಿರ್ಮಿಸಲಾಗಿದೆ[೨೫]. ಶಿಲ್ಪಿಗಳು, ರೂವಾರಿಗಳು ಸಂದರ್ಭಕ್ಕೆ ಅನುಗುಣವಾಗಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ಕಂಡುಬರುವ ದೇವಾಲಯಗಳ ಲಕ್ಷಣಗಳಲ್ಲಿ ಕಾಣಬಹುದಾಗಿದೆ[೨೬]. ಸಾಂಧಾರ, ನಿರಂಧಾರ, ಸಂಕೀರ್ಣ ಮಾದರಿಯ ದೇವಾಲಯಗಳು ಇವೆ[೨೭]. ಚತುರಸ್ರ, ಆಯತಸ್ರ, ವೃತ್ತಾಕಾರ, ಅಷ್ಟಕೋನ, ಬಹುಕೋನ ಮುಂತಾದ ಮಾದರಿಯ ದೇವಾಲಯಗಳು ಬಾಗಲಕೋಟೆ ಪರಿಸರದ ದೇವಾಲಯಗಳಲ್ಲಿ ಈ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಇದು ಬಾಗಲಕೋಟೆ ಪರಿಸರದ ದೇವಾಲಯದ ವಾಸ್ತುಶಿಲ್ಪ ಹುಟ್ಟು ಬೆಳವಣಿಗೆಗೆ ಕಾರಣವಾಗಿದೆ.

೫.೪. ದೇವಾಲಯ ಮಾದರಿಗಳು

ಅ. ಚತುರಸ್ರ (ಚೌಕ)

ದೇವಾಲಯಗಳ ಗರ್ಭಗೃಹಗಳ ಹೊರಭಾಗದ ವಿನ್ಯಾಸದ ಮೇಲಿಂದ ಚತುರಸ್ರವೆಂದರೆ ಗರ್ಭಗೃಹದ ಹೊರ ಅಧಿಷ್ಠಾನ ಭಿತ್ತಿ, ಪ್ರಸ್ತರ, ವಿಮಾನಗಳು ಚೌಕಾಗಿರಬೇಕು. ಇಂತಹ ಮಾದರಿಗೆ ಬಾಗಲಕೋಟೆ ಪರಿಸರದ ಶಿರೂರಿನ ಲಕ್ಷ್ಮೀನಾರಾಯಣ ದೇವಾಲಯ, ಗಣೇಶ, ಸಿದ್ಧೇಶ್ವರ ದೇವಾಲಯ ಸಂಕೀರ್ಣದ ನಾಲ್ಕು ಮೂಲೆಯಲ್ಲಿರುವ ನಾಲ್ಕು ಚಿಕ್ಕ ಗುಡಿಗಳು, ಶ್ರೀ ರಾಮಲಿಂಗ ದೇವಾಲಯದ ಒಂದು ಗರ್ಭಗೃಹ (ಪಶ್ಚಿಮಮುಖ), ಬೇವೂರಿನ ಕಾಳಿಕಾದೇವಿ, ಇತ್ಯಾದಿಗಳು ಸೇರುತ್ತವೆ.

ಆ. ಆಯತಸ್ರ (ಆಯತಾಕಾರ)

ಈ ಮಾದರಿಯ ದೇವಾಲಯ ಗರ್ಭಗೃಹಗಳು ಅಗಲ ಕಡಿಮೆ, ಹೆಚ್ಚು ಉದ್ದವಾಗಿದ್ದು ಆಯತಾಕಾರದಲ್ಲಿರುತ್ತವೆ. ಇಂತಹ ದೇವಾಲಯಗಳು ಬೇವೂರಿನ ರಾಮೇಶ್ವರ, ಶಿರೂರ ಸಿದ್ಧೇಶ್ವರ ದೇವಾಲಯ ಸಂಕೀರ್ಣದ ಚಂಡಿಕಾ ದೇವಾಲಯವಾಗಿವೆ.

ಇ. ಕೋನಾಕಾರ

ಕೋನಾಕಾರ ಮಾದರಿಯೆಂದರೆ ಅಲಂಕಾರಕ್ಕೆ ಒತ್ತುಕೊಟ್ಟು ದೇವಾಲಯಗಳಲ್ಲಿ ಇವು ಕಂಡುಬರುತ್ತವೆ. ಮುಖ್ಯವಾಗಿ ಚತುಷ್ಕೋನ, ಪಂಚಕೋನ, ಷಟ್‌ಕೋನ, ಅಷ್ಟಕೋನ, ಸಪ್ತಕೋನ,

ನವ, ದಶಕೋನಗಳೆಂದು ಕರೆಯಲಾಗುತ್ತದೆ. ಇಂತಹ ಕೋನಾಕಾರವಾಗಿರುವ ದೇವಾಲಯಗಳ ತಲವಿನ್ಯಾಸವನ್ನು ತ್ರಿರಥ, ಪಂಚರಥ, ಸಪ್ತರಥ, ನವರಥ ಮಾದರಿಯಲ್ಲಿ ನೋಡಲಾಗಿದ್ದು, ಕ್ರಮವಾಗಿ ತ್ರಿರಥದಲ್ಲಿ ಭದ್ರ-ಕರ್ಣಗಳೆಂದು, ಪಂಚರಥದಲ್ಲಿ ಭದ್ರ ಕೆಲವು ಬಾರಿ ಸುಭದ್ರ ಹಾಗೂ ಉಪಭದ್ರ ಮತ್ತು ಕರ್ಣಗಳು ಬರುತ್ತವೆ. ಸಪ್ತರಥ ಮತ್ತು ನವರಥಗಳಲ್ಲಿ ಸುಭದ್ರ, ಭದ್ರ, ಉಪಭದ್ರ, ಪ್ರತಿಭದ್ರ, ಕರ್ಣ, ಪ್ರತಿಕರ್ಣಗಳೆಂದು ಕರೆಯಲಾಗುತ್ತಿದ್ದು ಭದ್ರ, ಸುಭದ್ರ ಭಾಗಗಳು ಗೋಡೆಯಿಂದ ಮಧ್ಯದಲ್ಲಿ ಮುಂದಕ್ಕೆ ಬಂದ ಭಾಗ. ಪ್ರತಿಭದ್ರ ಅದಕ್ಕಿಂತ ಸ್ವಲ್ಪ ಹಿಂದಕ್ಕೆ, ಕರ್ಣ, ಪ್ರತಿಕರ್ಣಗಳು ಪ್ರತಿಭದ್ರ ಹಾಗೂ ಉಪಭದ್ರಗಳಿಗಿಂತ ಹಿಂದಕ್ಕೆ ಇರುತ್ತವೆ. ಈ ಕರ್ಣ, ಪ್ರತಿಕರ್ಣ, ಭದ್ರ, ಪ್ರತಿಭದ್ರಗಳ ಮಧ್ಯ ಹಿಂದಕ್ಕೆ ಸರಿದ ಭಾಗದ ಗೋಡೆಯನ್ನು ಇಕ್ಕೆಲವೆಂತಲು ಕರೆಯಲಾಗಿದೆ. ಈ ಕೋನಗಳು ಕೆಲವು ಬಾರಿ ಹೊರ ಭಿತ್ತಿಯಲ್ಲಿ(ಚೌಕಾಕಾರದ ಭಿತ್ತಿ) ಕುಡ್ಯ ಸ್ತಂಭ(ಅರೆಗಂಭ)ಗಳ ಮೇಲಿಂದಲೂ ಚತುಷ್ಕೋನ, ಷಟ್‌ಕೋನ, ಅಷ್ಟಕೋನ, ದಶಕೋನ ಮಾದರಿ ತಲಛಂದ ವಿನ್ಯಾಸವೆಂತಲು ಕರೆಯಲಾಗುತ್ತದೆ.

ಈ ಮಾದರಿಯಲ್ಲಿ ಶಿರೂರಿನ ಸಿದ್ಧೇಶ್ವರ ದೇವಾಲಯ ಸಂಕೀರ್ಣದ ಚಿಕ್ಕ ನಾಲ್ಕು ದೇವಾಲಯಗಳ ತಲಛಂದದಲ್ಲಿ ಚತುಷ್ಕೋನದ ಕುಡ್ಯಸ್ತಂಭದ ಮಾದರಿ ಕಂಡುಬರುವುದು. ಅದೇ ರೀತಿ ಮೂಲ ಸಿದ್ಧೇಶ್ವರ ಗುಡಿಯ ನವರಂಗದ ಉತ್ತರ ಗೋಡೆಗೆ ದಕ್ಷಿಣ ಮುಖ ಮಾಡಿ ಚಿಕ್ಕ ಗುಡಿ ನಿರ್ಮಿಸಲಾಗಿದ್ದು ಅದರ ನೋಟ ಪಂಚರಥದ ಸಪ್ತಕೋನದಲ್ಲಿದೆ. ಹಳ್ಳೂರಿನ ದ್ವಿಕೂಟ ಬಸವೇಶ್ವರ ದೇವಾಲಯದ ಎರಡು ಗರ್ಭಗೃಹದ ತಲಛಂದ ಸಪ್ತಕೋನದಲ್ಲಿ ಪಂಚರಥ ಮಾದರಿ ವಿನ್ಯಾಸ ಹೊಂದಿದ್ದು ಇಲ್ಲಿ ಕುಡ್ಯ ಸ್ತಂಭಗಳಿವೆ. ಶಿರೂರಿನ ರಾಮಲಿಂಗ ದೇವಾಲಯದ ಪೂರ್ವಮುಖ ಪಶ್ಚಿಮ ಗರ್ಭಗೃಹದ ತಲಛಂದ ಕುಡ್ಯಸ್ತಂಭರಹಿತ ಪಂಚರಥದ ಷಟ್‌ಕೋನದಲ್ಲಿದೆ. ಬೇವೂರಿನ, ಸಂಗಮೇಶ್ವರ ದೇವಾಲಯ ತ್ರಿಕೂಟವಾಗಿದ್ದು ಮೂರು ಗರ್ಭಗೃಹಗಳು ಸಪ್ತರಥದ ಕುಡ್ಯಸ್ತಂಭಯುಕ್ತ ಅಷ್ಟಕೋನ ಮಾದರಿ ತಲವಿನ್ಯಾಸದಲ್ಲಿವೆ.

೫.೫. ದೇವಾಲಯ ನಿರ್ಮಾಣದ ಸ್ಥಳ ಮತ್ತು ಕಟ್ಟುವ ಸಾಮಗ್ರಿ

ದೇವಾಲಯ ಮಾದರಿ ತಲವಿನ್ಯಾಸ ಸಿದ್ಧಪಡಿಸಿಕೊಂಡ ನಂತರ ರೂವಾರಿ, ಶಿಲ್ಪಿಗಳು ದೇವಾಲಯ ನಿರ್ಮಾಣವನ್ನು ಎಲ್ಲಿ, ಹೇಗೆ ಯಾವ ದಿಕ್ಕಿಗೆ ಮುಖ ಹಾಗೂ ಕಟ್ಟಲು ಯಾವ ಕಲ್ಲು ಬಳಸಬೇಕೆಂಬುದನ್ನು ನಿರ್ಧರಿಸುತ್ತಿದ್ದರು.

ಅ. ಸ್ಥಳ

ಸಾಮಾನ್ಯವಾಗಿ ದೇವಾಲಯವನ್ನು ಪವಿತ್ರ ಸ್ಥಳದಲ್ಲಿ ಕಟ್ಟುವ ವಾಡಿಕೆಯಿದೆ. ವಾಸ್ತುಗ್ರಂಥ ಮಾನಸಾರವು ಏಳು ರೀತಿಯ ಸ್ಥಳ ನಿರ್ದೇಶನ ನೀಡುತ್ತದೆ. ಅದರ ಪ್ರಕಾರ ನದಿ ಪಾತ್ರ, ಬೆಟ್ಟ,

ದಿನ್ನೆ, ಬೆಟ್ಟದ ಬುಡದಲ್ಲಿ, ಸಮುದ್ರಪಾತ್ರ (ದಂಡೆ), ಬೆಟ್ಟದ ತುದಿ, ಕೊಳ್ಳ(ನೀರಿನ ಆಸರೆ)ಗಳ ಸ್ಥಳಗಳಲ್ಲಿ ದೇವಾಲಯ ನಿರ್ಮಿಸಲು ಹೇಳುತ್ತದೆ.[೨೮]

ದೇವಾಲಯ ನಿರ್ಮಾಣ ಮಾಡುವ ರೂವಾರಿ-ಶಿಲ್ಪಿಗರು ಸ್ವಲ್ಪ ಮುಂದಕ್ಕೆ ಹೋಗಿ ಕೆರೆ, ಬಾವಿ, ಪುಷ್ಕರಿಣಿ, ಗ್ರಾಮದ ಹೊರಭಾಗ (ನಾಲ್ಕುದಿಕ್ಕಿನಲ್ಲಿ)ದಲ್ಲಿ, ಮಧ್ಯದಲ್ಲಿ ಕಟ್ಟಿರುವುದನ್ನು ಕಾಣುತ್ತೇವೆ. ಮಾನಸಾರ ಮತ್ತು ಅಂದಿನ ಶಿಲ್ಪಿ-ರೂವಾರಿಗಳು ಕಟ್ಟಿದ ಬಾಗಲಕೋಟೆ ಪರಿಸರದ ದೇವಾಲಯಗಳನ್ನು ನೋಡಬಹುದು.

ಶಿರೂರದ ಸಿದ್ಧೇಶ್ವರ ದೇವಾಲಯವನ್ನು ಪಶ್ಚಿಮಮುಖವಾಗಿರುವಂತೆ ಗ್ರಾಮದ ದಕ್ಷಿಣವಿರುವ ಅಲ್ಲಗುಡ್ಡದ ಬದಿಗೆ ಕಟ್ಟಲಾಗಿದೆ. ಹಳ್ಳೂರದ ಜಿನಬಸದಿಯನ್ನು ಸಹ ಗ್ರಾಮದ ಉತ್ತರಬಾಜುವಿಗೆ ಇರುವ ಕಿರುಬೆಟ್ಟದ ದಿಬ್ಬದ ಮೇಲೆ ದಕ್ಷಿಣಮುಖವಾಗಿ ಕಟ್ಟಲಾಗಿದೆ. ಇದೇ ಗ್ರಾಮದ ಬಸವೇಶ್ವರ ಹೆಸರಿನ ದ್ವಿಕೂಟ ದೇವಾಲಯವನ್ನು ಗ್ರಾಮದ ಪಶ್ಚಿಮ ಭಾಗದಲ್ಲಿ ಪೂರ್ವ ಪಶ್ಚಿಮಮುಖಮಾಡಿದಂತೆ ಕಟ್ಟಿರುವರು. ಬೇವೂರ ದೇವಾಲಯಗಳು ಗ್ರಾಮದ ಮಧ್ಯದಲ್ಲಿ ಉತ್ತರ, ದಕ್ಷಿಣಮುಖ ಮಾಡಿ ನಿರ್ಮಿಸಲ್ಪಟ್ಟಿವೆ. ಶಿರೂರದ ರಾಮಲಿಂಗ ಹಾಗೂ ಲಕ್ಷ್ಮೀ ನಾರಾಯಣ ದೇವಾಲಯಗಳನ್ನು ಗ್ರಾಮದ ಮಧ್ಯದಲ್ಲಿ ಕಟ್ಟಲಾಗಿದೆ. ಮಂಕಣಿಯ ಈಶ್ವರ (ತ್ರಿಕೂಟ) ಗ್ರಾಮದಲ್ಲಿದ್ದರೆ, ಹೊಳೆ ಈಶ್ವರ ದೇವಾಲಯವು ಕೃಷ್ಣಾನದಿಯ ಬಲಪಾತ್ರದಲ್ಲಿದೆ. ಇನ್ನುಳಿದಂತಹ ಗ್ರಾಮಗಳ ದೇವಾಲಯಗಳು ಗ್ರಾಮದ ಹೊರಭಾಗ, ಮಧ್ಯ ಮತ್ತು ಬೆಟ್ಟದ ಮೇಲೆ ನಿರ್ಮಿಸಲ್ಪಟ್ಟಿವೆ.

ಆ. ಸಾಮಗ್ರಿ

ಸ್ಥಳದ ಆಯ್ಕೆಯಾದ ನಂತರ ರೂವಾರಿಗಳು ದೇವಾಲಯವನ್ನು ಯಾವ ಕಲ್ಲಿನಿಂದ ಕಟ್ಟಬೇಕೆಂಬುದರ ಕುರಿತು ಚರ್ಚಿಸಿ ತೀರ್ಮಾನಕ್ಕೆ ಬರುತ್ತಿದ್ದರು. ದೇವಾಲಯ ಬಹುಕಾಲ ಉಳಿಯಬೇಕೆಂಬ ಉದ್ದೇಶದಿಂದ ನೈಸರ್ಗಿಕವಾಗಿ ದೊರೆಯುವ ದಖ್ಖನ್ ಟ್ರ್ಯಾಪ್ (Deccan Trap) ಎಂಬ ಕಪ್ಪು ಅಗ್ನಿಶಿಲೆ, ಸ್ಯಾಂಡ್ ಸ್ಟೋನ್ (Sand Stone) ಎಂಬ ಕೆಂಪುಮರಳು ಶಿಲೆ. ಲೈಮ್ ಸ್ಟೋನ್ (Lime Stone) ಎಂಬ ಸುಣ್ಣದ ಕಲ್ಲು (ಬಂಡೆ)ಗಳನ್ನು ಆಯಾ ಪ್ರದೇಶ(ಗ್ರಾಮ ಪರಿಸರ)ದಲ್ಲಿ ದೊರೆತಂತೆ ಬಳಕೆ ಮಾಡಿಕೊಂಡು ನಿರ್ಮಿಸಿರುವರು.

ಬಾಗಲಕೋಟೆ ಪರಿಸರದಲ್ಲಿ ಕೆಂಪುಮರಳು ಕಲ್ಲು ಹೆಚ್ಚಾಗಿ ಇರುವ ಎರಡು ಬೆಟ್ಟಸಾಲು ಕ್ವಾರ್ಡ್ಜ್ ಎಂಬ ಬಿರುಸಾದ ಕಲ್ಲು ಇರುವ ಕಲಾದಗಿ ಬೆಟ್ಟಸಾಲು ಸಹ ಇದೆ. ಇಲ್ಲಿ ದೊರೆಯುವ ಕಲ್ಲುಗಳನ್ನು ಬೇವೂರ, ಶಿರೂರ, ಹಳ್ಳೂರ, ಮಂಕಣಿ, ಕಿರಸೂರ, ಬಿಲ್‌ಕೆರೂರ, ಸೀತಿಮನಿ ಇತ್ಯಾದಿ ಗ್ರಾಮದ ದೇವಾಲಯಗಳ ನಿರ್ಮಾಣಕ್ಕೆ ಬಳಸಿಕೊಂಡಿದ್ದಾರೆ. ಕೆಲವು ದೇವಾಲಯಗಳ ನವರಂಗಮಂಟಪದ ಮಧ್ಯದ ನಾಲ್ಕು ಸ್ತಂಭಗಳಿಗೆ ಕಪ್ಪು ಅಗ್ನಿಶಿಲೆ (Deccan Trap)ಯನ್ನು ಬಳಸಲಾಗಿದ್ದು ಇದು

ಇಂದಿನ ವಿಜಯಪುರ ಜಿಲ್ಲೆಯ ಸಿಂದಗಿ, ಇಂಡಿ, ವಿಜಯಪುರ ತಾಲೂಕುಗಳಲ್ಲಿ ಹೆಚ್ಚಾಗಿ ದೊರೆಯುತ್ತಿದ್ದು, ಅಲ್ಲಿಂದಲೇ ಅದನ್ನು ಸಾಗಿಸಿಕೊಂಡು ತಂದು ಇಲ್ಲಿ ಬಳಸಲಾಗಿದೆ. ಹೆಚ್ಚಾಗಿ ಈ ಕಲ್ಲನ್ನು ಲಿಂಗ, ನಂದಿಶಿಲ್ಪ, ಇತರ ಶಿಲ್ಪ ಹಾಗೂ ಸ್ತಂಭ ನಿರ್ಮಾಣದಲ್ಲಿ ಬಳಸಿರುವುದು ಕಂಡುಬರುತ್ತದೆ. ಲೋಕಾಪುರದ ಲೈಮ್ ಸ್ಟೋನ್(Lime Stone) ಕಲ್ಲನ್ನು ಸಹ ಶಿಲ್ಪದ ತಯಾರಿಕೆಯಲ್ಲಿ ಬಳಸಲಾಗಿದೆ. ಜೊತೆಗೆ ಅಲ್ಲಲ್ಲಿ ಹರಳು ಖಣಶಿಲೆ(ಬೆಣಚುಕಲ್ಲು)ಯ ಬಂಡೆ (Granite Stone) ಕಲ್ಲನ್ನು ಸಹ ಬಳಸಲಾಗಿದೆ.

೫.೬. ವಾಸ್ತು ಪ್ರಕಾರದ ಶೈಲಿ

ಬಾಗಲಕೋಟೆ ಪರಿಸರದ ಭಾಗದಲ್ಲಿ ಬರುವ ದೇವಾಲಯಗಳನ್ನು ಒಟ್ಟುಗೂಡಿಸಿ ಕೆಳಗಿನಂತೆ ಚರ್ಚಿಸಲಾಗಿದೆ.

ಅ. ಬಾಗಲಕೋಟೆ ಪರಿಸರದ ದೇವಾಲಯದ ಶೈಲಿಯ ಪ್ರಭೇದ

೧. ತಲವಿನ್ಯಾಸ ಚೌಕಾಗಿದ್ದು ಅದೇ ರೀತಿಯಲ್ಲಿ ಮೇಲಕ್ಕೆ ಶಿಖರದಲ್ಲಿ (ಆಮಲಕ) ಕೊನೆ ಗೊಳ್ಳುತ್ತದೆ.

೨. ದೇವಾಲಯ ರಚನೆ ಲಂಬರೇಖೆಯಲ್ಲಿ ಮೇಲಕ್ಕೆ ಹೋಗುತ್ತದೆ.

೩. ದೇವಾಲಯದ ಭಾಗಗಳನ್ನು ಪೀಠ (ಅಧಿಷ್ಠಾನ) ಜಂಘಾ (ಭಿತ್ತಿ), ಶೃಂಗ (ವಿಮಾನ), ಆಮಲಕ(ಶಿಖರ) ಕಲಶ (ಸ್ತೂಪಿ)ಗಳೆಂದು ಕರೆಯಲಾಗಿದೆ.

೪. 'ಶಿಖರ'ವೆಂಬ ಪದವು ಪೂರ್ಣ ಮೇಲ್ಕಟ್ಟಡಕ್ಕೆ ಅನ್ವಯಿಸುತ್ತದೆ.

೫. ಇವು ಅರ್ಪಿತ ನಿರಾಂಧಾರ ದೇವಾಲಯಗಳಾಗಿದ್ದು ಪ್ರದಕ್ಷಿಣಾ ಪಥರಹಿತವಾಗಿವೆ.

೬. ವಿಮಾನದ ಮುಂದೆ ಸುಕನಾಸಿ ಭಾಗ ಇರಲೇಬೇಕಾಗಿದ್ದು ಮೇಲ್ಕಟ್ಟಡದಲ್ಲಿ ಪ್ರಧಾನ ಭಾಗವಾಗಿ ಕಂಡುಬರುತ್ತದೆ. ಉದಾಹರಣೆಗೆ ಶಿರೂರಿನ ಸಿದ್ಧೇಶ್ವರ ದೇವಾಲಯ.

೭. ದಕ್ಷಿಣದಲ್ಲಿ ತೀರ್ಥಕ್ಷೇತ್ರಕ್ಕಿಂತ ದೇವಾಲಯವೇ ಪ್ರಧಾನ.

೮. ತಲವಿನ್ಯಾಸ ವಿವಿಧ ಮಾದರಿಯಲ್ಲಿವೆ.

೯. ದೇವಾಲಯಗಳ ಹೊರರಚನೆ ಸಮತಲದಲ್ಲಿರುತ್ತದೆ.

೧೦. ದೇವಾಲಯದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ(ಕಳಶ)ಯೆಂಬ ಆರು ಭಾಗಗಳ 'ಷಡ್ವರ್ಗ' ದೇವಾಲಯಗಳು ಇರುವುವು. ಕೆಲವು ಬಾರಿ ಪ್ರಸ್ತರ, ಗ್ರೀವ, ಬಳಸಿ ವಿಮಾನದ ಭಾಗವನ್ನು ಏಕತಲದಿಂದ ಹಲವು ತಲದಲ್ಲಿ ಕಟ್ಟಡವನ್ನು ಎತ್ತರಿಸಿದ್ದುಂಟು.

೧೧. ಪ್ರಸ್ತರವು ಪ್ರಮುಖ ಇಬ್ಭಾಗದ ಭಾಗವಾಗಿದ್ದು ಅವಶ್ಯ ಇರಲೇಬೇಕು.

೧೨. 'ಶಿಖರ' ವಿಮಾನದ ಕೊನೆಯಲ್ಲಿ ಒಂದು ಭಾಗ ಮಾತ್ರ, ಅದು ಇರಲೇಬೇಕು.

೧೩. ಅನರ್ಪಿತ, ಅರ್ಪಿತ, ಸಾಂಧಾರ, ನಿರಾಂಧಾರ(ಪ್ರದಕ್ಷಿಣೆ, ಪ್ರದಕ್ಷಿಣೆರಹಿತ) ದೇವಾಲಯ ಗಳೆಂದು ಕಂಡುಬರುವವು.

೧೪. ಸುಕನಾಸಿ ಕಡ್ಡಾಯವಲ್ಲ.[೨೯]

೧೫. ದ್ರಾವಿಡ ಶೈಲಿಯ ಶಿಖರದಲ್ಲಿ ಮುಂಚಾಚಿದ ಸುಖನಾಸಿಯನ್ನು ಅಳವಡಿಸಲಾಗಿದೆ. ಈ ಇಂತಹ ಸುಖನಾಸಿಯು ಹಳ್ಳೂರಿನ ಬಸವೇಶ್ವರ (ವಿಶ್ವೇಶ್ವರ) ದೇವಾಲಯದಲ್ಲಿ ಇದೇ ಪ್ರಥಮವಾಗಿ ಕಂಡುಬರುತ್ತದೆ.

ಈ ಎಲ್ಲ ಲಕ್ಷಣಗಳು ಬಾಗಲಕೋಟೆ ಪರಿಸರದ ದೇವಾಲಯಗಳಲ್ಲಿ ಕಂಡುಬರುತ್ತವೆ.

ಈ ತೆರನಾದ ದೇವಾಲಯಗಳ ಶೈಲಿ ಲಕ್ಷಣಗಳನ್ನು ಹುಡುಕಿ ಹೊರ ತೆಗೆದಿದ್ದು ಪ್ರಾದೇಶಿಕವಾಗಿ ಹಲವು ಬದಲಾವಣೆಗಳಿರುವುದನ್ನು ಕಾಣುತ್ತೇವೆ.

ವಾಸ್ತುಶಾಸ್ತ್ರ ಗ್ರಂಥಗಳು ವಾಸ್ತುವಿನ್ಯಾಸ (ಶೈಲಿ)ಗಳನ್ನು ಮುಖ್ಯವಾಗಿ ನಾಗರ, ದ್ರಾವಿಡ, ವೇಸರವೆಂದು ಗುರುತಿಸಿದ್ದು ಇವುಗಳ ಲಕ್ಷಣಗಳನ್ನು ಬಳಸಿ ಭಾರತದ ತುಂಬೆಲ್ಲಾ ಕಳಿಂಗ ಭೂಮಿಜ, ಲತಿನಾ, ಫಾಂಸನಾ, ಲುಪಾಗಳೆಂಬ ಹಲವು ಪ್ರಭೇದಗಳ ದೇವಾಲಯಗಳ ಶೈಲಿಗಳು ಹುಟ್ಟಿಕೊಂಡಿವೆ. ಇವು ರಾಜಕೀಯ ಹಾಗೂ ಸಾಂಸ್ಕೃತಿಕ ಪರಸ್ಪರ ಸಂಬಂಧಗಳ ಮುಖಾಂತರ ಪ್ರಾದೇಶಿಕವಾಗಿ ಭಾರತದ ತುಂಬೆಲ್ಲಾ ಹರಡಿ ಬೆಳೆದುಬಂದಿವೆ.[೩೦]

ಶಾಸ್ತ್ರಗ್ರಂಥಗಳ ಶೈಲಿ ವರ್ಗೀಕರಣವಾದ ನಾಗರ, ದ್ರಾವಿಡ, ವೇಸರವೆಂಬುದಿಲ್ಲಿ ಸಮರ್ಪಕ, ಸಂಪೂರ್ಣವಲ್ಲ ವೆಂದು ಹೇಳಬಹುದು. ಶಿಲ್ಪರತ್ನ ಮತ್ತು ಈಶಾನ್ಯ ಶಿವಗುರುದೇವ ಪದ್ಧತಿ ಗ್ರಂಥಗಳೆಂದು ಶೈಲಿಗಳ ವರ್ಗೀಕರಣ ಕೇವಲ ದೇವಾಲಯದ ಮೇಲ್ಭಾಗಕ್ಕೆ ಸಂಬಂಧಿಸಿದಂತೆ ಸ್ಪಷ್ಟಪಡಿಸುತ್ತವೆ.

ಮುಖ್ಯವಾಗಿ ಇವು ಪ್ರಾಂತಿಯ ಭಿನ್ನತೆಯಲ್ಲಿ ಭೌಗೋಳಿಕವಾಗಿ ಈ ವಾಸ್ತುಶೈಲಿಗಳು ಹುಟ್ಟಿಕೊಂಡು ಬಂದಿದ್ದು ನಾಗರ ಉತ್ತರಭಾರತದಲ್ಲಿ ಜನ್ಮತಾಳಿ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳ ಮುಖಾಂತರ ದಕ್ಷಿಣ ಭಾರತವನ್ನೊಳಗೊಂಡು ಭಾರತದ ತುಂಬೆಲ್ಲ ಹರಡಿ ಕೊಂಡಿತು. ಅದರ ವ್ಯಾಪ್ತಿ ಹಿಮಾಲಯದಿಂದ ವಿಂಧ್ಯ ಪರ್ವತ. ದ್ರಾವಿಡವು ದಕ್ಷಿಣ ಭಾರತದಲ್ಲಿ ಹುಟ್ಟಿದ್ದು, ಇದರ ಮೂಲ ಕಂಚಿ ಪಲ್ಲವರ ವಾಸ್ತುಶೈಲಿಯ ಮೂಲ ಕೇಂದ್ರ ಮಹಾಬಲಿಪುರವಾಗಿದೆ. ಇದರ ವ್ಯಾಪ್ತಿ ಕನ್ಯಾಕುಮಾರಿಯಿಂದ ಗೋದಾವರಿ ನದಿಯವರೆಗೆ ಇದೆ. ವೇಸರ ಶೈಲಿ ಕ್ರಿ.ಶ. ೬-೭ ನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯರಿಂದ ಹುಟ್ಟು ಪಡೆದು ದಖ್ಖನ್ ಪ್ರದೇಶದಲ್ಲಿ ಹೆಚ್ಚು ಪ್ರಚಾರಗೊಂಡಿತು. ಅದಕ್ಕೆ ಕಲ್ಯಾಣ ಚಾಲುಕ್ಯ ರಾಷ್ಟ್ರಕೂಟ, ಹೊಯ್ಸಳ ಮತ್ತು ಅವರ ಸಾಮಂತ ಮಂಡಳೇಶ್ವರರ ಪ್ರದೇಶದಲ್ಲಿ ಪ್ರಚಾರಕ್ಕೆ ಬಂದಿತು. ಇದಕ್ಕೆ ಮೂಲ ತಳಹದಿ ನಾಗರ ಮತ್ತು ದ್ರಾವಿಡ ಶೈಲಿಗಳ ಸಮ್ಮಿಲನವಾಗಿದೆ. ಇದರ ವ್ಯಾಪ್ತಿ ಕಾವೇರಿಯಿಂದ ಗೋದಾವರಿ ನದಿಗಳಾಗಿವೆ.

ಈ ಪ್ರದೇಶದ ದೇವಾಲಯಗಳ ಒಟ್ಟು ವಾಸ್ತುಶೈಲಿ ಪ್ರಭೇದಗಳನ್ನು ವರ್ಗೀಕರಿಸಿದಾಗ ನಾಗರ, ದ್ರಾವಿಡ, ವೇಸರವೆಂದು ಮೂರು ರೀತಿಯಲ್ಲಿ ವಿಂಗಡಿಸಲಾಗಿದೆ. ನಾಗರದ ಪ್ರಭಾವದಿಂದ ದ್ರಾವಿಡ, ದ್ರಾವಿಡದ ಪ್ರಭಾವದಿಂದ ವೇಸರ ಶೈಲಿಗಳು ಪ್ರಭಾವಿತವಾಗಿ ಬೆಳೆದವು. ಇವುಗಳಿಂದ ಮಿಶ್ರಶೈಲಿ ಹೊರಬಂದಿದ್ದು ವೇಸರ ಶೈಲಿ ದೇವಾಲಯಗಳು ಕಂಡುಬರುತ್ತವೆ.

ನಾಗರದಿಂದ ಪ್ರಭಾವಿತವಾದ ದ್ರಾವಿಡವನ್ನು ಔತ್ತರೇಯ ದ್ರಾವಿಡವೆಂದು ತಿಳಿಯಲಾಗಿದೆ. ಈ ಔತರೇಯ ಸಂಪ್ರದಾಯದ ಶೈಲಿಗಳಲ್ಲಿ ಪೂರ್ಣ ಪ್ರಮಾಣದ ಮೆಟ್ಟಲು ಮೆಟ್ಟಿಲಾಕಾರವಾಗಿ ಮೇಲೇರುವ ವಿಮಾನವನ್ನು ದ್ರಾವಿಡಶೈಲಿಯಲ್ಲಿ ಗುರುತಿಸಬಹುದು. ಈ ದೇವಾಲಯಗಳು ದಾಕ್ಷಿಣಾತ್ಯ ದೇವಾಲಯಗಳಂತೆ ಭೂಮಿ ರಚನೆಯನ್ನು ಹೊಂದಿದ್ದರೂ ಔತ್ತರೇಯ ಜನ್ಯ ಎನ್ನುವುದು ಖಚಿತ. ಆದ್ದರಿಂದ ಇವನ್ನು 'ಔತ್ತರೇಯ ದ್ರಾವಿಡ'ವೆಂದು ಕರೆಯುವುದು ಸೂಕ್ತ ವಾಗುತ್ತದೆ.[೩೧] ಸ್ಥೂಲವಾಗಿ ನಾಗರದಲ್ಲಿ ದಾಕ್ಷಿಣಾತ್ಯ ನಾಗರವೆಂತಲೂ ಕರೆಯಬಹುದಾಗಿದೆ. ಏಕೆಂದರೆ, ಔತ್ತರೇಯದ ಒಂದು ಭಾಗವಾದ ಫಾಂಸನಾ ಶೈಲಿಯ ಪ್ರಭಾವ ಕರ್ನಾಟಕದ ದೇವಾಲಯಗಳಲ್ಲಿ ಸಾಕಷ್ಟು ಪ್ರಭಾವಿಸಿಕೊಂಡಿದೆ. ಹೀಗಾಗಿ ಅದು ಶುದ್ಧ ಫಾಂಸನಾದ ಜೊತೆಗೆ ಇಲ್ಲಿ ನಾಗರ, ದ್ರಾವಿಡದ ಕಲಶ, ಸ್ತೂಪಿ, ಆಮಲಕ(ನೆಲ್ಲಿಕಾಯಿ) ಭಾಗಗಳನ್ನು ಹೊಂದಿರುತ್ತದೆ.

ಬಾಗಲಕೋಟೆ ಪರಿಸರದಲ್ಲಿ ಔತ್ತರೇಯ ರೇಖಾನಾಗರ ಶೈಲಿ, ಔತ್ತರೇಯ ದ್ರಾವಿಡ ಶೈಲಿ, ಔತ್ತರೇಯ ನಾಗರ ದ್ರಾವಿಡ ಶೈಲಿಯ ಮಿಶ್ರ ಫಾಂಸನಾ(ಮೆಟ್ಟಿಲು) ಶೈಲಿ ಪ್ರಭೇದಗಳು ಪ್ರಮುಖವಾಗಿ ಕಂಡುಬರುತ್ತಿದ್ದು ಕಳಿಂಗ, ಲುಪಾ ಪ್ರಭೇದ ಶೈಲಿಗಳು ಸ್ಥಾನ ಪಡೆದುಕೊಂಡಿವೆ.

ಲುಪಾಕಾರದ ವಾಸ್ತುಶೈಲಿ ಹೊಂದಿದ ದೇವಾಲಯ ಶಿರೂರ ಗ್ರಾಮದ ಗಣೇಶ ಗುಡಿಯಾಗಿದ್ದು ಇದು ಚತುರ್ವರ್ಗದಲ್ಲಿ ಅಧಿಷ್ಠಾನ, ಪಾದ, ಶಿಖರ, ಸ್ತೂಪಿ ಹೊಂದಿದೆ. ಇದೇ ರೀತಿಯ ಮತ್ತೊಂದು ಕಟ್ಟಡ ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿರುವ ನಂದಿ ಮಂಟಪವಾಗಿದೆ. ಇಲ್ಲಿ ಲುಪಾಶೈಲಿಯೆಂದರೆ ಪ್ರಸ್ತರರಹಿತವಾಗಿರುವುದು. ಶಿಖರವು ಛಾದ್ಯದ ರೀತಿಯಲ್ಲಿ ನಾಲ್ಕು ಮುಖದಲ್ಲಿ ಇಳಿಜಾರುವಾಗಿ ಭಿತ್ತಿಯಿಂದ ಮುಂದಕ್ಕೆ ಭೂಮಿಮುಖ ವಾಗಿರುತ್ತದೆ. ಅದರ ತುದಿ ಭಾಗದಲ್ಲಿ, ಸ್ತೂಪಿ(ಕಳಶ) ಇರುವುದು. ಸ್ಥೂಲವಾಗಿ ಲುಪಾ ಮಾದರಿ ಈಜಿಪ್ಟದ ಕೆಲವು ಮೆಟ್ಟಲುರಹಿತ ಪಿರ್ಯಾಮಿಡ್ ಮಾದರಿಯಲ್ಲಿರುವುದು.

ಇದೇ ಗ್ರಾಮದ ಸಿದ್ಧೇಶ್ವರ ದೇವಾಲಯದ ಗರ್ಭಗೃಹದ ಮೇಲಿನ ವಿಮಾನ ಪಂಚರಥ ಮಾದರಿಯ ಅಷ್ಟಕೋನದ ರೇಖೆಯಲ್ಲಿದ್ದು ಮೇಲೆ ಆಮಲಕ, ಸ್ತೂಪಿ ಹೊಂದಿದೆ. ಮುಂದುಗಡೆ ನಾಸಿಕವಿದ್ದು ಇದೊಂದು ದಾಕ್ಷಿಣಾತ್ಯ ಸಂಪ್ರದಾಯದ ಕಳಿಂಗನಾಗರ ಶೈಲಿಯ ವಿಮಾನವೆಂದು ಕರೆಯಬಹುದಾಗಿದೆ. ಇದು ನಾಗರದ ಏಕ ಶೃಂಗದಂತೆ ಕಂಡರೂ ಕರ್ಣ, ಪ್ರತಿಗಳ ಭಾಗ ಗಳಲ್ಲಿ ಪ್ರಸ್ತರದ ಮೇಲೆ ಉರುಶೃಂಗ (ಚಿಕ್ಕವಿಮಾನ) ಗಳ ರಚನೆಗಳಿವೆ.

ಇದೇ ದೇವಾಲಯದ ಮಗ್ಗುಲಿನ ಚಿಕ್ಕ ಗರ್ಭಗೃಹದ ಮೇಲೆ ಶುದ್ಧ ದಾಕ್ಷಿಣಾತ್ಯ ದ್ರಾವಿಡ ಫಾಂಸನಾ ಮಾದರಿ ವಿಮಾನವಿದ್ದು, ಅದು ಪಂಚರಥ ಭಿತ್ತಿಯ ಪ್ರಸ್ತರದ ಮೇಲೆ ಮುರುಗಳ (ಕಂಠ), ನಾಲ್ಕು ಕಪೋತ ಪಟ್ಟಿಕೆ ಹೊಂದಿ ಮತ್ತೆ ಗಳದ ಮೇಲೆ ಚಪ್ಪಟೆಯಾದ ಶಿಖರ (ಅಷ್ಟಾಶ್ರ) ಹಾಗೂ ಸ್ತೂಪಿ (ಕಳಶ) ಗಳನ್ನು ಹೊಂದಿದೆ. ಮುಂದುಗಡೆ ನಾಸಿಕವಿರುವುದಿಲ್ಲ. ಇದೇ ದೇವಾಲಯದ ನವರಂಗ ಹಾಗೂ ತೆರೆದ ಸಭಾಮಂಟಪಗಳ ಮೇಲ್ಗಡೆ ಎರಡು ಆಮಲಕ, ಸ್ತೂಪಿ ಹೊಂದಿದ ಭಾಗಗಳನ್ನು ಅಳವಡಿಸಲಾಗಿದೆ.

ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿ ಪ್ರಾಕಾರದ ಒಳಭಾಗದ ಮೂಲೆಗಳಲ್ಲಿ ನಾಲ್ಕು ಚಿಕ್ಕ ಗುಡಿಗಳಿದ್ದು ಅವುಗಳ ಮೇಲಿನ ವಿಮಾನ ಕಟ್ಟಡಗಳು ಬೇರೆ ಬೇರೆ ಮಾದರಿ ಫಾಂಸನಾವಾಸ್ತು ಶೈಲಿಯಲ್ಲಿ ಕಂಡುಬರುತ್ತವೆ. ೧. ಒಂದು ಗುಡಿ ಗರ್ಭಗೃಹ, ಸುಕನಾಸಿ ಹೊಂದಿದ್ದು ಚೌಕಾದ ಅಧಿಷ್ಠಾನ, ಕುಡ್ಯಸ್ತಂಭಗಳ ಭಿತ್ತಿ, ಪ್ರಸ್ತರಗಳಿದ್ದು, ಅದರ ಮೇಲೆ ಮೆಟ್ಟಿಲು ರೀತಿಯ, ಗಳ, ಕಪೋತವಿರುವ ವಿಮಾನ. ಇದರಲ್ಲಿ ಐದು ಕಪೋತ, ಗಳ '(ಕಂಠ) ಪಟ್ಟಿಗೆಗಳಿವೆ. ಕಪೋತಗಳ ಮೇಲೆ ಚಿಕ್ಕ ಅಲ್ಪನಾಸಿಕೂಡ ಕೆತ್ತಲಾಗಿದ್ದು ಅಲಂಕಾರ ಹೊಂದಿಲ್ಲ. ಇವುಗಳ ಮೇಲೆ ಗಳ ಮತ್ತು ವೇದಿಕೆ ಪಟ್ಟಿಕೆಯಿದ್ದು, ಅದರ ಮೇಲೆ ಮತ್ತೆ ಗಳಭಾಗ. ಅದರ ಮೇಲೆ ನಾಸಿ ಕೋಷ್ಠವಿರುವ ಚೌಕಾದ ಶಿಖರ ಹಾಗೂ ಸ್ತೂಪಿ (ಕಳಶ) ಗಳು ಕಂಡುಬರುವುವು. ೨. ಮತ್ತೊಂದು ಗುಡಿ ಪೂರ್ವಮುಖವಾಗಿದ್ದು

ಅದು ಸಹ ಚೌಕಾಗಿದ್ದು ಕುಡ್ಯಸ್ತಂಭಗಳ ಭಿತ್ತಿಯಿದೆ. ಇದರ ಮೇಲೆ ಪ್ರಸ್ತರ, ಪ್ರಸ್ತರದ ಮೇಲಿನ ವಿಮಾನ ಕಟ್ಟಡವು ಕೇವಲ ಚೌಕಾಕಾರದ ಶಿಖರ, ಸ್ತೂಪಿ ಹೊಂದಿದೆ. ಪ್ರಸ್ತರದ ಕಪೋತದ ಮೇಲೆ ಬಲಭಾಗ ಹಾಗೂ ವೇದಿಕೆ ಪಟ್ಟಿಕೆಗಳಿವೆ. ಮೂರು ಮತ್ತು ನಾಲ್ಕನೇ ಚಿಕ್ಕ ಗುಡಿಗಳು ಸಹ ಮೇಲಿನ ಮೆಟ್ಟಿಲು ಮಾದರಿ ಹೊಂದಿವೆ. ಪ್ರಸ್ತರದ ಮೇಲೆ ಐದು ಕಪೋತ, ಮಧ್ಯ ಗಳ ಭಾಗ, ಮೇಲೆ ವೇದಿಕೆ ಪಟ್ಟಿಕೆಗಳಿದ್ದು ಅವುಗಳ ಮೇಲೆ ಚೌಕಾದ ನಾಸಿಕ ತೋರಣ ಅಲಂಕಾರವಿರುವ ಶಿಖರ ಹಾಗೂ ಸ್ತೂಪಿ (ಕಳಶ) ಕಂಡುಬರುವುವು. ಇವುಗಳ ಭಿತ್ತಿಗಳಲ್ಲಿ ಕುಡ್ಯಸ್ತಂಭ ಅಲಂಕಾರ ಮಾತ್ರವಿದೆ. ವಿಮಾನದ ಮುಂದುಗಡೆ ನಾಸಿಕ ಭಾಗವಿದ್ದು ನಾಲ್ಕು ಗುಡಿಗಳನ್ನು ಔತ್ತರೇಯ ನಾಗರ, ದ್ರಾವಿಡ ಸಂಪ್ರದಾಯದ ಸಮ್ಮಿಲನದ ಲಕ್ಷಣಗಳಿಂದ ಕೂಡಿದ ಫಾಂಸನಾ ವಿಮಾನಗಳೆಂದು ಸ್ಪಷ್ಟವಾಗಿ ಗುರುತಿಸಲಾಗಿದೆ.

ಇದೇ ಶಿರೂರ ಗ್ರಾಮದ ಮಧ್ಯದಲ್ಲಿರುವ ರಾಮಲಿಂಗೇಶ್ವರ ದೇವಾಲಯವು ದ್ವಿಕೂಟವಾಗಿದ್ದು, ಪಶ್ಚಿಮದ ಗರ್ಭಗೃಹ ಪಂಚರಥ ಮಾದರಿ ಭಿತ್ತಿ 'ಷಡಸ್ರ'ಕೋನದಲ್ಲಿದೆ. ಭಿತ್ತಿಯ ಮೇಲೆ ಪ್ರಸ್ತರವಿಲ್ಲದ್ದನ್ನು ಗಮನಿಸಬೇಕು. ವಿಮಾನ ೭ ಸಾಲಿನ ಕಪೋತ ಪಟ್ಟಿಕೆ, ಗಳ ಪಟ್ಟಿಕೆ ಹೊಂದಿದೆ. ಗಳ, ವೇದಿಕೆ ಹೊಂದಿದ್ದು ಮೇಲೆ ಅಷ್ಟಕೋನದ ಶಿಖರ, ಸ್ತೂಪಿ (ಕಳಶ) ಹೊಂದಿದೆ. ವಿಮಾನದ ಮಹಾನಾಸಿ ಭಾಗ ಲುಪ್ತವಾಗಿದೆ. ಹೀಗಾಗಿ ಇದೊಂದು ಔತ್ತರೇಯ ಫಾಂಸನಾವಿಮಾನವಾಗಿದೆ ಎಂದು ಹೇಳಬಹುದು. ಪೂರ್ವಮುಖ ಗರ್ಭಗೃಹದ ಭಿತ್ತಿಯು ಚೌಕಾಗಿದ್ದು ಪ್ರಸ್ತರದ ಕಪೋತ ಪಟ್ಟಿಕೆ ಮೇಲೆ ವ್ಯಾಳಮಾಲ ಹಾರ ಪಟ್ಟಿಕೆ. ಇದರ ಮೇಲೆ ವ್ಯಾಳಮಾಲಹಾರ ಪಟ್ಟಿಕೆಯಿದೆ. ಇದರ ಮೇಲೆ ಗಳ (ಕಂಠ), ವೇದಿಕೆ ಪಟ್ಟಿಕೆಗಳಿಂದ ಕೂಡಿದ್ದು, ಪಟ್ಟಿಕೆಗಳ ಮೇಲೆ ಮತ್ತೊಂದು ಶಾಲಕೂಟ, ಕರ್ಣಕೂಟ, ಅಲಂಕಾರ ಹೊಂದಿದ ಪ್ರಸ್ತರವಿದೆ. ಕುಡ್ಯಸ್ತಂಭದ ಭಿತ್ತಿ (ಗಳ), ಗಳದ ಒಂದು ತಲವಿದ್ದು ಮೇಲಿನ ಪ್ರಸ್ತರ ಮತ್ತದೆ ಅಲಂಕಾರ ಪಡೆದಿದೆ. ಈ ಪ್ರಸ್ತರದ ಮೇಲೆ ಗಳ, ವೇದಿಕೆ ಪಟ್ಟಿಕೆಗಳಿದ್ದಂತೆ ನಾಲ್ಕು ನಾಸಿ ಅಲಂಕಾರದ ಔತ್ತರೇಯ ಚೌಕಾದ ಶಿಖರಭಾಗ ಹಾಗೂ ಸ್ತೂಪಿ (ಕಳಶ)ಗಳು ಕಂಡುಬರುವುವು. ವಿಮಾನದ ಮುಂದೆ ಚಿಕ್ಕದಾದ ಸುಕನಾಸಿ ಜೋಡಿಸಲಾಗಿದೆ. ಇವೆರಡನ್ನು ಗಮನಿಸಿದಾಗ ಇದು ಪ್ರತ್ಯೇಕ ಕಾಲಘಟ್ಟದಲ್ಲಿ ಕಟ್ಟಿದ ದ್ವಿಕೂಟ ದೇವಾಲಯವೆಂದು ಹೇಳಬಹುದು.

ಹಳ್ಳೂರಿನ ಬಸವೇಶ್ವರ ದೇವಾಲಯದ ಎರಡು ಗರ್ಭಗೃಹಗಳ ಮೇಲಿನ ಕಟ್ಟಡಗಳು ಎರಡು ಶೈಲಿಯಲ್ಲಿವೆ. ಪಶ್ಚಿಮಮುಖ ಗರ್ಭಗೃಹದ ಮೇಲಿರುವ ವಿಮಾನ ಕಟ್ಟಡ ದಾಕ್ಷಿಣಾತ್ಯ ಸಂಪ್ರದಾಯದ ಶುದ್ಧ, ದ್ರಾವಿಡವಿನ್ಯಾಸ ಶೈಲಿಯ 'ಷಡ್ವರ್ಗ' ಏಕತಲ ವಿಮಾನವಾಗಿದೆ. ಇದರ ತಲವಿನ್ಯಾಸವು ಪಂಚರಥದಲ್ಲಿದ್ದು ಕುಡ್ಯಸ್ತಂಭ ಪಂಜರ ಕೋಷ್ಠದ ಅಲಂಕಾರದ ಭಿತ್ತಿ, ಚಿಕ್ಕದಾದ ಪ್ರಸ್ತರ, ಪ್ರಸ್ತರದ ಕಪೋತದ ಮೇಲೆ ವ್ಯಾಳ ಮಾಲಹಾರ ಪಟ್ಟಿಕೆಯಿದ್ದು, ಇದರ ಮೇಲೆ ಗಳ ಹಾಗೂ ವೇದಿಕೆ

ಪಟ್ಟಿಕೆಯಿರುವುವು. ವೇದಿಕೆಯ ಮೇಲೆ ಮತ್ತೊಂದು ಪ್ರಸ್ತರವಿದ್ದು, ಕುಡ್ಯಭಿತ್ತಿ (ಗಳ), ಪ್ರಸ್ತರ ನಂತರ ಗಳ, ವೇದಿಕೆ, ಗಳ ಪಟ್ಟಿಕೆಗಳಿವೆ. ಮತ್ತೆ 'ಷಡಸ್ರ'ದ ಶಿಖರವಿದ್ದು ಮೇಲೆ ಸ್ತೂಪಿಯಿರುವುದು. ಮುಂದಿನ ಭಾಗದಲ್ಲಿ ಮಹಾಸುಕನಾಸಿ ಲುಪ್ತವಾಗಿರುವುದರಿಂದ ಇದೊಂದು ಶುದ್ಧ ದಾಕ್ಷಿಣಾತ್ಯ ಸಂಪ್ರದಾಯದ ದ್ರಾವಿಡ ಶೈಲಿಯ ಏಕತಲ ವಿಮಾನವೆಂದು ಸ್ಪಷ್ಟವಾಗುತ್ತದೆ.

ಇದೇ ದೇವಾಲಯಕ್ಕೆ ಹತ್ತಿಕೊಂಡು ಪೂರ್ವಮುಖ ಮಾಡಿದಂತೆ ಮತ್ತೊಂದು ಗರ್ಭಗೃಹವಿದೆ. ಇದರ ಮೇಲಿನ ವಿಮಾನವು ಏಕತಲ ವಿಮಾನವಾಗಿದ್ದು ಅದು ಸಹ 'ಷಡಸ್ರ' ಮಾದರಿ ಭಿತ್ತಿಯ ಮೇಲೆ ಪ್ರಸ್ತರ, ಅದರ ಮೇಲೆ ವ್ಯಾಳ ಮಾಲಹಾರ ಪಟ್ಟಿಕೆಯಿದೆ. ಇದರ ಮೇಲೆ ವಿಮಾನ ಪ್ರಾರಂಭವಾಗುತ್ತಿದ್ದು ಅದರಲ್ಲಿ ಮೊದಲು ಗಳ ವೇದಿಕೆ ಪಟ್ಟಿಕೆಗಳಿವೆ. ಅದರ ಮೇಲೆ ವಿಮಾನದ ಪ್ರಸ್ತರ, ಕುಡ್ಯಭಿತ್ತಿ (ಗಳ), ಪ್ರಸ್ತರದಲ್ಲಿ ಕಪೋತ, ವ್ಯಾಳವಾದಿ ಭಾಗಗಳಿದ್ದು, ಗಳ ವೇದಿಕೆ ಪಟ್ಟಿಕೆಗಳ ಮೇಲೆ ಅಷ್ಟಕೋನದ ಶಿಖರವಿದೆ. ಇದು ಪದ್ಮದಂತೆ ಕಂಡುಬರುತ್ತದೆ. ಇದರ ಮೇಲೆ ಸ್ತೂಪಿಯಿರುವುದು. ವಿಮಾನದಲ್ಲಿ ಮಹಾನಾಸಿಕಭಾಗ ವಿದ್ದುದರಿಂದ ಇದನ್ನು ನಾವು ಔತ್ತರೇಯ ದ್ರಾವಿಡವಿಮಾನವೆಂದು ಕರೆಯುತ್ತೇವೆ.

ಬೇವೂರದ ಸಂಗಮೇಶ್ವರ ದೇವಾಲಯ ತ್ರಿಕೂಟ ತಲವಿನ್ಯಾಸದಲ್ಲಿದ್ದು ಸಪ್ತರಥ ಮಾದರಿ ಕುಡ್ಯಸ್ತಂಭಗಳ ಭಿತ್ತಿಯ ಮೇಲೆ ಇರುವ ವಿಮಾನಗಳಲ್ಲಿ ಒಂದರಲ್ಲಿ ಮಾತ್ರ ವಿಮಾನ ಕಟ್ಟಡ ಉಳಿದುಕೊಂಡಿದೆ. ಅದು ಪೂರ್ವಮುಖ ಗರ್ಭಗೃಹದ ಮೇಲ್ಗಡೆ ಕಂಡುಬರುತ್ತದೆ. ಇದೊಂದು ಔತ್ತರೇಯ ದ್ರಾವಿಡಶೈಲಿಯ ವಿಮಾನವಾಗಿದ್ದು ದ್ವಿತಲದಲ್ಲಿದೆ. ಪ್ರಸ್ತರದ ಕಪೋತ ಕಿರಿದಾಗಿದ್ದು ಅದರ ಮೇಲೆ ವ್ಯಾಳವಾರಿ ಹಾರಪಟ್ಟಿಕೆ ಇರುವುದು. ಇದರ ಮೇಲೆ ಗಳ, ವೇದಿಕೆ ಪಟ್ಟಿಗಳಿವೆ, ವೇದಿಕೆ ಮೇಲೆ ಕೂಟ, ಶಾಲಕೂಟ, ಕರ್ಣಕೂಟದ ಪ್ರಸ್ತರವಿದ್ದು, ಅದರ ಮೇಲೆ ಕುಡ್ಯಸ್ತಂಭದ ಭಿತ್ತಿ(ಗಳ), ಪ್ರಸ್ತರ, ಭಿತ್ತಿ ಪ್ರಸ್ತರಗಳಿವೆ. ಮೇಲಿನ ಪ್ರಸ್ತರದ ಮೇಲೆಗಳ ಹಾಗೂ ವೇದಿಕೆ ಪಟ್ಟಿಕೆಯ ನಂತರ ಇದ್ದಿರಬಹುದಾದ ಶಿಖರ ಸ್ತೂಪಿ ಭಾಗಗಳು ಬಿದ್ದು ಹೋಗಿವೆ. ವಿಮಾನದ ಮುಂಭಾಗದಲ್ಲಿ ಮಹಾನಾಸಿ ಇರುವುದು.

ಮೇಲಿನ ಶಿರೂರ, ಬೇವೂರ, ಹಳ್ಳೂರ ದೇವಾಲಯಗಳನ್ನು ಗಮನಿಸಿದಾಗ ಲುಪಾ ಶೈಲಿಯ ಎರಡು, ಸಮ್ಮಿಸ್ರ ಫಾಂಸನಾಶೈಲಿಯ ೫, ಕಳಿಂಗ ನಾಗರಶೈಲಿಯ ೧, ಔತ್ತರೇಯ ದ್ರಾವಿಡಶೈಲಿಯ ಸಮ್ಮಿಶ್ರದಲ್ಲಿ ೩, ಒಂದು ಶುದ್ಧ ದ್ರಾವಿಡಶೈಲಿಯ ವಿಮಾನ ಕಟ್ಟಡಗಳು ಕಂಡುಬರುವವು.

ಮೇಲಿನ ಮೂರು ಗ್ರಾಮದ ದೇವಾಲಯಗಳನ್ನು ಒಟ್ಟಾಗಿ ಗುರುತಿಸಿ ನೋಡಲಾಗಿ ಹಲವು ಶೈಲಿ ಪ್ರಭೇದದ ದೇವಾಲಯ ಸಮೂಹ ಐಹೊಳೆ, ಪಟ್ಟದಕಲ್ಲುಗಳಲ್ಲಿ ಹೇಗೆ ಗುಂಪಾಗಿ ದೊರೆಯುತ್ತವೆಯೋ

ಅದೇ ರೀತಿಯಲ್ಲಿ ಈ ಮೂರು ಗ್ರಾಮದಲ್ಲಿ ಎಲ್ಲ ಸಂಪ್ರದಾಯದ ವಾಸ್ತುಶೈಲಿ ದೇವಾಲಯ ಸಮೂಹ ಇಲ್ಲಿಯೂ ದೊರಕುವುದು. ಬಾಗಲಕೋಟೆ ಪರಿಸರದ ದೇವಾಲಯ ವಾಸ್ತುವನ್ನು ನಿರ್ಮಿಸಿದ ಶಿಲ್ಪಿಗಳ, ರೂವಾರಿಗಳ ಕೊಡುಗೆಗಳೆಂದು ಹೆಮ್ಮೆ ಪಡುವ ಸಂಗತಿಯಾಗಿದೆ.

೫.೭. ದೇವಾಲಯ ವಾಸ್ತುಶೈಲಿಯ ವಿವರಣೆ

ದೇವಾಲಯಗಳ ಕುರಿತು ತಿಳಿದುಕೊಳ್ಳುವಾಗ ನಾವು ಮೊದಲು ಗಮನಿಸುವ ಅಂಶವೆಂದರೆ ಪ್ರದೇಶ, ರಾಜವಂಶ ಮತ್ತು ಕಾಲಮಾನ. ಈ ಮೂರರಲ್ಲಿ ಒಂದನ್ನು ಗಣನೆಗೆ ತಗೆದುಕೊಂಡರೂ ಉಳಿದೆರಡು ತಾವಾಗಿಯೇ ಹಿಂಬಾಲಿಸುತ್ತವೆ. ಹಾಗೆಯೇ ಪ್ರತಿಯೊಂದು ಪ್ರದೇಶದ ದೇವಾಲಯಗಳು, ತಮ್ಮದೆಯಾದ ಲಕ್ಷಣಗಳನ್ನು ಮೈಗೂಡಿಸಿಕೊಂಡಂತೆ ಬಾಗಲಕೋಟೆ ಪರಿಸರದ ದೇವಾಲಯಗಳು ಸಹ ತಮ್ಮದೆಯಾದ ಪ್ರಾದೇಶಿಕ ಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆದುಬಂದಿವೆ. ಒಂದೊಂದು ಕಾಲಘಟ್ಟದಲ್ಲಿ ಒಂದೊಂದು ಆಳ್ವಿಕೆ ಮಾಡಿದ ರಾಜವಂಶಸ್ಥ ಅರಸುಮನೆತನಗಳ ಕೆಲವು ಲಕ್ಷಣಗಳು ದೇವಾಲಯಗಳ ವಾಸ್ತುವಿನ್ಯಾಸದಲ್ಲಿ ಸೇರಿಕೊಂಡಿರುತ್ತವೆ. ಹೀಗಾಗಿ ಆ ಪ್ರದೇಶದಲ್ಲಿ ಆಳಿದ ರಾಜವಂಶದ ಹೆಸರಿನಲ್ಲಿ ದೇವಾಲಯಗಳ ವಾಸ್ತು ಪ್ರಸಿದ್ಧಿಗೆ ಬಂದಿದೆ. ಅಂತೆಯೇ ಪ್ರಾಚೀನ ಕಾಲದಿಂದಲೇ ದೇವಾಲಯ ರಚನೆಯು ಆರಂಭ ವಾಗಿದ್ದು, ಕಾಲದಿಂದ ಕಾಲಕ್ಕೆ ರಚನಾತ್ಮಕವಾಗಿ ನಿರ್ದಿಷ್ಟತೆ ಪಡೆಯುತ್ತಾ ತಮ್ಮದೆಯಾದ ವಾಸ್ತುಶೈಲಿ, ಪ್ರಭೇದಗಳನ್ನು ಪ್ರಕಟಿಸುತ್ತಾ ನಡೆದುಬಂದಿದೆ.

ಕರ್ನಾಟಕದ ವಾಸ್ತುಶಿಲ್ಪಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಾ ಬಂದ ದೇವಾಲಯ ವಾಸ್ತು, ಕಾಲದಿಂದ ಕಾಲಕ್ಕೆ ಬದಲಾವಣೆಗೊಂಡು, ದೇವಾಲಯದ ರೂಪರೇಷೆ, ರಚನಾಕ್ರಮ, ದೇವಾಲಯದ ಒಂದೊಂದು ಭಾಗದ ಅಂಗಗಳು, ಅವುಗಳ ಅಲಂಕಾರದ ಪ್ರಕಾರಗಳನ್ನು ನಾವಿಲ್ಲಿ ಗಂಭೀರವಾಗಿ ಗಮನಿಸಬೇಕಾಗುತ್ತದೆ. ಏಕೆಂದರೆ ದೇವಾಲಯದ ಒಟ್ಟು ವಾಸ್ತು ಯಾವ ಶೈಲಿಯಲ್ಲಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.[೨]

ಈ ಹಿನ್ನೆಲೆಯಲ್ಲಿ ಬಾಗಲಕೋಟೆ ಪರಿಸರದಲ್ಲಿ ಬರುವ ಗ್ರಾಮಗಳಾದ ಶಿರೂರ, ಬೇವೂರ, ಹಳ್ಳೂರ ಗ್ರಾಮಗಳನ್ನು ಒಳಗೊಂಡು ಮಂಕಣಿ, ಬಿಲ್‌ಕೆರೂರ, ಬೊಮ್ಮಣಗಿ, ಹಿರೆಮ್ಯಾಗೇರಿ, ಕಿರಸೂರ, ಮುಡಪಲಜೀವಿ, ಸೀತಿಮನಿ ಇತ್ಯಾದಿ ಗ್ರಾಮಗಳಲ್ಲಿ ಕಂಡುಬರುವ ಪ್ರಾಚೀನ ಮಧ್ಯಕಾಲೀನ ದೇವಾಲಯಗಳ ಪ್ರತಿಯೊಂದು ಭಾಗದ ಲಕ್ಷಣ, ಚರಿತ್ರೆ ಇತ್ಯಾದಿಯನ್ನು ವಾಸ್ತುಶಿಲ್ಪ, ವಾಸ್ತುಗ್ರಂಥಗಳ ರೀತಿ ಚರ್ಚಿಸುತ್ತಾ ಅವುಗಳನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಶೈವ, ವೈಷ್ಣವ, ಜೈನ, ಶಾಕ್ತ ದೇವಾಲಯಗಳೆಂದು ವಿಂಗಡಿಸಿಕೊಂಡು ಬಿಡಿಯಾಗಿ ಅಧ್ಯಯನ ಮಾಡಿದ್ದೇವೆ.

೫.೭.೧. ಶೈವ ದೇವಾಲಯಗಳು

ಬಾಗಲಕೋಟೆ ಪರಿಸರದಲ್ಲಿ ಶಿವನ ಹಲವು ಹೆಸರಿನ ದೇವಾಲಯಗಳು ಕಂಡುಬರುತ್ತಿದ್ದು ಅವನ್ನು ಕೆಳಗಿನಂತೆ ನೋಡಲಾಗಿದೆ.

೧. ಶಿರೂರ ಗ್ರಾಮ

ಶಿರೂರ ಗ್ರಾಮದಲ್ಲಿ ಸಿದ್ಧೇಶ್ವರ ಹಾಗೂ ರಾಮಲಿಂಗ ಹೆಸರಿನ ದೇವಾಲಯಗಳು ಕಂಡುಬರುತ್ತವೆ. ಶಾಸನೋಕ್ತವಾಗಿ ಹಲವು ಹೆಸರಿನ ದೇವಾಲಯ ಶಿಲ್ಪಗಳು ಕಂಡುಬರುವವು.

ಅ. ಗ್ರಾಮ : ಶಿರೂರ

ದೇವಾಲಯ : ಸಿದ್ಧೇಶ್ವರ

ಧರ್ಮ : ಶೈವ

ಸ್ಥಳ : ಬೆಟ್ಟದ ಉತ್ತರ ಬುಡದಲ್ಲಿ

ಅಭಿಮುಖ : ಪಶ್ಚಿಮ

ಮಾಧ್ಯಮ : ದಖ್ಖನ್ ಕೆಂಪುಮರಳು ಶಿಲೆ

ಕಾಲ : ಕ್ರಿ.ಶ. ೯೯೦-೯೧, ಕ್ರಿ.ಶ. ೧೦೩೩, ಕ್ರಿ.ಶ. ೧೦೪೯

ಶೈಲಿ : ಕಲ್ಯಾಣ ಚಾಲುಕ್ಯ(ಕಳಿಂಗ)

ಪೋಷಕರು : ಸಿಂಧ ನಾಗಾದಿತ್ಯ, ನಾಗತಿಯರಸ, ಪ್ರಭುಮಾರಸಿಂಘ

ದೇವಾಲಯದ ಚರಿತ್ರೆ : ಬಾಗಲಕೋಟೆ ಪರಿಸರದಲ್ಲಿ ಬರುವ ಶಿರೂರ ಗ್ರಾಮ, ಬಾಗಲಕೋಟೆಯ ಆಗ್ನೇಯಕ್ಕೆ ೧೨ ಕಿ.ಮೀ. ಅಂತರದಲ್ಲಿದೆ. ಗ್ರಾಮವನ್ನು ಅಲ್ಲಿಯ ಶಾಸನಗಳು ಶ್ರೀಪುರ, ಶಿರಿವೂರವೆಂದು ಕರೆಯುತ್ತಿದ್ದು ಇಂದು ಶಿರೂರ ನಾಮದಿಂದ ಚಾಲ್ತಿಯಲ್ಲಿದೆ. ಕ್ರಿ.ಶ. ೯೯೦-೯೧ರ ಭೈರನಮಟ್ಟಿ ಶಾಸನ[೩] ಬಾಗಡಗೆ ಸಿಂಧರ ವಂಶಾವಳಿ ನೀಡುತ್ತಾ ಮೂಲಪುರುಷ ಸಿಂಧಕುಮಾರನಿಂದ ೨ನೇ ನಾಗಾದಿತ್ಯ ಅಥವಾ ನಾಗತಿಯರಸನು ಪತ್ತಿಯ ಮತ್ತೂರಿನ ದಂಡಿನಲ್ಲಿದ್ದಾಗ (ಅಂದರೆ ಜಯದ ಹಾದಿಯಲ್ಲಿದ್ದಾಗ ಕಿರಿಯ ಸಿರಿವೂರದ ಸಿದ್ಧೇಶ್ವರ ದೇವರಿಗೆ, ಸಿಂಹರಾಶಿ ಭಟ್ಟಾರನ ಕಾಲು ತೊಳೆದು ಅವನ ಕಾಲಕರ್ಚಿಗೆಂದು ಸಾಯಿರ ೧೦೦೦ ಮತ್ತರ ಭೂಮಿಯನ್ನು ನೀಡಿದನೆಂದು ಶಾಸನ ಹೇಳುವುದು.

ಶಾಸನದ ಸಿದ್ಧೇಶ್ವರ ಎನ್ನುವುದು ಸಿಂಧವಂಶದ ಮೂಲ ಪುರುಷ ಸಿಂಧಕುಮಾರನ ಹೆಸರಾಗಿದ್ದು ಬಾಗಡಗೆ ಸಿಂಧರು ತಮ್ಮ ವಂಶದ ಮೂಲಪುರುಷನ ಹೆಸರಿನಿಂದ ದೇವಾಲಯ ಕಟ್ಟಿರುವ ಸಾಧ್ಯತೆಯಿದೆ ಮತ್ತು ನಾಗತಿಯರಸ ನಾಗಾದಿತ್ಯ ದಾನ ಬಿಟ್ಟಿದ್ದನ್ನು ಗಮನಿಸಿದಾಗ ಈ ನಾಗಾದಿತ್ಯನಿಗಿಂತ ಮೊದಲೇ ದೇವಾಲಯ ನಿರ್ಮಾಣವಾಗಿರುವ ಸಾಧ್ಯತೆ ಹೆಚ್ಚು, ಅಂದರೆ ಇದೇ. ೨ನೇ ನಾಗಾದಿತ್ಯ ಕಟ್ಟಿಸಿರಬೇಕು ಇಲ್ಲವೇ ಪೊಲಿಸಿಂಧ ಪ್ರಭುಸೆಮ್ಮರ ಕಾಲದಲ್ಲಿ ಇದು ನಿರ್ಮಾಣವಾಗಿರಬೇಕು. ಇದರ ಜೊತೆಗೆ ಗುಡಿಯನ್ನು ಗಮನಿಸಬೇಕಾಗುತ್ತದೆ. ಮೂಲತಃ ಸಿಂಧೇಶ್ವರ (ಸಿದ್ಧೇಶ್ವರ) ಏಕಕೂಟ ತಲಛಂದದಲ್ಲಿ ಪಶ್ಚಿಮಮುಖವಾಗಿ ಗರ್ಭಗೃಹ, ಅಂತರಾಳಮಂಟಪ, ನವರಂಗಮಂಟಪಗಳನ್ನು ನಿರ್ಮಿಸಲಾಗಿದೆ.

ಇದೇ ಶಾಸನದಲ್ಲಿ ಕ್ರಿ.ಶ. ೧೦೩೩ ರ ೧ನೇ ಜಗದೇಕಮಲ್ಲನ ಕಾಲವಿದ್ದು ಜಗದೇಕಮಲ್ಲ ಕೊಲ್ಲಿಪಾಕೆಯಿಂದ ರಾಜ್ಯವಾಳುತ್ತಿದ್ದಾಗ ಅವನ ಮಹಾಸಾಮಂತ ನಾಗತಿಯರಸನು ಶ್ರೀಮತ್ ತೇಜೋರಾಶಿ ಪಂಡಿತನ ಕಾಲು ತೊಳೆದು ಪುರದ ಕೆರಿಯ ಪೊಗದೆ... ದೇವರಿಗೆ ಬಿಟ್ಟ ಪರಿಸೂತ್ರದ ದಂಡ ದೋಷಗಳನ್ನು ನೀಡಿದನೆಂದು ಹೇಳುವುದು. ಇಲ್ಲಿ ಯಾವ ದೇವರೆಂಬುದು ತಿಳಿದುಬರುವುದಿಲ್ಲ. ಇದೇ ಶಾಸನ ಮುಂದುವರಿದು ಕೊನೆಯ ಭಾಗದಲ್ಲಿ ಶ್ರೀ ಸಿಂಧೇಶ್ವರ ದೇವರಾಚಾರ್ಯ ತೇಜೊರಾಶಿ ಪಂಡಿತರು ಜೀರ್ಣೋದ್ಧಾರವಂ ಪುನಃ ಪ್ರತಿಷ್ಠೆ ಮಾಡಿದರು ಎಂದು ಹೇಳುವುದು.

ಶಾಸನದ ಮೇಲ್ಭಾಗದಲ್ಲಿಯ ವಿಷಯ ಏಕಕೂಟ ದೇವಾಲಯ ನಿರ್ಮಾಣವಾಗಿದ್ದನ್ನು ತಿಳಿಸುತ್ತದೆ. ಶಾಸನದ ಕೊನೆಯ ಭಾಗದ ಹೇಳಿಕೆ ನೋಡಿದಾಗ ಮೊದಲಿನ ಆಚಾರ್ಯ ಸಿಂಹರಾಶಿ ಭಟ್ಟಾರನಾಗಿದ್ದರೆ, ಈ ತೇಜೋರಾಶಿ ಬಟ್ಟಾರ ಆಚಾರ್ಯನಾಗಿರುವುದು ಮತ್ತು ಜೀರ್ಣೋದ್ಧಾರ ಮತ್ತು ಪುನಃ ಪ್ರತಿಷ್ಠೆ ಮಾಡಿದ ಹೇಳಿಕೆ ಗಮನಿಸಿದಾಗ ಮೂಲ ಗರ್ಭಗೃಹದ ಜೊತೆಗೆ ಈಗ ನವರಂಗ ಮಂಟಪದ ಉತ್ತರ ಗೋಡೆಯಲ್ಲಿ ಮತ್ತೊಂದು ಸ್ವಲ್ಪ ಚಿಕ್ಕ ಗರ್ಭಗೃಹ, ಅರ್ಧಮಂಟಪಗಳನ್ನು ಜೋಡಿಸಿರುವುದನ್ನು ಕಾಣುತ್ತೇವೆ. ಹೀಗಾಗಿ ತೇಜೋರಾಶಿ ಪಂಡಿತನು ಇದನ್ನು ಕಟ್ಟಿಸಿರುವ ಸಾಧ್ಯತೆಯನ್ನು ತಳ್ಳಿ ಹಾಕಲು ಬರುವುದಿಲ್ಲ,

ಒಟ್ಟಿನಲ್ಲಿ ದ್ವಿಕೂಟ ಸಿದ್ಧೇಶ್ವರ ದೇವಾಲಯವು ಭೈರನಮಟ್ಟಿಯ ಎರಡು ಕಾಲಮಾನ ಹೊಂದಿದ ಈ ಶಾಸನದ ಸಿಂಧೇಶ್ವರ ದೇವಾಲಯ ಮೊದಲು ಪೊಲಸಿಂಧ ಮತ್ತು ಪ್ರಭುಸೆವ್ಯರ ಕಾಲದಲ್ಲಿ ಮೂಲಗುಡಿ ನಿರ್ಮಾಣವಾಗಿದ್ದು, ಅದರ ನವರಂಗಮಂಟಪಕ್ಕೆ ಹತ್ತಿಕೊಂಡು ತೇಜೋರಾಶಿ ಪಂಡಿತ ಮತ್ತೊಂದು ಗರ್ಭಗೃಹ ಅರ್ಧಮಂಟಪ ನಿರ್ಮಿಸಿದ್ದನ್ನು ಕಾಣಬಹುದು.

ಕ್ರಿ.ಶ. ೧೦೪೯ ರ ಅದೇ ಸಿದ್ಧೇಶ್ವರ ದೇವಾಲಯ ನವರಂಗಮಂಟಪ ಗೊಡೆಯಲ್ಲಿ ಪ್ರತಿಷ್ಠಾಪಿಸಿದ ಶಾಸನ[೪] ಕೊಲ್ಲಾಪುರದ ಮಹಾಲಕ್ಷ್ಮಿಯ ಪಾದಪದ್ಮೋಪಜೀವಿಯಾದ ಗೌರಬ್ಬೆಯ ಮಗ ಪ್ರಭು

ಮಾರಸಿಂಘನು ಪೊನಗುಂದವನ್ನು ಆಳುತ್ತಿದ್ದಾಗ ಆಡಳಿತ ವಿಭಾಗದ ಮಧ್ಯ ಬರುವ ಶ್ರೀಪುರವೆಂಬ ಗ್ರಾಮದಲ್ಲಿ ೨೦೦ ನಿವರ್ತನ ಭೂಮಿಯನ್ನು ಸಿದ್ಧೇಶ್ವರ ದೇವರ ಧೂಪ, ದೀಪ, ಗಂಧ, ನೈವೇದ್ಯ, ನೃತ್ಯೋತ್ಸವ ಸಹಿತ ಯತಿಗಳಿಗೆ, ವಿದ್ಯಾರ್ಥಿಗಳ ಸತ್ರ, ಖಂಡ ಸ್ಫೂಟಿಕ ಜೀರ್ಣೋದ್ಧಾರಕ್ಕೆಂದು ದಾನ ಬಿಟ್ಟಿರುವುದನ್ನು ಹೇಳುತ್ತದೆ. ಇದರಿಂದ ಹಿಂದಿನಿಂದಲೂ ದೇವಾಲಯ ಜೀರ್ಣೋದ್ಧಾರವಾಗುತ್ತಲೇ ಬಂದಿತ್ತೆಂದು ಹೇಳಬಹುದು. ಇಲ್ಲಿಯ ಜೀರ್ಣೋದ್ಧಾರವೆಂಬುದು ಮೂಲಗುಡಿಯ ನವರಂಗ ಮಂಟಪದ ಮುಂದಿನ ತೆರೆದ ಸಭಾಮಂಟಪವೆಂದು ತಿಳಿದುಕೊಳ್ಳಬೇಕು.

ಈ ಮಾರಸಿಂಘಪ್ರಭುವಿನ ದಾನ, ದೇವಾಲಯ ನಿರ್ಮಾಣಗಳು ಇಲ್ಲಿಗೆ ನಿಲ್ಲಲಿಲ್ಲ. ಊರ ಪೂರ್ವಕ್ಕೆ ತನ್ನ ತಾಯಿ ಹೆಸರಿನಲ್ಲಿ ಗೌರಬ್ಬೆ ತಟಾಕ (ಕೆರೆ) ನಿರ್ವಹಣೆಗಾಗಿ ಅಲ್ಲಿ ೨ ನಿವರ್ತನ ಭತ್ತದ ಗದ್ದೆ ನೀಡಿದನು. ಬಾಗಡಗೆ-೭೦ರಲ್ಲಿ ಬರುವ ಮೂಲವಳ್ಳಿ ಗ್ರಾಮದ ಪೂರ್ವಕ್ಕಿರುವ ಪಳ್ಳವೂರ (ಹಳ್ಳೂರ)ದ ಸಮೀಪದಲ್ಲಿ ೫೦ ನಿವರ್ತನ ಭೂಮಿಯನ್ನು ಬಿಡುವನು.

ಸಿದ್ಧೇಶ್ವರ ದೇವಾಲಯದ ಆವರಣದಲ್ಲಿ ಬರುವ ಮತ್ತು ಗ್ರಾಮದಲ್ಲಿ ಬರುವ ಹಲವು ಗುಡಿಗಳಾದ ವಿಷ್ಣು, ವಿನಾಯಕ, ಚಂಡಿ, ಹನುಮ, ಹಟಕೇಶ್ವರ, ಮಲ್ಲಿಕಾರ್ಜುನ ಹಾಗೂ ತೋರಣಮಂಟಪ, ವಿತಾನಮಂಟಪ (ಬಹುಶಃ ನಂದಿಮಂಟಪ), ಕಪಿಲತೀರ್ಥ ಸಮಕಾಳಿ ಮಠ(ಸಮಾಳಿಕ ಮಠ), ಮಾಡಗಳನ್ನು ಹಾಗೂ ಶಿಲ್ಪಗಳಾದ ನಂದಿ, ಮಹಾಕಾಳಿ, ಭೈರವ, ದುರ್ಗ, ಆದಿತ್ಯ, ಚಂಡೀಶ, ಷಣ್ಮುಖ, ಸರಸ್ವತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಶಿಲಾಸ್ತಂಭ, ಮೂರು ತಟಾಕ ಕೆರೆಗಳನ್ನು ನಿರ್ಮಿಸಿದನೆಂದು ಶಾಸನ ಹೇಳುವುದು. ಇವುಗಳಿಗೆಂದು ಬಾಗಡಗೆ ದಾರಿಯಲ್ಲಿ ೩೦ ನಿವರ್ತನ ಭೂಮಿ ನೀಡಿ ಬೇರೆ ಬೇರೆಯಾಗಿ ತಲಾ ೧ ಪಣದಂತೆ ಬಡ್ಡಿಯಾಗಿ ಬಂದ ಹಣದಲ್ಲಿ ದಾನ ಬಿಟ್ಟಿದ್ದಾನೆ. ಜೊತೆಗೆ ಶ್ರೀ ಮಠದ ಮೇಲ (ಆಲಮೇಲ) ಉತ್ತರೇಶ್ವರ ಮಠದ ಮಲಯಾಳ ಮುನಿ ಸಂತತಿಗೆ ಸೇರಿದ ಸಿಂಹ ಪರ್ಷಗೆ ಸೇರಿದ ತೇಜೋರಾಶಿ ಎಂಬುವವನಿಗೆ ತಾಮ್ರಶಾಸನ ಹಾಕಿಕೊಟ್ಟನೆಂದು ಹೇಳುವುದು.

ಪ್ರಭುಮಾರಸಿಂಘನು ಕ್ರಿ.ಶ.೧೦೬೨ ರ ಸುಮಾರಿನಲ್ಲಿ ಸಿದ್ಧೇಶ್ವರ ದೇವಾಲಯದ ಜೀರ್ಣೋದ್ಧಾರ, ಅದರ ಸುಣ್ಣ ಬಣ್ಣಕ್ಕೆಂದು, ಬ್ರಾಹ್ಮಣರ ಭೋಜನಕ್ಕೆ ಮಹಾಜನರ ಕೈಯಲ್ಲಿ ೨೨೦೦ ಗದ್ಯಾಣ ನೀಡಿ ಅದರಿಂದ ಬರುವ ಹಣ ೨ಕ್ಕೆ ಗದ್ಯಾಣವನ್ನು ವೆಚ್ಚಕ್ಕಾಗಿ ನೀಡಿದ್ದನ್ನು ಶಾಸನ ತಿಳಿಸುವುದು.[೫] ಶಾಸನ ಜೀರ್ಣೋದ್ಧಾರವೆಂದಿದ್ದರಿಂದ ದೇವಾಲಯದ ತೆರೆದ ಸಭಾಮಂಟಪವನ್ನು ಕಟ್ಟಿಸಿರಬೇಕು.

ಇದರ ಜೊತೆಗೆ ಕ್ರಿ.ಶ. ೧೦೬೮-೯ರ ಮತ್ತೊಂದು ಗುಡಿಯ ಶಾಸನ ಕೊಲ್ಲಾಪೂರದ ಮಹಾಲಕ್ಷ್ಮಿಯ ಪಾದಪದ್ಮೋಪಜೀವಿ ಗೌರಬ್ಬೆಯ ಗಂಡ ನಿಂಬಕುಳದ ಶ್ರೀಯುತ ಕೊಲ್ಲಾಪುರದ

ಪ್ರಭು ದೇವರಾಯನಾಯಕ ಕರ್ಣ್ನನ ಶಿರವೂರ ಸಿದ್ಧದೇವರ್ಗ್ಗೆ ಭೂಮಿದಾನ ನೀಡಿದನೆಂದು ಹೇಳುವುದು.[೩೬]

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ : ತಿರ್ಯಙ್ಮುಖ ರಚನೆ ಎಂದರೆ ದೇವಾಲಯದ ಒಳಭಾಗದ ಗರ್ಭಗೃಹದಿಂದ ಹಿಡಿದು ಮುಂದೆ ಇರುವ ಎಲ್ಲ ಮಂಟಪ ಇತ್ಯಾದಿಗಳ ರಚನಾ ಕ್ರಮವನ್ನು ತಿರ್ಯಙ್ಮುಖ ರಚನೆ ಎನ್ನುವರು. ಸಿದ್ಧೇಶ್ವರ ದೇವಾಲಯವು ತಲವಿನ್ಯಾಸದಲ್ಲಿ ದ್ವಿಕೂಟ ಮಾದರಿಯಲ್ಲಿದ್ದು, ಎರಡು ಗರ್ಭಗೃಹಗಳು, ಒಂದು ಅಂತರಾಳ, ಒಂದು ಅರ್ಧಮಂಟಪ, ನವರಂಗಮಂಟಪ, ತೆರೆದ ಸಭಾಮಂಟಪ ಹೊಂದಿದೆ. ಇದು ಸಂಕೀರ್ಣ ಮಾದರಿ ದೇವಾಲಯವಾಗಿದ್ದು ಸುತ್ತಲೂ ಪ್ರಾಕಾರ, ಪಶ್ಚಿಮಕ್ಕೆ ಮಂಟಪ ರೀತಿಯ ಪ್ರವೇಶದ್ವಾರ ಹೊಂದಿದೆ. ಇದರ ಒಳಗಡೆ ೫ ಚಿಕ್ಕಗುಡಿಗಳಾದ ವಿಷ್ಣು, ಹಟಕೇಶ್ವರ, ಚಂಡಿ, ವಿನಾಯಕ, ಮಾರುತಿ ಹೆಸರಿನ ದೇವಾಲಯ ಗಳೆಂದು ಶಾಸನ ಹೆಸರಿಸಿದೆ. ಜೊತೆಗೆ ನಾಲ್ಕು ಸ್ತಂಭದ ತೋರಣ, ನಂದಿ ಮಂಟಪ, ವಿತಾನ ಮಂಟಪ (ಪ್ರವೇಶಮಂಟಪ) ಗಳನ್ನು ಕಟ್ಟಿಸಿದವನು ಪ್ರಭು ಮಾರಸಿಂಘನಾಗಿದ್ದಾನೆ.

ಗರ್ಭಗೃಹಗಳು

ಪಶ್ಚಿಮಮುಖ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು, ದ್ವಾರದಲ್ಲಿ ಯಾವುದೇ ಅಲಂಕಾರವಿಲ್ಲ. ದಕ್ಷಿಣಮುಖ ಗರ್ಭಗೃಹದಲ್ಲಿ ಚೌಕಪಾಣಿ ಲಿಂಗವಿದ್ದು ಅದರ ದ್ವಾರದಲ್ಲಿ ಸಹ ಅಲಂಕಾರ ಕಂಡುಬರುವುದಿಲ್ಲ.

ಅಂತರಾಳ

ಪಶ್ಚಿಮಮುಖ ಗರ್ಭಗೃಹದ ಮುಂದೆ ಅಂತರಾಳವಿದ್ದು ಅದರ ದ್ವಾರವು ೨ ಪಟ್ಟಿಕೆ ಶಾಖೆ ಹೊಂದಿದ್ದು ಪಾರ್ಶ್ವಭಿತ್ತಿಯಲ್ಲಿ ಹೂ ಕೆತ್ತನೆಯುಳ್ಳ ಆಲಂಕಾರಿಕ ಜಾಲಕ ಕಿಂಡಿ ಕಂಡು ಬರುತ್ತವೆ.

ಅರ್ಧಮಂಟಪ

ದಕ್ಷಿಣ ಗರ್ಭಗೃಹದ ಮುಂದೆ ಅರ್ಧಮಂಟಪವಿದ್ದು ಅಲಂಕಾರ ಭಾಗಗಳಿಲ್ಲ.

ನವರಂಗಮಂಟಪ

ಎರಡು ಗರ್ಭಗೃಹಗಳ ಮುಂದೆ ನಾಲ್ಕು ಸ್ತಂಭದ ನವರಂಗಮಂಟಪವಿದ್ದು ಅದರ ಒಳಗಿನ

ಪ್ರತಿಯೊಂದು ಭಾಗಗಳು ಆಲಂಕಾರಿಕ ಕೆತ್ತನೆಯಿಂದ ಕೂಡಿವೆ. ಸ್ತಂಭಗಳು ಮಿಶ್ರಕ ಮಾದರಿಗೆ ಸೇರಿದ್ದು ಪೀಠ, ಪಾದ, ದಂಡ, ದಂಡಾಗ್ರಭಾಗ ಹೊಂದಿದೆ. ಕೆಳಗಿನ ಪಾದಭಾಗದ ಚೌಕಪಟ್ಟಿಕೆಯ ಮುಖಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ದಂಡಾಗ್ರದ ಘಟಭಾಗವು ಗೋಲಾಕಾರವಾಗಿದ್ದು ಅದರ ಮಂಡಿ ಭಾಗವಿದ್ದು ಕೀರ್ತಿಮುಖ, ಸರಳ ಕೆತ್ತನೆ ಅಲಂಕಾರದಲ್ಲಿದೆ. ಅದರ ಮೇಲೆ ೧೬ ಕೋನ ಒಳಕೆತ್ತನೆ, ಅದರ ಮೇಲೆ ಚೌಕ ಫಲಕ, ಗ್ರೀವ (ಕಂಠ) ಶಿರಭಾಗವು (ಬೋದಿಗೆ) ತರಂಗ ಮಾದರಿಯಲ್ಲಿದೆ. ಈ ಸ್ತಂಭಗಳ ಮೇಲೆ ಅಡ್ಡ ಚಾವಣಿಗಳ ಮುಖಗಳು ನಿಧಿಯಕ್ಷರ, ಗಂಧರ್ವರ ಶಿಲ್ಪ ಕೆತ್ತನೆಯಿಂದ ಕೂಡಿದೆ. ಸ್ತಂಭಗಳ ಮೇಲಿನ ವಿತಾನ (ಭುವನೇಶ್ವರಿ)ವು ದಿಕ್ಪಾಲಕ, ಯಕ್ಷ, ಗಂಧರ್ವ ಶಿಲ್ಪಗಳ ಜೊತೆಗೆ ಸೂಕ್ಷ್ಮ ಕುಸುರಿನ, ಅಲಂಕಾರದಲ್ಲಿದ್ದಂತೆ ಛಾದ್ಯದ ಭಾಗ ಮಾತ್ರ ಆಲಂಕಾರಿಕ ರಹಿತವಾಗಿರುವುದು ಗಮನಿಸಬೇಕಾದ ಅಂಶವಾಗಿದೆ. ಈ ಸ್ತಂಭಗಳ ಮೇಲೆ ತೆರೆದಮಂಟಪಗಳ ಕಟಾಂಜನರ ಸ್ತಂಭಗಳ ಮೇಲೆ ಇರುವ ಇಳಿಜಾರು ಮುಂಚಾಚುವಿನಂತೆ ಈ ನವರಂಗಮಂಟಪದ ನಾಲ್ಕು ಸ್ತಂಭಗಳ ಮೇಲೆ ನಿರ್ಮಿಸಿರುವುದು ಚಾಲುಕ್ಯ ದೇವಾಲಯ ಶೈಲಿಯ ಹೊಸದೊಂದು ಲಕ್ಷಣವಾಗಿ ಕಂಡುಬರುತ್ತದೆ. ಇದರ ಒಳಮೈಯನ್ನು ಬಿದಿರಿನ ಹೆಣಿಕೆಯಂತೆ ಕೆತ್ತಲಾಗಿದೆ.

ಈ ಸ್ತಂಭಗಳ ಪಾದ ಮತ್ತು ದಂಡಾಗ್ರ ಭಾಗಗಳ ಚೌಕಾದ ಪಟ್ಟಿಕೆಗಳ ನಾಲ್ಕು ಮುಖಗಳಲ್ಲಿ ಶೈವಪುರಾಣ, ರಾಮಾಯಣ, ಮಹಾಭಾರತ ಮತ್ತು ಲೌಕಿಕ ಶಿಲ್ಪಗಳನ್ನು ಕೆತ್ತಲಾಗಿದೆ. ಕ್ರಮವಾಗಿ ಮುಳ್ಳು ತೆಗೆಯುವ ಸ್ತ್ರೀ, ಕೈಲಾಸಪರ್ವತವೆತ್ತುವ ರಾವಣ, ಮಾರೀಚನನ್ನು ಗಿಡದ ಹಿಂದೆ ನಿಂತು ಕೊಲ್ಲುವ ರಾಮಲಕ್ಷ್ಮಣರು, ಸ್ತ್ರೀ ದೇವತೆ, ವಿಷ್ಣು, ರತಿ-ಕಾಮ, ಭಿಕ್ಷಾಟನ ಶಿವ, ಭೈರವ, ಏಕದಾರಿ ಹಿಡಿದು ನೃತ್ಯದಲ್ಲಿ ತೊಡಗಿದ ಯೋಗಿ ಸ್ತ್ರೀ, ಸಂಗೀತಗಾರರು, ನೃತ್ಯ ನಟರಾಜ, ನೃತ್ಯ ಸ್ತ್ರೀ ಶಿಲ್ಪಗಳು ಹಾಗೂ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಸ್ತಂಭಗಳನ್ನು ಮನೋಹರವಾಗಿ ಚಿತ್ರಿಸಲಾಗಿದ್ದು ಸ್ತಂಭಗಳ ಶಿಲ್ಪಗಳಲ್ಲಿಯೇ ರಾವಣನು ಕೈಲಾಸ ಪರ್ವತವೆತ್ತುವ ದೃಶ್ಯ ಬಹಳ ಅದ್ಭುತವೆಂದು ಹೇಳಬಹುದಾಗಿದೆ.

ಸ್ತಂಭಗಳ ದಂಡಾಗ್ರ ಭಾಗದ ಚೌಕಪಟ್ಟಿಕೆ ಮುಖಗಳಲ್ಲಿ ಸಹ ಶಿಲ್ಪಗಳ ಕೆತ್ತನೆಯಿದ್ದು, ಕ್ರಮವಾಗಿ ನೋಡುವುದಾದರೆ, ಗರುಡ-ಹನುಮ ಲಿಂಗವೆತ್ತುವುದು, ನೃತ್ಯ ಚಾಮುಂಡಿ, ಸೀತೆಗೆ ಉಂಗುರ ಕೊಡುವ ಹನುಮ (ಅಶೋಕವನ), ಜಾಮಿತಿ ಕೆತ್ತನೆಯಲ್ಲಿ ಹಂಸ, ಜಾಮಿತಿ ಶಿಲ್ಪಗಳು, ಕಮಲ, ಜಾಮಿತಿ, ಹಿರಣ್ಯಕಶ್ಯಪುವನ್ನು ಕೊಲ್ಲುವ ನರಸಿಂಹ, ಯಕ್ಷಗಂಧರ್ವರು, ಕಾಡಿನ ಮಧ್ಯವಿರುವ ಒಂದು ಗಿಡದ ಕೆಳಗೆ ಚಿಂತೆ ಮಾಡುತ್ತಾ ಕುಳಿತಿರುವ ಬೇಡ, ಅವನ ಮುಂದೆ ನರಿ ಮತ್ತು ನವಿಲುಗಳನ್ನು ಬೇಟೆಯಾಡಿ ಬಿಡಗಿಗೆ ಕಟ್ಟಿಕೊಂಡು ಹೆಗಲ ಮೇಲೆ ಹೊತ್ತು ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ನಡೆದ ಬೇಡರ ಸ್ತ್ರೀ ಶಿಲ್ಪ ದೃಶ್ಯ ಚಾಲುಕ್ಯ ಶಿಲ್ಪಗಳ ಭಾವನಾ ಲೋಕದ(ಕಲ್ಪನೆ) ಜಾಣ್ಮೆಗೆ ಕೈಗನ್ನಡಿಯಾಗಿ ನಿಲ್ಲುತ್ತದೆ. ಈ ಎಲ್ಲ ದೃಶ್ಯಗಳಲ್ಲಿ ಪ್ರಮುಖವಾಗಿ ಬೇಡ-ಬೇಡತಿ ದೃಶ್ಯ,

ರಾವಣ ಕೈಲಾಸವೆತ್ತುವ ದೃಶ್ಯ, ಗರುಡ-ಹನುಮರು ಲಿಂಗವೆತ್ತುವ ದೃಶ್ಯಗಳನ್ನು ಚಾಲುಕ್ಯ ಶಿಲ್ಪಿಗರು ವಾಸ್ತುಶಿಲ್ಪ ಶಾಸ್ತ್ರಕ್ಕನುಗುಣವಾಗಿ ಕೆತ್ತಿರುವುದನ್ನು ಕಾಣಬಹುದಾಗಿದೆ.

ನವರಂಗದ ಒಳಭಿತ್ತಿಯ ವಾತಾಯನದ ಕುಡ್ಯಸ್ತಂಭಗಳ ಪಾದ, ದಂಡಾಗ್ರ ಭಾಗಗಳಲ್ಲಿ ಸಹ ಹಲವು ರೀತಿಯ ಶಿಲ್ಪಕೆತ್ತನೆಗಳನ್ನು ಮಾಡಲಾಗಿದೆ. ಮುಖ್ಯವಾಗಿ ಸಂಗೀತಗಾರರು, ನೃತ್ಯಗಾರರು, ದಿಕ್ಪಾಲಕರು, ವೀರರು, ರಾಮಾಯಣ ಹಾಗೂ ಇತರ ಕಥೆಗಳ ದೃಶ್ಯಗಳ ಶಿಲ್ಪಗಳು ಪ್ರಮುಖವಾಗಿವೆ.

ನವರಂಗದ ಮಧ್ಯದ ನಾಲ್ಕು ಸ್ತಂಭಗಳ ಮೇಲಿನ ವಿತಾನವನ್ನು ಭುವನೇಶ್ವರಿ ಹೊರತು ಪಡಿಸಿ ಉಳಿದ ಎಂಟು ವಿತಾನಗಳ ಬದಲಿಗೆ ಮಂಟಪದಲ್ಲಿ ವೃತ್ತಾಕಾರದಲ್ಲಿ ಎಲುಬಿನ ಹಂದರದ ಕೆತ್ತನೆಯು ಅದ್ಭುತ ಮತ್ತು ವಿಶಿಷ್ಟ ಲಕ್ಷಣವಾಗಿದೆ.

ನವರಂಗಮಂಟಪದ ದ್ವಾರವು ಪಂಚಶಾಖೆಯ ಅಲಂಕಾರದಿಂದ ಕೂಡಿದೆ. ದ್ವಾರದ ಲಲಾಟದ ಮೇಲಿನ ಉತ್ತರಾಂಗ ಭಾರತದಲ್ಲಿ ಕೋಷ್ಠ (ಕೋಷ್ಟಕ) ಮಾದರಿ ಪಟ್ಟಿಕೆಯಿರುವುದು.

ತೆರೆದ ಸಭಾಮಂಟಪ

ತೆರೆದ ಸಭಾಮಂಟಪದಲ್ಲಿ ಒಟ್ಟು ೧೬ ಶ್ರೀಕಾರ ಮಾದರಿ ಸ್ತಂಭಗಳಿವೆ. ಮಧ್ಯದಲ್ಲಿ ನಾಲ್ಕು ಸ್ತಂಭಗಳಿದ್ದರೆ, ಸುತ್ತಲ್ಲೂ ೧೨ ಸ್ತಂಭಗಳು, ಮಧ್ಯದ ಶ್ರೀಕಾರ ಸ್ತಂಭಗಳು, ಪೀಠ, ಪಾದ, ದಂಡ, ದಂಡಾಗ್ರಗಳಿಂದ ಕೂಡಿದ್ದು ಪಾದವು ಶಿಲ್ಪಬಳ್ಳಿಯ ಅಲಂಕಾರ ಹೊಂದಿವೆ. ದಂಡದ ಕೆಳಭಾಗ ಅಷ್ಟಕೋನವಾಗಿದ್ದರೆ, ಅದರ ಮೇಲಿನ ಘಂಟಾಭಾಗವು ಅಷ್ಟಕೋನದಲ್ಲಿದೆ. ದಂಡಾಗ್ರದಲ್ಲಿ ಗೋಲಾಕಾರದ ಬಳೆ, ಗೋಲಾಕಾರದ ಘಟ(ಫಲಕ) ಗೋಲಾಕಾರ ಬಳೆ ಹಾಗೂ ಫಲಕ(ಚೌಕ) ಹಾಗೂ ಸರಳ ರೀತಿಯ ಶಿರಭಾಗಗಳಿಂದ ಕೂಡಿವೆ. ಇವುಗಳ ಪಾದದ ಚೌಕ ಪಟ್ಟಿಕೆ ಮುಖಗಳಲ್ಲಿ ಮದನಿಕಾ ಹಾಗೂ ಇತರ ಶಿಲ್ಪಗಳನ್ನು ಕೆತ್ತಲಾಗಿದೆ.

ಸುತ್ತಲಿನ ಸ್ತಂಭಗಳು ಸಹ ಶ್ರೀಕಾರ ಸ್ತಂಭಗಳೇ ಆಗಿದ್ದು ಪಾದ, ದಂಡ, ದಂಡಾಗ್ರ ಭಾಗಗಳಿಂದ ಕೂಡಿದ್ದು ಪಾದ ಬಿಟ್ಟು, ದಂಡ-ದಂಡಾಗ್ರ ಭಾಗಗಳು ಅಷ್ಟಕೋನದಲ್ಲಿವೆ ಮೇಲಿನ ಶಿರಭಾಗ ದ್ವಿಮುಖದಲ್ಲಿ ಸರಳವಾಗಿದೆ. ಇವುಗಳ ಶಿರಭಾಗದ ಬೋದಿಗೆಗಳ ಮೇಲೆ ಅಡ್ಡಲಾಗಿ ಚಾವಣಿಗಳಿದ್ದು ಅವುಗಳ ಮೇಲೆ ಇಳಿಬಿದ್ದ ಉಪಛಾದ್ಯವಿದೆ. ಇದರ ಒಳಭಾಗದ ವಿತಾನವನ್ನು ವೃತ್ತಾಕಾರವಾಗಿ ಬಿದಿರಿನ ಹೆಣಿಕೆಯಂತೆ ಕೆತ್ತಲಾಗಿದೆ. ಮಧ್ಯದ ನಾಲ್ಕು ಸ್ತಂಭಗಳ ಮೇಲಿನ ವಿತಾನವು ಅಷ್ಟದಳ ಕಮಲದ ಅಲಂಕಾರದಲ್ಲಿ ಕೆತ್ತಲಾಗಿದೆ. ಮಂಟಪಕ್ಕೆ ಏರಿಹೋಗಲು ಸೋಪಾನಗಳಿದ್ದು ಅದು ಹಸ್ತಹಸ್ತಿ

ಮಾದರಿ ಸೋಪಾನವಾಗಿದೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಮೂಲಗುಡಿಯ ಅಧಿಷ್ಠಾನವು ಎರಡು ಮಾದರಿಯಲ್ಲಿ ಕಂಡುಬರುವುದು. ಮುಂದಿನ ತೆರೆದ ಸಭಾಮಂಟಪದ ಅಧಿಷ್ಠಾನ ಭಾಗವು ಉಪಾನ, ಜಗತಿ, ಗಳ, ವೇದಿಕೆ ಎಂಬ ನಾಲ್ಕು ಪಟ್ಟಿಕೆ ಹೊಂದಿದೆ. ಮೂಲ ಗರ್ಭಗೃಹ, ನವರಂಗಮಂಟಪಗಳ ಅಧಿಷ್ಠಾನವು ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟ ಕುಮುದ, ಕಪೋತ ಪಟ್ಟಿಕೆಗಳನ್ನು ಹೊಂದಿದೆ.

ಭಿತ್ತಿ

ಗರ್ಭಗೃಹಗಳು, ಅಂತರಾಳ, ಅರ್ಧಮಂಟಪ, ನವರಂಗಮಂಟಪಗಳ ಹೊರಭಿತ್ತಿಯು ಪಂಚರಥ ಮಾದರಿಯಲ್ಲಿದ್ದಂತೆ ಕೋಷ್ಠಸ್ತಂಭಗಳ ಪಂಜರ ಅಲಂಕಾರದಲ್ಲಿ ಕರ್ಣ, ಪ್ರತಿಕರ್ಣ, ಉಪಭದ್ರ, ಭದ್ರ, ಸುಭದ್ರ ಭಾಗಗಳಿವೆ. ನವರಂಗ ಭಿತ್ತಿಯಲ್ಲಿ ಕುಡ್ಯಸ್ತಂಭ ಪಂಜರಗಳಲ್ಲಿ ದ್ರಾವಿಡಶೈಲಿ ವಿಮಾನ ಮಾದರಿ ಪಂಜರಗಳಿವೆ.

ಪ್ರಸ್ತರ

ಭಿತ್ತಿಯ ಮೇಲಿನ ಪ್ರಸ್ತರವು ಚಿಕ್ಕದಾಗಿದ್ದು ಉತ್ತರ, ವಾಜನ, ವಲ್ಲಭ ಹಾಗೂ ಕಪೋತ ಹೊಂದಿದ್ದು ಅದರ ಮೇಲಿನ ವ್ಯಾಳವಾರಿಹಾರ ಭಾಗವು ಕಳಿಂಗ ಶೈಲಿ ವಿಮಾನ ಮಾದರಿ ಕೆತ್ತನೆಯಿಂದ ಕೂಡಿರುವುದು. ಇದು ಮೂಲ ಗರ್ಭಗೃಹ, ನವರಂಗಮಂಟಪಕ್ಕೆ ಸಂಬಂಧಿಸಿದೆ. ಇನ್ನೊಂದು ದಕ್ಷಿಣಮುಖ ಗರ್ಭಗೃಹದ ಭಿತ್ತಿಯ ಮೇಲಿನ ಪ್ರಸ್ತರವು ಉತ್ತರ, ವಾಜನ, ವಲ್ಲಭ ಹಾಗೂ ಕಪೋತ ಪಟ್ಟಿಕೆ ಹೊಂದಿದೆ. ಮುಂದಿನ ತೆರೆದಮಂಟಪದ ಮೇಲಿನ ಪ್ರಸ್ತರದ ಬುಡದಲ್ಲಿ ಲುಪಾಕಾರ ಶೈಲಿಯ ಛಾದ್ಯವಿದೆ.

ವಿಮಾನಗಳು

ಪಶ್ಚಿಮಮುಖ ಮೂಲ ಗರ್ಭಗೃಹದ ಮೇಲೆ ಇರುವ ವಿಮಾನ ಕಟ್ಟಡವು ಕಳಿಂಗನಾಗರ ಶೈಲಿಯ ಪಂಚರಥ ಮಾದರಿಯಲ್ಲಿ ಕಳಸದಲ್ಲಿ ಸಮಾವೇಶಗೊಂಡಿದೆ. ಮೇಲೆ ಆಮಲಕ

ಸ್ತೂಪಿಯಿದ್ದು(ನೆಲ್ಲಿಕಾಯಿ) ಅದರ ಮೇಲೆ ಕುಂಭ ಕಳಶವಿದೆ. ನವರಂಗ ಮಂಟಪದ ಮೇಲೆ ಸಹ ಆಮಲಕವಿರುವ ಭಾಗವಿದ್ದು, ಕಳಶವು ಇರುವುದು.

ದಕ್ಷಿಣಮುಖ ಗರ್ಭಗೃಹದ ಮೇಲಿನ ವಿಮಾನ ಸಹ ಮೂರು ಕಪೋತ ಪಟ್ಟಿಕೆ, ಎರಡುಗಳ ಭಾಗ ಹೊಂದಿದ್ದು, ಜಂಗಾಭಾಗ, ಅದರ ಮೇಲೆ ನಕ್ಷತ್ರ ಶಿಖರ ಹಾಗೂ ಕುಂಭಕಲಶ ಹೊಂದಿದೆ. ಇದೊಂದು ಔತ್ತರೇಯ ಫಾಂಸನಾ ವಿಮಾನವಾಗಿದೆ.

ಇತರ ಕಟ್ಟಡಗಳು

೧. ತೋರಣ

ಶಾಸನದಲ್ಲಿ ಹೇಳಿದಂತೆ ತೆರೆದ ಸಭಾಮಂಟಪದ ಮುಂದುಗಡೆ ಚಿಕ್ಕ ವೇದಿಕೆಯ ಮೇಲೆ ಒಂದೇ ಸಾಲಿನಲ್ಲಿರುವಂತೆ ಬಹುಕೋನದ ಪಾಲಿಕಾಸ್ತಂಭದ ತೋರಣವಿದೆ. ಸ್ತಂಭಗಳ ಮೇಲೆ ಛಾದ್ಯವಿದ್ದು ಅದರ ಮೇಲ್ಗಡೆ ಪ್ರಸ್ತರ (ಕುಂಬೆ) ವಿರುವುದು.

೨. ನಂದಿಮಂಟಪ

ಶಾಸನದಲ್ಲಿ ನಂದಿಮಂಟಪ ಉಲ್ಲೇಖವಾಗಿದ್ದು ಇದು ಮೇಲಿನ ತೋರಣ ಹಾಗೂ ಪ್ರಕಾರ ಪ್ರವೇಶಮಂಟಪದ ಮಧ್ಯ ಕಟ್ಟಲ್ಪಟ್ಟಿದೆ. ಇದನ್ನು ಕಿರಿದಾದ ಅಧಿಷ್ಠಾನ ಮೇಲೆ ಸ್ತಂಭ ಹಾಗೂ ಭಿತ್ತಿಯಲ್ಲಿ ನಿರ್ಮಿಸಲಾಗಿದೆ. ಅರ್ಧಭಾಗ ಭಿತ್ತಿಯಿದ್ದರೆ ಪೂರ್ವ ಪಶ್ಚಿಮ ಪ್ರವೇಶಗಳಿವೆ. ಮಧ್ಯ ನಂದಿಶಿಲ್ಪ ಪ್ರತಿಷ್ಠೆಗೊಂಡಿದೆ (ನಂತರದ ಕಾಲದ ಶಿಲ್ಪ). ಮೇಲೆ ಛಾದ್ಯವಿದ್ದು ಇದನ್ನು ಲುಪಾಶೈಲಿಯ ಮಂಟಪವೆಂತಲೇ ಕರೆಯಲಾಗಿದೆ. ಅದರ ಮೇಲೆ ಸ್ತೂಪಿ ಕಳಸಗಳಿವೆ.

೩. ಪ್ರಾಕಾರ ಪ್ರವೇಶ ಮಂಟಪ

ದೇವಾಲಯದ ಸುತ್ತಲೂ, ಪ್ರಕಾರ ಭಿತ್ತಿಯಿದ್ದು ಇಂದು ಸಂಪೂರ್ಣ ಹಾಳಾಗಿ ಬಿದ್ದು ಹೋಗಿದೆ. ಆದರೆ ಪಶ್ಚಿಮಕ್ಕೆ ಸ್ತಂಭದ ಪ್ರವೇಶಮಂಟಪ ಸುಸ್ಥಿತಿಯಲ್ಲಿದೆ. ಇದಕ್ಕೆ ಪಶ್ಚಿಮ ದೊಡ್ಡದಾದ ದ್ವಾರಶಾಖೆಗಳಿಂದ ಕೂಡಿದ ದ್ವಾರವಿದೆ. ಪೂರ್ವ, ದಕ್ಷಿಣ ಉತ್ತರ ಮುಖವಾಗಿ ಮೂರು ಮುಖಚತುಷ್ಕಿಗಳಿವೆ. ಇವು ಎರಡೆರಡು ಸ್ತಂಭಹೊಂದಿವೆ. ದ್ವಾರಮಂಟಪದ ಮಧ್ಯೆ ನಾಲ್ಕು ಮೂಲೆಯಲ್ಲಿ ಭಿತ್ತಿಯಿದ್ದು ಮಧ್ಯ ನಾಲ್ಕು ಮಿಶ್ರಕ ಮಾದರಿಯ ಸ್ತಂಭಗಳಿವೆ.

೪. ನಂದಿಶಿಲ್ಪ

ಈ ಮಂಟಪದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ನಂದಿಶಿಲ್ಪ ಪ್ರತಿಷ್ಠೆ ಮಾಡಲಾಗಿದ್ದು ಅದರ ದೃಷ್ಟಿ ಮೂಲ ಗರ್ಭಗೃಹದ ಲಿಂಗದ ಮೇಲಿದೆ. ಪ್ರಾಕಾರದ ಒಳಗಿರುವ ಚಿಕ್ಕದೇವಾಲಯಗಳನ್ನು ಆಯಾ ಧಾರ್ಮಿಕ ದೇವಾಲಯಗಳ ವಿಷಯದಲ್ಲಿ ನೋಡಲಾಗಿದೆ.

೨.	ಗ್ರಾಮ	:	ಶಿರೂರ
	ದೇವಾಲಯ	:	ಹಟಕೇಶ್ವರ
	ಧರ್ಮ	:	ಶೈವ
	ಸ್ಥಳ	:	ಸಿದ್ಧೇಶ್ವರ ದೇವಾಲಯ ಸಂಕೀರ್ಣ
	ಅಭಿಮುಖ	:	ಪಶ್ಚಿಮ
	ಮಾಧ್ಯಮ	:	ದಖ್ಖನ್, ಕೆಂಪುಮರಳು ಶಿಲೆ
	ಕಾಲ	:	ಕ್ರಿ.ಶ. ೧೦೪೯
	ಶೈಲಿ	:	ಕಲ್ಯಾಣ ಚಾಲುಕ್ಯ ಪಾಂಸನಾ
	ಪೋಷಕರು	:	ಮಾರಸಿಂಘ ಪ್ರಭು

ದೇವಾಲಯ ಚರಿತ್ರೆ: ಹಟಕೇಶ್ವರ ಹೆಸರಿನ ದೇವಾಲಯವು ಶಿರೂರದ ಸಿದ್ಧೇಶ್ವರ ದೇವಾಲಯದ ಎಡ ಭಾಗದಲ್ಲಿ ಪಶ್ಚಿಮಮುಖವಾಗಿ ಕಟ್ಟಲಾಗಿದೆ. ಸಿದ್ಧೇಶ್ವರ ದೇವಾಲಯ ಗುಡಿಯ ಕ್ರಿ.ಶ. ೧೦೪೯ ಶಾಸನ ಮಾರಸಿಂಘ ಪ್ರಭು ಸಿದ್ಧೇಶ್ವರ ದೇವಾಲಯ ದಾನ ನೀಡುವಾಗ, ಇತರ ಪರಿವಾರ ಗುಡಿಗಳ ನಿರ್ಮಾಣದ ಜೊತೆಗೆ ಹಟಕೇಶ್ವರ ದೇವಾಲಯವನ್ನು ಕಟ್ಟಿಸಿ ದಾನ ನೀಡಿದ ಕುರಿತು ತಿಳಿಸುವುದು.

ದೇವಾಲಯ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಸಿದ್ಧೇಶ್ವರ ದೇವಾಲಯದ ಸಂಕೀರ್ಣದ ಚಿಕ್ಕ ಗುಡಿಯಾದ ಹಟಕೇಶ್ವರ ತಲವಿನ್ಯಾಸದಲ್ಲಿ

ಏಕಕೂಟ ವಿನ್ಯಾಸ ಹೊಂದಿದೆ. ಕೇವಲ ಗರ್ಭಗೃಹ, ಅಂತರಾಳ ಮಾತ್ರ ಕಂಡುಬರುತ್ತವೆ.

ಗರ್ಭಗೃಹ

ಪಶ್ಚಿಮುಖವಾಗಿರುವ ಗರ್ಭಗೃಹದಲ್ಲಿ ಇಂದು ಯಾವುದೇ ಶಿಲ್ಪ ಕಂಡುಬರುವುದಿಲ್ಲ. ಹಿಂದೆ ಹಟಕೇಶ್ವರ ಹೆಸರಿನ ಲಿಂಗ ಇಲ್ಲವೇ ಶಿಲ್ಪ ಪ್ರತಿಷ್ಠೆಗೊಂಡಿರಬೇಕು. ಇದರ ದ್ವಾರವು ಸಹ ಅಲಂಕಾರರಹಿತವಾಗಿವೆ.

ಅಂತರಾಳ

ಅಂತರಾಳ ದ್ವಾರವು ಅಲಂಕಾರರಹಿತವಾಗಿದ್ದು ಒಂದೆರಡು ಕೆತ್ತನೆಯಿಲ್ಲದ ದ್ವಾರಶಾಖೆಗಳಿವೆ. ಮಗ್ಗುಲಿಗೆ ಎರಡು ಅರೆಗಂಭಗಳಿರುವುವು.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಇದರ ಅಧಿಷ್ಠಾನವು ಮೂರು ಅಡಿಯಷ್ಟು ಎತ್ತರವಾಗಿದೆ. ಇದರಲ್ಲಿ ನಾಲ್ಕು ಪಟ್ಟಿಕೆ ಭಾಗಗಳಿದ್ದು, ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟಕುಮುದ, ಕಂಪ, ಕಂಠ, ಕಪೋತಕಗಳಿವೆ.

ಭಿತ್ತಿ


ಭಿತ್ತಿಯು ಚೌಕಾಗಿದ್ದು ಅದರಲ್ಲಿ ಕುಡ್ಯಸ್ತಂಭಗಳ ಕೆತ್ತನೆಯು ಕಂಡುಬರುತ್ತದೆ.

ಪ್ರಸ್ತರ

ಪ್ರಸ್ತರವು ಉತ್ತರ, ವಾಜನ, ವಲ್ಲಭ, ಕಪೋತ, ಕಂಪ, ಕಂಠ (ಗ್ರೀವ) ಪಟ್ಟಿಕೆಗಳಿವೆ. ಮೇಲೆ ಕಂಠ ಮತ್ತು ವೇದಿಕೆ ಪಟ್ಟಿಕೆ ಕಂಡುಬರುತ್ತಿದ್ದು ಅಂತರಾಳದ ಮುಂಭಾಗದ ಪ್ರಸ್ತರ ಚಿಕ್ಕ ಮುಂಚಾಚಿತ ಕಪೋತ (ಛಾದ್ಯ), ಗಳ, ವೇದಿಕೆ ಪಟ್ಟಿಕೆ ಹೊಂದಿದೆ.


ವಿಮಾನ ಕಟ್ಟಡ

ಮೇಲಿನ ವಿಮಾನವು ನಾಲ್ಕು ಕಪೋತ, ನಾಲ್ಕುಗಳ ಪಟ್ಟಿಕೆ ಹೊಂದಿದ್ದು ಗಳದ ಮೇಲೆ ಬೋರಲಾಗಿರುವ ಚೌಕಾದ ಶಿಖರವಿದೆ. ಇದರ ಮೇಲೆ ಕಳಶ (ಸ್ತೂಪಿ) ಕಂಡುಬರುವುದು. ಮುಂಭಾಗ ಮಹಾನಾಸಿಕವಿದ್ದು, ಇದೊಂದು ಔತ್ತರೇಯ ನಾಗರದ ಪಾಂಸನಾ ವಿಮಾನ ಕಟ್ಟಡ ಶೈಲಿಯಾಗಿದೆ.



ತಲವಿನ್ಯಾಸ: ಸಿದ್ಧೇಶ್ವರ ದೇವಾಲಯ ಸಂಕೀರ್ಣ ಶಿರೂರ

ಕೃಪೆ: ಡಾ. ಸುಭಾಸ ರಾ ಚಿಂಚೋಳಿ ಅವರ ಪ್ರಬಂಧದಿಂದ



೩. ಗ್ರಾಮ : ಶಿರೂರ

ದೇವಾಲಯ : ವಿನಾಯಕ (ಗಣಪತಿ)

ಧರ್ಮ : ಶೈವ

ಸ್ಥಳ : ಸಿದ್ಧೇಶ್ವರ ದೇವಾಲಯ ಸಂಕೀರ್ಣ

ಅಭಿಮುಖ : ಪಶ್ಚಿಮ

ಮಾಧ್ಯಮ : ದಖ್ಖನ್ ಕೆಂಪುಮರಳು ಶಿಲೆ

ಕಾಲ : ಕ್ರಿ.ಶ. ೧೦೪೯

ಶೈಲಿ : ಕಲ್ಯಾಣ ಚಾಲುಕ್ಯ ಫಾಂಸನಾ

ಪೋಷಕರು : ಮಾರಸಿಂಘಪ್ರಭು.

ದೇವಾಲಯ ಚರಿತ್ರೆ: ವಿನಾಯಕ ಹೆಸರಿನ ಈ ಗುಡಿಯು ಮೂಲ ಸಿದ್ಧೇಶ್ವರ ದೇವಾಲಯದ ಬಲಭಾಗದಲ್ಲಿ ಪಶ್ಚಿಮಮುಖ ಮಾಡಿ ಕಟ್ಟಲ್ಪಟ್ಟಿದೆ. ಸಿದ್ಧೇಶ್ವರ ಗುಡಿಯ ಕ್ರಿ.ಶ. ೧೦೪೯ರ ಮಾರಸಿಂಘನ ಶಾಸನವು ಅವನು ಸಿದ್ಧೇಶ್ವರ ದೇವರಿಗೆ ಹಲವು ಕಾರ್ಯಗಳಿಗೆಂದು ದಾನ ಬಿಡುವಾಗ ವಿನಾಯಕ(ಗಣಪತಿ) ಗುಡಿಯನ್ನು ಇತರ ಚಿಕ್ಕ ಗುಡಿಗಳ ಜೊತೆಗೆ ಕಟ್ಟಿಸಿದನೆಂದು ಶಾಸನ ತಿಳಿಸುವುದು.

ದೇವಾಲಯ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಮೂಲ ಸಿದ್ಧೇಶ್ವರ ದೇವಾಲಯದ ಬಲಭಾಗದಲ್ಲಿ ಪಶ್ಚಿಮಮುಖ ಮಾಡಿ ನಿರ್ಮಿಸಲಾದ ಗುಡಿ ಏಕಕೂಟ ತಲವಿನ್ಯಾಸದ ಮಾದರಿಯಲ್ಲಿ ಗರ್ಭಗೃಹ, ಅಂತರಾಳ ಹೊಂದಿವೆ.

ಗರ್ಭಗೃಹ

ಪಶ್ಚಿಮಮುಖವಾಗಿರುವ ಗರ್ಭಗೃಹದಲ್ಲಿ ಇಂದು ಯಾವ ಶಿಲ್ಪವೂ ಪ್ರತಿಷ್ಠಾಪಿ ಸಿಲ್ಲ. ಶಾಸನ ಕಾಲದಲ್ಲಿ ವಿನಾಯಕ(ಗಣಪತಿ) ಹೆಸರಿನ ಶಿಲ್ಪ ಪ್ರತಿಷ್ಠೆಗೊಂಡಿರಬೇಕು. ಗರ್ಭಗೃಹ ದ್ವಾರವು

ಸರಳಶಾಖೆಯಲ್ಲಿ ಅಲಂಕಾರ ಹೊಂದಿಲ್ಲ.

ಅಂತರಾಳ

ಅಂತರಾಳ ದ್ವಾರವು ಸರಳಶಾಖೆಯಲ್ಲಿ ಅಲಂಕಾರರಹಿತವಾಗಿದ್ದು ಪಾರ್ಶ್ವಗೋಡೆಯಲ್ಲಿ ಹೂ ಕೆತ್ತನೆ ಅಲಂಕಾರಗಳಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಇದರ ಅಧಿಷ್ಠಾನವು ಗರ್ಭಗೃಹದಲ್ಲಿ ಸ್ವಲ್ಪ ಮುಂದಕ್ಕೆ ಬಂದರೆ, ಅಂತರಾಳದ ಕೆಳಗೆ ಸ್ವಲ್ಪ ಒಳಕ್ಕೆ ಸರಿದಿದೆ. ಇದರಲ್ಲಿ ಉಪಾನ, ಜಗತಿ, ಕಂಪ, ಕಂಠ ತ್ರಿಪಟ್ಟಕುಮುದ, ಕಂಪ, ಕಂಠ, ಕಪೋತ ಪಟ್ಟಿಕೆಗಳಿವೆ. ಕಪೋತವು ಚಿಕ್ಕನಾಸಿ ಕೆತ್ತನೆ ಹೊಂದಿದೆ.

ಭಿತ್ತಿ

ಭಿತ್ತಿಯಲ್ಲಿ ಕುಡ್ಯಸ್ತಂಭ ಅಲಂಕಾರವಿದ್ದು ಚೌಕಾಗಿದೆ.

ಪ್ರಸ್ತರ

ಮೇಲಿನ ಪ್ರಸ್ತರವು ಉತ್ತರ, ವಾಜನ, ವಲ್ಲಭ, ಕಿರಿದಾದ ನಾಸಿ ಕೆತ್ತನೆಯ ಕಪೋತ ಪಟ್ಟಿಕೆ ಹೊಂದಿದೆ. ಇದರ ಮೇಲೆ ಗಳ ಹಾಗೂ ವೇದಿಕೆ ಪಟ್ಟಿಕೆಯಿರುವುದು.

ವಿಮಾನವು ಔತ್ತರೇಯ ನಾಗರದ ಫಾಂಸನಾ ಶೈಲಿಯ ಮೆಟ್ಟಿಲು ಮಾದರಿಯಲ್ಲಿದೆ. ನಾಲ್ಕು ಕಪೋತ ಪಟ್ಟಿಕೆ, ಮಧ್ಯ ಗಳ, ಮೇಲೆ ಗಳ ಹಾಗೂ ವೇದಿಕೆ ಪಟ್ಟಿಕೆ ಇರುವವು. ಅದರ ಗಳ ಭಾಗವಿದ್ದು (ಗ್ರೀವ) ನಾಲ್ಕು ನಾಸಿ ಕೆತ್ತನೆಯಿರುವ ಶಿಖರವಿದೆ. ಮೇಲೆ ಕಳಶ (ಸ್ತೂಪಿ) ಇದೆ.

೪. ಗ್ರಾಮ : ಶಿರೂರ

ದೇವಾಲಯ : ಗಣಪತಿ

ಧರ್ಮ : ಶೈವ

ಸ್ಥಳ : ಕೆರೆಯ ದಂಡೆಯ ಮೇಲೆ

ಅಭಿಮುಖ : ಉತ್ತರ

ಮಾಧ್ಯಮ : ದಖ್ಖನ್ ಕೆಂಪುಮರಳು ಶಿಲೆ

ಕಾಲ : ಕ್ರಿ.ಶ. ೧೦೪೯

ಶೈಲಿ : ಕಲ್ಯಾಣ ಚಾಲುಕ್ಯ (ಉಪಾಶೈಲಿ)

ಪೋಷಕರು : ಬಾಗಡಗೆ ಸಿಂಧರಸರು, ಮಾರಸಿಂಘ ಪ್ರಭು.

ದೇವಾಲಯ ಚರಿತ್ರೆ: ಈ ದೇವಾಲಯವು ಶಿರೂರ ಗ್ರಾಮದ ಕೆರೆಯ ದಂಡೆಯ ಮೇಲೆ ಎತ್ತರವಾದ ದಿನ್ನೆಯ ಮೇಲೆ ಕಟ್ಟಲ್ಪಟ್ಟಿದೆ. ಇದು ಸಿದ್ಧೇಶ್ವರ ದೇವಾಲಯದ ಸಮಕಾಲೀನದಲ್ಲಿ ಕಟ್ಟಲ್ಪಟ್ಟಿದೆ. ಇದರ ಪೋಷಕರು ಸಿಂಧರಸರ ಮಾರಸಿಂಘನಾಗಿರಬೇಕು.

ದೇವಾಲಯ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಕೇವಲ ಗರ್ಭಗೃಹ ಮಾತ್ರ ಹೊಂದಿದ ತಲವಿನ್ಯಾಸದದಲ್ಲಿದೆ.

ಗರ್ಭಗೃಹ

ಗರ್ಭಗೃಹ ಚೌಕಾಗಿದ್ದು ಒಳಗಡೆ ಚಿಕ್ಕ ಪೀಠದ ಮೇಲೆ ಅರ್ಧ ಪರ್ಯಂಕಾಸನದಲ್ಲಿ ಕುಳಿತ ಗಣೇಶನ ಶಿಲ್ಪ ಪ್ರತಿಷ್ಠಾಪಿಸಲಾಗಿದೆ. ಇದನ್ನು ಕೆಂಪುಮರಳು ಶಿಲೆಯಲ್ಲಿ ಕೆತ್ತಲಾಗಿದೆ. ನಾಲ್ಕು ಕೈಗಳು, ಪಾಶು, ಪಾಶ (ಅಂಕುಶ), ಮೋದಕ ಮತ್ತು ಅಭಯ ಹಸ್ತನಾಗಿರಬೇಕು. ಶಿಲ್ಪವನ್ನು ತ್ರುಟಿತಗೊಳಿಸಲಾಗಿದೆ. ಇದರ ಎತ್ತರ ೧೮೦. ಸೆ.ಮೀ. ಇದೆ. ದ್ವಾರವು ಯಾವುದೇ ಅಲಂಕಾರ ಹೊಂದಿಲ್ಲ. ಎರಡು ಪಟ್ಟಿಕೆಗಳಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ ಪೀಠ

ಅಧಿಷ್ಠಾನ ಎರಡು ಅಡಿ ಎತ್ತರವಾಗಿದೆ. ಇದರಲ್ಲಿ ಯಾವುದೇ ಆಲಂಕಾರಿಕ ಪಟ್ಟಿಕೆಗಳು ಕಂಡುಬರುವುದಿಲ್ಲ.

ಭಿತ್ತಿ

ಭಿತ್ತಿಯು ಯಾವ ಅಲಂಕಾರವೂ ಹೊಂದದೆ ಸರಳವಾಗಿದೆ (ಚೌಕ).

ವಿಮಾನ

ಇದೊಂದು ಲುಪಾಶೈಲಿ ಶಿಖರ ಹೊಂದಿದ್ದು ನಾಲ್ಕು ಕಡೆ ಇಳಿಜಾರು ಛಾದ್ಯವಿದೆ. ಅದರ ಮೇಲೆ ಚಿತ್ರ ಪ್ರಸ್ತರವಿದೆ.

೫. ಗ್ರಾಮ	:	ಶಿರೂರ
ದೇವಾಲಯ	:	ರಾಮಲಿಂಗೇಶ್ವರ ರಾಮಲಿಂಗ
ಧರ್ಮ	:	ಶೈವ
ಸ್ಥಳ	:	ಗ್ರಾಮದ ಮಧ್ಯ ಭಾಗ
ಅಭಿಮುಖ	:	ಪೂರ್ವ-ಪಶ್ಚಿಮ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	ಕ್ರಿ.ಶ. ೧೦೪೯, ಕ್ರಿ.ಶ. ೧೧೪೮
ಶೈಲಿ	:	ಕಲ್ಯಾಣ ಚಾಲುಕ್ಯ (ಔತ್ತರೇಯ ದ್ರಾವಿಡ, ಫಾಂಸನಾ)
ಪೋಷಕರು	:	ಮಾರಸಿಂಘಪ್ರಭು ಮತ್ತು ಲಕ್ಷ್ಮಾದೇವಿ

ದೇವಾಲಯ ಚರಿತ್ರೆ: ಸ್ಥಳೀಯವಾಗಿ ರಾಮಲಿಂಗಸ್ವಾಮಿಯೆಂದು ಕರೆಯುವ ಈ ದೇವಾಲಯವು ಗ್ರಾಮದ ಮಧ್ಯದಲ್ಲಿ ಕಂಡುಬರುವುದು. ಕ್ರಿ.ಶ. ೧೦೪೯ ರ ಶಾಸನ[೩೭] ಹಾಗೂ ಕ್ರಿ.ಶ.೧೧೪೮[೩೮] ಶಾಸನಗಳು ದೇವಾಲಯ ಕುರಿತು ಮಾಹಿತಿ ನೀಡುತ್ತವೆ. ಮೊದಲ ಶಾಸನದಲ್ಲಿ ಪ್ರಭು ಮಾರಸಿಂಘನು ಮಲ್ಲಿಕಾರ್ಜುನ ದೇವಾಲಯವನ್ನು ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿರುವ ಹಲವು ಗುಡಿಗಳನ್ನು ಕಟ್ಟಿಸಿದನೆಂದು ಹೇಳುವುದು. ಬಹುಶಃ ಶಾಸನದ ಮಲ್ಲಿಕಾರ್ಜುನ ದೇವಾಲಯವು ಗ್ರಾಮದ ಈ ರಾಮೇಶ್ವರ ದೇವಾಲಯದ ಪೂರ್ವಮುಖ ಗರ್ಭಗೃಹ ಆಗಿರುವ ಸಾಧ್ಯತೆಯಿದೆ. ಏಕೆಂದರೆ, ಇದರ ಲಕ್ಷಣಗಳು ಸಿದ್ಧೇಶ್ವರ ದೇವಾಲಯದ ಚಿಕ್ಕ ಗುಡಿಗಳಿಗೆ ಹೋಲಿಕೆಯಾಗುತ್ತವೆ. ಅದೇ ರೀತಿ ಕ್ರಿ.ಶ. ೧೧೪೮ ರ ಶಾಸನ ರಾಮಲಿಂಗೇಶ್ವರ ಗುಡಿಯಲ್ಲಿದ್ದು ಬಹಳ ತ್ರುಟಿತವಾಗಿದೆ. ಆದಾಗ್ಯೂ ಮಾರಸಿಂಘನ ಮುಂದಿನ ವಂಶಾವಳಿಯ ಜೊತೆಗೆ ಅವನು ಮಲ್ಲಿಕಾರ್ಜುನ ದೇವಾಲಯ ಶಿಲಾಸ್ತಂಭ, ತಟಾಕಗಳನ್ನು ಕಟ್ಟಿಸಿದನೆಂದಿದೆ. ಹೀಗಾಗಿ ಮಲ್ಲಿಕಾರ್ಜುನ ದೇವಾಲಯದ ಕುರಿತು ಕ್ರಿ.ಶ. ೧೦೪೯ ರ ಮಾರಸಿಂಘನ ಶಾಸನವೇ ಮೊದಲು ಸ್ಪಷ್ಟಪಡಿಸಿದ್ದು ಇದು ೧೦೦ ವರ್ಷದ ನಂತರದ ಶಾಸನವಾಗಿದ್ದರೂ ಮಾರಸಿಂಘನೇ ಮಲ್ಲಿಕಾರ್ಜುನ ಗುಡಿ ಕಟ್ಟಿಸಿದ್ದನೆಂದು ಹೇಳುವುದನ್ನು ಗಮನಿಸಿದಾಗ ನಿಜವೆನಿಸುತ್ತದೆ. ಇದೇ ಶಾಸನವು ಲಕ್ಷ್ಮಾದೇವಿಯ ಬಳಿ ಆದಿಯಣ್ಣನೆಂಬ ಕುಲಕರಣಿಯಿದ್ದ. ಇವನು ಶಿರೂರದಲ್ಲಿ ಸೂರ್ಯ ದೇವಾಲಯ ಕಟ್ಟಿಸಿದ್ದು ಅದಕ್ಕೆ ಮಹಾ ಪ್ರಭುವಿಣಿಯೆಂದು ಕರೆಯಿಸಿಕೊಂಡ ಲಕ್ಷ್ಮಾದೇವಿ ಭೂಮಿದಾನ ಮಾಡಿದಳೆಂದು ಹೇಳುವುದು ಬಹುಶಃ ಈ ಶಾಸನದ ಸೂರ್ಯದೇವಾಲಯ ರಾಮಲಿಂಗನ ಪೂರ್ವಮುಖ ಗರ್ಭಗೃಹ ಮುಂದಿನ ಮಂಟಪಕ್ಕೆ ಹತ್ತಿಕೊಂಡಂತೆ ಪಶ್ಚಿಮಮುಖ ಗರ್ಭಗೃಹ ಗುಡಿಯೇ ಆಗಿರಬೇಕು. ಏಕೆಂದರೆ ಸೂರ್ಯನ ದೇವಾಲಯಗಳು ಪಶ್ಚಿಮಮುಖವಾಗಿರುತ್ತವೆ (ಶಿವ-ವಿಷ್ಣು ಗುಡಿಗಳ ಮುಂದೆ ಅಷ್ಟೇ). ಇಲ್ಲವೇ ಬಿದ್ದು ಹೋಗಿರಬೇಕು. ಸದ್ಯ ಗರ್ಭಗೃಹದಲ್ಲಿ ಗಣೇಶನ ವಿಗ್ರಹವಿದೆ.

ದೇವಾಲಯ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ದ್ವಿಕೂಟ ತಲವಿನ್ಯಾಸದ ದೇವಾಲಯ ಇದಾಗಿದ್ದು ಎರಡು ಗರ್ಭಗೃಹಗಳು, ಒಂದು ಅಂತರಾಳ, ನವರಂಗಮಂಟಪ, ತೆರೆದ ಸಭಾಮಂಟಪದ ಹೊಂದಿದೆ.

ಗರ್ಭಗೃಹಗಳು

ಪೂರ್ವಮುಖ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗ ಪ್ರತಿಷ್ಠೆಗೊಂಡಿದೆ. ಇದರ ದ್ವಾರವು ಅಲಂಕಾರರಹಿತವಾಗಿದೆ. ಪಶ್ಚಿಮಮುಖ ಗರ್ಭಗೃಹದಲ್ಲಿ ಸದ್ಯ ಸಿಂಹಾಸನ ಭಂಗಿಯಲ್ಲಿ ಕುಳಿತ ನಾಲ್ಕು ಕೈ ಗಣೇಶನಿದ್ದು ಅಭಯ, ಮೋದಕ, ತ್ರಿಶೂಲ, ಅಂಕುಶ ಮುಂತಾದ ಆಯುಧಗಳಿವೆ. ತಲೆಯ ಮೇಲೆ ಔತ್ತರೇಯ ಶೈಲಿ ಮುಕುಟ (ಕೀರಿಟ)ವಿದ್ದಂತೆ ಉಡುಗೆ ತೊಡುಗೆಗಳಿವೆ. ಇದೊಂದು ಕೋಷ್ಠ ಶಿಲ್ಪವಾಗಿದೆ. ದ್ವಾರವು ನಾಲ್ಕು ಶಾಖೆಯಲ್ಲಿ ಆಲಂಕಾರಿಕ ಕೆತ್ತನೆ ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಶಿಲ್ಪ, ಮೇಲೆ ಚಿಕ್ಕ ಛಾದ್ಯವು ಮುಂದಕ್ಕೆ ಬಂದಿದೆ. ಉತ್ತರಾಂಗದಲ್ಲಿ ಯಾವುದೇ ಅಲಂಕಾರವಿಲ್ಲ.

ಅಂತರಾಳ

ಅಂತರಾಳ ಪೂರ್ವಮುಖ ಗರ್ಭಗೃಹದ ಮುಂದುಗಡೆಯಿದ್ದು ದ್ವಾರದಲ್ಲಿ ಯಾವ ಅಲಂಕಾರವಿಲ್ಲ.

ನವರಂಗಮಂಟಪ

ಪೂರ್ವ ಗರ್ಭಗೃಹ, ಅಂತರಾಳದ ಮುಂದೆ ನವರಂಗಮಂಟಪವಿದ್ದು ಮಧ್ಯದಲ್ಲಿ ನಾಲ್ಕು ಮಿಶ್ರತ ಸ್ತಂಭಗಳಿವೆ. ಇವುಗಳಲ್ಲಿ ಪೀಠ, ಪಾದ, ದಂಡ, ದಂಡಾಗ್ರ ಭಾಗಗಳಿದ್ದು ಅಲಂಕಾರ ಹೊಂದಿರದೆ ಸರಳವಾಗಿವೆ. ಇದರ ದ್ವಾರವು ವಜ್ರ, ಹೂಬಳ್ಳಿ, ಸ್ತಂಭ, ಪದ್ಮ ಶಾಖೆಯ ಅಲಂಕಾರ ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಶಿಲ್ಪವಿರುವುದು. ಮೇಲಿನ ಛಾದ್ಯ ಚಿಕ್ಕದಾಗಿ ಮುಂದಕ್ಕೆ ಬಂದಿದೆ. ಉತ್ತರಾಂಗ ಭಾಗದಲ್ಲಿ ಅಲಂಕಾರವಿರುವುದಿಲ್ಲ.

ತೆರೆದ ಸಭಾಮಂಟಪ

ತೆರೆದ ಸಭಾಮಂಟಪದಲ್ಲಿ ಹತ್ತು ಸ್ತಂಭಗಳಿದ್ದು ಮಧ್ಯದ ನಾಲ್ಕು ಸ್ತಂಭಗಳು ಪ್ರಮುಖವಾಗಿದ್ದಂತೆ ಮಿಶ್ರಕ ಸ್ತಂಭಗಳಾಗಿವೆ. ಇದು ಉತ್ತರ ದಕ್ಷಿಣ ತೆರೆದಂತಿದ್ದು ಕಂಬಗಳ ಮಧ್ಯದ ಕಕ್ಷಾಸನಗಳು ಬಿದ್ದುಹೋಗಿವೆ. ಕಂಬಗಳ ಮೇಲಿನ ಛಾದ್ಯ ಮುಂಚಾಚು ಉಪಾದಂತೆ ಮುಂದಕ್ಕೆ ಇಳಿಬಿದ್ದಿದೆ. ಈ ಸಭಾಮಂಟಪದಲ್ಲಿ ಕೆಲವು ಶಿಲ್ಪಗಳನ್ನು ಇಡಲಾಗಿದ್ದು ಎರಡು ಜಿನ ಶಿಲ್ಪ, ಒಂದು ಗಣೇಶ ಶಿಲ್ಪವಾಗಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ (ಪೀಠ)

ದ್ವಿಕೂಟ ತಲವಿನ್ಯಾಸದ ಇಡೀ ಅಧಿಷ್ಠಾನವು ನೆಲದಲ್ಲಿ ಹೂತಿರವುದರಿಂದ ಸ್ವರೂಪ ಗೊತ್ತಾಗುವುದಿಲ್ಲ.

ಭಿತ್ತಿ

ಪೂರ್ವಮುಖ ಗರ್ಭಗೃಹದ ಹೊರಭಿತ್ತಿ ಸರಳ ಹಾಗೂ ಅಲಂಕಾರದಿಂದ ಕೂಡಿದೆ. ಪಶ್ಚಿಮಮುಖ ಗರ್ಭಗೃಹದ ಭಿತ್ತಿ ಮಾತ್ರ ಪಂಚರಥ ಮಾದರಿಯಲ್ಲಿ ಕುಡ್ಯಸ್ತಂಭಗಳಿಂದ ಕೂಡಿದೆ.


ಪ್ರಸ್ತರ

ಪಶ್ಚಿಮಮುಖ ಗರ್ಭಗೃಹ ಪ್ರಸ್ತರದಲ್ಲಿ ಕೇವಲ ಉತ್ತರ, ವಾಜನ, ಪಟ್ಟಿಕೆಗಳಿವೆ. ಪೂರ್ವಮುಖ ಗರ್ಭಗೃಹದ ಪ್ರಸ್ತರ ಉತ್ತರ, ವಾಜನ, ವಲ್ಲಭ, ಕಂಠ, ವ್ಯಾಳಾವರಿಹಾರ, ಕಂಠ, ಚಿಕ್ಕ ವೇದಿಕೆಯಿಂದ ಕೂಡಿದೆ.

ವಿಮಾನಗಳು

ಪೂರ್ವಮುಖ ಗರ್ಭಗೃಹದ ಮೇಲೆ ಏಕತಲದ ಸಮತಲ ಹೊಂದಿದ ಔತ್ತರೇಯ ದ್ರಾವಿಡ ವಿಮಾನವಿದೆ. ಭಿತ್ತಿಯ ಪ್ರಸ್ತರದ ಮೇಲೆ ವ್ಯಾಳವಾರಿ ಹಾರವಿದ್ದು ಅದರ ಮೇಲೆ ಕಂಠ, ವೇದಿಕೆ ಪಟ್ಟಿಕೆಯಿದೆ. ಇದರ ಮೇಲೆ ಪ್ರಸ್ತರ ಶಾಲ, ಕೂಟ, ಕರ್ಣಕೂಟಗಳು, ಅವುಗಳಲ್ಲಿ ನಾಸಿ, ನೇತ್ರಾನಾಶಿ, ಅಲ್ಪನಾಸಿ ಕೆತ್ತನೆಗಳನ್ನು ಮಡಲಾಗಿದೆ. ಇದರ ಮೇಲೆ ಕುಡ್ಯಸ್ತಂಭದ ಜಂಘಾ(ಭಿತ್ತಿ)ಯಿದ್ದು ಮತ್ತೆ ಪ್ರಸ್ತರವಿದೆ. ಈ ಪ್ರಸ್ತರದ ಮೇಲೆ ಕಂಠ, ವೇದಿಕೆ ಕಟ್ಟಿಗಳಿದ್ದು, ಅಷ್ಟಕೋನದ ಶಿಖರ ಹಾಗೂ ಸ್ತೂಪಿ (ಕಳಶ) ಭಾಗಗಳು ಕಂಡುಬರುವುವು. ಶಿಖರಕ್ಕೆ ನಾಲ್ಕು ನಾಸಿಗಳಿವೆ ಹಾಗೂ ವಿಮಾನದ ಮುಂದೆ ಭಗ್ನವಾದ ನಾಸಿಭಾಗವಿದೆ.

ಪಶ್ಚಿಮ ಗರ್ಭಗೃಹ ಔತ್ತರೇಯ ಫಾಂಸನಾಶೈಲಿಯ ವಿಮಾನವಾಗಿದ್ದು, ಇದರಲ್ಲಿ ಗಳ ಬಿಟ್ಟರೆ ಏಳು ಸಾಲಿನಲ್ಲಿ ಕಪೋತ ಪಟ್ಟಿಕೆಗಳಿವೆ. ವೇದಿಕೆ ಗಳ ಎದ್ದು ಕಾಣುತ್ತವೆ. ಇವುಗಳ ಮೇಲೆ ಅಷ್ಟಕೋನದ ಶಿಖರ ಹಾಗೂ ಸ್ತೂಪಿ (ಕಳಶ)ಗಳಿರುವವು. ಶಿಖರದ ನಾಲ್ಕು ಮುಖಗಳಲ್ಲಿ ಕೀರ್ತಿಮುಖ ಕೆತ್ತನೆಯ ನಾಸಿಗಳಿವೆ.



ತಲವಿನ್ಯಾಸ: ರಾಮಲಿಂಗೇಶ್ವರ ದೇವಾಲಯ ಶಿರೂರ

ಕೃಪೆ: ಡಾ. ಸುಭಾಸ ರಾ ಚಿಂಚೋಳಿ ಅವರ ಪ್ರಬಂಧದಿಂದ

೬. ಗ್ರಾಮ : ಹಳ್ಳೂರ

ದೇವಾಲಯ : ಬಸವೇಶ್ವರ

ಧರ್ಮ : ಶೈವ

ಸ್ಥಳ : ಗ್ರಾಮದ ಪಶ್ಚಿಮ ರಸ್ತೆಯ ಬದಿಗೆ

ಅಭಿಮುಖ : ಪೂರ್ವ, ಪಶ್ಚಿಮ

ಮಾಧ್ಯಮ : ದಖ್ಖನ್ ಕೆಂಪುಮರಳು ಶಿಲೆ

ಕಾಲ : ಕ್ರಿ.ಶ. ೯೯೦-೧, ಕ್ರಿ.ಶ. ೧೦೩೩-೪, ೩ನೇ ಸೋಮೇಶ್ವರ

ಶೈಲಿ : ಕಲ್ಯಾಣ ಚಾಲುಕ್ಯ(ಔತ್ತರೇಯ ದ್ರಾವಿಡ, ದಾಕ್ಷಿಣಾತ್ಯ)

ಪೋಷಕರು : ೧ನೇ ನಾಗಾದಿತ್ಯ, ೨ನೇ ನಾಗಾದಿತ್ಯ, ಪೆರ್ಗ್ಗಡೆ ದೇವರಸ

ದೇವಾಲಯ ಚರಿತ್ರೆ: ಸ್ಥಳೀಯವಾಗಿ ಸಂಗಮೇಶ್ವರ, ಬಸವೇಶ್ವರ ಹೆಸರಿನ ದೇವಾಲಯವು ದ್ವಿಕೂಟ ತಲವಿನ್ಯಾಸದಲ್ಲಿದೆ. ಇದು ಗ್ರಾಮದ ಪಶ್ಚಿಮ ಭಾಗಕ್ಕೆ ಹತ್ತಿಕೊಂಡಿದೆ. ಇಂದು ರಸ್ತೆಯ ಬದಿಯಲ್ಲಿರುವಂತೆ ಕಂಡುಬರುವುದು. ಕ್ರಿ.ಶ. ೯೯೦-೧ರ ಚಾಲುಕ್ಯ ೨ನೇ ತೈಲಪನ ಕಾಲದ ಗುಡಿಯಲ್ಲಿರುವ ಶಾಸನವು ಅವನ ಸಾಮಂತ ಸಿಂಧ ವಂಶದ ಅರಸನನ್ನು ಹೆಸರಿಸದೆ (ಹೆಸರು ಅಳಿದಿದೆ) ಅವನ ಬಿರುದುಗಳನ್ನು ಹೇಳುವುದು[೫೯] ಈ ಶಾಸನ ೨ನೇ ನಾಗತಿಯರಸನ ಕಾಲಕ್ಕೆ ಸಂಬಂಧಿಸಿದ್ದು ಅದನ್ನು ಭೈರನಮಟ್ಟಿ ಶಾಸನ ಕ್ರಿ.ಶ. ೯೯೦-೯೧ ಸಮರ್ಥಿಸುವುದು. ಅಂದರೆ ಈ ಶಾಸನ ಕ್ರಿ.ಶ. ೯೯೦-೯೧ ಹಾಗೂ ಕ್ರಿ.ಶ. ೧೦೩೩ರ ಎರಡು ಕಾಲಮಾನ ಹೊಂದಿದೆ.[೬೦] ಕ್ರಿ.ಶ. ೧೦೩೩-೩೪ರ ಮತ್ತೊಂದು ಹಳ್ಳೂರ ಶಾಸನ[೬೧] ಹಾಗೂ ಚಾಲುಕ್ಯ ೩ನೇ ಸೋಮೇಶ್ವರನ ಶಾಸನ ಒಟ್ಟು[೬೨] ನಾಲ್ಕು ಶಾಸನಗಳು ಹಳ್ಳೂರ ಬಸವೇಶ್ವರ ದೇವಾಲಯದ ಕುರಿತು ಮಾಹಿತಿ ನೀಡುತ್ತವೆ.

ಕ್ರಿ.ಶ. ೯೯೦-೯೧ ರ ಶಾಸನ ಚಾಲುಕ್ಯ ೨ ನೇ ತೈಲಪ ರಾಜ್ಯವಾಳುತ್ತಿದ್ದಾಗ ಅವನ ಸಾಮಂತ ಸಿಂಧ ವಂಶದವನಾಗಿದ್ದ. ಈ ಶಾಸನ ತ್ರುಟಿತಗೊಂಡಿದ್ದು ಹೆಚ್ಚಿನ ವಿವರಣೆ ತಿಳಿದುಬರುವುದಿಲ್ಲ. ಬಹುಶಃ ಸಿಂಧರ ಬಿರುದು ಹೊಂದಿದ ಸಿಂಧರಸ ನಾಗಿದ್ದಾನೆ. ಭೈರನಮಟ್ಟಿ ಕ್ರಿ.ಶ. ೯೯೦-೯೧ ಶಾಸನದಲ್ಲಿ ಉಲ್ಲೇಖಿತ (ವಂಶಾವಳಿಯಿದೆ) ಇವನು ೨ನೇ ನಾಗಾದಿತ್ಯರಸನಾಗಿರಬೇಕು. ಹಾಗೆಯೇ ಇದೇ ಶಾಸನದಲ್ಲಿ ಚಾಲುಕ್ಯ ೧ ನೇಜಗದೇಕಮಲ್ಲನ ಕಾಲ ಕ್ರಿ.ಶ. ೧೦೩೩ ಕಾಲವಿದ್ದು, ಹಳ್ಳೂರದ ಕ್ರಿ.ಶ. ೧೦೩೩-೪ ರ ಶಾಸನ ೧ ನೇ ಜಗದೇಕಮಲ್ಲನನ್ನು ಹೆಸರಿಸುತ್ತದೆ. ಇದನ್ನು ಗಮನಿಸಿದಾಗ ಕ್ರಿ.ಶ. ೯೯೦-೯೧ ರಿಂದ ಕ್ರಿ.ಶ. ೧೦೩೩-೩೪ರ ಅವಧಿಯಲ್ಲಿ ಇಬ್ಬರು ಚಾಲುಕ್ಯರಸರ ಕಾಲದಲ್ಲಿ

ಬಾಗಡಗೆ ನಾಡನ್ನು ಆಳಿದ್ದು ಕಂಡುಬರುತ್ತದೆ.

ಮೊದಲಿನ ಹಳ್ಳೂರದ ಶಾಸನ ಸಿಂಧ ವಂಶದ ಅರಸನ ಬಿರುದನ್ನು ಮಾತ್ರ ಹೇಳುವುದು. ಎರಡನೇ ಹಳ್ಳೂರ ಶಾಸನ (ಕ್ರಿ.ಶ. ೧೦೩೩-೩೪) ಸಿಂಧ ಮಹಾಸಾಮಂತ ನಾಗತೀಯರಸ ಶ್ರೀ ತೇಜೋರಾಶಿ ಪಂಡಿತನಿಗೆ, ಕಾಲಖರ್ಚಿಗೆ ಹಾಗೂ ಪುರದ ಕೇರಿಯ ಬಾಗಡೆದೆಸೆಯ...... ದೇವರ್ಗ್ಗೆ ಎಂದಷ್ಟೇ ಹೇಳುವುದು. ಚಾಲುಕ್ಯ ೩ ನೇ ಸೋಮೆಶ್ವರನ ಹಳ್ಳೂರ ಶಾಸನ ಅವನು ರಾಜ್ಯವಾಳುತ್ತಿರುವಾಗ ಮಂಡಳೇಶ್ವರ ದಂಡನಾಯಕ ತಿಕ್ಕಪಯ್ಯರಸ ಎರಡು ನೂರು ಆಳುತ್ತಿದ್ದನು. ಅವನ ವಿಷಯಾಧಿಕಾರಿ ಪ್ರಧಾನ ದಂಡನಾಯಕ ಸೋವರಸನ ಬೆಸದಿಂದ ಬೆಳ್ವಲ ನಾಡಿನ ಬಳಿಯ ಬಾಡ ಹಳ್ಳಹುರದ ಪರ್ಗ್ಗಡೆ ದೇವರಸ ಪ್ರಮುಖ ಶರಣರು ಪಡುವಣ (ಪಶ್ಚಿಮ) ನಾಗೇಶ್ವರ ದೇವರಂಗಭೋಗಕ್ಕೆ ದಾನ ಬಿಟ್ಟಿದ್ದನ್ನು ಹೇಳುವುದು.

ಸಿಂಧ ವಂಶದ ಮೂಲಪುರುಷ ಸಿಂಧಕುಮಾರನ ಹೆಸರಿನಲ್ಲಿ ಶಿರೂರದಲ್ಲಿ ಸಿಂಧೇಶ್ವರ ದೇವಾಲಯ ಕಟ್ಟಿಸಿದಂತೆ ಹಳ್ಳೂರದಲ್ಲಿ ಸಿಂಧರ ಕೊನೆಯ ಪ್ರಮುಖ ಅರಸ ೨ ನೇ ನಾಗಾದಿತ್ಯ (ನಾಗತಿಯರಸ) ನ ಹೆಸರಿನಿಂದ, ನಾಗಾದಿತ್ಯ ಇಲ್ಲವೇ ಅವನ ಹೆಸರಿನಲ್ಲಿ ಮತ್ತೊಬ್ಬರು ದೇವಾಲಯ ಕಟ್ಟಿಸಿರಬೇಕು.

ಬಸವೇಶ್ವರ ದೇವಾಲಯ ದ್ವಿಕೂಟದಲ್ಲಿ ಎರಡು ಗುಡಿ ಹೊಂದಿದ್ದು ಪೂರ್ವಮುಖದ ಗುಡಿಯು ವಾಸ್ತುವಿನ್ಯಾಸದಲ್ಲಿ ಬಾದಾಮಿ ಚಾಲುಕ್ಯ ಲಕ್ಷಣ ಹೊಂದಿದ್ದರೂ ಅದೇ ಗ್ರಾಮದ ಮೇಲ್ಗುಡಿ ಬಸದಿಯ ಲಕ್ಷಣ ಗಮನಿಸಬೇಕು. ಬಸದಿ ರಾಷ್ಟ್ರಕೂಟರ ಕಾಲದಲ್ಲಿದ್ದ ಸಿಂಧ ೧ನೇ ನಾಗಾದಿತ್ಯ ಕಟ್ಟಿಸಿರಬೇಕು. ಅದೇ ರೀತಿ ಪೂರ್ವಮುಖ ಗುಡಿಯನ್ನು ಸಹ ಇವನೇ ಕಟ್ಟಿಸಿರಬೇಕು. ಪಶ್ಚಿಮಮುಖ ಗರ್ಭಗುಡಿ ದೇವಾಲಯವನ್ನು ಸಿಂಧ ೨ನೇ ನಾಗಾದಿತ್ಯ ಕಟ್ಟಿಸಿರಬೇಕು. ಅದಕ್ಕಾಗಿಯೇ ಚಾಲುಕ್ಯ ೩ನೇ ಸೋಮೇಶ್ವರ ಗ್ರಾಮದ ಶಾಸನ ಕರೆಯುವಂತೆ ಬಸದಿ ಹತ್ತಿರ ಪಡುವಣ ನಾಗೇಶ್ವರ ದೇವರೆಂಬುದು ಎರಡು ಗುಡಿಯನ್ನು ಸೇರಿಸಿಯೇ ಹೇಳಿದ ಮಾತು ಹೊರತು ಒಂದರ ಹೆಸರಿಲ್ಲ.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ದ್ವಿಕೂಟ ತಲವಿನ್ಯಾಸ ದೇವಾಲಯ ಇದಾಗಿದ್ದು, ಗರ್ಭಗೃಹ, ಅರ್ಧಮಂಟಪ,

ನವರಂಗಮಂಟಪ, ಮುಖಮಂಟಪ, ಇದಕ್ಕೆ ಹತ್ತಿಕೊಂಡು ಅರ್ಧಮಂಟಪ, ಗರ್ಭ ಗೃಹಗಳಿವೆ.

ಗರ್ಭಗೃಹಗಳು

ಬಾದಾಮಿ ಚಾಲುಕ್ಯ ಲಕ್ಷಣದ ರಾಷ್ಟ್ರಕೂಟ ಕಾಲದ ಪೂರ್ವಮುಖ ಗರ್ಭಗೃಹದಲ್ಲಿ ಚಿಕ್ಕದಾದ ಚೌಕ ಯೋನಿಪಾಣಿಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ. ದ್ವಾರವು ಸರಳ ಅಲಂಕಾರ ಹೊಂದಿರುವುದು. ಪಶ್ಚಿಮಮುಖ ಗರ್ಭಗೃಹದಲ್ಲಿ ನಂದಿ ಪ್ರತಿಷ್ಠೆಗೊಂಡಿದೆ. ದ್ವಾರವು ಅಲಂಕೃತ ಶಾಖೆಯಲ್ಲಿದೆ. ಇದು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಈ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪ ಕಂಡುಬರುವುದು. ಇದರ ಮೇಲ್ಗಡೆ ಚಿಕ್ಕ ಛಾದ್ಯ ಮುಂದಕ್ಕೆ ಬಂದಿದ್ದು, ಉತ್ತರಾಂಗದಲ್ಲಿ ಯಾವುದೇ ಅಲಂಕಾರವಿಲ್ಲ.

ಅರ್ಧಮಂಟಪಗಳು

ಪೂರ್ವಮುಖ ಗರ್ಭಗೃಹದ ಮುಂದಿನ ಅರ್ಧಮಂಟಪದಲ್ಲಿ ಯಾವುದೇ ಆಲಂಕಾರಿಕ ಭಾಗವಿಲ್ಲ. ಆದರೆ ಅದರ ಮಗ್ಗುಲಿನ ಮೂಲೆಗಂಭಗಳಿಗೆ ಹತ್ತಿಕೊಂಡು ಎರಡು ಬಾದಾಮಿ ಚಾಲುಕ್ಯ ಶೈಲಿಯ ದಪ್ಪ ಸ್ತಂಭಗಳಿವೆ. ಇನ್ನೊಂದು ಅರ್ಧಮಂಟಪದಲ್ಲಿ ಯಾವುದೇ ಲಕ್ಷಣಗಳಿಲ್ಲ.

ನವರಂಗಮಂಟಪ

ಪೂರ್ವಮುಖ ಗರ್ಭಗೃಹದ ಮುಂದಿನ ಅರ್ಧಮಂಟಪಕ್ಕೆ ಹತ್ತಿಕೊಂಡು ನವರಂಗ ಮಂಟಪವಿದ್ದು, ಅದರಲ್ಲಿ ದಪ್ಪದಾದ ನಾಲ್ಕು ಸ್ತಂಭಗಳಿವೆ. ಇವನ್ನು ಮೇಲ್ಗುಡಿ ಬಸದಿಯ ಸ್ತಂಭಗಳಿಗೆ ಹೋಲಿಸಬಹುದು. ನವರಂಗದ ಮುಂದಿನ ದ್ವಾರವು ಅಲಂಕೃತವಾಗಿದ್ದು, ಪಟ್ಟಿಕೆ, ಬಳ್ಳಿ, ಕಂಬ, ಪದ್ಮ ಕೆತ್ತನೆಗಳಿದ್ದಂತೆ ಮೇಲಿನ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ ಕೆತ್ತನೆ ಮಾಡಲಾಗಿದೆ. ದ್ವಾರದ ಮುಂಬದಿಯಲ್ಲಿ ಎರಡು ಪಾರ್ಶ್ವಗಳಲ್ಲಿ ದ್ವಾರಪಾಲಕರ ಶಿಲ್ಪಗಳನ್ನು ಪ್ರತಿಷ್ಠೆ ಮಾಡಲಾಗಿದೆ. ತ್ರಿಭಂಗದಲ್ಲಿ ನಿಂತಿರುವ ಇವರು ಖಡ್ಗ, ಅಭಯ, ತ್ರಿಶೂಲ, ಡಮರು ಹಿಡಿದಂತೆ ನಾಲ್ಕು ಕೈಗಳು, ನೋಡಲು ವೀರಭದ್ರನಂತೆ ಕಂಡುಬರುತ್ತಿದ್ದು, ಬಹುಶಃ ಇವು ನಂತರದ ನಿರ್ಮಿತಿಯೆಂದು ಹೇಳಬಹುದು.

ಮುಖಚತುಷ್ಕಿ

ನವರಂಗಮಂಟಪದ ದ್ವಾರಕ್ಕೆ ಹತ್ತಿಕೊಂಡು ಮುಖಚತುಷ್ಕಿಯಿದೆ. ಸ್ತಂಭಗಳ ಮಧ್ಯ ಅಲಂಕೃತ ಕಕ್ಷಾಸನಗಳಿರುವವು. ಇವುಗಳ ಹೊರಮೈ ಕುಂಭ, ಬಳ್ಳಿ, ಚಿಕಣಿ ಶಿಲ್ಪದಿಂದಾವೃತ ಗೊಂಡಿವೆ.

ನಂದಿಮಂಟಪ

ಮುಖಚತುಷ್ಕಿ ಮತ್ತು ಅರ್ಧಮಂಟಪದ ಮಧ್ಯೆ ಎರಡನ್ನು ಜೋಡಿಸುವ ನಂದಿಮಂಟಪ ವಿದ್ದಂತೆ ಅದರ ಹತ್ತಿರ ಉತ್ತರ-ದಕ್ಷಿಣ ಎರಡು ಪ್ರವೇಶಗಳಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ(ಪೀಠ)

ಎರಡು ಗರ್ಭಗೃಹಗಳ ಕೆಳಭಾಗದಲ್ಲಿರುವ ಅಧಿಷ್ಠಾನವು ಉಪಾನ, ಜಗತಿ, ಕಂಪ–ಕಂಠ, ತ್ರಿಪಟ್ಟಕುಮುದ, ಕಂಪ–ಕಂಠ, ಕಪೋತ ಪಟ್ಟಿಕೆಗಳನ್ನು ಹೊಂದಿದೆ.

ಭಿತ್ತಿ

ಅಧಿಷ್ಠಾನದ ಮೇಲಿರುವ ಹೊರಭಿತ್ತಿಯು ಪಂಚರಥ ಮಾದರಿಯಲ್ಲಿದೆ. ಕೂಡ್ಯಸ್ತಂಭ, ಸ್ತಂಭಗಳ ಪಂಜರ ಕಂಡುಬರುವುವು. ನವರಂಗದ (ಪೂರ್ವಮುಖ ಗುಡಿ) ಉತ್ತರ, ದಕ್ಷಿಣ ಭಿತ್ತಿಗಳಲ್ಲಿ ಒಟ್ಟು ನಾಲ್ಕು ಜಾಲಕ (ಕಿಂಡಿ)ಗಳಿವೆ.

ಪ್ರಸ್ತರ

ಪ್ರಸ್ತರವು ಉತ್ತರ, ವಾಜನ, ವಲ್ಲಭಿ, ಕಂಠ, ಕಪೋತ ಪಟ್ಟಿಕೆಗಳಿಂದ ಕೂಡಿದೆ. ಕಪೋತವು ಸ್ವಲ್ಪ ಭಾಗಿದಂತೆ ಇದ್ದು ಅದರ ವಲ್ಲಭಿಯಲ್ಲಿ ಅಲಂಕಾರ ಕಂಡುಬರುವುದು. ಈ ಕಪೋತದ ಮೇಲೆ ವ್ಯಾಳವಾರಿ ಅಲಂಕಾರ ಭಾಗವಿದ್ದು(ಕುಂಬೆ) ಇದು ಗರ್ಭಗೃಹದ ಪ್ರಸ್ತರದ ಕಪೋತದ ಮೇಲೆ ಹಾಗೆಯೇ ಅರ್ಧಮಂಟಪ, ನವರಂಗಮಂಟಪಗಳ ಮೇಲೆ ಸಾಗಿದೆ. ತೆರೆದ ನಂದಿಮಂಟಪದ ಮೇಲೆ ಛಾದ್ಯ ಇಳಿಬಿದ್ದಿದೆ.

ವಿಮಾನಗಳು

ಪೂರ್ವಮುಖ ಗರ್ಭಗೃಹದ ಮೇಲೆ ಔತ್ತರೇಯ ಮಿಶ್ರ ದ್ರಾವಿಡವಿಮಾನವಿದ್ದು, ಇದರಲ್ಲಿ ವೇದಿಕೆ ಮೇಲೆ ಪ್ರಸ್ತರವಿದ್ದು, ಭಿತ್ತಿ, ಪ್ರಸ್ತರ ಭಾಗಗಳಿವೆ. ಹೀಗಾಗಿ ಇದೊಂದು ದ್ವಿತಲ ವಿಮಾನವಾಗಿದ್ದು, ಮೇಲಿನ ಪ್ರಸ್ತರದ ಮೇಲೆ ಗಳ, ವೇದಿಕೆ ಪಟ್ಟಿಕೆ ಇರುವವು. ವೇದಿಕೆ ಮೇಲೆ ಬಹುಕೋನದ ಶಿಖರ ಹಾಗೂ ಸ್ತೂಪಿಗಳಿರುವುವು. ವಿಮಾನದ ಮುಂದೆ ಮಹಾನಾಸಿಕವಿದ್ದು ಇದೊಂದು ಔತ್ತರೇಯ ಮಿಶ್ರ

ದ್ರಾವಿಡವಿಮಾನ ಇದಾಗಿದೆಯಂದು ಹೇಳಬಹುದು.

ಅದೇ ರೀತಿ ಪಶ್ಚಿಮಮುಖ ಗರ್ಭಗೃಹದ ಮೇಲೆ ಏಕತಲದ ದಾಕ್ಷಿಣಾತ್ಯ ಸಂಪ್ರದಾಯದ ದ್ರಾವಿಡ ವಿಮಾನವಿದೆ. ಇದು ಪ್ರಸ್ತರದ ಮೇಲೆ ಭಿತ್ತಿ, ಪ್ರಸ್ತರ ಹೊಂದಿದ್ದು, ಗಳ, ವೇದಿಕೆಗಳು ಪ್ರಸ್ತರದ ಮೇಲಿವೆ. ವೇದಿಕೆ ಮೇಲೆ ಅಷ್ಟಾಸ್ರ ಶಿಖರ ಮತ್ತು ಸ್ತೂಪಿ (ಕಳಶ)ಗಳಿವೆ.

೭. ಗ್ರಾಮ	:	ಮಂಕಣಿ
ದೇವಾಲಯ	:	ಹೊಳೆಈಶ್ವರ
ಧರ್ಮ	:	ಶೈವ
ಸ್ಥಳ	:	ಗ್ರಾಮದ ಹೊರಗೆ ಕೃಷ್ಣಾನದಿ ಬಲದಂಡೆ
ಅಭಿಮುಖ	:	ಪಶ್ಚಿಮ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	೧೨ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಗ್ರಾಮಸ್ಥರು.

ದೇವಾಲಯದ ಚರಿತ್ರೆ: ಗ್ರಾಮದ ಉತ್ತರಕ್ಕೆ ಇರುವ ಕೃಷ್ಣಾನದಿಯ ಬಲದಂಡೆಯ ಮೇಲೆ ಪಶ್ಚಿಮಮುಖ ಮಾಡಿ ಕಟ್ಟಲಾಗಿದೆ. ೧೨ನೇ ಶತಮಾನದ ದೇಗುಲವಾಗಿದೆ.

ದೇವಾಲಯ ಲಕ್ಷಣಗಳು

ಈ ದೇವಾಲಯವು ಶಿಥಿಲಗೊಂಡು ಹೆಚ್ಚು ಭಾಗಗಳು ಬಿದ್ದುಹೋಗಿವೆ. ಗರ್ಭಗೃಹ, ಅಂತರಾಳ ಮಾತ್ರ ಹೊಂದಿದೆ. ಗರ್ಭಗೃಹದ ಹಿಂದಿನ ಬಂಡೆಯಲ್ಲಿ ಲಿಂಗವನ್ನು ಕೆತ್ತಲಾಗಿದೆ. ಗರ್ಭಗೃಹದ ಛತ್ತು, ಕಮಲ ಕೆತ್ತನೆ ಹೊಂದಿಲ್ಲ. ಮುಂದಿನ ಅಂತರಾಳವು ಯಾವುದೇ ಕೆತ್ತನೆ ಹೊಂದಿಲ್ಲ. ದ್ವಾರವು ಬಿದ್ದುಹೋಗಿ ನಂತರದ ಅದಲು ಬದಲಾಗಿ ಜೋಡಿಸಲಾಗಿದೆ. ಇದರ ಭುವನೇಶ್ವರಿಯ ಕಮಲ ಕೆತ್ತನೆ ಹೊಂದಿದೆ. ಹೊರ ಅಧಿಷ್ಠಾನ, ಭಿತ್ತಿ ಬಿದ್ದು ಹೋಗಿವೆ. ಗರ್ಭಗೃಹದ ಮೇಲಿನ ಚಾವಣಿಗಳು

ಸಂಪೂರ್ಣ ಬಿದ್ದುಹೋಗಿವೆ.

೮. ಗ್ರಾಮ : ಬಿಲ್‌ಕೆರೂರ
ದೇವಾಲಯ : ಈಶ್ವರ
ಧರ್ಮ : ಶೈವ
ಸ್ಥಳ : ಗ್ರಾಮದಲ್ಲಿ
ಅಭಿಮುಖ : ಪೂರ್ವ
ಮಾಧ್ಯಮ : ದಖ್ಖನ್ ಕೆಂಪುಮರಳು
ಕಾಲ : ೧೨ನೇ ಶತಮಾನ
ಶೈಲಿ : ಕಲ್ಯಾಣ ಚಾಲುಕ್ಯ
ಪೋಷಕರು : ಗ್ರಾಮಸ್ಥರು

ದೇವಾಲಯದ ಚರಿತ್ರೆ ಲಕ್ಷಣಗಳು: ಗ್ರಾಮದಲ್ಲಿರುವ ಈಶ್ವರ ದೇವಾಲಯ ೧೨ ನೇ ಶತಮಾನದ ಗುಡಿಯಾಗಿದ್ದು ಪೂರ್ವಮುಖವಾಗಿ ನಿರ್ಮಿಸಲಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟಪ ಹೊಂದಿದೆ. ಗರ್ಭಗೃಹದಲ್ಲಿ ಬಿಳಿ ಕೆಂಪುಮರಳು ಶಿಲೆಯ ಲಿಂಗವಿದ್ದು, ನಂತರದಲ್ಲಿ ಪ್ರತಿಷ್ಠೆ ಮಾಡಲಾಗಿದೆ. ದ್ವಾರವು ಐದು ದ್ವಾರಶಾಖೆಗಳಿಂದ ಅಲಂಕೃತವಾಗಿದೆ. ಶಾಖೆಗಳ ಕೆಳಗಿನ ಮಧ್ಯ ಭಾಗದಲ್ಲಿ ಕೀರ್ತಿಮುಖ ಮಕರತೋರಣದಲ್ಲಿ ನಿಂತ ಶೈವದ್ವಾರಪಾಲಕರ ಸುಂದರ ಕೆತ್ತನೆಯಿರುವುದು. ಇವರ ಹತ್ತಿರ ಚೌರಿಯರು, ಗಂಗಾ-ಯಮುನಾ ಶಿಲ್ಪಗಳನ್ನು ಕೆತ್ತಲಾಗಿದೆ. ಮೇಲಿನ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ ಕೆತ್ತನೆ ಕಂಡುಬರುವುದು.

ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟ ಕುಮುದ, ಕಪೋತ ಪಟ್ಟಿಕೆಗಳಿವೆ. ಇದರ ಮೇಲಿನ ಭಿತ್ತಿಯು ಸಪಾಟಾಗಿದ್ದು ಚೌಕಾಗಿದೆ.

ಗರ್ಭಗೃಹದ ಮುಂದಿನ ಮುಖಮಂಟಪದಲ್ಲಿ ಎರಡು ಅಷ್ಟಕೋನದ ಘಂಟಾಮಾದರಿ ಸ್ತಂಭಗಳಿದ್ದು ಕೆಳಗಿನ ಪೀಠ ಅಲಂಕಾರರಹಿತವಾಗಿ ಚೌಕಾಗಿವೆ. ಮೇಲಿನ ಬೋದಿಗೆಗಳು ಬಿದ್ದು ನಂತರದಲ್ಲಿ ಚೌಕ ಬಂಡೆ ಇಡಲಾಗಿದೆ. ಇವುಗಳನ್ನು ಹೊರತುಪಡಿಸಿ ಮೇಲೆ ವಿಮಾನವಾಗಲಿ, ಪ್ರಸ್ತರ ಭಾಗಗಳಾಗಲಿ ಇರುವುದಿಲ್ಲ. ದೇವಾಲಯವು ಶಿಥಿಲಾವಸ್ಥೆಯಲ್ಲಿದೆ.

೯. ಗ್ರಾಮ : ಬಿಲ್‌ಕೆರೂರ

ದೇವಾಲಯ : ರಾಮಲಿಂಗೇಶ್ವರ

ಧರ್ಮ : ಶೈವ

ಸ್ಥಳ : ಹಿರೇಮಠದ ಹತ್ತಿರ

ಅಭಿಮುಖ : ಪಶ್ಚಿಮ

ಮಾಧ್ಯಮ : ಕೆಂಪುಮರಳು ಶಿಲೆ

ಕಾಲ : ಕ್ರಿ.ಶ. ೧೧, ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಗ್ರಾಮಸ್ಥರು

ದೇವಾಲಯ ಲಕ್ಷಣಗಳು: ಗ್ರಾಮದಿಂದ ಅರ್ಧ ಕಿ.ಮೀ. ಅಂತರದಲ್ಲಿರುವ ಹಿರೇಮಠದ ಹತ್ತಿರ ಪಶ್ಚಿಮಮುಖ ಮಾಡಿ ಗುಡಿಯನ್ನು ಕಟ್ಟಲಾಗಿದೆ. ೧೧-೧೨ನೇ ಶತಮಾನದ ಸ್ಮಾರಕ ಇದಾಗಿದೆ. ಪೋಷಕರು ಯಾರೆಂಬುದು ತಿಳಿಯದೆ ಪ್ರಾಚೀನ ಗ್ರಾಮಸ್ಥರೆಂದು ಕರೆಯಲಾಗಿದೆ. ಇದೊಂದು ಕಲ್ಯಾಣ ಚಾಲುಕ್ಯ ಕಾಲದ ಆಯತಾಕಾರದ ಕಟ್ಟಡವಾಗಿದೆ. ಹತ್ತಿರದಲ್ಲಿ ಬಿಲ್ವಾಶ್ರಮ ಮಠವಿದ್ದ ಕಾರಣದಿಂದ ಇದೊಂದು ಅಂದಿನ ಅಗ್ರಹಾರದ ದೇವಿ ಗಣೇಶ ಗುಡಿಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಆಯತಾಕಾರದ ಒಂದೇ ಕೋಣೆಯಲ್ಲಿ ಎರಡು ಗರ್ಭಗೃಹಗಳಿವೆ. ಒಂದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇರಬಹುದಾದ ಈಶ್ವರ ದೇವಾಲಯ ಬಿದ್ದುಹೋಗಿರುವ ಸಾಧ್ಯತೆಯಿದೆ.

ಹೊರಭಾಗದ ಅಧಿಷ್ಠಾನ ಅಲಂಕಾರರಹಿತ ಸರಳ ಮೂರು ಪಟ್ಟಿಕೆ ಹೊಂದಿದೆ. ಇದರ ಮೇಲಿನ ಭಿತ್ತಿಯು ಸರಳವಾಗಿದೆ. ಇದರ ಮೇಲೆ ಉತ್ತರ, ವಾಜನ, ಕಂಠ, ಕಂಪಗಳ ಮೇಲೆ ನಾಗಗಳಿರುವ ಕಪೋತ ಪಟ್ಟಿಕೆಯ ಪ್ರಸ್ತರಭಾಗವಿದೆ. ಇದಕ್ಕೆ ಒಂದೇ ದ್ವಾರವಿದ್ದು ಅಲಂಕಾರವಿರುವುದಿಲ್ಲ. ಇತ್ತೀಚೆಗೆ ಪುರಾತತ್ವ ಇಲಾಖೆಯಿಂದ ಜೀರ್ಣೋದ್ಧಾರಗೊಂಡಿದೆ.

೧೦. ಗ್ರಾಮ : ಬೊಮ್ಮಣಗಿ

ದೇವಾಲಯ : ಬೊಮ್ಮಲಿಂಗ (ಈಶ್ವರ)

ಧರ್ಮ	:	ಶೈವ
ಅಭಿಮುಖ	:	ಪೂರ್ವ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	೧೧ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಪ್ರಾಚೀನ ಗ್ರಾಮಸ್ಥರು ಇಲ್ಲವೇ ಅಧಿಕಾರಸ್ಥರು

ದೇವಾಲಯ ಚರಿತ್ರೆ: ಬೊಮ್ಮಣಗಿ ಗ್ರಾಮ ಕೂಡಲಸಂಗಮದ ಪಶ್ಚಿಮಕ್ಕೆ ಕೃಷ್ಣಾ ನದಿಯ ಬಲದಡದ ಮೇಲೆ ಬರುತ್ತದೆ. ಈ ಗ್ರಾಮದ ಅಗಸಿ ದ್ವಾರದ ಹತ್ತಿರ ಗ್ರಾಮದ ಹೆಸರಾದ ಬೊಮ್ಮಣಗಿಯನ್ನು ಈಶ್ವರ ದೇವಾಲಯಕ್ಕೆ ಹೋಲಿಸಿಕೊಂಡು ಸ್ಥಳೀಕರು ಬೊಮ್ಮಲಿಂಗೇಶ್ವರ ದೇವಾಲಯವೆಂದು ಕರೆಯುತ್ತಾರೆ. ಇದೊಂದು ಪ್ರಾಚೀನ ೧೧ನೇ ಶತಮಾನದ ಕಲ್ಯಾಣ ಚಾಲುಕ್ಯ ಲಕ್ಷಣದಲ್ಲಿರುವ ದೇವಾಲಯ.

ದೇವಾಲಯ ಲಕ್ಷಣಗಳು

ತಲವಿನ್ಯಾಸದಲ್ಲಿ ಏಕಕೂಟವಾಗಿದ್ದು ಗರ್ಭಗೃಹ ಅಂತರಾಳ, ನವರಂಗಮಂಟಪ ಹೊಂದಿದೆ. ಗರ್ಭಗೃಹದಲ್ಲಿ ಕೆಂಪುಮರಳು ಶಿಲೆಯ ಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ(ಹೊಸದು). ಗರ್ಭಗೃಹ ದ್ವಾರವು ಶಾಖೆಗಳಿಂದ ಅಲಂಕಾರ ಹೊಂದಿದೆ. ಮುಖ್ಯದ್ವಾರ ಚಾವಣಿ ಬಿದ್ದು ಹೋಗಿದೆ. ಗರ್ಭಗೃಹದ ಮುಂದಿನ ಅಂತರಾಳ ದ್ವಾರವು ಅಲಂಕಾರದಿಂದ ಕೂಡಿದೆ.

ಮುಂದಿನ ನವರಂಗ ಮಂಟಪದಲ್ಲಿ ನಾಲ್ಕು ಮಿಶ್ರಕ ಕಂಬಗಳಿವೆ. ಪೀಠ, ಪಾದ, ದಂಡ, ದಂಡಾಗ್ರ ಹೊಂದಿವೆ. ದಂಡಾಗ್ರದಲ್ಲಿ ಕಳಶ, ತಾಟಿಕಾ, ಘಟ(ಗೋಲ) ಫಲಕ, ಮಂಡಿ, ಫಲಕ(ಚೌಕ), ಗ್ರೀವ, ಕಂಠ, ಸರಳ ಶಿರ(ಬೋದಿಗೆ) ಭಾಗಗಳನ್ನು ಹೊಂದಿವೆ. ಇವುಗಳ ಮೇಲಿನ ವಿತಾನವು ಕಮಲದ ಕೆತ್ತನೆಯಲ್ಲಿದೆ. ನವರಂಗದ ದ್ವಾರವು ಅಲಂಕಾರದಿಂದ ಕೂಡಿದೆ.

ಹೊರಭಾಗದ ಅಧಿಷ್ಠಾನ, ಭಿತ್ತಿಗಳನ್ನು ಮನೆಗಳು ಆವರಿಸಿಕೊಂಡಿದ್ದರಿಂದ ಅವುಗಳ ಸ್ವರೂಪ ತಿಳಿದುಬರುವುದಿಲ್ಲ. ಹಾಗೆಯೇ ಗರ್ಭಗೃಹದ ಮೇಲೆ ಶಿಖರವಿರುದಿಲ್ಲ.

೧೧. ಗ್ರಾಮ : ಹಿರೇಮ್ಯಾಗೇರಿ

ದೇವಾಲಯ : ಶಿವ

ಧರ್ಮ : ಶೈವ

ಸ್ಥಳ : ರಸ್ತೆಯ ಬದಿ ರುದ್ರಭೂಮಿಯಲ್ಲಿ

ಅಭಿಮುಖ : ಪೂರ್ವ

ಮಾಧ್ಯಮ : ಕೆಂಪುಮರಳು ಶಿಲೆ

ಕಾಲ : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಪ್ರಾಚೀನ ಸ್ಥಳೀಯರು

ದೇವಾಲಯ ಚರಿತ್ರೆ ಮತ್ತು ಲಕ್ಷಣಗಳು: ಹಿರೇಮ್ಯಾಗೇರಿ ಗ್ರಾಮದ ರುದ್ರಭೂಮಿಯಲ್ಲಿ ಪೂರ್ವಮುಖ ಮಾಡಿದಂತೆ ಗುಡಿಯನ್ನು ಕಟ್ಟಲಾಗಿದೆ. ಕಟ್ಟಲು ಕೆಂಪು ಮರಳು ಶಿಲೆ ಬಳಸಲಾಗಿದ್ದು, ಸ್ಥಳಿಯರು ಈಶ್ವರ ಹೆಸರಿನಿಂದ ಕರೆಯುವರು.ಕೇವಲ ತಲವಿನ್ಯಾಸದಲ್ಲಿ ಒಂದು ಗರ್ಭಗೃಹವಿದ್ದು ಅದರಲ್ಲಿ ಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ. ದ್ವಾರವು ಅಲಂಕಾರ ಹೊಂದಿಲ್ಲ. ಹೊರಗಿನ ಅಲಂಕಾರದಲ್ಲಿ ಅಧಿಷ್ಠಾನ, ಉಪಾನ, ಜಗತಿ, ಕಂಠ ಕಂಪ, ತ್ರಿಪಟ್ಟಿಕುಮುದ ಕಪೋತ ಪಟ್ಟಿಕೆಗಳನ್ನು ಹೊಂದಿದೆ. ಇದರ ಮೇಲಿನ ಭಿತ್ತಿಯು ಯಾವುದೇ ಅಲಂಕಾರ ಹೊಂದದೆ ಸರಳವಾಗಿದೆ. ಮೇಲ್ಗಡೆಯು ಸಹ ವಿಮಾನ ಕಂಡುಬರುವುದಿಲ್ಲ.

೧೨. ಗ್ರಾಮ : ಕಿರಸೂರ

ದೇವಾಲಯ : ರಾಮಲಿಂಗೇಶ್ವರ

ಧರ್ಮ : ಶೈವ

ಸ್ಥಳ : ಗ್ರಾಮದ ಮಧ್ಯೆ

ಅಭಿಮುಖ : ಉತ್ತರ

ಮಾಧ್ಯಮ : ದಖ್ಖನ್ ಕೆಂಪುಮರಳು ಶಿಲೆ

ಕಾಲ : ೧೧-೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಸ್ಥಳೀಯರು

ದೇವಾಲಯ ಚರಿತ್ರೆ ಮತ್ತು ಲಕ್ಷಣಗಳು: ಉತ್ತರಮುಖ ಮಾಡಿ, ಕೆಂಪುಮರಳು ಶಿಲೆ ಬಳಸಿ ಗ್ರಾಮದಲ್ಲಿ ನಿರ್ಮಿಸಲಾಗಿದೆ. ಉತ್ತರಮುಖ ಮಾಡಿದಂತೆ ಏಕಕೂಟ ತಲವಿನ್ಯಾಸದಲ್ಲಿ ಗರ್ಭಗೃಹ, ಮುಖಮಂಟಪ ಹೊಂದಿರುವುದು. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ. ಮುಖಮಂಟಪದಲ್ಲಿ ನಾಲ್ಕು ಮಿಶ್ರಕ ಮಾದರಿ ಸ್ತಂಭಗಳಿವೆ. ಗರ್ಭಗೃಹ ದ್ವಾರವು ಅಲಂಕಾರ ಹೊಂದಿಲ್ಲ. ಇದರ ಮಧ್ಯೆ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಿರುವರು. ಗರ್ಭಗೃಹದ ಮೇಲೆ ತೊಟ್ಟಿಲು ರೀತಿ ಫಾಂಸನಾ ಶಿಖರವಿದ್ದು ಸಂಪೂರ್ಣವಾಗಿ ಬಿದ್ದು ಹೋಗಿದೆ.

೧೩. ಗ್ರಾಮ	:	ಕಿರಸೂರ
ದೇವಾಲಯ	:	ರಾಮಲಿಂಗೇಶ್ವರ
ಧರ್ಮ	:	ಶೈವ
ಸ್ಥಳ	:	ಗ್ರಾಮದ ಮಧ್ಯೆ
ಅಭಿಮುಖ	:	ಪೂರ್ವ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	೧೧ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಸ್ಥಳೀಯರು

ದೇವಾಲಯದ ಚರಿತ್ರೆ ಮತ್ತು ಲಕ್ಷಣಗಳು: ಕಿರಸೂರ ಗ್ರಾಮದ ಎರಡನೇ ದೇವಾಲಯ ಇದಾಗಿದ್ದು ಸ್ಥಳೀಯರು ಇದನ್ನು ಸಹಿತ ರಾಮಲಿಂಗೇಶ್ವರ ಹೆಸರಿನಿಂದ ಕರೆಯುವರು. ದೇವಾಲಯ ಗ್ರಾಮದ ಮಧ್ಯೆ ಕಟ್ಟಲಾಗಿದ್ದು ಪೂರ್ವಮುಖ ಮಾಡಿದೆ. ತಲವಿನ್ಯಾಸದಲ್ಲಿ ಏಕ ಕೂಟವಾಗಿದ್ದಂತೆ ಗರ್ಭಗೃಹ, ನವರಂಗಮಂಟಪ ಇವೆ. ಗರ್ಭಗೃಹದಲ್ಲಿ ಚೌಕ ಪಾಣಿ ಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ. ಹೊರ ಅಲಂಕಾರದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರಗಳು ಇಲ್ಲಿ ಗೌಣವಾಗಿವೆ. ನವರಂಗಮಂಟಪದಲ್ಲಿ ಮಧ್ಯೆ ಲಿಂಗಕ್ಕೆ ಎದುರಾಗಿ ನಂದಿ ಶಿಲ್ಪವನ್ನು ಇತ್ತೀಚೆಗೆ ಪ್ರತಿಷ್ಠಾಪಿಸಿರುವರು.

ಇತರ ಶೈವ ದೇವಾಲಯಗಳು

ಮೇಲಿನ ಶಿವನ ಗುಡಿಗಳ ಜೊತೆಗೆ ೧೪,೧೫,೧೬ ನೇಯ ಶತಮಾನಕ್ಕೆ ಸೇರಲ್ಪಡುವ ಕೆಲವು ದೇವಾಲಯಗಳು ಇಲ್ಲಿ ಕಂಡು ಬರುತ್ತವೆ. ಅಂತಹ ದೇವಾಲಯಗಳಿ ಮುಡಪಲ ಜೀವಿಯ ಸಿದ್ದೇಶ್ವರ ದೇವಾಲಯಗಳು, ಹಿರೇಶೆಲ್ಲಿಕೇರಿಯ ಈಶ್ವರಲಿಂಗ, ಬಸವಣ್ಣನ ಶಿಲ್ಪ, ಮುಚಖಂಡಿಯ ವೀರಭದ್ರ ದೇವಾಲಯಗಳಿ ಪ್ರಮುಖವೆನಿಸುತ್ತವೆ. ಇವುಗಳ ವಾಸ್ತು ಶೈಲಿಗಳು ಬೇರೆಯಾಗಿದ್ದು ಅಲಂಕಾರಕ್ಕೆ ಒತ್ತು ಕೊಡಬೇಕಾಗಿಲ್ಲ.

೫.೭.೨. ವೈಷ್ಣವ ದೇವಾಲಯಗಳು

ಶೈವ ದೇವಾಲಯಗಳಂತೆ ಬಾಗಲಕೋಟೆ ಪ್ರದೇಶದಲ್ಲಿ ವೈಷ್ಣವ ದೇವಾಲಯಗಳು ಸಹ ಕಂಡುಬರುತ್ತವೆ. ಇವುಗಳಲ್ಲಿ ಶಿರೂರಿನ ಲಕ್ಷ್ಮೀನಾರಾಯಣ, ತುಳಸಿಗಿರಿಯ ಮಾರುತಿ ದೇವಾಲಯ, ಶಿರೂರಿನ ಸಿದ್ಧೇಶ್ವರ ದೇವಾಲಯದ ಸಂಕೀರ್ಣದ ಒಂದು ಚಿಕ್ಕಗುಡಿಗಳ ಪ್ರಮುಖವಾಗಿ ಕಂಡುಬರುವವು.

೧. ಗ್ರಾಮ	:	ಶಿರೂರ
ದೇವಾಲಯ	:	ವಿಷ್ಣು
ಧರ್ಮ	:	ವೈಷ್ಣವ
ಸ್ಥಳ	:	ಸಿದ್ಧೇಶ್ವರ ದೇವಾಲಯ ಸಂಕೀರ್ಣ
ಅಭಿಮುಖ	:	ಪೂರ್ವ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	ಕ್ರಿ.ಶ. ೧೦೪೯
ಶೈಲಿ	:	ಕಲ್ಯಾಣ ಚಾಲುಕ್ಯ ಪ್ರಾಂಸನಾ
ಪೋಷಕರು	:	ಪ್ರಭುಮಾರಸಿಂಘ

ದೇವಾಲಯ ಚರಿತ್ರೆ: ಶಿರೂರಿನ ಮೂಲ ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿ ಪೂರ್ವಮುಖ ಮಾಡಿ ಕಟ್ಟಲಾಗಿದೆ. ಇದನ್ನು ಕ್ರಿ.ಶ. ೧೦೪೯ ರ ಶಾಸನ ಪ್ರಭು ಮಾರಸಿಂಘನು ಕಟ್ಟಿಸಿದನೆಂದು ಹೇಳುತ್ತದೆ.[೪೩] ಇದು ನೈಋತ್ಯ ಮೂಲೆಯಲ್ಲಿ ಕಟ್ಟಲ್ಪಟ್ಟಿದೆ.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ತಲವಿನ್ಯಾಸದಲ್ಲಿ ಏಕಕೂಟವಾಗಿದ್ದು ಗರ್ಭಗೃಹ, ಅಂತರಾಳ ಹೊಂದಿದೆ.

ಗರ್ಭಗೃಹ

ಶಾಸನೋಕ್ತವಾಗಿ ವಿಷ್ಣು ದೇವಾಲಯವಾಗಿದ್ದರೂ ಸದ್ಯ ಅದರಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ದ್ವಾರವು ಯಾವುದೇ ಅಲಂಕಾರ ಹೊಂದಿಲ್ಲ.

ಅಂತರಾಳ

ಗರ್ಭಗೃಹದ ಮುಂದೆ ಅಂತರಾಳವಿದ್ದು ಅದರ ದ್ವಾರವು ಸರಳ ಅಲಂಕಾರ ಹೊಂದಿದ್ದು ಪಾರ್ಶ್ವದಲ್ಲಿ ಹೂಕೆತ್ತನೆ ಅಲಂಕಾರವಿರುವುದು.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟಕುಮುದ, ಕಂಪ, ಕಂಠ, ಕಪೋತ ಪಟ್ಟಿಕೆಗಳನ್ನು ಹೊಂದಿದೆ.

ಭಿತ್ತಿ

ಭಿತ್ತಿಯು ಚೌಕಾಗಿದ್ದು ಕುಡ್ಯಸ್ತಂಭಗಳಿಂದ ಕೂಡಿದೆ.

ಪ್ರಸ್ತರ

ಪ್ರಸ್ತರವು ಉತ್ತರ, ವಾಜನ, ವಲ್ಲಭಿ, ಕಂಪ, ಕಂಠ, ನಾಸಿ ಕಪೋತ ಹೊಂದಿದೆ. ಅಂತರಾಳದ ಮುಂಭಾಗದ ಮೇಲೆ ಕಪೋತ, ಕಂಪ, ಕಂಠ ಹಾಗೂ ವೇದಿಕೆ ಪಟ್ಟಿಕೆಯಿದೆ.

ವಿಮಾನ

ಇದರ ಮೇಲಿನ ವಿಮಾನವು ೫ ಸಾಲಿನ ಕಪೋತ, ಗಳ ಭಾಗ ಹೊಂದಿದ್ದು ಮೇಲೆ ಗಳ ಹಾಗೂ ವೇದಿಕೆ ಪಟ್ಟಿಕೆಯ ಮೇಲೆ ಚೌಕಾದ ಶಿರವಿದ್ದು ಅದರ ನಾಲ್ಕು ಮುಖದಲ್ಲಿ ನಾಸಿ ಅಲಂಕಾರ ಕೆತ್ತನೆಯಿರುವುದು. ಮೇಲೆ ಸ್ತೂಪಿಯಿದೆ. ವಿಮಾನದ ಮುಂಭಾಗ ಮಹಾ ನಾಸಿ

ಭಾಗವಿದ್ದು ಅದರಲ್ಲಿ ಲಿಂಗ ಕೆತ್ತಲಾಗಿದೆ. ಈ ವಿಮಾನವು ಪೂರ್ವಮುಖ ಮಾಡಿದಂತೆ ಗುಡಿಯನ್ನು ಕಟ್ಟಲಾಗಿದೆ. ಇದನ್ನು ಕಟ್ಟಲು ಕೆಂಪುಮರಳು ಶಿಲೆ ಬಳಸಲಾಗಿದ್ದು, ಸ್ಥಳೀಯರು ಈಶ್ವರ ಹೆಸರಿನಿಂದ ಕರೆಯುವರು.

ಕೇವಲ ತಲವಿನ್ಯಾಸದಲ್ಲಿ ಒಂದೇ ಗರ್ಭಗೃಹವಿದ್ದು ಅದರಲ್ಲಿ ಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ ದ್ವಾರವು ಅಲಂಕಾರ ಹೊಂದಿಲ್ಲ. ಹೊರಗಿನ ಅಲಂಕಾರದಲ್ಲಿ ಅಧಿಷ್ಠಾನ ಉಪಾನ, ಜಗತಿ, ಕಂಠ, ಕಂಪ, ತ್ರಿಪಟ್ಟಕುಮುದ ಕಂಪ, ಕಂಠ ಹಾಗೂ ಕಪೋತ ಪಟ್ಟಿಕೆಗಳನ್ನು ಹೊಂದಿದೆ. ಇದರ ಮೇಲಿನ ಭಿತ್ತಿಯು ಯಾವುದೇ ಅಲಂಕಾರ ಹೊಂದದೆ ಸರಳವಾಗಿದೆ. ಮೇಲ್ಗಡೆ ವಿಮಾನ ಕಂಡುಬರುವುದಿಲ್ಲ.

೨. ಗ್ರಾಮ	:	ಶಿರೂರ
ದೇವಾಲಯ	:	ಹನುಮಾನ
ಧರ್ಮ	:	ವೈಷ್ಣವ
ಸ್ಥಳ	:	ಸಿದ್ಧೇಶ್ವರ ದೇವಾಲಯದ ಸಂಕೀರ್ಣ
ಅಭಿಮುಖ	:	ಪೂರ್ವ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	ಕ್ರಿ.ಶ. ೧೦೪೯
ಶೈಲಿ	:	ಕಲ್ಯಾಣ ಚಾಲುಕ್ಯ ದ್ರಾವಿಡ
ಪೋಷಕರು	:	ಪ್ರಭು ಮಾರಸಿಂಘ

ದೇವಾಲಯ ಚರಿತ್ರೆ ಈ ಗುಡಿಯು ಶಿರೂರ ಸಿದ್ಧೇಶ್ವರ ದೇವಾಲಯದ ಸಂಕೀರ್ಣದ ವಾಯುವ್ಯ ಮೂಲೆಯಲ್ಲಿ ಪೂರ್ವಮುಖ ಮಾಡಿ ಕಟ್ಟಲ್ಪಟ್ಟಿದೆ. ಇದನ್ನು ಕ್ರಿ.ಶ. ೧೦೪೯ ರಲ್ಲಿ ಮಾರಸಿಂಘ ಪ್ರಭು ಕಟ್ಟಿಸಿರುವನು.[೪೪]

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ತಲವಿನ್ಯಾಸದಲ್ಲಿ ಏಕಕೂಟವಾಗಿದ್ದು ಗರ್ಭಗೃಹ, ಅಂತರಾಳ ಹೊಂದಿದೆ.

ಗರ್ಭಗೃಹ

ಗರ್ಭಗೃಹ ಚೌಕಾಗಿದ್ದು ಅದರಲ್ಲಿ ಹಿಂದಿನ ಶಿಲ್ಪ ಕಂಡುಬರುವುದಿಲ್ಲ. ದ್ವಾರವು ಅಲಂಕಾರ ರಹಿತವಾಗಿದೆ.

ಅಂತರಾಳ

ಗರ್ಭಗೃಹದ ಮುಂದೆ ಅಂತರಾಳವಿದ್ದು, ಇದರ ದ್ವಾರವು ಅಲಂಕಾರ ಹೊಂದಿಲ್ಲ. ದ್ವಾರದ ಎರಡು ಬಾಜು ಹೂ ಕೆತ್ತನೆಯ ಪಟ್ಟಿಗಳಿವೆ. ಅದರಲ್ಲಿ ಜಾಲಕ ಕಿಂಡಿಗಳಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟಕುಮುದ, ಕಂಪ, ಕಂಠ, ಕಪೋತ ಪಟ್ಟಿಕೆಗಳಿರುವುವು.

ಭಿತ್ತಿ

ಇದರ ಮೇಲಿನ ಭಿತ್ತಿಯ ಚೌಕಾಗಿದ್ದು, ಕುಡ್ಯಸ್ತಂಭಗಳ ಕೆತ್ತನೆ ಕಂಡುಬರುತ್ತದೆ.

ಪ್ರಸ್ತರ

ಪ್ರಸ್ತರದಲ್ಲಿ ಉತ್ತರ, ವಾಜನ, ವಲ್ಲಭಿ, ಕಂಪ, ಕಂಠ, ನಾಸಿ ಕಪೋತ ಪಟ್ಟಿಕೆ ಕಂಡುಬರುವುವು.

ವಿಮಾನ

ಇದರ ಮೇಲಿನ ವಿಮಾನವು ವಿಶಿಷ್ಟವಾಗಿದ್ದು ಔತ್ತರೇಯ ದ್ರಾವಿಡದ ಪ್ರಾಂಸನಾ ವಿಮಾನದ ಶಿಖರವನ್ನು ಮಾತ್ರ ಹೊಂದಿದ್ದು ಅದರ ನಾಲ್ಕು ಮುಖದಲ್ಲಿ ನಾಸಿ ಕೆತ್ತನೆಗಳಿವೆ. ಮುಂಭಾಗದ ನಾಸಿಕೋಷ್ಠದಲ್ಲಿ ಕುಂಭ ಕೆತ್ತನೆಯಿರುವುದು. ಶಿಖರದ ಮೇಲೆ ಕಳಶವಿದೆ (ಸ್ತೂಪಿ). ಇದೊಂದು ವಿಶಿಷ್ಟ ವಿಮಾನವಾಗಿದೆ.

೩. ಗ್ರಾಮ	:	ಶಿರೂರ
ದೇವಾಲಯ	:	ಲಕ್ಷ್ಮೀನಾರಾಯಣ
ಧರ್ಮ	:	ವೈಷ್ಣವ
ಸ್ಥಳ	:	ಗ್ರಾಮದ ಮಧ್ಯೆ
ಅಭಿಮುಖ	:	ಉತ್ತರಾಭಿಮುಖಿ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	೧೧-೧೨ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಮಾರಸಿಂಘ ಪ್ರಭು, ಲಕ್ಷ್ಮಾದೇವಿ

ದೇವಾಲಯದ ಚರಿತ್ರೆ : ಶಿರೂರ ಗ್ರಾಮದ ಮಧ್ಯೆ ರಾಮಲಿಂಗೇಶ್ವರ ದೇವಾಲಯದ ಹತ್ತಿರದಲ್ಲಿಯೇ ಇದ್ದು ಇದನ್ನು ಪಶ್ಚಿಮ-ಉತ್ತರ ಮುಖವಾಗಿ ಕಟ್ಟಲಾಗಿದೆ.

ಇದಕ್ಕೆ ಯಾರು ಪೋಷಕರೆಂಬುದು ತಿಳಿದುಬರುವುದಿಲ್ಲ. ಆದರೂ ಶಿರೂರ ದೇವಾಲಯಗಳಿಗೆ ಮಾರಸಿಂಘ ಪ್ರಭು, ಅವನ ಮೊಮ್ಮಗಳು ಲಕ್ಷ್ಮಾದೇವಿಯು ಸಾಕಷ್ಟು ದಾನಗಳನ್ನು ನೀಡಿ ಪ್ರೋತ್ಸಾಹಿಸಿದ್ದರಿಂದ ಅವರೇ ಈ ಲಕ್ಷ್ಮೀನಾರಾಯಣ ದೇವಾಲಯಕ್ಕೆ ದಾನದತ್ತಿ ನೀಡಿರಬೇಕು. ಇದನ್ನು ಅವರೇ ಕಟ್ಟಿಸಿರಬೇಕು. ಶಿರೂರ ಗ್ರಾಮ ಬ್ರಾಹ್ಮಣ ಅಗ್ರಹಾರವಾಗಿದ್ದರೂ ಶೈವಧರ್ಮವೇ ಪ್ರಾಬಲ್ಯ ಹೊಂದಿದೆ. ಗ್ರಾಮಸ್ಥರು ಇಂದು ಲಕ್ಷ್ಮೀನಾರಾಯಣ ದೇವಾಲಯವೆಂದು ಕರೆಯುತ್ತಿದ್ದು ಹಿಂದೆ ಯಾವ ಹೆಸರಿನಿಂದ ಕರೆಯುತ್ತಿದ್ದರೆಂಬುದು ಮಾತ್ರ ಗೊತ್ತಾಗುವುದಿಲ್ಲ. ಆದರೆ, ಕ್ರಿ.ಶ. ೧೦೪೯ರಲ್ಲಿ ಮಾರಸಿಂಘ ಪ್ರಭು ವಿಷ್ಣು ದೇವಾಲಯವನ್ನು ಸಿದ್ಧೇಶ್ವರ ದೇವಾಲಯದ ಸಂಕೀರ್ಣದ

ಪರಿವಾರ ಗುಡಿಗಳಾದ ಚಂಡಿ, ಭೈರವ. ವಿನಾಯಕ, ಹಟಕೇಶ್ವರ, ಹನುಮಾನ ದೇವರುಗಳ ಜೊತೆಗೆ ವಿಷ್ಣು ದೇವಾಲಯ ಕಟ್ಟಿಸಿದನೆಂದು ಶಾಸನ ತಿಳಿಸುವುದು.[೬೫] ಆದಾಗ್ಯೂ ನಿರ್ದಿಷ್ಟವಾಗಿ ಏನನ್ನೂ ಹೇಳಲಾಗದು.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ತಲವಿನ್ಯಾಸದಲ್ಲಿ ದ್ವಿಕೂಟವಾಗಿದ್ದು ಎರಡು ಗರ್ಭಗೃಹಗಳು, ಒಂದು ಅಂತರಾಳ, ನವರಂಗಮಂಟಪ ಹೊಂದಿದೆ.

ಗರ್ಭಗೃಹಗಳು

ಪಶ್ಚಿಮಮುಖ ಗರ್ಭಗೃಹದಲ್ಲಿ ಲಕ್ಷ್ಮೀನಾರಾಯಣನ ನಿಂತ ಭಂಗಿಯ ಶಿಲ್ಪವನ್ನು ಪ್ರತಿಷ್ಠೆ ಮಾಡಲಾಗಿದೆ. ದ್ವಾರದಲ್ಲಿ ಅಲಂಕಾರ ಕಂಡುಬರುವುದಿಲ್ಲ. ನವರಂಗದ ದಕ್ಷಿಣ ಗೋಡೆಯಲ್ಲಿರುವ ಅರ್ಧಮಂಟಪಕ್ಕೆ ಕಾಲಾಂತರದಲ್ಲಿ ದ್ವಾರವನ್ನು ಜೋಡಿಸಿ ಗರ್ಭಗೃಹವನ್ನಾಗಿ ಮಾರ್ಪಡಿಸಲಾಗಿದ್ದು ಚೌಕಪಾಣಿ ಲಿಂಗವನ್ನು ಪ್ರತಿಷ್ಠೆ ಮಾಡಿರುವರು.

ಅಂತರಾಳ

ಅಂತರಾಳವು ಎರಡು ದ್ವಾರಶಾಖೆ ಹೊಂದಿದ್ದು ಪಾರ್ಶ್ವಗಳಲ್ಲಿ ಹೂ ಕೆತ್ತನೆಯ ಜಾಲಕ (ಕಿಂಡಿ) ಅಲಂಕಾರದ ಭಾಗಗಳಿವೆ.

ನವರಂಗಮಂಟಪ

ನವರಂಗಮಂಟಪದ ಮಧ್ಯೆ ನಾಲ್ಕು ಮಿಶ್ರಕ ಮಾದರಿ ಸ್ತಂಭಗಳಿದ್ದು ಅವು ಪೀಠ, ಪಾದ, ದಂಡ, ದಂಡಾಗ್ರ ಭಾಗಗಳನ್ನು ಹೊಂದಿವೆ. ನವರಂಗಕ್ಕೆ ಉತ್ತರ-ಪಶ್ಚಿಮ ಎರಡು ದ್ವಾರಗಳಿದ್ದು ಅಲಂಕಾರ ಹೊಂದಿಲ್ಲ. ಈ ಮಂಟಪದ ವಿತಾನದಲ್ಲಿ ಕಮಲದ ಕೆತ್ತನೆಯಿರುವುದು. ಒಳಭಿತ್ತಿಯ ವಾತಾಯನಗಳಲ್ಲಿ ನಾಲ್ಕು ಗೂಡು ಕೊಷ್ಟಗಳಿದ್ದು, ಅವುಗಳಲ್ಲಿ ಸೂರ್ಯ, ನಾಗ, ಗಣೇಶ ಶಿಲ್ಪಗಳು

ಪ್ರತಿಷ್ಠೆ ಹೊಂದಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಅಧಿಷ್ಠಾನ ಭಾಗವು ನೆಲದಲ್ಲಿ ಹುದುಗಿರುವುದರಿಂದ ಅದರ ಭಾಗಗಳ ಸ್ವರೂಪಗಳು ಕಂಡುಬರುವುದಿಲ್ಲ.

ಭಿತ್ತಿ

ಭಿತ್ತಿಯು ಚೌಕಾಗಿದ್ದು ಯಾವುದೇ ಅಲಂಕಾರ ಹೊಂದಿರುವುದಿಲ್ಲ.

ಪ್ರಸ್ತರ


ಪ್ರಸ್ತರವು ಸಹ ಉತ್ತರ, ವಾಜನ, ವಲ್ಲಭಿ, ಕಪೋತ ಭಾಗ ಹೊಂದಿದ್ದರೂ ಸರಳವಾಗಿದೆ.

ವಿಮಾನ

ಗರ್ಭಗೃಹದ ಮೇಲೆ ಯಾವುದೇ ವಿಮಾನವಿದ್ದ ಬಗ್ಗೆ ಕಂಡುಬರುವುದಿಲ್ಲ.

ಶಿರೂರ ಗ್ರಾಮದಲ್ಲಿ ಮೇಲಿನ ದೇವಾಲಯಗಳ ಜೊತೆಗೆ ಶಾಸನೋಕ್ತ ಆದಿತ್ಯ (ಸೂರ್ಯ) ದೇವಾಲಯ ಮಾತ್ರ ಕಂಡುಬರುವುದಿಲ್ಲ. ಬಸವೇಶ್ವರ ಕಟ್ಟೆಯಲ್ಲಿ ವೀರಗಲ್ಲು, ಚತುರ್ಮುಖ ಶಿವ, ಇತ್ಯಾದಿ ಶಿಲ್ಪಗಳು, ಕಂಡುಬರುತ್ತಿದ್ದು ಅವುಗಳನ್ನು ಶಿಲ್ಪಭಾಗದಲ್ಲಿ ಚರ್ಚಿಸಲಾಗಿದೆ.

ತಲವಿನ್ಯಾಸ: ಲಕ್ಷ್ಮೀನಾರಾಯಣ ದೇವಾಲಯ ಶಿರೂರ



ಕೃಪೆ: ಡಾ. ಸುಭಾಸ ರಾ ಚಿಂಚೋಳಿ ಅವರ ಪ್ರಬಂಧದಿಂದ

೩.೭.೩. ತ್ರೈಪುರುಷ ದೇವಾಲಯಗಳು

ಕೆಲವರು ವೈಯಕ್ತಿಕವಾಗಿ ತಮ್ಮ ಧರ್ಮ ಹಾಗೂ ಧರ್ಮದ ದೇವರುಗಳ ದೇವಾಲಯಗಳನ್ನು ಕಟ್ಟಿಸಿ ಪೂಜಿಸುವುದುಂಟು. ಕೆಲವರು ಎಲ್ಲ ಧರ್ಮಗಳು ಒಂದೇ ಆಗಿದ್ದು ಶಿವನೊಬ್ಬನೆ ಎಂದು ನಂಬಿರುವರು. ಹೀಗಾಗಿ ಸರ್ವಧರ್ಮಗಳ ದೇವರುಗಳ, ಇಲ್ಲವೇ ಒಬ್ಬ ದೇವನಿಗೆ ಸಂಬಂಧಿಸಿದ ದೇವರುಗಳನ್ನು ಒಟ್ಟಿಗೆ ಕೂಡಿಸಿ ಪೂಜಿಸುವುದುಂಟು. ಅಂತವುಗಳನ್ನು ತ್ರೈಪುರುಷ ದೇವಾಲಯಗಳೆಂದು, ತ್ರೈಪುರುಷ ದೇವರೆಂದು ಕರೆಯುವರು. ಇವರಿಗಾಗಿ ಕಟ್ಟಿಸಿದ ಗುಡಿಗಳನ್ನು ತ್ರಿಕೂಟಾಚಲವೆಂದು, ತ್ರೈಪುರುಷ ದೇವಾಲಯವೆಂದು ಕರೆಯುವರು. ಉದಾಹರಣೆಗೆ ಕೇಶವ ದೇವನೆಂಬ ಬ್ರಾಹ್ಮಣನು ಮಂಕಣಿಯಲ್ಲಿ ಲಕ್ಷ್ಮೀನರಸಿಂಹ, ಹರಿಹರ, ಹರರ ತ್ರಿಕೂಟಾಚಲವೆಂಬ ದೇವಾಲಯವನ್ನು ಮಾಡಿಸಿದನೆಂದು ಕ್ರಿ.ಶ. ೧೨೦೬ ರ ಯಾದವ ಸಿಂಘಣನ ಶಾಸನ ಉಲ್ಲೇಖಿಸುತ್ತದೆ ಮತ್ತು ಅವನು ದೇವಾಲಯಕ್ಕೆ ಭೂಮಿದಾನವನ್ನು ಸಹ ನೀಡಿದ ಕುರಿತು ಹೇಳುವುದು.[೬೬] ಇಂತಹ ಉದ್ದೇಶವಿಟ್ಟುಕೊಂಡು ಕಟ್ಟಿಸಿದ ದೇವಾಲಯಗಳು ಬೇವೂರ ಗ್ರಾಮದಲ್ಲಿ ಮತ್ತು ಮಂಕಣಿ ಗ್ರಾಮದಲ್ಲಿ ಕಂಡುಬರುತ್ತವೆ.

೧. ಬೇವೂರ

ಬಾಗಲಕೋಟೆ ಪರಿಸರದಲ್ಲಿ ಬರುವ ಬೇವೂರ ಗ್ರಾಮವು ಬಾಗಲಕೋಟೆಯಿಂದ ಕೂಡಲಸಂಗಮಕ್ಕೆ ಹೋಗುವ ರಾಜ್ಯ ರಸ್ತೆಯ ಮೇಲ್ಗಡೆ ಬರುತ್ತದೆ. ಹಳ್ಳೂರದ ಪೂರ್ವಕ್ಕೆ ೫ ಕಿ.ಮೀ. ಅಂತರದಲ್ಲಿದೆ. ಸ್ಥಳೀಯವಾಗಿ ರಾಮೇಶ್ವರ, ಸಂಗಮೇಶ್ವರ ಹೆಸರಿನಲ್ಲಿ ಕರೆಯುವ ದೇವಾಲಯಗಳು ಮೂಲತಃ ತ್ರೈಪುರುಷ ದೇವಾಲಯಗಳು. ತೇದಿಯಿಲ್ಲದ ಚಾಲುಕ್ಯ ೧ನೇ ಸೋಮೇಶ್ವರನ ಶಾಸನವು ಅವನ ಸಾಮಂತ ನೊಳಂಬಾಧಿರಾಜನ ಕಾಲದಲ್ಲಿ ಬ್ರಾಹ್ಮಣನಾದ ಸುಭರಾಜನು ಕಿರಿಯ ಬೇಹೂರದಲ್ಲಿ ದೇವಾಲಯ ಕಟ್ಟಿಸಿದನೆಂದು ತಿಳಿಸುತ್ತದೆ.[೬೭]

ಅ. ಗ್ರಾಮ	:	ಬೇವೂರ
ದೇವಾಲಯ	:	ರಾಮೇಶ್ವರ
ಧರ್ಮ	:	ತ್ರಿನೀತಿ
ಸ್ಥಳ	:	ಗ್ರಾಮದ ಪಶ್ಚಿಮ ಭಾಗದ ಒಳಗಡೆ
ಅಭಿಮುಖ	:	ಪೂರ್ವ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ

ಕಾಲ : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ ಶೈಲಿ

ಪೋಷಕರು : ಸ್ಥಳೀಯರು ಅಥವಾ ಚಾಲುಕ್ಯರು

ದೇವಾಲಯ ಚರಿತ್ರೆ ಕಿರಿಯ ಬೇಹುರವೆಂದರೆ ಇಂದಿನ ಬೇವೂರ ಗ್ರಾಮದ ಪಶ್ಚಿಮ ಭಾಗವಾಗಿದ್ದು ಗ್ರಾಮದ ಒಳಭಾಗದಲ್ಲಿ ರಾಮೇಶ್ವರ ಹೆಸರಿನ ಈ ದೇವಾಲಯವನ್ನು ಪೂರ್ವಮುಖ ಮಾಡಿ ಕಟ್ಟಲಾಗಿದೆ. ೧೨ ನೇ ಶತಮಾನದ, ಕಲ್ಯಾಣ ಚಾಲುಕ್ಯ ಶೈಲಿಯ ವಿಶಿಷ್ಟ ಏಕಕೂಟ ತಲಛಂದದ ದೇವಾಲಯ ಇದಾಗಿದೆ.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ತಲವಿನ್ಯಾಸದಲ್ಲಿ ಆಯತಾಕಾರದ ಗರ್ಭಗೃಹ, ಅದೇ ರೀತಿಯ ಅರ್ಧಮಂಟಪ, ದೊಡ್ಡದಾದ ನವರಂಗಮಂಟಪ ಹೊಂದಿದ ಏಕಕೂಟ ಮಾದರಿಯ ದೇವಾಲಯ ಇದಾಗಿದೆ.

ಗರ್ಭಗೃಹ

ಗರ್ಭಗೃಹ ಆಯತಾಕಾರವಾಗಿದ್ದು ಮಧ್ಯದಲ್ಲಿ ನಂತರದ ಕಾಲದಲ್ಲಿ ಪ್ರತಿಷ್ಠೆ ಮಾಡಿದ ಶಿವಲಿಂಗವಿದೆ. ಆಯತಾಕಾರದ ಗರ್ಭಗೃಹಗಳು, ಬ್ರಹ್ಮ ವಿಷ್ಣು ಮಹೇಶ್ವರರ ಶಿಲ್ಪಗಳನ್ನು ಒಂದೇ ಉದ್ದವಾದ ಪಾಣಿಪೀಠದ ಮೇಲೆ ಪ್ರತಿಷ್ಠೆ ಮಾಡುವ ಸಲುವಾಗಿ ಗರ್ಭಗೃಹವನ್ನು ಈ ರೀತಿಯಾಗಿ ಕಟ್ಟಲಾಗಿದೆ. ಉದಾಹರಣೆಗೆ ಬೇಲೂರ (ಬಾದಾಮಿ. ತಾ.) ದ ವೀರನಾರಾಯಣ ದೇವಾಲಯದಲ್ಲಿ ತ್ರಿಮೂರ್ತಿಗಳನ್ನು ಒಂದೇ ಪಾಣಿಯ ಪೀಠದ ಮೇಲೆ ಪ್ರತಿಷ್ಠಾಪಿಸಿದ್ದು ಗರ್ಭಗೃಹ ಆಯತಾಕಾರವಾಗಿದೆ. ಹೀಗಾಗಿ ಈ ರಾಮೇಶ್ವರ ದೇವಾಲಯದ ಗರ್ಭಗೃಹವು ಸಹ ತ್ರಿಮೂರ್ತಿ ತ್ರೈಪುರುಷರಿಗಾಗಿ ಕಟ್ಟಿದ್ದಾಗಿದೆಯೆಂದು ತಿಳಿಯಬಹುದು. ಗರ್ಭಗೃಹದ ದ್ವಾರದಲ್ಲಿ ಶೈವ ದ್ವಾರಪಾಲಕರು, ಚೌರಿಯರು, ಗಣ, ನದಿದೇವತೆ ಶಿಲ್ಪಗಳ ಕೆತ್ತನೆ ದ್ವಾರಶಾಖೆಯ ಮಧ್ಯ ಭಾಗದಲ್ಲಿ ಕೆತ್ತಲಾಗಿದೆ. ಪಂಚಶಾಖೆ ದ್ವಾರಪಟ್ಟಿಕೆ ಇದ್ದು, ಲತಾಪಟ್ಟಿಕೆ ಲಲಾಟದಲ್ಲಿ ಗಜಲಕ್ಷ್ಮಿಯನ್ನು ಬಿಡಿಸಲಾಗಿದೆ. ತೋರಣವು ಅರ್ಧಚಂದ್ರ ಆಕಾರದಲ್ಲಿದ್ದು, ಅದರಲ್ಲಿ ಬಳ್ಳಿಸಾಲು, ಎಲೆಗಳು ಕಂಡರಿಸಿದ್ದಾರೆ. ಅದಕ್ಕೆ ಪತ್ರ ತೋರಣವನ್ನು

ಗರ್ಭಗೃಹ ದ್ವಾರದಲ್ಲಿ ಕಾಣಬಹುದು. ದ್ವಾರಶಾಖೆಗಳು ಅಲಂಕೃತವಾಗಿದ್ದು, ಮೇಲಿನ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಇದರ ಮೇಲೆ ಛಾದ್ಯ ಮುಂದಕ್ಕೆ ಬಂದಿದೆ.

ಅರ್ಧಮಂಟಪ

ಮುಂದಿನ ಅರ್ಧಮಂಟಪವು ಸಹ ಆಯತಾಕಾರವಾಗಿದ್ದು ಅದರಲ್ಲಿ 'ಅಷ್ಟಸ್ರ'(ಕೋನ) ಮೇಲ್ಮುಖವಾಗಿರುವ(ದಂಡಾಗ್ರದ) ಘಂಟಾ ಮಾದರಿಯ ಶ್ರೀಕಾರ ಸ್ತಂಭಗಳಿವೆ. ಎರಡು ದೊಡ್ಡವು, ಎರಡು ಚಿಕ್ಕವು ಒಟ್ಟು ನಾಲ್ಕು ಸ್ತಂಭಗಳ ಮೇಲೆ ನೃತ್ಯ ನಟರಾಜನ ಮಕರ ತೋರಣ ಅಲಂಕಾರದ ಅಡ್ಡ ಚಾವಣಿಯಿದೆ.

ನವರಂಗಮಂಟಪ

ನವರಂಗಮಂಟಪ ದೊಡ್ಡದಾಗಿದ್ದು ೧೬ ದೊಡ್ಡ ಸ್ತಂಭಗಳಿವೆ. ಇವುಗಳಲ್ಲಿ ೧೬ ಸ್ತಂಭಗಳು ಚಿಕ್ಕವು ಹಾಗೂ ಮೇಲ್ಮುಖದ ಘಂಟಾ ಮಾದರಿ ಶ್ರೀಕಾರ ಸ್ತಂಭಗಳಾಗಿವೆ. ಮಧ್ಯದ ನಾಲ್ಕು ಸ್ತಂಭಗಳು ಪ್ರಮುಖವಾಗಿವೆ. ಇವುಗಳ ಮೇಲೆ ಇರುವ ಅಡ್ಡ ಛಾವಣಿಗಳ ಮುಖಗಳಲ್ಲಿ ಕೀರ್ತಿಮುಖ 'ತೋರಣ' ಅಲಂಕಾರ ಹಾಗೂ ನವರಂಗದ ಮಧ್ಯದ ವಿತಾನಮಂಟಪವಿದ್ದು, ಗರ್ಭಗೃಹದಲ್ಲಿರುವ ಮೂಲ ದೇವರಿಗೆ ಸಂಬಂಧಿಸಿದ ಶಿಲ್ಪಗಳಿವೆ. ಎಡ ಬಲಭಾಗಕ್ಕೆ ಗಜಗಳು ಸೊಂಡಿಯಿಂದ ಪದ್ಮವನ್ನು ಹಿಡಿದು ತಲೆಯ ಮೇಲೆ ಇಳಿಬಿಟ್ಟಂತೆ ಕಾಣುತ್ತದೆ. ಬಾಗಲಕೋಟ ಪರಿಸರದ ವಾಸ್ತು ದೇವಾಲಯಗಳಲ್ಲಿ ವಿಶೇಷವಾದ ಶಿಲ್ಪಕಲೆಯನ್ನು ಇಲ್ಲಿ ಕಂಡರಿಸಿದ್ದಾರೆ. ಮಧ್ಯದ ವಿತಾನದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಶಿಲ್ಪಗಳನ್ನು ಕೆತ್ತಲಾಗಿದೆ. ಕೆಳಗಡೆ ಸ್ತಂಭಗಳ ಮಧ್ಯ ಅಗ್ನಿಕುಂಡವಿರುವುದು. ನವರಂಗದ ಮಗ್ಗುಲಿನ ಎರಡು ಭಿತ್ತಿಗಳಲ್ಲಿ ಎರಡು ಜಾಲಕ(ಜಾಲಂಧ್ರ) ಕಿಂಡಿಗಳನ್ನು ಅಳವಡಿಸಲಾಗಿದೆ. ದ್ವಾರವು ಬಿದ್ದು ಜೀರ್ಣೋದ್ಧಾರಗೊಂಡಿರುವುದು.

ಪುಷ್ಕರಿಣಿ

ನವರಂಗದ ಮಧ್ಯದ ವಿತಾನಮಂಟಪದ ಕೆಳಗೆ ಚೌಕಾಕಾರದ ಚಿಕ್ಕ ಮೆಟ್ಟಿಲುಗಳಿರುವ ಚಿಕ್ಕ ಪುಷ್ಕರಿಣಿ ಇರುವುದು ಈ ಪರಿಸರದ ವಾಸ್ತುಶಿಲ್ಪದ ವಿಶೇಷ ಕಾಣುತ್ತದೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಅಧಿಷ್ಠಾನವು ನೆಲದಲ್ಲಿ ಹೂತಿರುವುದರಿಂದ ಸ್ವರೂಪ ತಿಳಿದುಬರುವುದಿಲ್ಲ.


ಭಿತ್ತಿ

ಹೊರಭಿತ್ತಿಯು ಯಾವುದೇ ಅಲಂಕಾರವಿರದೆ ಸಪಾಟಾಗಿದೆ(ಚೌಕಾಗಿ). ಇದರ ಹಿಂದಿನ ಭಿತ್ತಿ, ನವರಂಗದ ಭಿತ್ತಿ, ಮುಂದಿನ ಭಿತ್ತಿ ಮತ್ತು ಮೇಲ್ಚಾವಣಿಗಳು ಅಲ್ಪ ಸ್ವಲ್ಪ ಬಿದ್ದುಹೋಗಿವೆ.

ಪ್ರಸ್ತರ

ಭಿತ್ತಿಯ ಮೇಲಿನ ಪ್ರಸ್ತರವು ಉತ್ತರ, ವಾಜನ, ವಲ್ಲಭಿ, ಕಂಠ, ಕಂಪ, ಕಪೋತ ಹೊಂದಿದ್ದು ಕಪೋತವು ಛಾದ್ಯವಾಗಿ ಸ್ವಲ್ಪ ಮುಂದಕ್ಕೆ ಬಂದಿದೆ.

ಗರ್ಭಗೃಹದ ಮೇಲೆ ಯಾವುದೇ ವಿಮಾನ ಮಾದರಿ ಕಂಡುಬರುವುದಿಲ್ಲ. ದೇವಾಲಯ ಹೆಚ್ಚಾಗಿ ಶಿಥಿಲಾವಸ್ಥೆ ತಲುಪಿದೆ.



ತಲವಿನ್ಯಾಸ: ರಾಮೇಶ್ವರ ದೇವಾಲಯ ಬೇವೂರ

ಕೃಪೆ: ಡಾ. ಸುಭಾಸ ರಾ ಚಿಂಚೋಳಿ ಅವರ ಪ್ರಬಂಧದಿಂದ



ಆ. ಗ್ರಾಮ	:	ಬೇವೂರ
ದೇವಾಲಯ	:	ಸಂಗಮೇಶ್ವರ ತ್ರೈಪುರುಷ
ಧರ್ಮ	:	ತ್ರಿನೀತಿ
ಸ್ಥಳ	:	ರಾಮೇಶ್ವರ ದೇವಾಲಯದ ಹತ್ತಿರ
ಅಭಿಮುಖ	:	ದಕ್ಷಿಣ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	೧೨ನೇ ಶತಮಾನದ ಶೈಲಿ ಕಲ್ಯಾಣ ಚಾಲುಕ್ಯ ದ್ರಾವಿಡ
ಪೋಷಕರು	:	ಸ್ಥಳೀಯರು ಮತ್ತು ಆಳರಸರು

ದೇವಾಲಯ ಚರಿತ್ರೆ: ಸಂಗಮೇಶ್ವರ ಅಥವಾ ನಾರಾಯಣ ಹೆಸರಿನಿಂದ ಕರೆಯಲಾಗುವ ಈ ದೇವಾಲಯ ರಾಮೇಶ್ವರ ದೇವಾಲಯದ ಹತ್ತಿರ ಸ್ವಲ್ಪ ದೂರದಲ್ಲಿದೆ. ಇದನ್ನು ಕೆಂಪು ಮರಳು ಶಿಲೆಯಿಂದ ದಕ್ಷಿಣಕ್ಕೆ ಮುಖ ಮಾಡಿ ಕಟ್ಟಲಾಗಿದೆ. ತಲಛಂದದಲ್ಲಿ ತ್ರಿಕೂಟವಾಗಿದ್ದು ಯಾವುದೇ ಶಾಸನಾಧಾರವಿರುವುದಿಲ್ಲ. ಒಂದು ಗರ್ಭಗೃಹದ ಮೇಲೆ ವಿಮಾನ ಕಂಡು ಬರುತ್ತಿದ್ದು ದಾಕ್ಷಿಣಾತ್ಯ ಸಂಪ್ರದಾಯದ ದ್ರಾವಿಡ ಶೈಲಿಯಲ್ಲಿದೆ.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಈ ದೇವಾಲಯವು ತಲವಿನ್ಯಾಸದಲ್ಲಿ ತ್ರಿಕೂಟ ಮಾದರಿಯಲ್ಲಿದೆ. ಮೂರು ಗರ್ಭಗೃಹಗಳು, ಮೂರು ಅರ್ಧ ಮಂಟಪಗಳು, ನವರಂಗಮಂಟಪಕ್ಕೆ ಹತ್ತಿಕೊಂಡಿವೆ. ಹಾಗೂ ಮುಖ ಮಂಟಪಗಳಿರುವವು.

ಗರ್ಭಗೃಹಗಳು

ಪೂರ್ವಮುಖ ಗರ್ಭಗೃಹದಲ್ಲಿ ಯೋನಿಪಾಣಿಲಿಂಗ ಪ್ರತಿಷ್ಠೆ ಮಾಡಲಾಗಿದೆ. ಪಂಚಶಾಖೆ ಪಟ್ಟಿಕೆಯಿದೆ. ದ್ವಾರದಲ್ಲಿ ಪದ್ಯ ಭಾಗದಲ್ಲಿ ಶೈವ ದ್ವಾರಪಾಲರು, ಚೌರಿಯರು ಹಾಗೂ ಶಾಖೆಗಳು

ಅಲಂಕಾರದಿಂದ ಕೂಡಿರುವವು. ಪಶ್ಚಿಮಮುಖ ಗರ್ಭಗೃಹದಲ್ಲಿ ಸೂರ್ಯನ ಶಿಲ್ಪವಿದೆ. ಇದರ ದ್ವಾರ ಪಂಚಶಾಖೆ ಅಲಂಕಾರ ಹೊಂದಿದೆ. ದಕ್ಷಿಣಮುಖ ಗರ್ಭಗೃಹದಲ್ಲಿ ಕೇವಲ ಪೀಠ ಮಾತ್ರ ಕಂಡುಬರುತ್ತಿದ್ದು ಶಿಲ್ಪವು ಸ್ಥಳಾಂತರಗೊಂಡಿದೆ. ಇದರ ದ್ವಾರ ಪಂಚಶಾಖೆ ಹೊಂದಿದೆ. ಪದ್ಯದಲ್ಲಿ ವೈಷ್ಣವ ದ್ವಾರ ಪಾಲಕರ ಜೊತೆಗೆ ಶಾಖೆಗಳು ಅಲಂಕಾರ ಹೊಂದಿರುವುವು.

ಅರ್ಧಮಂಟಪಗಳು

ಗರ್ಭಗೃಹಗಳ ಮುಂದೆ ಅರ್ಧ ಮಂಟಪಗಳಿದ್ದು, ಅವುಗಳಲ್ಲಿ ಎರಡರಂತೆ ಊರ್ಧ್ವಮುಖದ ಶ್ರೀಕಾರ ಸ್ತಂಭಗಳನ್ನು ನಿಲ್ಲಿಸಲಾಗಿದೆ.

ನವರಂಗಮಂಟಪ

ನವರಂಗಮಂಟಪದಲ್ಲಿ ನಾಲ್ಕು ಮಿಶ್ರಕ ಸ್ತಂಭಗಳಿದ್ದು ಅವು ಪೀಠ, ಪಾದ, ದಂಡ, ದಂಡಾಗ್ರ ಭಾಗಗಳನ್ನು ಹೊಂದಿವೆ. ದಂಡಾಗ್ರದಲ್ಲಿ ಕಲಶ, ತಾಟಿಕಾ, ಘಟ(ಗೋಲಾಕಾರ) ಫಲಕ (ಚೌಕ) ಕಂಠ (ಬೋದಿಗೆ) ಸಾದಾ ಕೆತ್ತನೆಯ ಶಿರಭಾಗಗಳಿವೆ. ಒಳ ವಾತಾಯನ ಭಿತ್ತಿಗಳಲ್ಲಿ ಒಟ್ಟು ೫ ಜಾಲಕ ಕಿಂಡಿಗಳನ್ನು ಬಿಡಲಾಗಿದೆ. ನವರಂಗದಲ್ಲಿ ಮೂರು ಸಪ್ತಮಾತೃಕೆ ಶಿಲ್ಪಗಳ ಜೊತೆಗೆ ಇತರ ಶಿಲ್ಪಗಳನ್ನು ಇಡಲಾಗಿದೆ.

ನವರಂಗದ ದ್ವಾರದಲ್ಲಿ ಪಂಚಶಾಖೆ ಪಟ್ಟಿಕೆ ಇದೆ. ಇದರ ಎಡ ಮತ್ತು ಬಲಭಾಗದಲ್ಲಿ ನವಿಲುಗಳ ಹುಬ್ಬು ಶಿಲ್ಪಗಳಿವೆ. ಶಾಖೆಗಳು ಅಲಂಕಾರ ಹೊಂದಿದ್ದು, ಪೆದ್ಯದಲ್ಲಿ ಶೈವ, ವೈಷ್ಣವ, ದ್ವಾರಪಾಲಕರು, ಚೌರಿಯರು, ನದಿ ದೇವತೆಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು, ಮೇಲೆ ಛಾದ್ಯವಿದೆ. ಉತ್ತರಾಂಗದಲ್ಲಿ ಯಾವುದೇ ಅಲಂಕಾರವಿರುವುದಿಲ್ಲ.

ಮುಖಚತುಷ್ಕಿ

ನವರಂಗದ ದ್ವಾರಕ್ಕೆ ಎರಡು ಸ್ತಂಭದ ಮುಖಚತುಷ್ಕಿಯಿದೆ. ಇನ್ನೆರಡು ಭಿತ್ತಿ ಸ್ತಂಭಗಳಿದ್ದು, ಅದರ ಮೇಲ್ಭಾಗದಲ್ಲಿ ಎರಡು ನವಿಲು ಉಬ್ಬು ಶಿಲ್ಪ ಕಂಡರಿಸಿದ್ದಾರೆ. ಸ್ತಂಭಗಳ ಮಧ್ಯೆ ಆಸನಪಟ್ಟಗಳಿವೆ, ಸ್ತಂಭಗಳ ಮೇಲಿನ ಛಾದ್ಯವು ಬಹಳ (ಲುಪಾ) ಮುಂದಕ್ಕೆ ಬಂದಿದೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ (ಪೀಠ)

ದೇವಾಲಯದ ಕೆಳಭಾಗದಲ್ಲಿ ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟಕುಮುದ, ಕಂಪ, ಕಂಠ, ಕಪೋತ ಪಟ್ಟಿಕೆಗಳ ಅಧಿಷ್ಠಾನವಿರುವುದು.

ಭಿತ್ತಿ

ಭಿತ್ತಿಯು ಸಪ್ತರಥ ಮಾದರಿಯ ಕುಡ್ಯಸ್ತಂಭಗಳ, ಕೂಟ ಮಾದರಿ ಲಕ್ಷಣದ ಭದ್ರ, ಪ್ರತೀ, ಕರ್ಣ, ಪ್ರತಿಕರ್ಣದಿಂದ ಕೂಡಿದೆ. ಅಂದರೆ 'ಅಷ್ಟಸ್ರಕೋನ'ದಲ್ಲಿದೆ.

ಜಲಪ್ರಣಾಳಿ

ಗರ್ಭಗೃಹದಲ್ಲಿ ವಿಗ್ರಹಕ್ಕೆ ಅಭಿಷೇಕ ಮಾಡಿದ ನೀರು ಹೊರಗೆ ಹೋಗಲು ಅದರ ಭಿತ್ತಿಯಲ್ಲಿ ದಕ್ಷಿಣ ದಿಕ್ಕಿಗೆ ಒಂದು ರಂಧ್ರಯುಕ್ತ ಮಕರವಕ್ತ್ರ ಪ್ರಣಾಳವಿದೆ.


ಪ್ರಸ್ತರ

ಭಿತ್ತಿಯ ಮೇಲ್ಭಾಗದಲ್ಲಿ ಬರುವ ಪ್ರಸ್ತರವು ಉತ್ತರ, ವಾಜನ, ವಲ್ಲಭಿ, ಕಂಠ, ಕಪೋತ ಪಟ್ಟಿಕೆ ಹೊಂದಿದೆ. ಇದರ ಮೇಲೆ ವ್ಯಾಳಾವರಿ ಹಾರವಿದ್ದು ವೇದಿಕೆ, ಗಳ ಭಾಗಗಳಿವೆ.

ವಿಮಾನ

ಪೂರ್ವಮುಖ ಗರ್ಭಗೃಹದ ಮೇಲೆ ಮಾತ್ರ ವಿಮಾನ ಕಂಡುಬರುತ್ತಿದ್ದು, ಉಳಿದೆರಡರ ಮೇಲೆ ವಿಮಾನವಿಲ್ಲ. ಈ ವಿಮಾನ ಶುದ್ಧ ದಾಕ್ಷಿಣಾತ್ಯ ಸಂಪ್ರದಾಯದ ದ್ವಿತಲದ 'ಅಷ್ಟಸ್ರ'ದ ಶುದ್ಧ ದ್ರಾವಿಡಶೈಲಿಯದಾಗಿದೆ. ದ್ವಿತಲದಲ್ಲಿ ಕರ್ಣ, ಕೂಟ, ಶಾಲಕೂಟ ಅಲಂಕಾರದ ಪ್ರಸ್ತರ, ಗಳಭಿತ್ತಿ, ಪ್ರಸ್ತರ, ಗಳಭಿತ್ತಿ ಪ್ರಸ್ತರ, ಕಂಠ ಹಾಗೂ ವೇದಿಕೆ ಪಟ್ಟಿಕೆ ಮಾತ್ರ ವಿಮಾನ ನಿಂತಿದೆ. ಮೇಲೆ ಇದ್ದಿರಬಹುದಾದ ಅಷ್ಟಸ್ರ ಶಿಖರ ಹಾಗೂ ಸ್ತೂಪಿಗಳು ಬಿದ್ದು ಹೋಗಿವೆ.

ತಲವಿನ್ಯಾಸ: ಸಂಗಮೇಶ್ವರ ದೇವಾಲಯ ಬೇವೂರ



ಕೃಪೆ: ಡಾ. ಸುಭಾಸ ರಾ ಚಿಂಚೋಳಿ ಅವರ ಪ್ರಬಂಧದಿಂದ

ಮಂಕಣಿ

ಮಂಕಣಿ ಗ್ರಾಮ ಬಾಗಲಕೋಟೆ ಪರಿಸರದ ದೂರದ ಗ್ರಾಮವಾಗಿದ್ದು ಕೂಡಲ ಸಂಗಮದ ಪಶ್ಚಿಮಕ್ಕೆ ಕೃಷ್ಣಾನದಿಯ ಬಲದಂಡೆಯ ಮೇಲ್ಗಡೆ ಬರುತ್ತದೆ. ಗ್ರಾಮದಲ್ಲಿ ಯಾದವರ ಕಾಲದ ಒಂದು ಶಾಸನ, ಒಂದು ತ್ರಿಕೂಟ ತ್ರೈಪುರುಷ ದೇವಾಲಯ ಕಂಡುಬರುತ್ತವೆ. ಈಶ್ವರ ದೇವಾಲಯದ ಕುರಿತು ಹಿಂದೆಯೇ ನೋಡಲಾಗಿದೆ.

ಇ. ಗ್ರಾಮ	:	ಮಂಕಣಿ
ದೇವಾಲಯ	:	ಶಿವ ದೇವಾಲಯ (ತ್ರೈಪುರುಷ)
ಧರ್ಮ	:	ಶೈವ, ವೈಷ್ಣವ
ಸ್ಥಳ	:	ಗ್ರಾಮದ ಉತ್ತರ ಕೃಷ್ಣಾನದಿ ದಂಡೆ
ಅಭಿಮುಖ	:	ಪಶ್ಚಿಮ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ, ಅಗ್ನಿಶಿಲೆ
ಕಾಲ	:	ಕ್ರಿ.ಶ. ೧೨೦೬
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಕೇಶವದೇವ, ಯಾದವ ಸಿಂಘಣ

ದೇವಾಲಯ ಚರಿತ್ರೆ: ಈ ದೇವಾಲಯವನ್ನು ಮಂಕಣಿಯ ಈಶಾನ್ಯಕ್ಕೆ ಸ್ವಲ್ಪ ದೂರದ ಕೃಷ್ಣಾ ನದಿ ಬಲದಂಡೆಯ ಮೇಲೆ ಪಶ್ಚಿಮಮುಖವಾಗಿ ಕೆಂಪುಮರಳು ಶಿಲೆ ಮತ್ತು ಅಗ್ನಿಶಿಲೆ ಬಳಸಿ ಕಟ್ಟಲಾಗಿದೆ. ಕ್ರಿ.ಶ. ೧೨೦೬ ರ ಯಾದವ ಸಿಂಘಣನ ಶಾಸನ ಅವನ ಕಾಲದಲ್ಲಿ ಕೇಶವದೇವನೆಂಬ ಬ್ರಾಹ್ಮಣ ಲಕ್ಷ್ಮೀನರಸಿಂಹ, ಹರಿಹರ, ಹರರ ತ್ರಿಕೂಟಾಚಲವೆಂಬ ದೇವಾಲಯವನ್ನು ಕಟ್ಟಿಸಿ ಭೂಮಿದಾನ ನೀಡಿದನೆಂದಿದೆ. ಹಾಗೆಯೇ ಶಾಸನವು ಯಾದವ ಸಿಂಘಣ ದಕ್ಷಿಣ ದಂಡಯಾತ್ರೆಯ ವಿಜಯಾರ್ಥವಾಗಿ ಬಂದಾಗ ಕೃಷ್ಣಾನದಿಯ ಎಡಭಾಗದ ತರ್ದವಾಡಿ ನಾಡಿನ (೧೨೦೦) ಕೊಟ್ಟಿಂಬಾಗೆ ಎಂಬಲ್ಲಿ ತಂಗಿದ್ದ. ಆ ಸಮಯದಲ್ಲಿ ಕೇಶವ ದೇವ ಕಟ್ಟಿಸಿದ ದೇವಾಲಯಕ್ಕೆ ಭೂಮಿದಾನ ಮಾಡಿದನೆಂದು ಹೇಳುವುದು.[೮೮]

ಕೇಶವನಿಂದ ನಿರ್ಮಿಸಲ್ಪಟ್ಟ ದೇವಾಲಯವಿಂದು ಬಹುಭಾಗ ಬಿದ್ದು ಜೀರ್ಣೋದ್ಧಾರ ಗೊಂಡಿದೆ ಮತ್ತು ಅದನ್ನು ಇಂದು ಈಶ್ವರ ದೇವಾಲಯವೆಂದು ಪೂಜಿಸುವರು.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ತಲವಿನ್ಯಾಸದಲ್ಲಿ ಮೂರು ಗರ್ಭಗೃಹ, ಮೂರು ಅಂತರಾಳ, ನವರಂಗಮಂಟಪ, ಮುಖ ಚತುಷ್ಕಿಗಳಿವೆ.

ಗರ್ಭಗೃಹಗಳು

ಪಶ್ಚಿಮಮುಖ ಗರ್ಭಗೃಹವು ಮೂಲತಃ ಶಾಸನದ ಲಕ್ಷ್ಮೀನರಸಿಂಹನದಾಗಿದ್ದು, ಇಂದು ಯೋಗಿಪಾಣಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದ್ವಾರವು ಸರಳ ಅಲಂಕಾರ ಹೊಂದಿದ್ದು ಲಲಾಟದಲ್ಲಿ ಗರುಡನ ಶಿಲ್ಪ ಕೆತ್ತಲಾಗಿದೆ. ಇದರ ಮೇಲೆ ಮುಂದಕ್ಕೆ ಬಂದ ಛಾದ್ಯವಿದೆ. ಉತ್ತರಮುಖ ಗರ್ಭಗೃಹದಲ್ಲಿ ಶಿಲ್ಪ ಸ್ಥಳಾಂತರಗೊಂಡಿದ್ದು ಶಾಸನದ ಶ್ರೀಧರ ವಾಸುದೇವ ಅಥವಾ ಹರಿಹರ ಶಿಲ್ಪದ ಪ್ರತಿಷ್ಠೆ ಇದರಲ್ಲಿತ್ತು. ಇದರ ದ್ವಾರವು ಸರಳ ಅಲಂಕಾರದಲ್ಲಿದ್ದು, ಲಲಾಟದಲ್ಲಿ ಗರುಡನ ಶಿಲ್ಪ ಕೆತ್ತಲಾಗಿದೆ ಮತ್ತು ಮೇಲೆ ಮುಂದಕ್ಕೆ ಬಂದ ಛಾಧ್ಯವಿದೆ. ದಕ್ಷಿಣಮುಖ ಗರ್ಭಗೃಹ ಶಾಸನದ ಸಾದೇಶ್ವರ ಅಥವಾ ಹರನದಾಗಿದ್ದು (ಶಿವ) ಈ ಶಿಲ್ಪವು ಸ್ಥಳಾಂತರಗೊಂಡಿದೆ. ದ್ವಾರವು ಸರಳ ಅಲಂಕಾರ ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪ ಕೆತ್ತಲಾಗಿದೆ.

ಅರ್ಧಮಂಟಪಗಳು

ಮೂರು ಗರ್ಭಗೃಹಗಳ ಮುಂದೆ ಅರ್ಧಮಂಟಪಗಳು ಕಂಡುಬರುವುವು. ಇವುಗಳಲ್ಲಿ ಯಾವುದೇ ಅಲಂಕಾರಗಳಿಲ್ಲ.

ನವರಂಗಮಂಟಪ

ನವರಂಗಮಂಟಪದ ಮಧ್ಯೆ ನಾಲ್ಕು 'ಮಿಶ್ರಕ' ಮಾದರಿ ಸ್ತಂಭಗಳಿವೆ. ಇವು ಪೀಠ, ಪಾದ, ದಂಡ, ದಂಡಾಗ್ರ ಭಾಗಗಳನ್ನು ಹೊಂದಿವೆ. ಇವುಗಳ ಮೇಲಿನ ವಿತಾನದಲ್ಲಿ ಸಾದಾ ಮೂರು ಸಾಲಿನ ಪದ್ಮದ ಕಮಲ ಕೆತ್ತನೆಯಿದೆ. ನವರಂಗಮಂಟಪದ ದ್ವಾರದ ಹಿಂದೆ ಮತ್ತೊಂದು ಅರ್ಧಮಂಟಪವಿದೆ. ಇದರ ದ್ವಾರವು ಸರಳ ದ್ವಾರಶಾಖೆ ಹೊಂದಿದ್ದು,. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ ಕೆತ್ತನೆಯಿದೆ. ಮುಂದಕ್ಕೆ ಬಂದ ಛಾದ್ಯವಿದೆ.

ಮುಖಚತುಷ್ಕಿ

ನವರಂಗಮಂಟಪದಲ್ಲಿ ಎರಡು ಮಿಶ್ರಕ ಸ್ತಂಭಗಳಿದ್ದು ಕಾಲಾಂತರದಲ್ಲಿ ಬದಲಾಗಿವೆ. ಇವುಗಳ ಮೇಲಿನ ಛಾದ್ಯ ಸ್ವಲ್ಪ ಮುಂದೆ ಬಂದಿದ್ದು ನಾಸಿ ಕೂಡು ಕೆತ್ತನೆಗಳಿವೆ. ಇದರ ಮೇಲೆ ಗಳ ಹಾಗೂ ಕಪೋತ ಪಟ್ಟಿಕೆಯ ಪ್ರಸ್ತರವಿದೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ


ಈ ದೇವಾಲಯದ ಅಧಿಷ್ಠಾನ ೫ ಅಡಿಯಷ್ಟು ಎತ್ತರವಾಗಿದ್ದು ಉಪಾನ, ಜಗತಿ, ತ್ರಿಪಟ್ಟಕುಮುದ, ಕಂಪ, ಕಂಠ, ಕಪೋತ ಭಾಗಗಳಿದ್ದು ಸದ್ಯ ಜೀರ್ಣೋದ್ಧಾರಗೊಂಡಿದ್ದರಿಂದ ಅಲ್ಪ ಸ್ವಲ್ಪ ತನ್ನತನವನ್ನು ಕಳೆದುಕೊಂಡಿದೆ. ಮುಖಮಂಟಪದ ಅಧಿಷ್ಠಾನ ಉಪಾನ, ಜಗತಿ, ಗಳ, ಕಪೋತ ಪಟ್ಟಿಕೆ ಹೊಂದಿದ್ದು 'ಆಸನಪಟ್ಟ'(ಕಕ್ಷಾಸನ)ಗಳು ಬಿದ್ದು ಹೋಗಿವೆ.

ಭಿತ್ತಿ

ಮೂಲಭಿತ್ತಿಯು ಬಿದ್ದು ಹೋಗಿದ್ದು(ಹೊರಭಾಗ ಮಾತ್ರ) ಆ ನಂತರದಲ್ಲಿ ದೊಡ್ಡ ಬಂಡೆ ಬಳಸಿ ಮತ್ತೆ ಭಿತ್ತಿ ನಿರ್ಮಿಸಲಾಗಿದೆ. ಇದಕ್ಕೆ ಗಾರೆ ಗಚ್ಚು ಬಳಸಿದ್ದು ಬಹುಶಃ ೧೫-೧೬ನೇ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿರಬೇಕು.

ಪ್ರಸ್ತರ

ಭಿತ್ತಿಯು ಜೀರ್ಣೋದ್ಧಾರಗೊಂಡಿದ್ದರಿಂದ ಪ್ರಸ್ತರವು ಸಹ ಅಸ್ತಿತ್ವ ಕಳೆದುಕೊಂಡಿದೆ.



ತಲವಿನ್ಯಾಸ: ಈಶ್ವರ ದೇವಾಲಯ ಮಂಕಣಿ

ಕೃಪೆ: ಡಾ. ಸುಭಾಸ ರಾ. ಚಿಂಚೋಳಿ ಅವರ ಪ್ರಬಂಧದಿಂದ

೫.೭.೪. ಶಾಕ್ತ ದೇವಾಲಯಗಳು

ಪುರುಷ ಪ್ರಧಾನ ದೇವತೆಗಳ ದೇವಾಲಯಗಳು ಹೆಚ್ಚಾಗಿ ನಿರ್ಮಿಸಲ್ಪಟ್ಟರೆ, ಹೆಣ್ಣು ದೇವತೆಗಳ ದೇವಾಲಯಗಳ ನಿರ್ಮಾಣ ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆ. ಶಿಲ್ಪದಲ್ಲಿ ಸಮಾನ ಅವಕಾಶ ಪಡೆದಿದ್ದರೂ ದೇವಾಲಯ ನಿರ್ಮಾಣದಲ್ಲಿ ಅದೇಕೋ ಶಾಕ್ತ ದೇವಾಲಯಗಳು ಹಿಂದೆ ಬಿದ್ದಿವೆ. ಇಂತಹ ಒಂದೆರಡು ದೇವಾಲಯಗಳ ನಿರ್ಮಾಣ ಬಾಗಲಕೋಟೆ ಪರಿಸರದಲ್ಲಿ ಆಗಿರುವುದು ಅಧ್ಯಯನದ ಮಹತ್ವವೆಂದೇ ತಿಳಿಯಬೇಕಾಗಿದೆ.

ಅ. ಬೇವೂರ

ಬೇವೂರ ಗ್ರಾಮ ದೇವಾಲಯಗಳಲ್ಲಿ ಹೆಚ್ಚಾಗಿ ಶಿವನ ಗುಡಿಗೆ ಮಹತ್ವ ಕೊಡದೆ ತ್ರೈಪುರುಷ ಹಾಗೂ ಶಾಕ್ತ ದೇವಾಲಯ ದೇವರಿಗೆ ಹೆಚ್ಚಿನ ಮಹತ್ವ ಕೊಟ್ಟಂತೆ ತೋರುತ್ತದೆ. ಇಲ್ಲಿ ಎರಡು ತ್ರೈಪುರುಷ ದೇವಾಲಯಗಳು ಕಂಡುಬಂದರೆ, ಒಂದು ಶಾಕ್ತ ದೇವಾಲಯವಾಗಿದೆ.

ಗ್ರಾಮ	:	ಬೇವೂರ
ದೇವಾಲಯ	:	ಕಾಳಿಕಾದೇವಿ (ಸರಸ್ವತಿ)
ಧರ್ಮ	:	ಶಾಕ್ತ
ಸ್ಥಳ	:	ಸಂಗಮೇಶ್ವರ ದೇವಾಲಯದ ಹತ್ತಿರ
ಅಭಿಮುಖ	:	ಉತ್ತರ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	೧೧-೧೨ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಸ್ಥಳೀಯ ಇಲ್ಲವೇ ಆಳರಸರು.

ದೇವಾಲಯ ಚರಿತ್ರೆ: ಈ ದೇವಾಲಯ ಗ್ರಾಮದ ಸಂಗಮೇಶ್ವರ ಹೆಸರಿನ ದೇವಾಲಯ ಹತ್ತಿರ ಸುಮಾರು ೨೦. ಮೀಟರ್ ದೂರದಲ್ಲಿದ್ದು ಉತ್ತರಮುಖ ಮಾಡಿ ಕಟ್ಟಲ್ಪಟ್ಟಿದೆ. ಸ್ಥಳೀಯವಾಗಿ ಇಂದು

ಕಾಳಿಕಾದೇವಿಯೆಂದು ಕರೆದರೂ ಮೂಲತಃ ಇದೊಂದು ಸರಸ್ವತಿ ದೇವಾಲಯವಾಗಿದೆ. ತದನಂತರದಲ್ಲಿ ಕಾಳಿ ಶಿಲ್ಪವನ್ನು ಪ್ರತಿಷ್ಠೆ ಮಾಡಲಾಗಿದೆ. ಗರ್ಭಗೃಹದ ಸರಸ್ವತಿ ಶಿಲ್ಪ (ಮೂಲ) ಭಗ್ನಗೊಂಡಿದ್ದು ನವರಂಗಮಂಟಪದಲ್ಲಿ ಇಡಲಾಗಿದೆ. ಹೆಚ್ಚಾಗಿ ಸರಸ್ವತಿ ದೇವಾಲಯಗಳು ಉತ್ತರಮುಖ ಮಾಡಿರುತ್ತವೆ. ಉದಾಹರಣೆಗೆ ಅಲ್ಲಲೂರು, ಗದಗ, ಹೆಬ್ಬಾಳ ಇತ್ಯಾದಿ.

ದೇವಾಲಯ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಇದೊಂದು ಏಕಕೂಟ ತಲವಿನ್ಯಾಸದ ದೇವಾಲಯವಾಗಿದ್ದು, ಗರ್ಭಗೃಹ, ನವರಂಗ ಮಂಟಪ ಮತ್ತು ಆಯತಾಕಾರದ ಮುಖಚತುಷ್ಕಿಗಳಿವೆ.

ಗರ್ಭಗೃಹ

ಗರ್ಭಗೃಹದಲ್ಲಿ ನಂತರದ ಕಾಲದ ಕಾಳಿಯ ಶಿಲ್ಪವನ್ನು ಪ್ರತಿಷ್ಠೆ ಮಾಡಲಾಗಿದೆ. ಮೂಲ ಸರಸ್ವತಿ ಶಿಲ್ಪವನ್ನು ನವರಂಗದಲ್ಲಿ ಇಡಲಾಗಿದೆ. ದ್ವಾರವು ಪಂಚಶಾಖೆ ಅಲಂಕಾರ ಹೊಂದಿದೆ. ಕೆಳಗಿನ ಪೆದ್ಯದಲ್ಲಿ ಕುಂಭ ಹಿಡಿದ ಚೌರಿಶಿಲ್ಪ(ನದಿ ದೇವತೆ)ಗಳ ಕೆತ್ತನೆಯಿದೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ ಕೆತ್ತಲಾಗಿದೆ.

ನವರಂಗಮಂಟಪ

ಈ ಮಂಟಪದಲ್ಲಿ 'ನಾಲ್ಕು ಮಿಶ್ರಕ' ಮಾದರಿ ಸ್ತಂಭಗಳಿವೆ. ಅವು ಪೀಠ, ಪಾದ, ದಂಡ, ದಂಡಾಗ್ರ ಭಾಗಗಳನ್ನು ಹೊಂದಿರುವುವು. ಇದರ ದ್ವಾರದಲ್ಲಿ ಆಲಂಕಾರಿಕ ಶಾಖೆಗಳ ಜೊತೆಗೆ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ, ಮುಂದಕ್ಕೆ ಬಂದ ಛಾದ್ಯಗಳಿವೆ. ಶಾಖೆಗಳ ಕೆಳಗಿನ ಪೆದ್ಯ ಭಾಗದಲ್ಲಿ ಶೈವದ್ವಾರಪಾಲಕರ ಜೊತೆಗೆ ನದಿದೇವತೆಗಳ ಶಿಲ್ಪಗಳು ಕಂಡುಬರುತ್ತವೆ.

ಮುಖಮಂಟಪ

ಮುಖಮಂಟಪವು ಆಯತಾಕಾರವಾಗಿದ್ದು ಮಧ್ಯೆ ನಾಲ್ಕು ಸ್ತಂಭಗಳಿವೆ. ಸ್ತಂಭಗಳ ಮೇಲಿನ ಛಾದ್ಯವು ಲೂಪಾ ರೀತಿಯಲ್ಲಿ ಮುಂದಕ್ಕೆ ಇಳಿಬಿದ್ದಿದೆ. ಇದರ ಮೇಲೆ ಪ್ರಸ್ತರವಿದ್ದು ಅದರಲ್ಲಿ ವ್ಯಾಳವಾರಿ ಪಟ್ಟಿಕೆ ಉಳಿದುಕೊಂಡಿದೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ


ಅಧಿಷ್ಠಾನ ಭಾಗವು ನೆಲದಲ್ಲಿ ಹೂತುಹೋಗಿದ್ದರಿಂದ ಅದರ ಸ್ವರೂಪ ಗೊತ್ತಾಗುವುದಿಲ್ಲ.

ಭಿತ್ತಿ

ಭಿತ್ತಿಯು ಚೌಕಾಗಿದ್ದು ಸರಳವಾಗಿದೆ. ಅಲಂಕಾರ ಕಂಡುಬರುವುದಿಲ್ಲ.

ಪ್ರಸ್ತರ

ಪ್ರಸ್ತರವು ಬಿದ್ದು ಹೋಗಿದ್ದು ನಂತರದಲ್ಲಿ ಕುಂಬೆ ಕಟ್ಟಲಾಗಿದೆ.



ತಲವಿನ್ಯಾಸ: ಕಾಳಿಕಾದೇವಿ ದೇವಾಲಯ ಬೇವೂರ

ಕೃಪೆ: ಡಾ. ಸುಭಾಸ ರಾ. ಚಿಂಚೋಳಿ ಅವರ ಪ್ರಬಂಧದಿಂದ



ಆ. ಗ್ರಾಮ	:	ಶಿರೂರ
ದೇವಾಲಯ	:	ಚಂಡಿಕಾ
ಧರ್ಮ	:	ಶಾಕ್ತ
ಸ್ಥಳ	:	ಸಿದ್ಧೇಶ್ವರ ದೇವಾಲಯ ಸಂಕೀರ್ಣ
ಅಭಿಮುಖ	:	ಉತ್ತರ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	ಕ್ರಿ.ಶ. ೧೦೪೯
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಮಾರಸಿಂಘ ಪ್ರಭು

ದೇವಾಲಯ ಚರಿತ್ರೆ: ಚಂಡಿಕಾ ದೇವಾಲಯವು ಶಿರೂರ ಗ್ರಾಮದ ಶ್ರೀ ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿ ದಕ್ಷಿಣ ಪ್ರಾಕಾರದ ಗೋಡೆಗೆ ಹತ್ತಿಕೊಂಡು ನಿರ್ಮಾಣವಾಗಿದೆ. ಕ್ರಿ.ಶ. ೧೦೪೯ ರ ಶಾಸನ ಉಳಿದ ಪರಿವಾರ ದೇವರುಗಳ ಜೊತೆಗೆ ಈ ಚಂಡಿಕಾ ದೇವಾಲಯವನ್ನು ಹೆಸರಿಸುತ್ತಾ ಅದನ್ನು ಮಾರಸಿಂಘ ಪ್ರಭು ಕಟ್ಟಿಸಿದನೆಂದು ಹೇಳುತ್ತದೆ.[೪೯]

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಏಕಕೂಟ ತಲವಿನ್ಯಾಸದ ವಿನ್ಯಾಸದಲ್ಲಿದ್ದು ಗರ್ಭಗೃಹ, ಆಯತಾಕಾರದ ಮುಖಚತುಷ್ಕಿ ಹೊಂದಿದೆ.

ಗರ್ಭಗೃಹ

ಗರ್ಭಗೃಹವು ಅಯತಾಕಾರವಾಗಿದ್ದು ದೊಡ್ಡದಾಗಿದೆ. ಮಧ್ಯೆ ನಾಲ್ಕು ಮಿಶ್ರಕ ಸ್ತಂಭ

ಹೊಂದಿದೆ. ಮೂಲಶಾಸನದ ಚಂಡಿಕಾ ಶಿಲ್ಪ ಇಂದು ಕಂಡುಬರುವುದಿಲ್ಲ ಮತ್ತು ಇಂದು ಅದರಲ್ಲಿ ಯಾವುದೇ ಶಿಲ್ಪವನ್ನು ಪ್ರತಿಷ್ಠೆ ಮಾಡಲಾಗಿಲ್ಲ. ಇದರ ದ್ವಾರ ಸರಳವಾಗಿದೆ.

ಮುಖಚತುಷ್ಕಿ

ಮುಖಚಟುಷ್ಕಿಯು ಸಹ ಆಯತಾಕಾರವಾಗಿದ್ದು ಮಧ್ಯೆ ಎರಡು ಸ್ತಂಭಗಳಿವೆ. ಇವುಗಳ ಮೇಲೆ ಛಾದ್ಯವಿದ್ದು ಛಾದ್ಯದ ಲುಪಾಗಳು ಭಗ್ನಗೊಂಡಿವೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಅಧಿಷ್ಠಾನದಲ್ಲಿ ಕೇವಲ ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟಕುಮುದ, ಕಪೋತ ಪಟ್ಟಿಕೆಗಳಿವೆ.

ಭಿತ್ತಿ

ಭಿತ್ತಿಯು ಯಾವುದೇ ಅಲಂಕಾರ ಹೊಂದದೆ ಸರಳವಾಗಿ ಚೌಕಾಕಾರವಾಗಿದೆ.

ಪ್ರಸ್ತರ

ಪ್ರಸ್ತರವು ಕಪೋತ ಪಟ್ಟಿಕೆ, ಕಂಠ ವೇದಿಕೆ ಮತ್ತು ವ್ಯಾಳವಾರಿ ಹಾರ ಪಟ್ಟಿಕೆ ಹೊಂದಿದೆ.

ಮೇಲಿನ ಪ್ರಾಚೀನ ಎರಡು ಶಾಕ್ತ ದೇವಾಲಯಗಳನ್ನು ಹೊರತುಪಡಿಸಿದರೆ, ಮತ್ತಾವ ದೇವಾಲಯಗಳು ಕಂಡುಬರುವುದಿಲ್ಲ. ಇವನ್ನು ಹೊರತುಪಡಿಸಿದರೆ ಮಧ್ಯಕಾಲದಲ್ಲಿ ಒಂದೆರಡು ಶಾಕ್ತ ದೇವಾಲಯಗಳು ಕಂಡುಬರುತ್ತವೆ. ಇಂತಹ ದೇವಾಲಯಗಳಲ್ಲಿ ವೀರಾಪುರದ ಪಿರಂಗಿ ಎಲ್ಲಮ್ಮ ದೇವಾಲಯ, ಸೀತಿಮನಿಯ ಸೀತಾದೇವಿಯ ದೇವಾಲಯಗಳು ಪ್ರಮುಖವಾಗಿವೆ. ಈ ದೇವಾಲಯಗಳನ್ನು ಗಾರೆ, ಗಚ್ಚು, ಕಲ್ಲು, ಇಟ್ಟಂಗಿ ಬಳಸಿ ಕಟ್ಟಲಾಗಿದೆ. ಇವೆರಡು ಮುಖ್ಯವಾಗಿ ವಿಜಯನಗರದ ಕೊನೆಗಾಲ ಮತ್ತು ವಿಜಯಪುರದ ಆದಿಲ್‌ಶಾಹಿ ಸುಲ್ತಾನರ ಕಾಲದಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಕಟ್ಟಲ್ಪಟ್ಟಿವೆ.

೫.೭.೫. ಜೈನಧರ್ಮದ ಬಸದಿಗಳು

ಹಿಂದೂಧರ್ಮದ ಕವಲುಧರ್ಮವಾದ ಜೈನಧರ್ಮ ಶೈವ, ವೈಷ್ಣವ, ಶಾಕ್ತ, ಬೌದ್ಧ, ಧರ್ಮಗಳಷ್ಟೇ ಸಮಾನ ಅವಕಾಶ ಪಡೆದು ಕ್ರಿ.ಪೂರ್ವದಿಂದಲೇ ದಕ್ಷಿಣ ಭಾರತದಲ್ಲಿ ಪಸರಿಸಿ ಬೆಳೆದುಬಂದಿದೆ. ಕರ್ನಾಟಕ ರಾಜಕೀಯದಲ್ಲಿ ಸಾಮ್ರಾಜ್ಯವಾಳಿದ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಯಾದವ ಮತ್ತು ಅವರ ಅವಧಿಯ ಗಂಗರು, ಸಾಮಂತ ಮಂಡಳೇಶ್ವರರು ಜೈನಧರ್ಮವನ್ನು ಪೋಷಿಸಿ ಬೆಳೆಸಿಕೊಂಡು ಬಂದಿದ್ದಾರೆ. ಆದಾಗ್ಯೂ ಕೆಲವು ಪ್ರದೇಶ ಹೊರತುಪಡಿಸಿದರೆ ಹೆಚ್ಚು ಹೆಚ್ಚು ಜಿನ ಬಸದಿಗಳು ನಿರ್ಮಾಣಗೊಂಡಿವೆ. ಇದಕ್ಕೆ ಬಾಗಲಕೋಟೆ ಪರಿಸರವು ಹೊರತಾಗಿರದೆ ಒಂದು ಪ್ರಾಚೀನ ದೇವಾಲಯ, ಬಿಲ್‌ಕೆರೂರ, ಶಿರೂರ, ಬಾಗಲಕೋಟೆಗಳಲ್ಲಿ ಜಿನರ ಶಿಲ್ಪಗಳು ಕಂಡುಬರುತ್ತಿರುವುದನ್ನು ಗಮನಿಸಿದಾಗ ಜೈನಧರ್ಮ ಇಲ್ಲಿ ಅಸ್ತಿತ್ವ ಉಳಿಸಿಕೊಂಡಿರುವುದು ಗೊತ್ತಾಗುತ್ತದೆ.

ಗ್ರಾಮ	:	ಹಳ್ಳೂರ
ದೇವಾಲಯ	:	ಮೇಲ್ಗುಡಿ (ಜೈನ)
ಧರ್ಮ	:	ಜೈನ
ಸ್ಥಳ	:	ಗ್ರಾಮದ ಉತ್ತರದ ದಿಬ್ಬದ ಮೇಲೆ
ಅಭಿಮುಖ	:	ದಕ್ಷಿಣ
ಮಾಧ್ಯಮ	:	ದಖ್ಖನ್ ಕೆಂಪುಮರಳು ಶಿಲೆ
ಕಾಲ	:	ಕ್ರಿ.ಶ. ೮೮೦ನೇ ಅಮೋಘವರ್ಷ
ಶೈಲಿ	:	ಬಾದಾಮಿ ಚಾಲುಕ್ಯ
ಪೋಷಕರು	:	ಸ್ಥಳೀಯ ಅಥವಾ ರಾಷ್ಟ್ರಕೂಟ ಅರಸರು.

ದೇವಾಲಯದ ಚರಿತ್ರೆ: ಉಳಿದ ಧರ್ಮದ ದೇವಾಲಯಗಳಂತೆ ಜೈನಧರ್ಮವು ಬಾಗಲಕೋಟೆ ಪ್ರದೇಶದಲ್ಲಿ ಅಸ್ತಿತ್ವ ಪಡೆದಿತ್ತೆಂಬುದಕ್ಕೆ ಹಳ್ಳೂರಿನ ಈ ಮೇಲ್ಗುಡಿ ಬಸದಿ ನಿದರ್ಶನವಾಗಿದೆ. ಗ್ರಾಮದ ಉತ್ತರದ ದಿಬ್ಬದ ಮೇಲೆ ಕಟ್ಟಿದ್ದರಿಂದ ಮೇಲುಗುಡಿ ಎಂದು ಸ್ಥಳೀಯವಾಗಿ ಕರೆಯಲಾಗಿದೆ. ಕೆಂಪುಮರಳು ಶಿಲೆಯಲ್ಲಿ ದಕ್ಷಿಣಮುಖ ಮಾಡಿ ಕಟ್ಟಲಾಗಿದೆ. ತಲಛಂದದಲ್ಲಿ ಏಕಕೂಟವಾಗಿದ್ದು ಬಾದಾಮಿ ಚಾಲುಕ್ಯ ಲಕ್ಷಣಗಳು ಸಂಪೂರ್ಣವಿದ್ದರೂ ಒಂದೆರಡು ರಾಷ್ಟ್ರಕೂಟ ಕಾಲದ ಲಕ್ಷಣಗಳು

ಕಂಡುಬರುವುದರಿಂದ ಇದೊಂದು ರಾಷ್ಟ್ರಕೂಟ ಕಾಲದ ಜಿನಬಸದಿಯೆಂದು ಹೇಳಲು ಯಾವ ಅಡ್ಡಿ ಅತಂಕವಿಲ್ಲ. ಬಸದಿಯ ಒಳಗಿನ ಮಂಟಪದ ಒಂದು ಕಂಭದ ಮೇಲೆ ೯ನೇ ಶತಮಾನದ ಶಾಸನ ಬರವಣಿಗೆ 'ತ್ರೈಮುಷ್ಠಿದೇವ'ನೆಂದು ಹೆಸರಿಸುತ್ತದೆ.[೫೦] ಇದೇ ಗುಡಿಯಲ್ಲಿರುವ ನಿಚ್ಚಣಿಕೆಯ ಗೋಡೆಯ ಮೇಲೆ ಮತ್ತೊಂದು ಶಾಸನ ಬರೆಯಲ್ಪಟ್ಟಿದೆ. ಇದರ ಕಾಲ ಸು. ೧೦ನೇ ಶತಮಾನ.[೫೧] ಇದರಲ್ಲಿ ಒಬ್ಬ ವ್ಯಕ್ತಿಯ ಗುಣಗಾನವಿದೆ. ಇವನ್ನು ಬಿಟ್ಟರೆ ಮತ್ತಾವ ದಾಖಲೆಗಳು ದೊರಕುವುದಿಲ್ಲ.

ಮೇಲ್ಗುಡಿ ಬಸದಿಯ ಕುರಿತು ಸಾಕಷ್ಟು ವಿದ್ವಾಂಸರು ತಮ್ಮ ಬರವಣಿಗೆಯಲ್ಲಿ ಬರೆದಿದ್ದು, ಅವರ ಬರವಣಿಗೆಗಳು ತೃಪ್ತಿ ನೀಡುವುದಿಲ್ಲ. ಸಿಂದಗಿ ರಾಜಶೇಖರ ಅವರು ಮಾತ್ರ ಮೇಲ್ಗುಡಿಯ ಬಗ್ಗೆ ಹೆಚ್ಚಿಗೆ ಮತ್ತು ನಿಖರತೆಯಿಂದ ಬರೆದಿದ್ದಾರೆ.[೫೨] ಆದರೂ ವಿವರಣೆ ಸಂಪೂರ್ಣವಾಗಿಲ್ಲ.

ದೇವಾಲಯದ ಲಕ್ಷಣಗಳು

೧. ತಿರ್ಯಙ್ಮುಖ ರಚನೆಗಳು

ತಲವಿನ್ಯಾಸ

ಸಾಂಧಾರ ಪ್ರಕಾರಕ್ಕೆ ಸೇರಿದ ತಲವಿನ್ಯಾಸದ ಇದಾಗಿದ್ದು, ಗರ್ಭಗೃಹ, ಪ್ರದಕ್ಷಿಣಪಥ, ಆಯಾತಾಕಾರದ ಅಂತರಾಳ, ನವರಂಗಮಂಟಪ ಹೊಂದಿದೆ.

ಗರ್ಭಗೃಹಗಳು

ಎರಡು ಗರ್ಭಗೃಹಗಳಿದ್ದು, ಒಂದು ಕೆಳಗಿದ್ದರೆ, ಮತ್ತೊಂದು ಅದರ ಮೇಲೆ ಇರುವುದು. ಕೆಳಗಿನ ಗರ್ಭಗೃಹದಲ್ಲಿ ಸದ್ಯ ಸ್ಥಳೀಯರು ಒಂದು ಶಿವಲಿಂಗವಿಟ್ಟು ಪೂಜಿಸುತ್ತಿರುವರು. ಮೂಲ ಗರ್ಭಗೃಹದ ಜಿನಶಿಲ್ಪ ಸ್ಥಳಾಂತರಗೊಂಡಿದ್ದು, ನವರಂಗ ಮಂಟಪದಲ್ಲಿರುವ ಭಗ್ನಗೊಂಡ ಮಹಾವೀರನ ಶಿಲ್ಪವೇ ಮೂಲ ಗರ್ಭಗೃಹದ ಶಿಲ್ಪವಾಗಿರುವುದಾದರೆ, ಇದೊಂದು ಮಹಾವೀರ ಜಿನಬಸದಿಯೆಂದು ಹೇಳಬಹುದು. ಗರ್ಭಗೃಹದ ಈ ಶಿಲ್ಪ ನಾಲ್ಕು ಅಡಿ ಎತ್ತರವಾಗಿದ್ದು ಧ್ಯಾನಭಂಗಿಯಲ್ಲಿ ಸಿಂಹ ಪೀಠದ ಮೇಲೆ ಕುಳಿತಂತೆ ಕಂಡರಿಸಲಾಗಿದೆ. ತಲೆಯ ಮೇಲೆ ಮೂರು ಕೊಡೆಗಳನ್ನು ಚಿತ್ರಿಸಲಾಗಿದೆ. ಗರ್ಭಗೃಹದ ದ್ವಾರ ೫ ಶಾಖೆ ಹೊಂದಿದ್ದರೂ ಕೆತ್ತನೆಯಿಂದ ಸರಳವಾಗಿವೆ. ಲಲಾಟದ ಮೇಲೆ ಛಾದ್ಯವಿದ್ದು ಅದರ ವಲ್ಲಭಿಯಲ್ಲಿ ಹಂಸಪಕ್ಷಿಗಳ ಕೆತ್ತನೆಯಿದೆ. ಇದು ರಾಷ್ಟ್ರಕೂಟರ ಕಾಲದ ಒಂದು ವಾಸ್ತು ಲಕ್ಷಣ. ಮೇಲಿನ ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ. ಇದ್ದಿರಬಹುದಾದ ಶಿಖರ ಬಿದ್ದಿದೆ

ಈಗ ಚೌಕಾದ ಗರ್ಭಗೃಹ ಮಾತ್ರ ಉಳಿದುಕೊಂಡಿದೆ.

ಕೆಳಗಿನ ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿದ್ದು ಅದಕ್ಕೆ ಬೆಳಕು ಬರಲು ಅಂತರಾಳದಲ್ಲಿ ಪೂರ್ವ, ಪಶ್ಚಿಮ ಭಿತ್ತಿಯಲ್ಲಿ ಆಯತಾಕಾರದ (ಲಂಬ) ಜಾಲಂಧ್ರ ಕಿಂಡಿಗಳನ್ನು ಬಿಡಲಾಗಿದೆ.

ಅಂತರಾಳ

ಪ್ರದಕ್ಷಿಣೆಯ ಜೊತೆಗೆ ಎರಡು ಸ್ತಂಭಗಳ ಆಯತಾಕಾರದ ದ್ವಾರ ಹೊಂದಿದ ಅಂತರಾಳವಿದೆ. ಈ ದ್ವಾರದ ಅರೆಗಂಭಗಳ ಮೇಲೆ ದ್ವಾರಪಾಲಕರ ಶಿಲ್ಪ ಕೆತ್ತಲಾಗಿದೆ. ದ್ವಾರವು ಸರಳ ಕೆತ್ತನೆಯಲ್ಲಿರುವುದು.

ನವರಂಗಮಂಟಪ

ನವರಂಗಮಂಟಪದಲ್ಲಿ ೧೭ ದಪ್ಪವಿರುವ ಸ್ತಂಭಗಳಿದ್ದು ಮಧ್ಯ ಪಟ್ಟಿಕೆಯ ಮೇಲೆ ಗೋಲಾಕಾರ(ಚಂದ್ರಾಕಾರ)ದ ಫಲಕದ ಕೆತ್ತನೆ ಮಾಡಲಾಗಿದೆ. ಇವುಗಳ ಮೇಲೆ ನಾಲ್ಕು ಮುಖ, ದ್ವಿಮುಖ ತರಂಗ ಶಿರಭಾಗಗಳಿವೆ(ಬೋದಿಗೆ) ನವರಂಗದ ಈಶಾನ್ಯ ಮೂಲೆಯಲ್ಲಿ ಒಂದು ದ್ವಾರವಿರುವ ಚಿಕ್ಕ ಕೋಣೆ ಮಾಡಿ ಅದರ ಬಸದಿಯ ಮೇಲಿರುವ ಗರ್ಭಗೃಹಕ್ಕೆ ಹೋಗಲು ಲಾಡಖಾನ್ ಗುಡಿಯಲ್ಲಿರುವ ಕಲ್ಲಿನ ನಿಚ್ಚಣಿಕೆ(ಸೋಪಾನ)ಯನ್ನು ಇಡಲಾಗಿದೆ. ಅಂತರಾಳದ ಮುಂದಿನ ಭಾಗ ಮಹಾಮಂಟಪವಿದ್ದು, ತಲದಲ್ಲಿ ಉತ್ಸವ, ನೃತ್ಯಗಳಿಗೆ ವೃತ್ತಾಕಾರದ ಶಿಲಾವೇದಿಕೆ ಇರುವುದು ನವರಂಗದ ಭಿತ್ತಿಯಲ್ಲಿ ಆರು ಜಾಲಂಧ್ರಗಳಿವೆ. ಇವು ಸರಳ ಶೈಲಿಯಲ್ಲಿವೆ. ನವರಂಗದ ದ್ವಾರವು ಸರಳ ಪಂಚಶಾಖೆ ಅಲಂಕಾರ ಹೊಂದಿದೆ.

೨. ಊರ್ಧ್ವಮುಖ ರಚನೆಗಳು

ಅಧಿಷ್ಠಾನ

ಅಧಿಷ್ಠಾನವು ಸುಮಾರು ೬ ಅಡಿಯಷ್ಟು ಎತ್ತರವಾಗಿದೆ. ಇದರಲ್ಲಿ ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟಕುಮುದ, ಕಂಠ ವೇದಿಕೆ ಪಟ್ಟಿಕೆಗಳಿದ್ದು, ಇದರ ಮೇಲೆ ವ್ಯಾಳಾವರಿ ಪಟ್ಟಿಕೆ ಕಂಡುಬರುವುದು.

ಭಿತ್ತಿ


ಅಧಿಷ್ಠಾನದ ಮೇಲ್ಗಡೆ ಬರುವ ಭಿತ್ತಿಯು ಕೂಟ ಮಾದರಿಯಲ್ಲಿದ್ದು, ಕುಡ್ಯಸ್ತಂಭಗಳ

ಕರ್ಣ, ಪ್ರತಿಕರ್ಣ, ಪ್ರತಿಭದ್ರ, ಭದ್ರ, ಸುಭದ್ರ ಭಾಗಗಳಿದ್ದು, ಕುಡ್ಯಸ್ತಂಭಗಳ ಪಂಜರದಲ್ಲಿ ಎತ್ತರವಾದ ನಿಂತಭಂಗಿ(ಕಾಯೋತ್ಸರ್ಗ)ಯ ನಾಲ್ಕು ಪಾರ್ಶ್ವನಾಥನ ಶಿಲ್ಪಗಳನ್ನು ಕೆತ್ತಲಾಗಿದೆ. ಮುಂಭಾಗದ ಭಿತ್ತಿಯಲ್ಲಿ ಎರಡು, ಪೂರ್ವ-ಪಶ್ಚಿಮ ನವರಂಗ ಭಿತ್ತಿಯಲ್ಲಿ ಒಂದೊಂದರಂತೆ ಎರಡು ಒಟ್ಟು ನಾಲ್ಕು ಶಿಲ್ಪಗಳನ್ನು ಕೆತ್ತಲಾಗಿದೆ. ಉಳಿದಂತೆ ಇವೇ ಭಿತ್ತಿಯಲ್ಲಿ ನಾಲ್ಕು ಬಾಹುಬಲಿಯ ಶಿಲ್ಪಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಕಾಯೋತ್ಸರ್ಗದ ಬಾಹುಬಲಿ ಶಿಲ್ಪಗಳು ಅದ್ಭುತವಾಗಿದ್ದು ಇವುಗಳ ಮೇಲೆ ಬಾದಾಮಿ ಚಾಲುಕ್ಯರ ಶಿಲ್ಪ ಪ್ರಭಾವ ಆಗಿದೆಯೆಂದು ಹೇಳಬಹುದು.[೫೩]

ಬಾಹುಬಲಿಯು ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿದ್ದು, ಅವನ ಕೈಕಾಲುಗಳಿಗೆ ಹೂಬಳ್ಳಿ ತೊಡರಿಕೊಂಡಂತೆ ಜೊತೆಗೆ ಉದ್ದವಾಗಿ ಲತೆ ಅಡ್ಡಲಾಗಿ ಹರಡಿಕೊಂಡಿದೆ. ಅಂಡಾಕಾರದ ಮುಖ, ಉದ್ದವಾದ ಕಿವಿಗಳು, ಭುಜಗಳ ಮೇಲೆ ಹರಡಿದ ನೀಳ ಕೇಶರಾಶಿ, ಎಡಬಲದಲ್ಲಿ ಹಾವುಗಳು ಹರಿದಾಡುವಂತೆ ಕಂಡರಿಸಲಾಗಿದೆ. ಪಾರ್ಶ್ವನಾಥನ ಶಿಲ್ಪಗಳನ್ನು ಸಹ ಕಾಯೋತ್ಸರ್ಗದಲ್ಲಿ ನಿಂತಂತೆ ಅವನ ತಲೆಯ ಮೇಲೆ ಧರಣೇಂದ್ರ ಯಕ್ಷನು ಹೆಡೆ ಬಿಚ್ಚಿ ನೆರಳು ನೀಡಿದ್ದಾನೆ. ಇದರ ಭಿತ್ತಿಯಲ್ಲಿ ೨ ಚಿಕ್ಕ, ೬ ದೊಡ್ಡ ಗಾತ್ರದ ಜಾಲಕ ಕಿಂಡಿಗಳನ್ನು ಬೆಳಕಿನ ಸಲುವಾಗಿ ಬಿಡಲಾಗಿದೆ.

ಪ್ರಸ್ತರ

ಪ್ರಸ್ತರವು ಶುದ್ಧ ರಾಷ್ಟ್ರಕೂಟ ಶಿಲ್ಪದ ಲಕ್ಷಣ ಹೊಂದಿದೆ. ಇದರಲ್ಲಿ ಉತ್ತರ, ವಾಜನ, ವಲ್ಲಭಿ, ಕಪೋತ ಹೊಂದಿದ್ದು ಮೇಲೆ ವ್ಯಾಳವಾರಿಹಾರ ಆಲಂಕಾರಿಕ ಕೆತ್ತನೆಯಿಂದ ಕೂಡಿರುವುದು. ಇದರ ಕೂಟ ಮಾದರಿ ದ್ರಾವಿಡವಿಮಾನದ ಪ್ರಸ್ತರವಿದ್ದು, ಕೋನಾಕಾರದ ವೇದಿಕೆ, ಗಳದ ಪಟ್ಟಿಕೆ ಮೇಲೆ ಇದನ್ನು ನಿರ್ಮಿಸಲಾಗಿದೆ. ಈ ಪ್ರಸ್ತರವು ಸಹ ಕೋನಾಕಾರವಾಗಿದ್ದಂತೆ ಕರ್ಣ ಕೂಟ, ಶಾಲ ಕೂಟ ಅಲಂಕಾರವಿದ್ದು ಅವುಗಳ ಮೇಲೆ ಕೀರ್ತಿಮುಖ ನಾಸಿಕ ಕೆತ್ತನೆ ಕಂಡುಬರುತ್ತದೆ. ಕೆಳಗಿನ ರೀತಿ ಫಾಂಸನಾ ಶಿಖರವಿದ್ದು ಸಂಪೂರ್ಣವಾಗಿ ಬಿದ್ದು ಹೋಗಿದೆ.



ತಲವಿನ್ಯಾಸ: ಮೇಲ್ಗುಡಿ(ಬಸದಿ) ಹಳ್ಳೂರ

ಕೃಪೆ: ಡಾ. ಸುಭಾಸ ರಾ ಚಿಂಚೋಳಿ ಅವರ ಪ್ರಬಂಧದಿಂದ

ಟಿಪ್ಪಣಿಗಳು

೧. **South Indian Inscriptions,** ಸಂಪುಟ-೪, ನಂ-೨೬೭, ಹಂಪಿ (ಹೊಸಪೇಟೆ ತಾ.) ಕ್ರಿ.ಶ. ೧೪೧೧.

೨. ಶಿರೂರು ಬಿ.ವಿ., **ಶ್ರವಣಬೆಳಗೊಳ ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ** ಪು. ೩೩೭

೩. **Epigraphia Indica, ಸಂಪುಟ-೧೯,** ನಂ. ೨೨೮, ರೋಣ, ಕ್ರಿ.ಶ. ೧೧೭೯

೪. ಅಣ್ಣಿಗೇರಿ, ಎ.ಎಂ. ಮತ್ತು ಮೇವುಂಡಿ ಮಲ್ಲಾರಿ (ಸಂ), **ಶಾಸನ ಸಾಹಿತ್ಯ ಪರಿಚಯ,** ಪು. ೧೨

೫. **ಸೂರ್ಯಕುಮಾರಿ ಎ., ದಿ ಟೆಂಪಲ್ಸ್ ಆಫ್ ಆಂಧ್ರ ಪ್ರದೇಶ,** ಪು. ೧

೬. **E.C.A. Epigraphia Carntaka,** ಸಂಪುಟ-೧೨, ಪು. ೩, ಕೈದಾಳ (ತುಮಕೂರು) ಕ್ರಿ.ಶ. ೧೧೫೧

೭. **S.I.I.,** ಸಂಪುಟ-೧೧, ಭಾಗ-೧, ನಂ-೮೫, ಶಿರೂರ (ಬಾಗ-ತಾ.) ಕ್ರಿ.ಶ. ೧೦೪೯

೮. **E.I,** ಸಂಪುಟ-೩೨, ಪುಟ-೨೯೩, ಮುಧೋಳ (ಮು.ತಾ.), ಕ್ರಿ.ಶ. ೫೬೦.

೯. **S.I.I.** ಸಂಪುಟ-೧೧, ಭಾಗ-೧, ನಂ-೭೦, ಸಂಪುಟ-೧೫, ನಂ-೩, ಭೈರನಮಟ್ಟಿ, (ಬಾಗ-ತಾ.) ಕ್ರಿ.ಶ. ೯೯೦-೧.

೧೦. ಅದೇ, ನಂ-೭೧, ಹಳ್ಳೂರ (ಬಾಗ-ತಾ.), ಕ್ರಿ.ಶ. ೧೦೩೩-೪

೧೧. ಅದೇ, ನಂ-೮೫, ಶಿರೂರ(ಬಾಗ-ತಾ.), ಕ್ರಿ.ಶ. ೧೦೪೯

೧೨. ಕೊಪ್ಪಾ, ಎಸ್.ಕೆ., **ತರ್ದವಾಡಿ ನಾಡು: ಒಂದು ಅಧ್ಯಯನ,** ಪುಟ. ೨೭೯-೮೦

೧೩. **S.I.I.** ಸಂಪುಟ-೧೧, ಭಾಗ-೧, ನಂ-೯೯, ಶಿರೂರ(ಬಾಗ-ತಾ.), ಕ್ರಿ.ಶ. ೧೦೬೨

೧೪. ಅದೇ, ಸಂಪುಟ-೧೫, ನಂ-೫೩೧, ಶಿರೂರ(ಬಾಗ-ತಾ.), ಕ್ರಿ.ಶ. ೧೦೬೮-೯

೧೫. ಅದೇ, ನಂ-೩೯, ಶಿರೂರ(ಬಾಗ-ತಾ.), ಕ್ರಿ.ಶ. ೧೧೪೮

೧೬. ಅದೇ, ಸಂಪುಟ-೧೧, ಭಾಗ-೧, ನಂ-೧೦೫, ಬೇವೂರ(ಬಾಗ-ತಾ.), ಕ್ರಿ.ಶ. ೧೦ನೇ ಶತಮಾನ

೧೭. ಅದೇ, ಸಂಪುಟ-೧೫, ನಂ-೧೯, ಹಳ್ಳೂರ(ಬಾಗ-ತಾ.), ಕ್ರಿ.ಶ. ೧೨ನೇ ಶತಮಾನ

೧೮. ಅದೇ, ನಂ-೫೪೮, ತುಳಸಿಗಿರಿ (ಬಾಗ-ತಾ.), ಕ್ರಿ.ಶ. ೧೧೮೫-೬

೧೯. ಅದೇ, ನಂ-೧೫೫, ಮಂಕಣಿ(ಬಾಗ-ತಾ.), ಕ್ರಿ.ಶ. ೧೨೦೬

೨೦. ಅದೇ, ನಂ-೬೧೨, ಶಿರೂರ(ಬಾಗ-ತಾ.), ಕ್ರಿ.ಶ. ೧೨೪೯

೨೧. ಅದೇ, ನಂ-೬೫೨, ಹೊನ್ನಿಕಟ್ಟಿ(ಬಾಗ-ತಾ.) ಕ್ರಿ.ಶ. ೧೬ನೇ ಶತಮಾನ

೨೨. ಪ್ರಭಾಕರ, ಎಂ.ಎನ್. **ದೇವಾಲಯ ವಾಸ್ತು**, ಪುಟ-೧

೨೩. ಅಪರ್ಣ, ಕೂ.ಸ. ದೇವಾಲಯ ವಾಸ್ತುಶಿಲ್ಪ ಪರಿಚಯ, ಪುಟ-೧

೨೪. ರಾಮಚಂದ್ರರಾವ್ ಎಸ್.ಕೆ., **ಭಾರತೀಯ ದೇವಾಲಯ:** ನೆಲೆ–ಹಿನ್ನೆಲೆ ಪುಟ-೨೮

೨೫. **Sukla, Lalita kumar, A study of Art and Architecture,** ಪುಟ-೧೩೮

೨೬. **Krishnadeva, Temples of North India,** ಪುಟ-೧

೨೭. **Sukla, L.K.,** ಪುಟ-೧೩೯

೨೮. **Acharya P.K. Architecture of Manasara,** ಪುಟ-೧೫೧

೨೯. ಅಪರ್ಣ, ಕೂ.ಸ. ದೇವಾಲಯಗಳ ವಾಸ್ತುಶಿಲ್ಪ ಪರಿಚಯ, ಪುಟ-೬

೩೦. **Manavani S.N., Evolution of Art and Architecture in central India,** ಪುಟ-೧೫೬

೩೧. ಕೃಷ್ಣಮೂರ್ತಿ, ಪಿ.ವಿ. ಮತ್ತು ಡಾ. ವಸಂತ ಲಕ್ಷ್ಮಿ ಕೆ. (ಸಂ), ಸೂರ್ಯಕೀರ್ತಿ, ಡಾ. ಸೂರ್ಯನಾಥ ಕಾಮತರ **ಅಭಿನಂದನ ಗ್ರಂಥ,** ಪುಟ-೧೪೪

೩೨. ಅಪರ್ಣ, ಕೂ. ಸ. ದೇ. ವಾ. ಶಿ. ಪ, ಪುಟ-೧೦

೩೩. **S.I.I** ಸಂಪುಟ-೧೫, ನಂ-೩, ಬೈರನಮಟ್ಟಿ ಶಾಸನ, (ಬಾಗ-ತಾ.), ಪ್ರ.ಶ.೯೯೦-೧

೩೪. ಅದೇ, ಸಂಪುಟ-೧೧, ಭಾಗ-೧; ನಂ-೮೫, ಶಿರೂರ(ಬಾಗ-ತಾ.) ಕ್ರಿ.ಶ. ೧೦೪೯

೩೫. ಅದೇ, ನಂ-೯೯, ಶಿರೂರ (ಬಾಗ-ತಾ.) ಕ್ರಿ.ಶ. ೧೦೬೨

೩೬. ಅದೇ, ಸಂಪುಟ-೧೫, ನಂ-೫೩೧, ಶಿರೂರ (ಬಾಗ-ತಾ.) ಕ್ರಿ.ಶ. ೧೦೬೮–೬೯

೩೭. ಅದೇ, ಸಂಪುಟ-೧೧, ಭಾಗ-೧, ನಂ–೩೯, ಶಿರೂರ(ಬಾಗ-ತಾ.), ಕ್ರಿ.ಶ. ೧೧೪೮

೩೮. ಅದೇ, ಸಂಪುಟ-೧೧, ಭಾಗ-೨, ನಂ-೪೬, ಹಳ್ಳೂರ(ಬಾಗ-ತಾ.), ಕ್ರಿ.ಶ. ೯೯೦-೧

೪೦. ಅದೇ, ಸಂಪುಟ-೧೫, ನಂ-೩, ಬೈರನಮಟ್ಟಿ(ಬಾಗ-ತಾ.), ಕ್ರಿ.ಶ. ೯೯೦-೧

೪೧. ಅದೇ, ನಂ-೭೧, ಹಳ್ಳೂರ(ಬಾಗ-ತಾ.) ಕ್ರಿ.ಶ. ೧೦೩೩

೪೨. ಅದೇ, ಸಂಪುಟ೧೫, ನಂ-೧೯, ಹಳ್ಳೂರ(ಬಾಗ-ತಾ.), ೧೨ನೇ ಶತಮಾನ

೪೩. ಅದೇ, ಸಂಪುಟ-೧೧, ಭಾಗ-೧, ನಂ-೮೫, ಶಿರೂರ(ಬಾಗ-ತಾ.) ಕ್ರಿ.ಶ. ೧೦೪೯

೪೪. ಅದೇ ಶಾಸನ

೪೫. ಅದೇ, ಶಾಸನ

೪೬. ಅದೇ, ಸಂಪುಟ-೧೫, ನಂ-೧೫೫, ಮಂಕಣಿ(ಬಾಗ-ತಾ.) ಕ್ರಿ.ಶ. ೧೨೦೬

೪೭. ಅದೇ, ಸಂಪುಟ-೧೧, ಭಾಗ-೧, ನಂ-೧೦೫, ಬೇವೂರ(ಬಾಗ-ತಾ.), ಕ್ರಿ.ಶ. ೧೧ನೇ ಶತಮಾನ

೪೮. ಅದೇ, ಸಂಪುಟ-೧೫, ನಂ೧೫೫, ಮಂಕಣಿ(ಬಾಗ-ತಾ.), ಕ್ರಿ.ಶ.೧೨೦೬

೪೯. ಅದೇ, ಸಂಪುಟ-೧೧, ಭಾಗ-೧, ನಂ-೮೫, ಶಿರೂರ(ಬಾಗ-ತಾ.), ಕ್ರಿ.ಶ. ೧೦೪೯

೫೦. ಅದೇ, ಸಂಪುಟ-೧೫, ನಂ-೪೯೪, ಹಳ್ಳೂರ(ಬಾಗ-ತಾ.) ೯ನೇ ಶತಮಾನ

೫೧. ಅದೇ, ನಂ-೫೨೧, ಹಳ್ಳೂರ(ಬಾಗ-ತಾ.), ೧೦ನೇ ಶತಮಾನ

೫೨. ಸಿಂದಗಿ ರಾಜಶೇಖರ, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ೧೯೮೮, ಪುಟ-೮೫ ಮತ್ತು **S. Rajasekar, Rashtrakuta Art in Karnataka,** ೧೯೯೧

೫೩. ಅದೇ, ಪುಟ-೮೬

ಅಧ್ಯಾಯ ಆರು

ಮೂರ್ತಿ ಶಿಲ್ಪಕಲೆ

'ಶಿಲ್ಪ' ಎಂಬ ಪದವನ್ನು ಹಲವು ಕಸುಬು ಮತ್ತು ವಿದ್ಯೆಗಳಿಗೆ ಬಳಸುತ್ತ ಬಂದಿದ್ದಾರೆ. ಹೀಗಾಗಿ ನಾವಿಲ್ಲಿ ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಅದನ್ನು ಬಳಸಬೇಕಾಗಿದೆ. ಯಾವುದೇ ಒಂದು ವಾಸ್ತವಿಕ ಇಲ್ಲವೇ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಗೆ 'ಶಿಲ್ಪ' ಎಂಬ ಶಬ್ದವನ್ನು ಬಳಸಬಹುದು. ಈ ದೃಷ್ಟಿಯಿಂದ ಮೂರ್ತಿಶಿಲ್ಪ ಎಂಬ ಮಾತು ಅದೇ ಅರ್ಥವನ್ನು ಕೊಡುತ್ತದಾದರೂ, ಮೂರ್ತಿ ಎಂಬ ಪದವನ್ನು ನಾವು ದೇವತಾವಿಗ್ರಹಗಳಿಗೆ ಪರ್ಯಾಯವಾಗಿ ಬಳಸುತ್ತೇವೆ. ಆದರೆ, ಶಿಲ್ಪ ದೇವತೆಗಳ ವಿಗ್ರಹಗಳನ್ನು ರೂಪಿಸುವ ಒಂದು ಕಲೆಯೇ ಆಗಬೇಕಿಲ್ಲ. ಅಸ್ತಿತ್ವದಲ್ಲಿರುವ ಅಥವಾ ಇಲ್ಲದ ಜೀವಂತ ಇಲ್ಲವೇ ಜಡವಸ್ತುಗಳ ಬಾಹ್ಯ ಆಕೃತಿಯನ್ನು ಸೂಚಿಸುವುದು ಅದರ ಒಂದು ರೀತಿ.[೧]

೬.೧. ಶಿಲ್ಪಕ್ಕೆ ಪ್ರೇರಣೆ

ಭಾರತದೇಶಕ್ಕೆ ನಾಗರಿಕತೆಯ ಚರಿತ್ರೆಯಲ್ಲಿ ಐದು ಸಾವಿರ ವರ್ಷಗಳಷ್ಟು ದೀರ್ಘ ಪರಂಪರೆಯಿದೆ. ತನ್ನದೇ ಆದ ಮತ, ಧರ್ಮಗಳ ಪ್ರಭಾವದಿಂದ ಸಾವಿರಾರು ವರ್ಷಗಳ ಕಾಲ ವಿಕಾಸಗೊಂಡು ಬೆಳೆದುಬಂದ ಸಾಂಸ್ಕೃತಿಕ ಪರಂಪರೆ ಇದಕ್ಕಿದೆ. ಅದರಿಂದಾಗಿ ಇಲ್ಲಿನ ವಾಸ್ತು, ಶಿಲ್ಪ, ಚಿತ್ರಕಲೆಗಳು ಸ್ಫೂರ್ತಿಗೊಂಡು ಬೇರೆ ಬೇರೆ ಕಾಲಘಟ್ಟದಲ್ಲಿ ವೈವಿಧ್ಯತೆಯನ್ನು ಪಡೆದವು. ಭಾರತೀಯ ಶಿಲ್ಪದ ಕುರಿತು ಮಾತನಾಡುವಾಗ ಹೆಚ್ಚು ಕಡಿಮೆ ನಾಲ್ಕುವರೆ ಸಾವಿರ ವರ್ಷಗಳ ಕಾಲದ ಅವಧಿಯ ಚರಿತ್ರೆಯನ್ನು ಮೆಲಕು ಹಾಕಬೇಕಾಗುತ್ತದೆ. ಇದು ಕ್ರಿಸ್ತ ಆರಂಭದ ಬಳಿಕ ವಿಪುಲವಾಗಿ ಕಾಣಿಸಿದರೂ

ಮೊದಲು ಅಷ್ಟೊಂದು ಕಾಣಿಸುವುದಿಲ್ಲ. ಪುರಾತನ ಕಾಲದ ಕಲಾವಿದರು ಬಹುಮಟ್ಟಿಗೆ ತಮ್ಮ ಕಾಲದಲ್ಲಿ ತಮ್ಮ ಸುತ್ತಣ ಜನಗಳ ಮನಸ್ಸಿನ ಮೇಲೆ ಪ್ರಭಾವ ಬೀರಿದ ಮತ, ಧರ್ಮಗಳಿಂದಲೇ ಸ್ಫೂರ್ತಿ ಪಡೆದವರು. ಅವರಿಗೆ ದೊರೆತ ಸ್ಫೂರ್ತಿ ತಮ್ಮ ಮತಧರ್ಮಗಳಲ್ಲಿ ಬರುವ ದೇವಾನುದೇವತೆಗಳ ಕಥಾನಕಗಳಿಂದ ಸಿಕ್ಕಿದ್ದು.[೨]

ಭಾರತ ದೇಶದ ಚರಿತ್ರೆಯಲ್ಲಿ ಸಿಂಧೂಕಣಿವೆಯ ನಾಗರಿಕತೆ ಎಂಬುದೊಂದು ಅದರ ಮೊದಲಿನ ಮೆಟ್ಟಿಲು. ನಾಗರಿಕತೆ ಎಂಬುದು ಒಂದು ಜನಾಂಗ ಸಂಸ್ಕೃತಿಯ ಎಲ್ಲ ಮಜಲುಗಳಲ್ಲಿ ಮೇಲುಗೈ ಸಾಧಿಸುವುದಾಗಿದ್ದು ಸಿಂಧೂಕಣಿವೆಯ ಜನರು ಅದನ್ನು ಮುಟ್ಟಿದ್ದರು. ಈ ಮಾತಿಗೆ ಭೈರನಮಟ್ಟಿಯ ಕ್ರಿ.ಶ. ೯೦೧–೯೨ ರ ಶಾಸನವನ್ನು ಹೋಲಿಕೆ ಮಾಡಬಹುದು.[೩] ಈ ಶಾಸನವು ಬಾಗಡಗೆ–೭೦ರ ಸಿಂಧವಂಶದ ಮೂಲಪುರುಷ ಸಿಂಧೂಕಣಿವೆಯಲ್ಲಿ ಧರಣೇಂದ್ರ ಮತ್ತು ಭೂಲೋಕವನಿತೆಯರ ಉದರದಲ್ಲಿ ಸಿಂಧಕುಮಾರ ಅಥವಾ ನಿಡದೊಳ ಸಿಂದ ಹುಟ್ಟಿದೆ. ಇದು ಕಾಲ್ಪನಿಕವೆನಿಸಿದರೂ, ಸಿಂಧೂತಟ್ಟಕ್ಕೂ ಬಾಗಡಗೆ ಪ್ರದೇಶದ ಮಧ್ಯೆ ಇದೊಂದು ಹೆದ್ದಾರಿಯಾಗಿದೆಯೆಂದೇ ಹೇಳಬೇಕು. ಇಂತಹದೊಂದು ನಾಗರಿಕತೆಯು ಭಾರತದಲ್ಲಿ ಆಗಿಹೋದ ತದನಂತರದಲ್ಲಿ ಭಾರತೀಯ ಚರಿತ್ರೆಯಲ್ಲಿ ಹಲವು ವೈವಿಧ್ಯಮಯ ಸಂಗತಿಗಳು ಜರುಗಹತ್ತಿದ್ದವು. ಅವುಗಳೇ ವೈದಿಕ, ಬೌದ್ಧ, ಜೈನವೆಂಬ ಮೂರು ಮತಗಳ ಹುಟ್ಟು. ಭಾರತ ದೇಶದ ಶಿಲ್ಪಕಲೆಯ ಪರಿಚಯ ಮಾಡಿಕೊಳ್ಳುವವರಿಗೆ ಇಲ್ಲಿನ ಸಂಸ್ಕೃತಿಯನ್ನು ಪ್ರಧಾನವಾಗಿ ರೂಪಿಸಿದಂಥವು. ಈ ಮೂರು ಮತಗಳು, ವೈದಿಕ ಅಥವಾ ಹಿಂದೂ ಧರ್ಮಕ್ಕೆ ಮೂಲಪುರುಷನಿಲ್ಲ. ಅದಕ್ಕೆ ಸ್ಫೂರ್ತಿ ಸಿಂಧೂಕಣಿವೆಯ ಪಶುಪತಿ, ಬೌದ್ಧಧರ್ಮಕ್ಕೆ ಸಿದ್ಧಾರ್ಥ ಮೂಲಪುರುಷ. ಜೈನಮತಕ್ಕೆ ಮಹಾವೀರ ಮೂಲಪುರುಷ. ಹಿಂದಿನ ತೀರ್ಥಂಕರ ಕಥೆ ಕಾಲ್ಪನಿಕ. ಇವುಗಳ ಮತಪ್ರಚಾರದಿಂದ ಶಿಲ್ಪಕಲೆ, ವಸ್ತುವಿನ ಜೊತೆಜೊತೆಯಾಗಿ ಹುಟ್ಟುಪಡೆದು ಬಂದಿದೆ.

ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಮುಕ್ಕೋಟಿ ದೇವರ ಆರಾಧನೆ ಇದೆಯೆಂಬುದು ಜನಪದದ ವಾದ. ಆದರೆ, ವೈದಿಕ ಸಾಹಿತ್ಯದಲ್ಲಿ ಪರಿಚಿತರಾದವರು ೨೨ ಮಂದಿಯಷ್ಟೇ. ಉಳಿದ ದೇವತೆಗಳು ವೈದಿಕವಲ್ಲದ ಇನ್ನೊಂದು ಸಂಪ್ರದಾಯಕ್ಕೆ ಸೇರಿದವರು. ಇವರಲ್ಲಿ ಕೆಲವರು ಮನುಷ್ಯರಾಗಿದ್ದು, ತಮ್ಮ ಬುದ್ಧಿಶಕ್ತಿ, ಜ್ಞಾನ, ತಪಸ್ಸಿನಿಂದ ದೇವತೆಗಳ ಸ್ಥಾನ ಪಡೆದವರು. ಇನ್ನು ಕೆಲವರು ವಿಚಿತ್ರ ಸಂದರ್ಭದಲ್ಲಿ ದೇವರ ನೆಲೆ ಕಂಡುಕೊಂಡವರು.[೪] ಅವರನ್ನು ಗ್ರಾಮದೇವರೆಂದು ಕರೆಯಬಹುದು. ಗಂಡು–ಹೆಣ್ಣುಗಳು ದೇವತೆಗಳಾಗಿ ಮಾರ್ಪಟ್ಟ ಕಥೆಗಳು ಸಾಕಷ್ಟು ಕಂಡುಬರುತ್ತಿದ್ದು, ಮಾಸ್ತಿ, ವೀರ, ನಿಸಿದಿಗೆ ಕಲ್ಲುಗಳು ಈ ಸಂಪ್ರದಾಯಕ್ಕೆ ಸೇರುವವು.

ಹೀಗೆ ಸಿಂಧೂಕಣಿವೆಯಿಂದ ಆರಂಭಗೊಂಡ ಮೂರ್ತಿಶಿಲ್ಪಕಲೆಯು ಭಾರತದ ಮುಂದಿನ

ವೈದಿಕ ಮತ್ತು ಅವೈದಿಕ ಧರ್ಮಗಳನ್ನು ಒಪ್ಪಿಕೊಂಡು ಪೋಷಿಸಿದ ರಾಜವಂಶಸ್ಥರ ಕಾಲದಲ್ಲಿ ಉನ್ನತಿಯತ್ತ ನಡೆಯತೊಡಗಿತು. ಮೊದಲಬಾರಿಗೆ ಅದನ್ನು ಪೋಷಿಸಿದವರು ಮೌರ್ಯರು. ಇವರ ಪ್ರೋತ್ಸಾಹದಿಂದ ಭಾರತದ ತುಂಬೆಲ್ಲಾ ವಾಸ್ತು ಮತ್ತು ಶಿಲ್ಪಕಲೆಗಳು ಇವತ್ತಿಗೂ ಸ್ಫೂರ್ತಿಯ ಸೆಲೆಯಾಗಿ ನಿಂತಿವೆ. ಇದನ್ನು ಬಾಗಲಕೋಟೆ ಪರಿಸರದಲ್ಲಿಯೂ ಕಾಣುತ್ತೇವೆ.

೬.೨. ಶಿಲ್ಪ ಲಕ್ಷಣಗಳು

'ಶಿಲ್ಪ' ಎಂಬುದು ಉದ್ದ, ಅಗಲ ಮತ್ತು ದಪ್ಪಗಳೆಂಬ ಮೂರು ಮಾನಗಳುಳ್ಳ ಪ್ರತಿಕೃತಿ. ಈ ಮೂರು ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಶಿಲ್ಪಿಯಾದವನು ಕೆತ್ತಿದ ಶಿಲ್ಪ, ಪ್ರತಿಮೆ ಎಂತಹ ಲಕ್ಷಣ ಹೊಂದಿದೆ ಎಂಬುದೇ ಶಿಲ್ಪ ಲಕ್ಷಣ. ಶಿಲ್ಪ ಸಮೀಕರಣ, ಭಾವ, ಭಂಗಿ, ಮುದ್ರೆ, ಸಂಕೇತ, ಭೂಷಣಗಳು. ಇದಕ್ಕೆ ಪ್ರತಿಮಾಲಕ್ಷಣವೆಂದು ಕರೆಯವರು. ಇದನ್ನು ಎಲ್ಲ ಶಿಲ್ಪಗಳಲ್ಲಿ ಕಾಣುತ್ತೇವೆ. ಬಾಗಲಕೋಟೆ ಪ್ರದೇಶದ ಶಿಲ್ಪಗಳು ಹೆಚ್ಚಾಗಿ ಎರಡು ಮಾಧ್ಯಮದ ಕಲ್ಲನ್ನು ಬಳಸಿದ್ದು ಕಂಡುಬರುವುದು. ಒಂದು ದಖ್ಖನ್ ಟ್ರಾಪ್(Deccan Trap) ಎಂಬ ಕಪ್ಪು ಅಗ್ನಿಶಿಲೆ ಮತ್ತೊಂದು ಸ್ಥಳೀಯವಾಗಿ ಹೆಚ್ಚಾಗಿ ದೊರೆಯುವ ಸ್ಯಾಂಡ್ ಸ್ಟೋನ್(Sand stone) ಕೆಂಪು ಮರಳುಶಿಲೆ ಆಗಿದೆ.

ಅ. ಶಿಲ್ಪ ಸಮ್ಮಿಲನ

ಬಹು ಪ್ರಾಚೀನ ಕಾಲದಿಂದಲೂ ದೇವರ ಶಿಲ್ಪಗಳಲ್ಲಿ ಎದ್ದು ಕಾಣುವ ಲಕ್ಷಣ ಅವುಗಳಲ್ಲಿರುವ ಅಪ್ರಾಕೃತಿಕ ಮತ್ತು ಅಸ್ವಾಭಾವಿಕ ವಿಚಾರಗಳು. ಶಿಲ್ಪಿಯ ಮನೋಧರ್ಮವೋ ಇಲ್ಲವೇ ಅವನ ಕಾಲದ ಸಮಾಜದಲ್ಲಿದ್ದ ಸಂಪ್ರದಾಯ ನಂಬಿಕೆಯೋ ಗೊತ್ತಿಲ್ಲ. ಶಿಲ್ಪದಲ್ಲಿ ಪ್ರಾಣಿಯ ತಲೆ, ಮನುಷ್ಯ ದೇಹ, ಹಲವು ಬಾಹು, ಹತ್ತಾರು ತಲೆ, ವಿಚಿತ್ರ ಭಾವ-ಭಂಗಿ, ಅಸಂಘಟಿತ ವಾಹನ, ಆಯುಧ, ಅತಿರೇಕ ಆಭರಣ, ವಿಕಾರ ರೂಪಗಳು ಸಾಮಾನ್ಯ. ಅಂದರೆ, ದೇವತೆಗಳ ಹುಟ್ಟಿನ ಕುರಿತು ವಿಚಾರ ಮಾಡಿದಾಗ ಅರ್ಥವಾಗುವುದು ಹಲವು ಗಣಪತಿಗಳ ಪ್ರತಿರೂಪ ಗಣೇಶ, ಹತ್ತಾರು ಯಕ್ಷರಕಿನ್ನರು ಸೇರಿ ಒಬ್ಬ ಶಿವ, ಹಲವು ತಾಯಿಗಳು ಸೇರಿ ಒಬ್ಬಳು ಮಾತೃದೇವಿ ಅಗಿರುವುದು.[೫] (ಹಲವು ಜಾನಪದ ದೇವತೆಗಳು) ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ನಮ್ಮ ಶಿಲ್ಪಿಗರು ಸೃಷ್ಟಿ, ಸ್ಥಿತಿ, ಲಯ ಈ ಮೂರಕ್ಕೆ ಹೆಸರು ಪಡೆದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ತ್ರಿಮೂರ್ತಿ ವಿಗ್ರಹ ಹುಟ್ಟುಹಾಕಿದರು. ಅದುವೇ ದತ್ತಾತ್ರೇಯ. ವಿಷ್ಣು-ಶಿವರನ್ನು ಸೇರಿಸಿ ಹರಿಹರ, ಪಾರ್ವತಿ ಶಿವನನ್ನು ಸೇರಿಸಿ ಅರ್ಧನಾರೀಶ್ವರ, ನರ ಮತ್ತು ಸಿಂಹ ಮುಖ ಸೇರಿಸಿ ನರಸಿಂಹಶಿಲ್ಪ ಇಂಥಹ ಸಮ್ಮಿಲನ ಶಿಲ್ಪಾಕೃತಿಯು ಬೇವೂರಿನ ರಾಮಲಿಂಗೇಶ್ವರ

ದೇಗುಲದ ತೋರಣ ಮಂಟಪದಲ್ಲಿ ನಾಲ್ಕು ದಿಕ್ಕಿನಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಶಿಲ್ಪಕೃತಿ ಕಂಡರಿಸಿದ್ದಾರೆ. ಹೀಗೆ ಹಲವಾರು ಶಿಲ್ಪಗಳನ್ನು ಹುಟ್ಟುಹಾಕಿದರು.

ಆ. ಶಿಲ್ಪಮುಖಭಾವ

ಶಿಲ್ಪ, ಶಿಲ್ಪಗಳನ್ನು ಬೆರೆಸಿ ಶಿಲ್ಪಸಮ್ಮಿಲನ ಮಾಡಿದ ಶಿಲ್ಪಿಗಳು ಈಗ ಶಿಲ್ಪದಲ್ಲಿ ಭಾವನೆ, ಭಾವಗಳನ್ನು ಅಳವಡಿಸಿದರು. ಇವು ಐದು ರೀತಿಯಲ್ಲಿ ಕಾಣಸಿಗುತ್ತವೆ. ಅಂದರೆ, ಭಾವ, ಭಂಗಿ, ಮುದ್ರೆ, ಆಯುಧ ಮತ್ತು ಭೂಷಣ. ಈ ಐದು ಲಕ್ಷಣಗಳನ್ನು ನವರಸದಲ್ಲಿ ಶಿಲ್ಪ ಮುಖಭಾವದಲ್ಲಿ ಸೇರಿಸಿ ಕಂಡರಿಸಿದ್ದರಿಂದ ಭಾರತೀಯ ಶಿಲ್ಪಿಗಳ ಅದ್ಭುತ ಕಲ್ಪನೆ ಜಗತ್ತಿಗೆ ಮಾದರಿಯಾಗಿ ನಿಂತಿದೆ.

ಇ. ಶಿಲ್ಪದ ಭಂಗಿಗಳು

ಒಂದು ಶಿಲ್ಪದ ಮುಖದಲ್ಲಿ ಹಲವು ಭಾವನೆ ತುಂಬಿದ ಶಿಲ್ಪ, ಅದನ್ನು ವಿಶಿಷ್ಟಭಂಗಿಯಲ್ಲಿ ನಿರ್ಮಿಸಲು ಮುಂದಾದ. ಆಗ ನಿಂತ ಭಂಗಿಯಲ್ಲಿ ಸಮಪಾದ ಅಥವಾ ಸಮಶ್ರೃಂಗ, ದ್ವಿಭಂಗ, ತ್ರಿಭಂಗ ಮತ್ತು ಅತಿಭಂಗವೆಂಬ ನಾಲ್ಕು ನಿಂತ ಭಂಗಿಗಳು ಪ್ರಚುರಗೊಂಡವು. ಅದೇ ರೀತಿ ಕುಳಿತ ಭಂಗಿಯು ಪ್ರಮುಖ. ಇದರಲ್ಲಿ ಧ್ಯಾನ, ಪಯಂಕಾಶಾಸನ, ಪದ್ಮಾಸನ, ಆಲೀಥ, ಯೋಗ, ಲಲಿತ, ವೀರಾಸನ, ವಜ್ರಾಸನ, ಸಿಂದಿಹಾಸನ (ಭಂಗಿ) ಇತ್ಯಾದಿಗಳು ಕಾಣಿಸಿಕೊಳ್ಳುತ್ತವೆ. ಸಮಭಂಗವನ್ನು ಜಿನ ಮತ್ತು ವಿಷ್ಣು ಶಿಲ್ಪಗಳಲ್ಲಿ ಕಾಣುತ್ತೇವೆ. ಜಿನಶಿಲ್ಪಗಳ ನಿಂತ ಸಮಭಂಗಿಗೆ ಕಾಯೋತ್ಸರ್ಗವೆಂದು, ಇಂಥಹ ಶಿಲ್ಪವನ್ನು ಹಳ್ಳೂರಿನ ಜೈನಬಸದಿಯ ಭಿತ್ತಿಯಲ್ಲಿ ಬಾಹುಬಲಿಯ ಶಿಲ್ಪ ಕಂಡರಿಸಿದ್ದಾರೆ. ನಿಂತ ವಿಷ್ಣುವಿಗೆ ಸಮಪಾದದ ಸ್ಥಾನಿಕ ವಿಷ್ಣುವೆಂದು ಕರೆಯುತ್ತೇವೆ.[೬] ಪದ್ಮಾಸನ ಸರಸ್ವತಿ, ಲಕ್ಷ್ಮಿಗೆ ಸೀಮಿತ.[೭] ಧ್ಯಾನಭಂಗಿ ಜಿನಶಿಲ್ಪದಲ್ಲಿ ಯೋಗಾಸನವನ್ನು ಶಿವ, ವಿಷ್ಣು ಶಿಲ್ಪದಲ್ಲಿ ಶಯನವನ್ನು ಮಲಗಿದ ವಿಷ್ಣುವಿನ ಶಿಲ್ಪದಲ್ಲಿ ಕಾಣುತ್ತೇವೆ. ನೃತ್ಯವನ್ನು ಚಾಮುಂಡಿ ಮತ್ತು ಗಣೇಶ ಹಾಗೂ ನಟರಾಜ ಶಿವನ ಶಿಲ್ಪಗಳಲ್ಲಿ ಕಾಣುತ್ತೇವೆ.

ಈ. ಕೈ ಮುದ್ರೆಗಳು

ಶಿಲ್ಪದಲ್ಲಿ ಭಾವ, ಭಂಗಿ, ಅಳವಡಿಕೆ ಜೊತೆ ಹಸ್ತಸಂಕೇತ ಅಳವಡಿಸುವುದು ಪ್ರಮುಖ ಲಕ್ಷಣ. ಶಿಲ್ಪಕ್ಕೆ ಭೂಷಣಪ್ರಾಯ ಹಸ್ತಮುದ್ರೆಗಳು ಅಥವಾ ಹಸ್ತಸಂಕೇತಗಳಾಗಿವೆ. ಹಸ್ತಮುದ್ರೆಗಳು ಕುರಿತು ವಿಷ್ಣುಧರ್ಮೋತ್ತರ ಪುರಾಣ ೩೬ ನಾಟ್ಯ ಮುದ್ರೆಗಳನ್ನು ಹೇಳಿ ನಂತರ ೧೨ ಸಂಯುಕ್ತ, ೨೨ ಅಸಂಯುಕ್ತ ಮುದ್ರೆಗಳಿರುವುದನ್ನು ಹೇಳಲಾಗಿದೆ. ಹಸ್ತಮುದ್ರೆಗಳಲ್ಲಿ ಮುಖ್ಯವಾಗಿ ಅಭಯ, ವರದ, ಅಂಜಲಿ(ನಮಸ್ಕಾರ), ಸೂಚಿ, ವ್ಯಾಖ್ಯಾನ, ಕಟ್ಯಾವಲಂಬನ, ಕಟಕ, ಧ್ಯಾನಮುದ್ರೆಗಳಲ್ಲಿ ೬

ಬುದ್ಧ ಶ್ರವಣ, ಭೂಮಿಸ್ಪರ್ಶ, ಭೂತಪಮರ, ಚಿನಮುದ್ರ, ದಂಡಹಸ್ತ ಅಥವಾ ಗಜಹಸ್ತ, ಕ್ಷೇಪಣ, ಶಾಂತಿ(ಅಭಯ), ತರ್ಜನಿ, ದರ್ಪಣ, ವಿಷಯ, ಯೋಗ"ವೆಂಬ ಹಲವು ಹಸ್ತಮುದ್ರೆ ಸಂಕೇತಗಳಿವೆ. ಇವೆಲ್ಲವು ನಟರಾಜ, ಶಿವ, ದೇವಿ, ಚಾಮುಂಡಿ, ಸರಸ್ವತಿ, ದುರ್ಗ, ಕಾಳಿ, ಭೈರವ, ವಿಷ್ಣು, ಜೈನ ಮೂರ್ತಿಶಿಲ್ಪಗಳ ಹಸ್ತಗಳಲ್ಲಿ ಅಳವಡಿಸಲಾಗಿದೆ.

ಉ. ಆಯುಧ ಮುದ್ರೆ

ಹಸ್ತಮುದ್ರೆಯಂತೆ ಮೂರ್ತಿಶಿಲ್ಪಕ್ಕೆ ಆಯುಧಮುದ್ರೆಗಳು ಪ್ರಮುಖವಾಗಿದ್ದು, ಇವುಗಳ ಕುರಿತು ಶಿಲ್ಪಶಾಸ್ತ್ರ ಗ್ರಂಥಗಳು ತಿಳಿಸುವುವು. ಉದಾಹರಣೆಗೆ ವಿಷ್ಣುವಿಗೆ ಚಕ್ರ, ಗದೆ, ಶಂಖಗಳು ಮುಖ್ಯ ಆಯುಧ ಮುದ್ರೆಗಳು. ಶಿವನಿಗೆ ತ್ರಿಶೂಲ, ಡಮರು, ಅಗ್ನಿ, ಗಣಪತಿಗೆ ಪಾಶ, ಅಂಕುಶ, ಪರಶು, ಲಕ್ಷ್ಮಿಗೆ ಕಮಲ, ಪಾರ್ವತಿಗೆ ನಿಲೋತ್ಪಲ, ಬಲರಾಮನಿಗೆ ನೇಗಿಲು(ಮಡಿಕೆ), ಪರಶುರಾಮನಿಗೆ ಕೊಡಲಿ(ಪರಶು), ರಾಮನಿಗೆ ಬಿಲ್ಲು ಬಾಣ, ಹೀಗೆ ವಿವಿಧ ಶಿಲ್ಪಗಳಿಗೆ ವಿವಿಧ ರೀತಿಯ ಆಯುಧ ಮುದ್ರೆಗಳನ್ನು ನೀಡಿ ಶಿಲ್ಪಸಂಕೇತವನ್ನು ಸೂಚಿಸಿವೆ. ಶಿಲ್ಪ ಕಂಡುಹಿಡಿಯಲು ಇನ್ನೊಂದು ಚಿಹ್ನೆಯನ್ನು ಶಿಲ್ಪಿಗಳು ಬಳಸಿರುವರು. ಉದಾಹರಣೆಗೆ ಶಿವನಿಗೆ ನಂದಿ, ಬ್ರಹ್ಮನಿಗೆ ಹಂಸ, ವಿಷ್ಣುವಿಗೆ ಗರುಡ, ದೇವಿಗೆ ಸಿಂಹ, ಸ್ಕಂದ(ಷಣ್ಮುಖ)ನಿಗೆ ನವಿಲುಗಳಿಂದ ಗುರುತಿಸಿದಂತೆ ಹೆಣ್ಣುದೇವರಿಗೆ ಸಹ ಅವುಗಳನ್ನೇ ಬಳಸಿರುವರು.

ಊ. ಶಿಲ್ಪಭೂಷಣ

ಮೇಲಿನ ಸಂಖೇತ ಮುದ್ರೆ ಭಾವ, ಭಂಗಿಗಳ ಜೊತೆಗೆ ವೇಷಭೂಷಣಗಳನ್ನು ಉಡಿಸಿ ತೊಡಿಸಿ ಶಿಲ್ಪಗಳು ಸರ್ವಾಂಗ ಸುಂದರವಾಗಿ ಕಾಣುವಂತೆ ಮಾಡಿರುವುದನ್ನು ಶಿಲ್ಪಶಾಸ್ತ್ರಗಳು ಹೇಳುತ್ತಾ ಅವುಗಳ ಪಟ್ಟಿಯನ್ನೇ ನೀಡುವುವು. ಇದರಲ್ಲಿ ಎರಡು ವಿಧ. ಉಡುಗೆ ಬಟ್ಟೆಯಾದರೆ, ತೊಡುಗೆ ಆಭರಣವಾಗಿದೆ.

ತಲೆಗೆ ಜಟಾಮಕುಟ, ಕರಂಡಮಕುಟ, ರತ್ನಕಿರೀಟ, ಕಿವಿಗೆ ಮಕರಕುಂಡಲ, ಪತ್ರಕುಂಡಲ, ಕೊರಳಿಗೆ ರತ್ನಹಾರ, ನಡುವಿಗೆ ಉದರಬಂಧ, ಕಟಿಸೂತ್ರ, ತೋಳಿಗೆ ಅಂಗದ ಕೇಯೂರ, ಕೈ ಮಣಿಕಟ್ಟಿಗೆ ಕಂಕಣ, ಮಣಿಬಂಧ, ಬೆರಳಿಗೆ ರತ್ನಾಂಗುಲ(ಉಂಗುರ), ಕಾಲ್ಬೆರಳಿಗೆ ಪೀತಾಕಾರ್ಪಣ, ನೂಪುರ, ಪಾದಜಾಲಕಗಳು, ತಲೆಯ ಹಿಂದೆ ಶಿರಚಕ್ರ, ಪ್ರಭಾಮಂಡಲ ಗಳಿರುತ್ತವೆ. ಇವು ಗಂಡು ದೇವತೆಗಳದ್ದಾದರೆ ಹೆಣ್ಣು ದೇವತೆಗಳ ಆಭರಣಗಳನ್ನು ಸಾಕಷ್ಟು ರೀತಿಯ ಹೆಸರಿನಿಂದ ಕರೆಯುತ್ತೇವೆ. ಇವರ ಮೈಮೇಲಿನ ಬಟ್ಟೆ ಹತ್ತಿ, ಉಣ್ಣೆ, ರೇಷ್ಮೆ, ಬಟ್ಟೆ ಕುರಿತು ಗ್ರಂಥಗಳು ಹರಿದು, ಹೊಲಿದು ತೊಡಲು ಹೇಳುತ್ತದೆ.[೯]

ಮೂರ್ತಿಶಿಲ್ಪ ಮೇಲಿನಂತೆ ಭೂಷಣವಾಗಿ ಕಾಣಬೇಕೆಂದು ಸಮಾಜದ ಬದುಕನ್ನು ಸಾಗಿಸುವ ಮಾನವರಂತೆ ಕಾಣದ ಲೋಕದಲ್ಲಿ ತಾವು ನಂಬಿದ ಧರ್ಮದೇವತೆಗಳು ತಮ್ಮ ಸಮಾಜದಲ್ಲಿ ಮನುಷ್ಯರಂತೆಯೇ ಬಾಳುತ್ತಾರೆಂಬ ನಂಬಿಕೆ, ಇಲ್ಲವೇ ಮನುಷ್ಯರ ಪ್ರತಿಬಿಂಬವನ್ನೇ ಶಿಲ್ಪದಲ್ಲಿ ಮೂಡಿಸಿದ ಮನುಷ್ಯರು ತನ್ನ ಸಾಮಾಜಿಕ ಬದುಕನ್ನು ಶಿಲ್ಪ, ಚಿತ್ರ, ಇತ್ಯಾದಿಗಳ ಮಾಧ್ಯಮದ ಮುಖಾಂತರ ತೋರಿಸಿಕೊಳ್ಳಲು ಮೂರ್ತಿಶಿಲ್ಪದ ಶೃಂಗರಿಸುವಿಕೆಗೆ ಒತ್ತುಕೊಟ್ಟು ಕಂಡರಿಸಿ, ನಿಶ್ಚಿತ ಸ್ಥಳದಲ್ಲಿ ಪ್ರತಿಷ್ಠೆ ಮಾಡಿ ಪೂಜಿಸಿ ಆರಾಧಿಸಿರಬೇಕು. ಇಂತಹ ಹಿನ್ನೆಲೆಯಿಂದ ಮೂಡಿಬಂದ ಮೂರ್ತಿಶಿಲ್ಪಗಳು ಬಾಗಲಕೋಟೆ ಪ್ರದೇಶದಲ್ಲಿ ಕಂಡುಬರುತ್ತಿದ್ದು, ಅವುಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದೇವೆ. ಆಯಾ ಮತಧರ್ಮಗಳ ಹಿನ್ನೆಲೆಯಲ್ಲಿ ಬಿಡಿಬಿಡಿಯಾಗಿ ನೋಡಲಾಗಿದೆ.

೬.೩. ಶೈವ ಶಿಲ್ಪಗಳು

ಶೈವ ಮತಕ್ಕನುಗುಣವಾಗಿ ನೋಡುವುದಾದರೆ ಅದರ ಮೂಲಪುರುಷನಾದ ಪಶುಪತಿಯಾದ ಶಿವನನ್ನು ಹಲವು ರೀತಿಯಲ್ಲಿ ಪೂಜಿಸಲಾಗಿದೆ. ಶಿವನನ್ನು ಲಿಂಗರೂಪದಲ್ಲಿ ಮನುಷ್ಯರೂಪದ ಶಿವನನ್ನು ಶಿವ, ನಟರಾಜ, ಭೈರವ, ದಕ್ಷಿಣಾಮೂರ್ತಿ, ಲಿಂಗೋದ್ಭವ, ಭಿಕ್ಷಾಟನಾ ಇತ್ಯಾದಿಯಾಗಿ ಚಿತ್ರಿಸಲಾಗಿದೆ. ಆದಾಗ್ಯೂ ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುವುದೇ ಹೆಚ್ಚು.

ಅ. ಶಿವ

ಶಿವನು ದೇವರುಗಳಲ್ಲಿಯೇ ಅತ್ಯಂತ ಶ್ರೇಷ್ಠ ದೇವರೆಂದು ಭಾರತೀಯರು ಒಪ್ಪಿಕೊಂಡಿದ್ದಾರೆ. ಬಹುಸಂಖ್ಯಾತ ಭಕ್ತಸಮೂಹ ಹೊಂದಿ ಹಲವು ನಾಮಾಂಕಿತಗಳಿಂದ ಗುರುತಿಸಲ್ಪಟ್ಟಿದ್ದಾನೆ. ಅಮರಕೋಶ ಶಿವನ ೪೮ ಹೆಸರುಗಳನ್ನು ಹೇಳಿದೆ.[೧೦] ಅದೇ ರೀತಿ ವಾಜಸೇನೆಯ ಸಂಹಿತವು ಶಿವನನ್ನು ಅಗ್ನಿ, ಸೃಷ್ಟಿ, ಸ್ಥಿತಿ, ಲಯ, ಕತೃ ಶಿವನೆಂದು ಹೇಳುತ್ತಾ ಮಹದೇವ, ಮಹೇಶ್ವರನ ಹಲವು ಲೀಲಾ ರೂಪಗಳ, ಅವುಗಳ ಭಾವ, ಭಂಗಿಗಳ ಕುರಿತು ಹೇಳುತ್ತದೆ. ಶೈವಾಗಮಗಳು ಇದನ್ನೇ ಪ್ರತಿಪಾದಿಸುತ್ತವೆ.[೧೧] ಇಂತಹ ಶಿವನ ಶಿಲ್ಪಗಳು ಬಾಗಲಕೋಟೆ ಪರಿಸರದಲ್ಲಿ ಕಂಡುಬರುವುದಿಲ್ಲ. ಇವುಗಳಲ್ಲಿ ದೇವಾಲಯದ ಕೀರ್ತಿಮುಖ ಮಕರ ತೋರಣ, ನೃತ್ಯ ನಟರಾಜನ ತೋರಣಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ.

ಆ. ಶಿವಲಿಂಗ (ಯೋನಿಪಾಣಿಲಿಂಗ)

೧. ನಮ್ಮ ದೇಶದ ಹಲವು ದೇವರುಗಳ ಶಿಲ್ಪಗಳಲ್ಲಿ ಅವಹೇಳನ, ಅಪಹಾಸ್ಯಕ್ಕೆ

ಶಿವಲಿಂಗ ಗುರಿಯಾಗಿದ್ದಷ್ಟು ಬೇರಾವ ದೇವರ ಶಿಲ್ಪಗಳು ಗುರಿಯಾಗಿಲ್ಲ. ಇಲ್ಲಿ ಲಿಂಗವೆಂದರೆ ಪುರುಷ ಜನನೇಂದ್ರಿಯ, ಯೋನಿಯೆಂದರೆ ಸ್ತ್ರೀ ಜನನಾಂಗ, ಶಿವಲಿಂಗದಲ್ಲಿ ಎರಡರ ಕಥೆ ಸೇರಿಸಿ ಕೆತ್ತಲಾಗಿದೆ. ಇದನ್ನು ಸ್ತ್ರೀ-ಪುರುಷರ ಸಂಯೋಗ, ಸಂಭೋಗಕ್ಕೆ ಹೋಲಿಕೆ ಮಾಡಲಾಗಿದೆ.[೨] ಗೋಲಾಕಾರದ ಪಾಣಿಯ ಮಧ್ಯ, ಗೂಟದಂತಹ ಲಿಂಗವನ್ನು ಶಿವನೆಂದು, ಗೋಲದ ಪಾಣಿಯನ್ನು ಸ್ತ್ರೀಯೆಂದು ಕರೆದು ಕೊನೆಗೆ ಯೋನಿಪಾಣಿಲಿಂಗವೆಂದು ಕರೆದರು. ಇಂತಹ ಲಿಂಗಗಳನ್ನು ಶಿರೂರ, ಬೇವೂರ, ಮಂಕಣಿ ಇತ್ಯಾದಿ ಗ್ರಾಮಗಳ ದೇವಾಲಯಗಳಲ್ಲಿ ಕಲ್ಯಾಣ ಚಾಲುಕ್ಯ, ಯಾದವ, ಮಧ್ಯ, ಆಧುನಿಕ ಕಾಲದ ಲಿಂಗಗಳನ್ನು ಕಾಣುತ್ತೇವೆ.

೨. ಎರಡನೇ ಮಾದರಿ ಲಿಂಗವೆಂದರೆ ಚೌಕ ಪಾಣಿಲಿಂಗ ಇದನ್ನು ಹಿಂದೂ ತ್ರಿಮೂರ್ತಿಗೆ ಹೋಲಿಸುತ್ತಾರೆ. ಅಂದರೆ ಸೃಷ್ಟಿ, ಸ್ಥಿತಿ, ಲಯಗಳ ಕರ್ತೃಗಳಾದ ಬ್ರಹ್ಮ, ವಿಷ್ಣು, ಶಿವನಿಗೆ ಹೋಲಿಸುತ್ತಾರೆ. ಅಂದರೆ ಲಿಂಗದ ಕೆಳಭಾಗ ಬ್ರಹ್ಮಪೀಠ, ಮೇಲಿನ ಚೌಕಪಾಣಿಪೀಠ ವಿಷ್ಣು, ಅದರ ಮಧ್ಯದ ಗೂಟದ ಭಾಗ ಲಿಂಗ ಶಿವನೆಂದು ಸಂಕೇತಿಸಲಾಗಿದೆ. ಇವು ಸಾಮಾನ್ಯವಾಗಿ ಎರಡು ಅಡಿಯಿಂದ ನಾಲ್ಕು ಅಡಿಗಳಷ್ಟು ಎತ್ತರವಾಗಿವೆ. ಬಾಗಲಕೋಟೆ ಪರಿಸರದ ಗ್ರಾಮಗಳಾದ ಬಿಲ್‌ಕೆರೂರ, ಮುಡಪಲಜೀವಿ, ಬೇವೂರ, ಶಿರೂರ, ಮಂಕಣಿ, ಹಳ್ಳೂರ, ಬಾಗಲಕೋಟೆ, ಶೆಲ್ಲಿಕೇರಿ, ಇತ್ಯಾದಿ ಗ್ರಾಮಗಳಲ್ಲಿ ಶಿವನ ವಿವಿಧ ಹೆಸರಿನ ದೇವಾಲಯಗಳಲ್ಲಿ ಚೌಕಪಾಣಿ ಲಿಂಗಗಳು ಪ್ರತಿಷ್ಠಾಪನೆಗೊಂಡಿವೆ.

೩. ಮೂರನೇ ಪ್ರಕಾರದ ಲಿಂಗವನ್ನು ಸ್ಕಂಭಲಿಂಗವೆಂದು ಕರೆಯಲಾಗಿದೆ. ಇದಕ್ಕೆ ಯೋನಿಪಾಣಿ ಚೌಕಪಾಣಿ ಪೀಠಗಳು ಇರುವುದಿಲ್ಲ. ಕೇವಲ ಗೂಟದಂತೆ ಪ್ರತಿಷ್ಠೆ ಮಾಡಲಾಗಿರುತ್ತದೆ. ಇದನ್ನು ಬಾಣಲಿಂಗವೆಂತಲು ಕರೆಯಲಾಗಿದೆ.

೪. ಮೇಲಿನ ಶಿವಲಿಂಗಗಳ ಜೊತೆಗೆ ಶಿವನನ್ನು ಮುಖಲಿಂಗ ಹೆಸರಿನಿಂದಲು ಪೂಜಿಸುವುದುಂಟು. ಇಲ್ಲಿ ಸ್ಕಂಭ ಅಥವಾ ಬಾಣಲಿಂಗಕ್ಕೆ ಶಿವನ ನಾಲ್ಕು ಮುಖಭಾವಗಳನ್ನು ಕೆತ್ತಲಾಗಿರುತ್ತದೆ. ಉಗ್ರ, ಕರುಣ, ಸೌಮ್ಯ ಮತ್ತು ಶಾಂತರಸದಲ್ಲಿ ಕೆತ್ತಲಾಗಿದೆ. ಇಂತಹ ಒಂದೇ ಒಂದು ಲಿಂಗ ಶಿರೂರ ಗ್ರಾಮದ ಮಧ್ಯದ ಬಸವೇಶ್ವರ ದೇವಾಲಯದ ಮುಂದಿನ ಕಟ್ಟೆಯಲ್ಲಿ ಚತುರ್ಮುಖ ಶಿವಲಿಂಗವೊಂದು ಕಂಡುಬರುವುದು.

೩. ವೀರಭದ್ರ

ಶಿವನ ಉಗ್ರರೂಪಕ್ಕೆ ಸೇರುವ ವೀರಭದ್ರ, ದಕ್ಷಬ್ರಹ್ಮನನ್ನು ಸಂಹಾರ ಮಾಡಲು ಶಿವನು ಒಮ್ಮೆ ನಾಟ್ಯ ಮಾಡುತ್ತಾ(ತಾಂಡವ) ತನ್ನ ಜಡೆಯನ್ನು ನೆಲಕ್ಕೆ ಅಪ್ಪಳಿಸಲು ಅದರಿಂದ

ವೀರಭದ್ರ ಉದ್ಭವಿಸಿದ. ಉಗ್ರರೂಪಕ್ಕೆ ಸೇರುವುದರಿಂದ ಉಗ್ರರೂಪದ ಭೈರವ ರೂಪವೇ ಇವನಿಗೆ ಇರುತ್ತದೆ. ವೀರಭದ್ರ ತಂಗಿಯಾದ ಭದ್ರಕಾಳಿಯ ಜೊತೆ ಸೇರಿ ದಕ್ಷನನ್ನು ಸಂಹಾರ ಮಾಡಿದ. ಅದರ ನೆನಪಿಗಾಗಿ ವೀರಭದ್ರನನ್ನು ಪೂಜಿಸಲಾಗುತ್ತದೆ. ಇಂತಹ ವೀರಭದ್ರನ ಮೂರ್ತಿಯನ್ನು ತ್ರಿಭಂಗದಲ್ಲಿ ನಿಂತಂತೆ, ನಾಲ್ಕು ಭುಜಗಳು, ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ ಹಾಗೂ ಢಾಲುಗಳು. ತಲೆಯ ಹಿಂದೆ ಆದಿಶೇಷನು ಹೆಡೆಬಿಚ್ಚಿ ನೆರಳು ನೀಡುವನು. ಕೆಳಭಾಗದ ಮಗ್ಗುಲಿಗೆ ಭದ್ರಕಾಳಿ, ಅಂಜಲಿ ಮುದ್ರೆಯಲ್ಲಿ ಟಗರಿನ ತಲೆಯ ದಕ್ಷ, ಕೆಲವೊಮ್ಮೆ ಅವನ ಮಡದಿ.

ಇಂತಹ ವೀರಭದ್ರನ ಶಿಲ್ಪ ದೇವಾಲಯ ಬಾಗಲಕೋಟೆ ಪರಿಸರದ ಮುಚಖಂಡಿಯ ವೀರಭದ್ರನಾಗಿದ್ದಾನೆ. ಈ ದೇವಾಲಯ ವಿಜಯನಗರೋತ್ತರವಾಗಿದ್ದರೂ ಅಭ್ಯಾಸಕ್ಕಾಗಿ ಮುಚಖಂಡಿ ವೀರಭದ್ರ ಶಿಲ್ಪವನ್ನು ತೆಗೆದುಕೊಳ್ಳಲಾಗಿದೆ.

೧. ಗ್ರಾಮ : ಮುಚಖಂಡಿ

ಶಿಲ್ಪ : ವೀರಭದ್ರ

ಧರ್ಮ : ಶೈವ

ಸ್ಥಳ : ವೀರಭದ್ರ ದೇವಾಲಯ ಗರ್ಭಗೃಹ

ಕಲ್ಲು : ಸುಣ್ಣದಕಲ್ಲು (ಬಳಪ)

ಕಾಲ : ೨೦ನೇ ಶತಮಾನ

ಶೈಲಿ : ವಿಜಯನಗರೋತ್ತರ

ಪೋಷಕರು : ಸ್ಥಳೀಯರು

ಶಿಲ್ಪದ ವಿವರಣೆ : ಮುಚಖಂಡಿಯ ವೀರಭದ್ರ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠೆ ಮಾಡಲಾದ ವೀರಭದ್ರನ ಶಿಲ್ಪ ೪-೫ ಅಡಿಯಷ್ಟು ಎತ್ತರವಾಗಿದೆ. ಸುಣ್ಣದ ಕಲ್ಲಿನಲ್ಲಿ(ಬಳಪ) ಕೆತ್ತಲಾದ ಇದು ೨೦ ನೇ ಶತಮಾನದಲ್ಲಿ ಇದನ್ನು ಕಂಡರಿಸಿ ಪ್ರತಿಷ್ಠೆ ಮಾಡಲಾಗಿದೆ.

ಶಿಲ್ಪವನ್ನು ತ್ರಿಭಂಗಿಯಲ್ಲಿ ನಿಂತಂತೆ, ಎಡಗಾಲನ್ನು ಒಂದು ಚಿಕ್ಕ ಮಣೆಯ ಮೇಲೆ ಇಟ್ಟಂತೆ, ಮುಖವನ್ನು ಉಗ್ರವಾಗಿ ಮೀಸೆಯಿರುವಂತೆ, ತಲೆಯ ಮೇಲೆ ನಾಗರಶೈಲಿಯ ಕಿರೀಟಧಾರಣೆಯಲ್ಲಿ ಕೆತ್ತಲಾಗಿದೆ. ಕೈಗಳಲ್ಲಿ ನಾಗಸರ್ಪ, ತ್ರಿಶೂಲ, ಮುಂದಿನ ಕೈಗಳಲ್ಲಿ ಖಡ್ಗ, ಆಯತಾಕಾರದ ಢಾಲಗಳಿವೆ. ಉಳಿದ ಕೈಗಳಲ್ಲಿ ಬೇರೆ ಬೇರೆ ಆಯುಧಗಳಿವೆ. ಕೊರಳಲ್ಲಿ ಲಿಂಗ, ಮಣಿಹಾರ, ಯಜ್ಞೋಪವೀತ,

ರುಂಡಮಾಲೆಗಳಿರುವುವು. ತಲೆಯ ಹಿಂದೆ ತ್ರಿಶೂಲ ಚಿತ್ರ, ಕೀರ್ತಿಮುಖ, ಅಲಂಕಾರಗಳನ್ನು ಕೆತ್ತಲಾಗಿದೆ.

ಈ. ಗಣೇಶ

ಗಣಪತಿಯ ಕುರಿತು, ಅವನ ಹುಟ್ಟಿನ ಮೂಲದ ಕುರಿತು ಹಲವಾರು ವಾದ, ವಿವಾದ, ಸಂಶೋಧನೆಗಳು ನಡೆದುಹೋಗಿವೆ. ಜೊತೆಗೆ ಅವನನ್ನು ನೂರೆಂಟು ಹೆಸರಿನಿಂದಲು ಕರೆಯುವುದುಂಟು. ಗಣೇಶನ ಹುಟ್ಟಿನ ಕುರಿತು ಶ್ವೇತಕಲ್ಪ, ಶಿವಾಪುರಾಣಗಳು ವಿಸ್ತೃತ ಮಾಹಿತಿ ನೀಡುವುವು. ಅವುಗಳ ಪ್ರಕಾರ ಗಣೇಶ ಶಿವಪಾರ್ವತಿಯರ ಮಗ, ಪಾರ್ವತಿಯ ನಿಷ್ಠಾವಂತ ಸೇವಕ, ಭೂತಗಣಗಳ ನಾಯಕ. ವಿನಾಯಕ, ವಿಘ್ನೇಶ್ವರ, ಏಕದಂತ, ಲಂಬೋಧರ, ಗಜಾನನ, ಗಣಪತಿ, ಶಕ್ತಿ ಇತ್ಯಾದಿ ಹೆಸರುಗಳುಂಟು.[೧೩] ಇಂತಹ ಗಣಪತಿಯ ವಿವಿಧ ರೀತಿಯ ಶಿಲ್ಪಗಳು ಬಾಗಲಕೋಟೆ ಪರಿಸರದ ಗ್ರಾಮಗಳಲ್ಲಿ ಹಲವಾರು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಶಿಲ್ಪಗಳ ಕುರಿತು ಚರ್ಚಿಸಲಾಗಿದೆ.

೧. ಗ್ರಾಮ : ಶಿರೂರು

ಶಿಲ್ಪ : ಗಣೇಶ

ಧರ್ಮ : ಶೈವ

ಭಂಗಿ : ಸುಖಾಸನ

ಸ್ಥಳ : ಶಿರೂರು ಕೆರೆಯ ಮೇಲಿನ ಗಣೇಶನ ಗುಡಿಯಲ್ಲಿ

ಕಲ್ಲು : ಕೆಂಪುಮರಳು

ಕಾಲ : ೧೧ನೇ ಶತಮಾನ (ಕ್ರಿ.ಶ. ೧೦೪೯)

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಪ್ರಭುಮಾರಸಿಂಘ, ಇತರರು

ಶಿಲ್ಪದ ವಿವರಣೆ ಶಿರೂರು ಗ್ರಾಮದ ಕೆರೆಯ ದಂಡೆಯ ಮೇಲೆ ಉತ್ತರಾಭಿಮುಖವಾಗಿ ಕೇವಲ ಗರ್ಭಗೃಹವಿರುವಂತೆ ಔತ್ತರೇಯ ಉಪಾಶೈಲಿಯಲ್ಲಿ ಗುಡಿಯನ್ನು ಕಟ್ಟಲಾಗಿದೆ. ಇದರಲ್ಲಿ ಗಣೇಶಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಪೋಷಕರು ಕ್ರಿ.ಶ. ೧೦೪೯ ರ ಶಾಸನದ ಶಿರೂರದ ಪ್ರಭು ಮಾರಸಿಂಘ ಮತ್ತು ನಂತರದಲ್ಲಿ ಇತರರು.

ಗರ್ಭಗೃಹದ ಚಿಕ್ಕ ನಾಳಪೀಠದ ಮೇಲೆ ಸುಕಾಸನ ಭಂಗಿಯಲ್ಲಿ ಕುಳಿತಂತೆ ಕೆಂಪುಮರಳು ಶಿಲೆಯಲ್ಲಿ ಕಂಡರಿಸಿ ಪ್ರತಿಷ್ಠಾಪಿಸಲಾಗಿದೆ. ದೊಡ್ಡದಾದ ಹೊಟ್ಟೆ (ಉದರ), ಕೊರಳಹಾರ, ಕಿವಿಯೋಲೆ, ಕಿರೀಟ, ಕಾಲಿಗೆ ಕಾಲ್ಗಡಗ, ನಡುವಿಗೆ ಪಟ್ಟಿ, ಧೋತಿ, ಅಲಂಕಾರಗಳು ಇರುವಂತೆ ಕೈಯಲ್ಲಿ ಪರಶು, ಪಾಶ, ಮೋದಕ ಹಾಗೂ ಅಭಯಹಸ್ತ ಮುದ್ರೆಗಳಿವೆ. ಶಿಲ್ಪವು ೧೮೦ ಸೆಂ.ಮೀ. ಎತ್ತರವಾಗಿದ್ದು ೮೦ ಸೆಂ.ಮೀ. ಅಗಲವಾಗಿದೆ. ಸದ್ಯ ಗಣೇಶಮೂರ್ತಿಯು ಭಗ್ನದ ಸ್ಥಿತಿಯಲ್ಲಿದೆ.

೨. ಗ್ರಾಮ : ಶಿರೂರ

ಶಿಲ್ಪ : ಗಣೇಶ

ಧರ್ಮ : ಶೈವ

ಭಂಗಿ : ಸುಖಾಸನ

ಸ್ಥಳ : ಶಿರೂರು ರಾಮಲಿಂಗ ಗುಡಿಯ ಪಶ್ಚಿಮಾಭಿಮುಖ ಗರ್ಭಗೃಹದಲ್ಲಿ

ಕಲ್ಲು : ಕೆಂಪುಮರಳು

ಕಾಲ : ೧೨ ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಮಾರಸಿಂಘ ಪ್ರಭು ಮತ್ತು ಲಕ್ಷ್ಮಿದೇವಿ ಇತರರು

ಶಿಲ್ಪದ ವಿವರಣೆ ಶಿರೂರ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಮುಂದಿನ ಪಶ್ಚಿಮಮುಖ ಗರ್ಭಗೃಹದಲ್ಲಿ ನಂತರ ಕಾಲದಲ್ಲಿ ಲಿಂಗದ ಬದಲಾಗಿ ಗಣೇಶ ಶಿಲ್ಪವನ್ನು ಸ್ಥಾಪನೆ ಮಾಡಲಾಗಿದೆ. ಇದೊಂದು ದೇವಾಲಯದ ಸಮಕಾಲೀನ ಕೋಷ್ಠ ಶಿಲ್ಪವಾಗಿದೆ. ಶಿಲ್ಪವನ್ನು ೮೪. ಸೆಂ.ಮೀ. ಎತ್ತರ ೭೧. ಸೆಂ.ಮೀ. ಅಗಲವಾಗಿರುವಂತೆ ಕೆಂಪುಮರಳು ಶಿಲೆಯಲ್ಲಿ ಕೆತ್ತಲಾಗಿದೆ. ಸದ್ಯ ನಾಳಪೀಠದ ಮೇಲೆ ಪ್ರತಿಷ್ಠೆ ಮಾಡಲಾಗಿದೆ. ಸುಖಾಸನಭಂಗಿ ಯಲ್ಲಿರುವಂತೆ ಒಂದು ಕಾಲು ಮಡಚಿ, ಇನ್ನೊಂದು ಕೆಳಗೆ ಇಳಿಬಿಡಲಾಗಿದೆ. ನಾಲ್ಕು ಕೈಗಳಲ್ಲಿ ಅಭಯಮುದ್ರೆ, ಮೋದಕ, ತ್ರಿಶೂಲ, ಅಂಕುಶ ಆಯುಧಗಳಿವೆ. ತಲೆಯ ಮೆಲೆ ಕಾಳಿಂಗಸರ್ಪ, ಎತ್ತರದ ಕಿರೀಟವಿದೆ. ಸೊಂಡಿಲು ಮಡಚಿದೆ. ಅವನ ವಾಹನ ಇಲಿ (ಮೂಷಿಕ) ಯನ್ನು ಕೆತ್ತಲಾಗಿದ್ದು, ತ್ರುಟಿತಗೊಂಡಿದೆ. ಉಳಿದಂತೆ ಉಡುಗೆ ತೊಡುಗೆಗಳ ಅಲಂಕಾರ ಕಂಡುಬರುವುವು.

ಇವಲ್ಲದೇ ಶಿರೂರದ ಬಸವೇಶ್ವರ ಕಟ್ಟೆಯಲ್ಲಿ ಒಂದು, ಲಕ್ಷ್ಮೀನಾರಾಯಣ ಗುಡಿಯ ನವರಂಗದ ಕೊಷ್ಠದಲ್ಲಿ ವೀರಾಪುರದ ಚಿಕ್ಕ ಗುಡಿಯ ಹತ್ತಿರ ಎರಡು(ಒಂದು ತ್ರುಟಿತ) ಕಂಡುಬಂದಂತೆ ಇನ್ನೂ ಅನೇಕ ಗ್ರಾಮಗಳ ವಿವಿಧ ದೇವಾಲಯಗಳ ಮುಂದೆ ಗಣೇಶನ ಶಿಲ್ಪ(ಮೂರ್ತಿ)ಗಳು ದೊರಕುವುವು.

ಉ. ನಂದಿ

ಉತ್ತರಕ್ಕಿಂತಲೂ ದಕ್ಷಿಣದಲ್ಲಿ ಶಿವನ ಗುಡಿಯಲ್ಲಿ, ಗುಡಿಯ ಮುಂದೆ ಬೇರೆ ಬೇರೆ ಕಟ್ಟೆ ದೇವಾಲಯಗಳ ಹತ್ತಿರ ನಂದಿಶಿಲ್ಪಗಳು ಸಾಮಾನ್ಯವೆನ್ನುವಂತೆ ಕಂಡುಬರುತ್ತವೆ. ನಂದಿ ಅಥವಾ ನಂದಿಕೇಶ್ವರನ ಕುರಿತು ಹೇಳುವ ಗ್ರಂಥಗಳಲ್ಲಿ ಶಿವಪುರಾಣ ಪ್ರಮುಖವಾದುದು. ಲಿಂಗಪುರಾಣವು ಸಹ ನಂದಿಕೇಶ್ವರ ಹುಟ್ಟಿನ ಕುರಿತು ಹೇಳುತ್ತದೆ.[೧೪] ಆದರೆ, ನಂದಿ ಅಥವಾ ನಂದಿಕೇಶ್ವರನ ಹೆಸರು ಬಸವಣ್ಣ(ಎತ್ತು)ನಿಗೆ ಹೇಗೆ ಬಂದಿತು ಎಂಬುದನ್ನು ಮಾತ್ರ ತಿಳಿಸುವುದಿಲ್ಲ. ಅದರೂ ನಂದಿ ರೂಪದ ಬಸವಣ್ಣ ಶಿವನ ವಾಹನವಾಗಿ ನಂದಿ, ನಂದಿಕೇಶ್ವರ, ಬಸವ, ವೃಷಭ ಹೆಸರಿನಲ್ಲಿ ನಾಡಿನುದ್ದಕ್ಕೂ ಸ್ಥಳೀಯವಾಗಿ ಕರೆಯಲ್ಪಡುತ್ತದೆ. ಇಂತಹ ನಂದಿಗಳು ಬಾಗಲಕೋಟೆ ಪರಿಸರದ ಗ್ರಾಮಗಳಲ್ಲಿ ಸಾಕಷ್ಟು ದೊರಕುತ್ತವೆ. ಶಿವಲಿಂಗ ಪ್ರತಿಷ್ಠೆಯ ದೇವಾಲಯಗಳಿದ್ದರೂ ಅದರಲ್ಲಿಯೂ ದೊಡ್ಡದಾದ ನಂದಿಶಿಲ್ಪದಿಂದ ಬಸವೇಶ್ವರ, ಬಸವಣ್ಣನ ದೇವಾಲಯವೆಂದು ಕರೆಯುವುದುಂಟು. ಉದಾಹರಣೆಗೆ ಹಳ್ಳೂರ ಬಸವೇಶ್ವರ, ಬಾಗಲಕೋಟೆ ಮೋಟಗಿ ಬಸವೇಶ್ವರ ದೇವಾಲಯಗಳಲ್ಲಿ ನಂದಿಶಿಲ್ಪಕ್ಕಾಗಿ ಪ್ರತ್ಯೇಕ ಮಂಟಪವನ್ನೇ ಕಟ್ಟಿರುವುದು, ಕಂಡುಬರುತ್ತದೆ. ಶಿರೂರದ ಸಿದ್ಧೇಶ್ವರ ದೇವಾಲಯದ ಮುಂದೆ ಪ್ರಭುಮಾರಸಿಂಘನು ನಂದಿಮಂಟಪ ಕಟ್ಟಿಸಿದ ಕುರಿತು ಶಾಸನ ಉಲ್ಲೇಖಿಸುವುದು.[೧೫]

ಈ ಮಂಟಪದ ನಾಲ್ಕು ಸ್ತಂಭದ ಮೇಲೆ ಲುಪಾಕಾರದ ಮಧ್ಯದಲ್ಲಿರುವಂತೆ ಇದ್ದು, ಮಗ್ಗುಲಿನ ಎರಡು ಭಿತ್ತಿಗಳನ್ನು ನಿರ್ಮಿಸಿ ಪೂರ್ವ–ಪಶ್ಚಿಮದಲ್ಲಿ ಪ್ರವೇಶಗಳನ್ನು ಬಿಡಲಾಗಿದೆ. ಇದರ ಮೂಲ ವಿಗ್ರಹ ಸ್ಥಳಾಂತರಗೊಂಡಿದ್ದು, ದೇವಾಲಯದ ಪ್ರಾಕಾರದ ಹೊರಗೆ ಸಿದ್ಧೇಶ್ವರ ಗರ್ಭಗೃಹ ಲಿಂಗಕ್ಕೆ ನೇರವಾಗಿ ಮತ್ತೊಂದು ಮೂರಡಿ ಎತ್ತರದ ನಂದಿಶಿಲ್ಪವನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಈ ಶಿಲ್ಪವು ಬಹಳ ನುಣಪಾಗಿದ್ದು ನಂತರದ ಕಾಲದ ಪ್ರತಿಷ್ಠಾಪನೆ ಎಂದು ಹೇಳಬಹುದು. ಇದೇ ಶಿರೂರದ ಬಸವೇಶ್ವರ ದೇವಾಲಯದ ಕಟ್ಟೆಯಲ್ಲಿ ಒಂದು, ರಾಮಲಿಂಗೇಶ್ವರ ದೇವಾಲಯದಲ್ಲಿ ಒಂದು ನಂದಿಶಿಲ್ಪಗಳು ಕಂಡುಬರುತ್ತವೆ.

ಇದೇ ನಂದಿ ಮಂಟಪದ ಸಾಲಿಗೆ ಹಳ್ಳೂರದ ಬಸವೇಶ್ವರ ದೇವಾಲಯದ ಎರಡು ಗರ್ಭಗೃಹಗಳ ಮಧ್ಯದ ನಂದಿಮಂಟಪ ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯದ ನಂದಿಮಂಟಪವನ್ನು ನೆನಪಿಸುತ್ತದೆ.

೬.೪. ವೈಷ್ಣವ ಶಿಲ್ಪಗಳು

ವೈಷ್ಣವಧರ್ಮವು ಶೈವಧರ್ಮದಂತೆ ಹಿಂದೂಧರ್ಮದ ಕವಲುಧರ್ಮವಾಗಿದ್ದು, ಭಾರತದ ತುಂಬೆಲ್ಲಾ ಹರಡಿಕೊಂಡಿದೆ. ಇದರ ಪ್ರಭಾವ ಸಾಕಷ್ಟಿದ್ದರೂ ಶಿವನಷ್ಟು ಪೂಜೆಗೊಳ್ಳುವುದಿಲ್ಲ. ಶಿವನಂತೆ ವಿಷ್ಣುವು ಸಹ ವೈಷ್ಣವಧರ್ಮದ ಸ್ಥಾಪಕ. ಅದನ್ನು ಬ್ರಾಹ್ಮಣಧರ್ಮವೆಂತಲೂ ಕರೆಯಲಾಗಿದೆ. ವೈದಿಕ ವೇದ ಕಾಲವು ಬ್ರಾಹ್ಮಣರ ಕಾಲವಾಗಿತ್ತು. ವಿಷ್ಣುವನ್ನು ವೇದಕಾಲದ ದೇವರೆಂದು ಒಪ್ಪಲಾಗಿದೆ. ಇಲ್ಲಿ ವಿಷ್ಣುವೆನ್ನುವ ಮಾತಿಗೆ ಹರಡು, ಆವರಿಸು ಎಂದಾಗುತ್ತದೆ. ಹರಡಿಕೊಳ್ಳುವುದು, ಅವರಿಸಿಕೊಳ್ಳುವುದು ಇವನ ವೈಶಿಷ್ಟ್ಯವಾಗಿದ್ದು, ವೇದದಲ್ಲಿ ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಆವರಿಸಿಕೊಂಡನೆಂಬ ಬಲಿಚಕ್ರವರ್ತಿಯ ಕಥೆ ಋಗ್ವೇದದಲ್ಲಿ ಬರುತ್ತದೆ. ವೇದಗಳಲ್ಲಿ ಇದರ ಸ್ಪಷ್ಟ ಉಲ್ಲೇಖ ಹೊರಹಾಕುವುದರಿಂದ ಆಗ ವಿಷ್ಣು ಒಬ್ಬ ದೇವನೆಂದು ಒಪ್ಪಿಕೊಂಡ ವಿಷಯ ಸ್ಪಷ್ಟವಾಗಿ ಬರುತ್ತದೆ.[೧೬] ಇಂತಹ ಕಥೆಯ ವಿಷ್ಣು ದೇವಾಲಯ, ಶಿಲ್ಪಗಳು ಬಾಗಲಕೋಟೆ ಜಿಲ್ಲೆಯಲ್ಲಿ ಕೆಲವು ಕಂಡುಬರುತ್ತವೆ.

ಅ. ವಿಷ್ಣು

ಹಿಂದೂ ತ್ರಿನೀತಿಯಲ್ಲಿ ಶಿವ, ಬ್ರಹ್ಮರ ಜೊತೆ ವಿಷ್ಣು ಸಹ ಒಬ್ಬನಾಗಿದ್ದಾನೆ. ಇಂತಹ ವಿಷ್ಣುವನ್ನು ಮೂರು ರೀತಿಯಲ್ಲಿ ಕಾಣುತ್ತೇವೆ. ಅಂದರೆ, ಬೆಂಕಿ, ಬೆಳಕು, ಸೌರಗಳೆಂದು, ಸೂರ್ಯಬೆಳಕು ಪಡೆದವನೆಂದು ಕರೆದು, ಕೆಲವು ಪವಿತ್ರ ದಿನಗಳಲ್ಲಿ ಸೂರ್ಯ ಮತ್ತು ವಿಷ್ಣುವಿನ ಪ್ರತಿರೂಪವಾಗಿ ಸೂರ್ಯನಾರಾಯಣ ಪೂಜೆ ಮಾಡುವುದುಂಟು.[೧೭]

ವಿಷ್ಣುವನ್ನು ನಿಂತ(ಸಮ), ಆಸನ(ಸುಖಾಸನ), ಶಯನ (ಮಲಗಿದ)ವೆಂಬ ಮೂರು ಭಂಗಿಯಲ್ಲಿ ಕೆತ್ತಲಾಗಿದೆ. ನಿಂತ ವಿಷ್ಣುವಿಗೆ ಸ್ಥಾನಿಕ ಮೂರ್ತಿಯೆಂದು ಕರೆಯಲಾಗಿದೆ. ಶಿವನಂತೆ ವಿಷ್ಣುವಿಗೆ ದಶಾವತಾರ, (೨೪) ಅವತಾರಗಳಿವೆ. ಆದ್ದರಿಂದ ಅವನನ್ನು ಅವತಾರ, ಆವೇಶ, ಅಂಶವೆಂಬ ಮೂರು ಬಗೆಯಲ್ಲಿ ವರ್ಗೀಕರಿಸಲಾಗಿದೆ. ಅಂದರೆ ವಿಷ್ಣು ಹೆಚ್ಚಾಗಿ ಸಮಭಂಗಿಯಲ್ಲಿರುತ್ತಾನೆ.

ಇಂತಹ ವಿಷ್ಣುವಿನ ದೇವಾಲಯಗಳು ಬೇವೂರದ ನಾರಾಯಣ(ಸಂಗಮೇಶ್ವರ) ದೇವಾಲಯದ ಶಿವನ ಜೊತೆಗೆ, ಶಿರೂರದಲ್ಲಿ ಪ್ರತ್ಯೇಕ ದೇವಾಲಯ, ಮಂಕಣಿಯಲ್ಲಿ ಲಕ್ಷ್ಮೀನಾರಾಯಣ, ಹರಿ ಎಂಬ ಎರಡು ಗರ್ಭಗೃಹ ಹಾಗೂ ಪ್ರತ್ಯೇಕ ಶಿಲ್ಪವಾಗಿಯೂ ಹಲವು ಗ್ರಾಮಗಳಲ್ಲಿ ಕಂಡುಬರುತ್ತಿದ್ದು ಕೆಲವು ಶಿಲ್ಪಗಳನ್ನು ಮಾತ್ರ ಗಮನಿಸಲಾಗಿದೆ.

೧. ಗ್ರಾಮ : ಶಿರೂರ

ಶಿಲ್ಪ : ಲಕ್ಷ್ಮೀನಾರಾಯಣ

ಧರ್ಮ : ವೈಷ್ಣವ

ಭಂಗಿ : ಸಮಭಂಗಿ

ಸ್ಥಳ : ಶಿರೂರ ಲಕ್ಷ್ಮೀನಾರಾಯಣ ದೇವಾಲಯ ಗರ್ಭಗೃಹ

ಕಲ್ಲು : ಕೆಂಪುಮರಳು ಶಿಲೆ

ಕಾಲ : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಪ್ರಾಚೀನ ಸ್ಥಳೀಯ ಪ್ರಭುಗಳು

ಶಿಲ್ಪದ ವಿವರಣೆ ಶಿರೂರ ಗ್ರಾಮದ ಲಕ್ಷ್ಮೀನಾರಾಯಣ ಹೆಸರಿನ ದೇವಾಲಯ ದ್ವಿಕೂಟವಾಗಿದ್ದು, ಒಂದು ಗರ್ಭಗೃಹದಲ್ಲಿ ಮಾತ್ರ ನಿಂತ ಭಂಗಿಯ ಲಕ್ಷ್ಮೀನಾರಾಯಣ ಶಿಲ್ಪ ಪ್ರತಿಷ್ಠೆಗೊಂಡಿವೆ. ಸಮಭಂಗಿಯಲ್ಲಿ ಲಕ್ಷ್ಮೀ-ವಿಷ್ಣು ನಿಂತಿದ್ದು ವಿಷ್ಣುವಿಗೆ ನಾಲ್ಕು ಕೈಗಳು, ಕೈಗಳಲ್ಲಿ ಶಂಖ, ಚಕ್ರಗಳು, ಒಂದು ಕೈ ಅಭಯಮುದ್ರೆ, ಒಂದು ಕೈ ಲಕ್ಷ್ಮೀಯನ್ನು ತಬ್ಬಿಕೊಂಡಿದೆ (ಬಳಸಿದೆ). ಲಕ್ಷ್ಮೀಗೆ ಎರಡು ಕೈಗಳು. ಒಂದು ಕೈ ಅಭಯ ಇನ್ನೊಂದು ಕೈ ವಿಷ್ಣುವನ್ನು ಬಳಸಿದೆ. ಶಿಲ್ಪಗಳಿಗೆ ಉಡುಗೆ ತೊಡುಗೆಗಳನ್ನು ಆಲಂಕಾರಿಕವಾಗಿ ಕೆತ್ತಲಾಗಿದೆ. ಚಾಲುಕ್ಯ ಶೈಲಿಯಲ್ಲಿರುವುದರಿಂದ ಇವು ಮಿತವಾಗಿವೆ.

೬.೫. ದಿಕ್ಪಾಲಕರು

ಹಿಂದೂ ಪುರಾಣದ ಕಥೆಗಳ ಪ್ರಕಾರ ವಿಶ್ವದ ಎಂಟು ದಿಕ್ಕುಗಳನ್ನು ಪಾಲನೆ ಮಾಡುವವರು ಲೋಕಪಾಲಕ ಅಥವಾ ದಿಕ್ಪಾಲಕರೆಂದು ಕರೆಯಲಾಗುತ್ತದೆ. ಪುರಾಣ ಪಟ್ಟಿಗಳ ಮುಖಾಂತರ ಪೂರ್ವಕ್ಕೆ ಸೂರ್ಯ, ಪಶ್ಚಿಮಕ್ಕೆ ವರುಣ, ಉತ್ತರಕ್ಕೆ ಸೋಮ, ದಕ್ಷಿಣಕ್ಕೆ ಯಮ. ಆದರೆ ಇನ್ನೊಂದು ಪಟ್ಟಿಯಂತೆ ಪೂರ್ವಕ್ಕೆ ಇಂದ್ರ, ಪಶ್ಚಿಮಕ್ಕೆ ವರುಣ, ಉತ್ತರಕ್ಕೆ ಕುಬೇರ, ದಕ್ಷಿಣಕ್ಕೆ ಯಮ, ನಾಲ್ಕು ದಿಕ್ಕುಗಳ ಮಧ್ಯವಿರುವ ದಿಕ್ಕುಗಳಿಗೆ ಅಗ್ನಿ, ನಿಋತಿ, ವಾಯು ಮತ್ತು ಈಶಾನ್ಯರೆಂದು ಕರೆಯಲಾಗಿದೆ. ಒಂದು ಕಾಲಕ್ಕೆ ಪೂಜೆಗೊಂಡಿದ್ದ, ಅಷ್ಟದಿಕ್ಪಾಲಕರು, ನವಗ್ರಹಗಳು ಕಾಲಾಂತರದಲ್ಲಿ ಪೂಜೆಯಿಂದ ಹಿನ್ನಡೆ ಸಾಧಿಸಿಕೊಂಡವು.[೧೮] ಅದರಲ್ಲಿ ಸೂರ್ಯನ ಪೂಜೆ ಮಾತ್ರ ವಿಷ್ಣುವಿನ ಜೊತೆ ನಡೆದುಬಂದಿದೆ.

ಅ. ಸೂರ್ಯ ನವಗ್ರಹಗಳಲ್ಲಿ ಒಬ್ಬನಾದ ಸೂರ್ಯನು ಪ್ರಮುಖ ದೇವತೆಗಳಂತೆ ಪೂಜೆಗೊಳ್ಳುತ್ತಾನೆ. ವಿಷ್ಣು, ಶಿವನ ಗುಡಿಗಳಲ್ಲಿ ಕೋಷ್ಠದಲ್ಲಿ, ತ್ರಿಕೂಟ ತ್ರೈಪುರುಷ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವನಿಗಾಗಿ ಬಾಗಲಕೋಟೆ ಪರಿಸರದಲ್ಲಿ ಬೇವೂರಿನ ತ್ರೈಪುರುಷ ದೇವಾಲಯ (ಸಂಗಮೇಶ್ವರ) ಒಂದು ಗರ್ಭಗೃಹ ಶಿಲ್ಪವಾಗಿ ಪ್ರತಿಷ್ಠೆಗೊಂಡಿದೆ. ಶಿರೂರದ ಲಕ್ಷ್ಮೀನಾರಾಯಣ ದೇವಾಲಯದ ಕೋಷ್ಠದಲ್ಲಿ ಒಂದು ಶಿಲ್ಪ ಕಂಡುಬರುತ್ತದೆ. ಶಿರೂರದಲ್ಲಿ ಲಕ್ಷ್ಮೀದೇವಿ ಪ್ರಭುವಿಣಿಯ ಕುಲಕರಣಿ ಆದಿಯಣ್ಣನು ಆದಿತ್ಯ ದೇವಾಲಯ ಕಟ್ಟಿಸಿದ್ದನ್ನು ಶಾಸನ ಹೇಳುತ್ತದೆ.[೯]

೧. ಗ್ರಾಮ	:	ಶಿರೂರ
ಶಿಲ್ಪ	:	ಸೂರ್ಯ
ಧರ್ಮ	:	ದಿಕ್ಪಾಲಕ
ಭಂಗಿ	:	ಸಮಭಂಗಿ
ಸ್ಥಳ	:	ಲಕ್ಷ್ಮೀನಾರಾಯಣ ದೇವಾಲಯದ ಕೋಷ್ಠದಲ್ಲಿ
ಕಲ್ಲು	:	ಕೆಂಪುಮರಳು ಶಿಲೆ
ಕಾಲ	:	ಕ್ರಿ.ಶ. ೧೨ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಪೋಷಕರು	:	ಪ್ರಾಚೀನ ಸ್ಥಳೀಯರು(ಆಳುವ)

ಶಿಲ್ಪದ ವಿವರಣೆ ಶಿರೂರು ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯ ನವರಂಗದ ಕೋಷ್ಠಕದಲ್ಲಿ ಸೂರ್ಯನ ಶಿಲ್ಪ ಪ್ರತಿಷ್ಠೆಗೊಂಡಿದೆ. ಸುಮಾರು ೨ ಅಡಿ ಎತ್ತರವಿರುವ ಶಿಲ್ಪವನ್ನು ಕೆಂಪುಮರಳು ಶಿಲೆಯಲ್ಲಿ ಕಂಡರಿಸಲಾಗಿದೆ. ಸಮಭಂಗಿಯಲ್ಲಿರುವ ಸೂರ್ಯ ಎರಡು ಕೈಗಳಲ್ಲಿ ಕಮಲದ ಮೊಗ್ಗುಗಳನ್ನು ಹಿಡಿದಿದ್ದಾನೆ. ಕೆಳಭಾಗದಲ್ಲಿ ಚಿಕ್ಕದಾಗಿ ಅವನ ಇಬ್ಬರು ಮಡದಿಯರಾದ ಉಷೆ-ಪ್ರತ್ಯೂಷೆಯರ ಶಿಲ್ಪ ಕೆತ್ತಲಾಗಿದೆ. ತಲೆಯ ಮೇಲೆ ನಾಗರಶೈಲಿ ವಿಮಾನದಂತೆ ಕಿರೀಟ ಮಕುಟವಿದೆ. ಉಳಿದಂತೆ ಕೊರಳಹಾರ, ದೋತಿ, ಕೈಬಳೆ, ಕಾಲ್ಬಳೆ, ತೋಳ್ಬಂದಿ, ಇತ್ಯಾದಿ ಉಡುಗೆ-ತೊಡುಗೆ ಅಲಂಕಾರಗಳಿವೆ. ಇದರಂತೆ ಸುಂದರವಾಗಿ ಬೇವೂರಿನ ಸಂಗಮೇಶ್ವರ ದೇವಾಲಯದ ಶಿಲ್ಪವು ಕಂಡುಬರುತ್ತದೆ.

೬.೬. ಜಿನ್ ಶಿಲ್ಪಗಳು

ವೇದಕಾಲದ ನಂತರ ಸಾಮ್ರಾಜ್ಯಗಳಯುಗ ಭಾರತದಲ್ಲಿ ಪ್ರಾರಂಭವಾಯಿತು. ಆಗ ಸಿದ್ಧಾರ್ಥನೆಂಬ ಅರಸನ ಮಗ ಮಹಾವೀರ ರಾಜ್ಯವಾಳುವುದನ್ನು ಬಿಟ್ಟು ಸನ್ಯಾಸಿಯಾಗಿ ತಪಸ್ಸು ಮಾಡಿ 'ಕೈವಲ್ಯ ಜ್ಞಾನ' ಪಡೆದವನು. ಅವನಿಂದ ಹುಟ್ಟಿರುವುದೇ ಜೈನಧರ್ಮ. ಇವನಿಂದ ಉತ್ತರದಲ್ಲಿ ಹುಟ್ಟಿದ್ದು ಭಾರತೀಯ ಪ್ರಾಚೀನ ಧರ್ಮಗಳಲ್ಲಿ ಒಂದೆನಿಸಿದೆ. ಜೈನ ಮತ್ತು ಜೈನೇತರ ಗ್ರಂಥಗಳು, ಶೀಲಾಲೇಖಗಳು, ಪ್ರಾಚ್ಯವಸ್ತುಗಳು ದಾಖಲೆ ಒದಗಿಸುತ್ತವೆ. ಉತ್ತರದಲ್ಲಿ ಪ್ರಾಚೀನ ಕಾಲದಲ್ಲಿ ಹುಟ್ಟುಪಡೆದು ಪ್ರಚಾರಕ್ಕೆ ಬಂದರೂ ದಕ್ಷಿಣ ಭಾರತಕ್ಕೆ ಕ್ರಿ.ಶ. ೬ನೆಯ ಶತಮಾನದ ನಂತರದ ಶ್ರವಣಬೆಳಗೊಳ ಶಾಸನಗಳು ಮೌರ್ಯ ಅರಸನಿಂದ ಬಂದಿತೆಂದು ಹೇಳುವುವು. ಅವುಗಳಂತೆ ಮೌರ್ಯ ಚಂದ್ರಗುಪ್ತ ತನ್ನ ಗುರು ಭದ್ರಬಾಹುವಿನ ಜೊತೆಗೆ ದಕ್ಷಿಣದ ಇಂದಿನ ಕರ್ನಾಟಕದ ಶ್ರವಣಬೆಳಗೊಳದಲ್ಲಿ ತನ್ನ ಕೊನೆಗಾಲವನ್ನು ಕಳೆದನು.[೨೦] ಇದರ ಪ್ರಕಾರ ಕ್ರಿ.ಪೂ.ದಲ್ಲಿಯೇ ದಕ್ಷಿಣಭಾರತ ಅದರಲ್ಲಿಯೂ ಕರ್ನಾಟಕದ ಶ್ರವಣಬೆಳಗೊಳಕ್ಕೆ ಮೊದಲಬಾರಿಗೆ ಜೈನಧರ್ಮ ಕಾಲಿಟ್ಟಿತು. ನಂತರ ಕಾಲದಲ್ಲಿ, ಬೌದ್ಧಧರ್ಮವು ಸಹ ದಕ್ಷಿಣಕ್ಕೆ ಮೌರ್ಯ ಅರಸನಿಂದಲೇ ಬಂದಿತು ಎಂಬುದು ಬಹಳ ಮಹತ್ವಪೂರ್ಣ ವಿಷಯವಾಗಿದೆ.

ಹೀಗೆ ಮೌರ್ಯರಿಂದ ದಕ್ಷಿಣದ ಕನ್ನಡನಾಡಿನಲ್ಲಿ ಬಂದು ನೆಲೆನಿಂತ ಜೈನಧರ್ಮ ಇಲ್ಲಿಯ ಆಳರಸರಾದ ಗಂಗ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಯಾದವರಸರ ಹಾಗೂ ಅವರ ಸಾಮಂತರಾದ ಗೋವೆಕದಂಬ ಸಾಮಂತರಸರಿಂದ ಪ್ರೋತ್ಸಾಹ ಪಡೆದು ಶೈವ, ವೈಷ್ಣವ ಜೊತೆಗೆ ಸಮಾನವಾಗಿ ಬೆಳೆಯಿತು. ಧರ್ಮ ಬೆಳೆದಂತೆ ಅದರ ಬಸದಿಗಳು, ಶಿಲ್ಪಗಳು, ಬೆಳೆದುಬಂದವು. ಸಾಹಿತ್ಯವಂತೂ ಉನ್ನತ ಮಟ್ಟದಲ್ಲಿ ಬೆಳೆದು ಅನೇಕ ಕವಿ ಪುಂಗವರಾದ ರನ್ನ, ಜನ್ನ, ಪೊನ್ನರಂತ ರತ್ನತ್ರಯರು ಸಮಂತಭದ್ರರೆಂಬ ಅನೇಕ ಕವಿಗಳು ಹುಟ್ಟಿ, ಆದಿಕವಿಯಾದ ಪಂಪ ಕನ್ನಡನಾಡಿನಲ್ಲಿ ಹುಟ್ಟಿ ನಾಡನ್ನು ಹರಸಿ ಹೊಗಳಿದ್ದಾನೆ. ಇದಕ್ಕೆ ಬಾಗಲಕೋಟೆ ಪರಿಸರವು ಹೊರತಾಗಿಲ್ಲ. ಇಲ್ಲಿ ಬಾಗಡಗೆ ಸಿಂಧರ ಆಶ್ರಯದಲ್ಲಿ ಬೆಳೆದುಬಂದಿದೆ. ಶಿರೂರ, ಹಳ್ಳೂರ, ಬಿಲ್‌ಕೆರೂರ, ಬಾಗಲಕೋಟೆ ಗ್ರಾಮಗಳು ಪ್ರಾಚೀನ ಜೈನರ ಕೇಂದ್ರಗಳಾಗಿದ್ದವು. ಇಲ್ಲಿ ಹೆಚ್ಚಾಗಿ ಮಹಾವೀರ ಮತ್ತು ಪಾರ್ಶ್ವನಾಥನ ಆರಾಧನೆ ಹೆಚ್ಚಾಗಿದ್ದಂತೆ ತೋರುವುದು. ಇವುಗಳಲ್ಲಿ ಬಿಲ್‌ಕೆರೂರದ ಎರಡು ಶಿಲ್ಪಗಳು ಬಹಳ ತ್ರುಟಿತಗೊಂಡಿದೆ.

ಅ. ಪಾರ್ಶ್ವನಾಥ

೨೩ ನೇ ತೀರ್ಥಂಕರನಾದ ಪಾರ್ಶ್ವನಾಥ ಬನಾರಸ ಕ್ಷತ್ರೀಯ ಅರಸ ಅಶ್ವಸೇನ ಹಾಗೂ ವಾವ (ಬ್ರಹ್ಮರ)ರ ಮಗನಾಗಿ ಜನಿಸಿದನು. ಮೋಕ್ಷ ಸಾಧಿಸಬೇಕೆಂದು ದೇವದಾರು ಅಥವಾ

ದಾರತೀವೃಕ್ಷದ ಕೆಳಗಡೆ ನಿಂತು ತಪಸ್ಸಾಚರಿಸಿ ಕೈವಲ್ಯಜ್ಞಾನ ಪಡೆದನು.[೨೧] ಪಾರ್ಶ್ವನಾಥನು ತನ್ನ ಜೀವಿತದ ಕಾಲದವರೆಗೆ ಜಿನಧರ್ಮವನ್ನು ಪ್ರಚಾರ ಮಾಡಿದನು. ಇವನು ಕಾಯೋತ್ಸರ್ಗ ಭಂಗಿಯಲ್ಲಿ ತಪಸ್ಸು ಮಾಡುತ್ತಿರುವಾಗ ಗಾಳಿ–ಮಳೆಯಿಂದ ರಕ್ಷಣೆಯೊದಗಿಸಲು ಆದಿಶೇಷನು (ಸರ್ಪ) ತನ್ನ ಹೆಡೆಯನ್ನು ಬಿಚ್ಚಿ ಪಾರ್ಶ್ವನಾಥನ ತಲೆಯ ಮೇಲೆ ಹಿಡಿದು ರಕ್ಷಣೆ ಮಾಡಿದನೆಂಬ ಕಥೆಯಿದೆ. ಅದಕ್ಕಾಗಿ ಶಿಲ್ಪದಲ್ಲಿ ಆದಿಶೇಷನನ್ನು ಪಾರ್ಶ್ವನಾಥನ ಹಿಂದೆ ಚಿತ್ರಿಸಲಾಗಿರುತ್ತದೆ. ಅದನ್ನು ಪಾರ್ಶ್ವನಾಥನ ಚಿಹ್ನೆಯೆಂದು ತಿಳಿಯಲಾಗಿದೆ. ಶಿಲ್ಪದಲ್ಲಿ ಮೂರು, ಏಳು, ಹನ್ನೊಂದು ಹೆಡೆಗಳಿರುವಂತೆ ಅವನ ತಲೆಯ ಹಿಂದೆ ಹೆಡೆಬಿಚ್ಚಿ ನೆರಳು ನೀಡುತ್ತಿರುವಂತೆ ಕೆತ್ತಲಾಗಿರುತ್ತದೆ.

ಇಂತಹ ಪಾರ್ಶ್ವನಾಥನ ಪ್ರಾಚೀನ ಶಿಲ್ಪಗಳು ಕಂಡುಬರದಿದ್ದರೂ ಬಾಗಲಕೋಟೆಯ ಆಧುನಿಕ ಬಸದಿಯಲ್ಲಿ ಬಹಳ ಜೀರ್ಣವಾದ ಒಂದು ಶಿಲ್ಪವನ್ನು ಗುಡಿಯಲ್ಲಿ ಇಡಲಾಗಿದೆ. ಆಧುನಿಕವಾದ ಒಂದು ನಿಂತ, ಒಂದು ಕುಳಿತ ಭಂಗಿ (ಪದ್ಮಾಸನ) ಶಿಲ್ಪಗಳು ಜೈನಪೇಟೆಯ ಬಸದಿಯಲ್ಲಿ ಪ್ರತಿಷ್ಠೆ ಮಾಡಲಾಗಿದೆ. ಪ್ರಾಚೀನ ಶಿಲ್ಪ ಇಲ್ಲಿ ಕಂಡುಬಂದಿದ್ದರಿಂದ ಬಾಗಲಕೋಟೆಯಲ್ಲಿ(ಬಾಗಡಗೆ) ಒಂದು ಪಾರ್ಶ್ವನಾಥನ ಬಸದಿ ಇದ್ದು ನಂತರದ ಕಾಲದಲ್ಲಿ ನಶಿಸಿಹೋಗಿದ್ದು ಒಂದು ಶಿಲ್ಪ ಅದರ ಕುರುಹುವಾಗಿ ಉಳಿದುಬಂದಿದೆ. ಇವನ್ನು ಹೊರತುಪಡಿಸಿದರೆ ಹಳ್ಳೂರದ ಮೇಲ್ಗುಡಿ ಬಸದಿಯ ಹೊರಭಿತ್ತಿಯಲ್ಲಿ ಎಂಟು ಎತ್ತರವಾದ ಪಾರ್ಶ್ವಶಿಲ್ಪಗಳು ಕಂಡುಬರುವವು.

ಆ. ಮಹಾವೀರ ಜಿನ್

ಜೈನಧರ್ಮದ ಕೊನೆಯ ಮತ್ತು ೨೪ನೇ ತೀರ್ಥಂಕರನಾದ ಮಹಾವೀರ ಜೈನ ಧರ್ಮದ ನಿಜವಾದ ಸ್ಥಾಪಕನೆನಿಸಿಕೊಂಡಿದ್ದಾನೆ. ಇವನು ವಿದೇಹದ ಕ್ಷತ್ರಿಯ ಅರಸನಾದ ಸಿದ್ಧಾರ್ಥ, ತಾಯಿ ತ್ರಿಸಲಾದೇವಿಯರ ಮಗನಾಗಿ ಕುಂದ ಗ್ರಾಮದಲ್ಲಿ ಹುಟ್ಟಿದನು.[೨೨] ವಿವಾಹದ ನಂತರ ವೈವಾಹಿಕ ಜೀವನದಿಂದ ಬಿಡುಗಡೆ ಹೊಂದಿ ಸತ್ಯದ ಅನ್ವೇಷಣೆಯಲ್ಲಿ ತೊಡಗಿ ಸಾಕಷ್ಟು ಕಷ್ಟ ಅನುಭವಿಸಿ ಕೊನೆಗೆ ಅಶೋಕವೃಕ್ಷದ ಕೆಳಗಡೆ ಕುಳಿತು ತಪಸ್ಸು ಆಚರಿಸಿ ಕೇವಲಜ್ಞಾನ ಪಡೆದನು. ನಂತರ ಉತ್ತರ ಭಾರತದಲ್ಲಿ ತನ್ನ ತತ್ವಗಳನ್ನು ಪ್ರಚಾರ ಮಾಡಿದನು.

ಇಂತಹ ಮಹಾವೀರನ ಶಿಲ್ಪಗಳು ಹಳ್ಳೂರದ ಮೇಲ್ಗುಡಿ ಬಸದಿಯಲ್ಲಿ ಭಗ್ನಗೊಂಡ ಒಂದು ಶಿಲ್ಪ, ಶಿರೂರದ ರಾಮಲಿಂಗ ದೇವಾಲಯದ ಮಂಟಪದಲ್ಲಿ (ಬಹುಶಃ ಇಂದು ಬಾಗಲಕೋಟೆ ಮ್ಯೂಜಿಯಂನಲ್ಲಿ) ಎರಡು ಮಹಾವೀರ ಶಿಲ್ಪಗಳು ಕಂಡುಬರುತ್ತವೆ. ಬಹುಶಃ ಮಹಾವೀರ ಕುಳಿತು ತಪಸ್ಸು ಮಾಡಿದ್ದರಿಂದ ಶಿಲ್ಪದಲ್ಲಿ ಅವನನ್ನು ಕುಳಿತ ಧ್ಯಾನಭಂಗಿಯಲ್ಲಿಯೇ ಕೆತ್ತಲಾಗಿದೆ.

೧. ಗ್ರಾಮ : ಶಿರೂರ

ಶಿಲ್ಪ : ಮಹಾವೀರ

ಧರ್ಮ : ಜೈನ

ಭಂಗಿ : ಪದ್ಮಾಸನ ಧ್ಯಾನಭಂಗಿ

ಸ್ಥಳ : ರಾಮಲಿಂಗೇಶ್ವರ ದೇವಾಲಯದ ಮಂಟಪದಲ್ಲಿ

ಕಲ್ಲು : ಕೆಂಪುಮರಳು ಶಿಲೆ

ಕಾಲ : ರಾಷ್ಟ್ರಕೂಟ, ೯ನೇ ಶತಮಾನ

ಶೈಲಿ : ರಾಷ್ಟ್ರಕೂಟ

ಪೋಷಕರು : ಬಹುಶಃ ಸಿಂಧರಸರು

ಶಿಲ್ಪದ ವಿವರಣೆ ಶಿರೂರದ ರಾಮಲಿಂಗೇಶ್ವರ ದೇವಾಲಯದ ಮಂಟಪದಲ್ಲಿ ಇಡಲಾದ ಮಹಾವೀರ ಶಿಲ್ಪ ಕೆಂಪುಮರಳು ಶಿಲ್ಪ ಬಳಸಿ ಕ್ರಿ.ಶ. ೯ನೇ ಶತಮಾನದಲ್ಲಿ ಕಂಡರಿಸಿದ ಶಿಲ್ಪವಾಗಿದೆ. ಪದ್ಮಾಸನ ಧ್ಯಾನಭಂಗಿಯಲ್ಲಿದ್ದು ತಲೆಯ ಕೂದಲು ಗುಂಗುರು ಗುಂಗುರಾಗಿ ಹೆಗಲ ಮೇಲೆ ಹರಡಿಕೊಂಡಿವೆ. ತಲೆಯ ಹಿಂದೆ ಪ್ರಭಾವಳಿಯಿದೆ. ಹಾಗೆಯೇ ತಲೆಯ ಮೇಲೆ ಎರಡು ಕೊಡೆಯನ್ನು ಬಿಡಿಸಲಾಗಿದೆ. ಮಗ್ಗುಲಿಗೆ ಇಬ್ಬರು ಚೌರ ಬೀಸುವ ಅರಸರ ತ್ರಿಭಂಗದಲ್ಲಿ ನಿಂತ ಶಿಲ್ಪ ಕೆತ್ತನೆ ಮಾಡಲಾಗಿದೆ. ಈ ಶಿಲ್ಪದ ಮೇಲೆ ಬಾದಾಮಿ ಚಾಲುಕ್ಯರ ಶೈಲಿಯ ಪ್ರಭಾವ ಕಂಡುಬರುತ್ತದೆ.

ಇವನ್ನು ಹೊರತುಪಡಿಸಿದರೆ ಹಳ್ಳೂರ ಬಸದಿ ಶಿಲ್ಪ ನಾಲ್ಕು ಅಡಿ ಎತ್ತರವಾಗಿದ್ದು ಭಗ್ನಗೊಂಡಿದೆ. ಇದನ್ನು ಮುಂದಿನ ನವರಂಗ ಮಂಟಪದಲ್ಲಿ ಇಡಲಾಗಿದೆ. ಸಿಂಹಪೀಠ, ಪದ್ಮಾಸನಭಂಗಿ, ಚೌರಶಿಲ್ಪ, ಮೇಲೆ ಕೊಡೆ ಕೆತ್ತನೆಗಳು ಇರುವುವು.

೬.೭. ದೇವಿ ಶಿಲ್ಪಗಳು(ಶಾಕ್ತ)

ಪುರುಷಪ್ರಧಾನ ಮಾನವ ಸಮಾಜ ನಮ್ಮ ದೇಶದಲ್ಲಿ ಚಾಲ್ತಿಯಲ್ಲಿದ್ದರೂ ಪುರುಷಪ್ರಧಾನ ದೇವತಾರಾಧನೆ ಮಾತ್ರ ಕಂಡುಬರುವುದಿಲ್ಲ. ಹೆಣ್ಣಿಗೆ ಪ್ರಾಧಾನ್ಯತೆ ನೀಡಿ ಶಕ್ತಿದೇವತೆಯ ಪೂಜೆಯನ್ನು ಗಂಡು ದೇವರುಗಳಿಗೆ ಸಮಾನವಾಗಿ ಪೂಜಿಸುವ ಸಂಪ್ರದಾಯ ರೂಢಿಸಿಕೊಂಡಿದ್ದಾರೆ. ಮಾತೃದೇವತೆಯ ಪೂಜೆಯು ವೈದಿಕ ಯುಗಕ್ಕಿಂತಲೂ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಪ್ರಾಚೀನ ಶಕ್ತಿವಾದ

ಜಾನಪದದಿಂದ ಸಮಾಜವನ್ನು ಸೇರಿಕೊಂಡು ತನ್ನ ಪ್ರಭಾವವನ್ನು ಬೀರಿತು. ಜಾನಪದಿಂದ ಬಂದ ಶಕ್ತಿದೇವತೆ (ಮಾತೃ) ಒಬ್ಬಳೇ ಎಂಬ ಎಣಿಕೆಯನ್ನಿಟ್ಟುಕೊಳ್ಳದೆ ಶಾಕ್ತರು ಎಲ್ಲಿ ಸ್ತ್ರೀ ಸಮಾಜ (ಮಾತೃ) ದೇವತಾಸ್ವರೂಪರೆಂದು ನೂರಾರು ಹೆಸರಿನಿಂದ ಕರೆದರು. ಎಲ್ಲ ಸ್ತ್ರೀಯರು ಮಾತೃಸಮಾನರು, ದೇವತೆಗಳಾದ ಅವರೆಲ್ಲರಿಗೂ ಮೂಲ ಒಬ್ಬಳೇ ದೇವಿ(ಶಕ್ತಿ)ಯೆಂದು, ಅವಳೇ ಪಾರ್ವತಿಯೆಂದು ಹೇಳುವುದು 'ದೇವಿಮಹಾತ್ಮೆ' ಮತ್ತು 'ಮಾರ್ಕಂಡೇಯ ಪುರಾಣ'ಗಳು.[೨೩]

ಈ ಮಾತೃಕಲ್ಪನೆಯಲ್ಲಿ ದೇವಿಯನ್ನು ಶಿವನ ಜೊತೆಗಿರುವಾಗ ಪಾರ್ವತಿಯನ್ನು ಶೈವರು ದೇವಿಯೆಂದು, ವಿಷ್ಣುವಿನ ಜೊತೆಗೆ ಲಕ್ಷ್ಮೀ ಇರುವಾಗ ವೈಷ್ಣವರು ಲಕ್ಷ್ಮೀದೇವಿಯೆಂದು ಪೂಜಿಸುತ್ತಾರೆ.[೨೪] ಅದೇ ರೀತಿ ಬ್ರಹ್ಮನ ಜೊತೆಗೆ ಸರಸ್ವತಿ, ಇತ್ಯಾದಿಯಾಗಿ ಕರೆಯುವರು. ದೇವಿಗೂ ಶಿವ-ವಿಷ್ಣುಗಳಿಗಿರುವಂತೆ ಸುಗುಣ ಮತ್ತು ನಿರ್ಗುಣಗಳೆಂಬ ಗುಣಗಳಿವೆ. ಸುಗುಣ ಸೌಮ್ಯ, ನಿರ್ಗುಣ ಉಗ್ರರೂಪದಲ್ಲಿರುತ್ತದೆ. ಇಂತಹ ಎರಡು ಗುಣಗಳ ದೇವಿಯ ಹಲವು ಶಿಲ್ಪಗಳಲ್ಲಿ ಬಾಗಲಕೋಟೆ ಪರಿಸರದಲ್ಲಿ ಮಹಿಷಮರ್ದಿನಿ, ಸರಸ್ವತಿ ಮತ್ತು ಸಪ್ತಮಾತೃಕ ಶಿಲ್ಪಗಳು ಮಾತ್ರ ದೊರಕುತ್ತವೆ.

ಅ. ಮಹಿಷಮರ್ದಿನಿ

ಉಗ್ರರೂಪಕ್ಕೆ ಸೇರಲ್ಪಡುವ ದೇವಿಯು ಮಹಿಷನೆಂಬ ರಾಕ್ಷಸನನ್ನು ಮರ್ದನ ಮಾಡಿದ್ದರಿಂದ ಮಹಿಷಾಸುರಮರ್ದಿನಿಯೆಂದು ಕರೆಯಿಸಿಕೊಂಡಳು. ಇವಳಿಗೆ ದಶಭುಜಗಳು, ಮೂರು ಕಣ್ಣು, ಜಟಾಮಕುಟ, ಅತ್ತಿಹೂವಿನ ಬಣ್ಣ, ನೀಲಕಮಲದಂತ, ವೃಕ್ಷಸ್ಥಳ (ಎದೆಸ್ತನ), ತೆಳ್ಳಗಿನ ಸೊಂಟ, ತ್ರಿಭಂಗದಲ್ಲಿ ನಿಂತಂತೆ ಇಲ್ಲವೇ ಮಹಿಷನನ್ನು ಮೆಟ್ಟಿ ಕೊಲ್ಲುವಂತೆ ಚಿತ್ರಿಸಲಾಗಿದೆ. ಇಂತಹ ಒಂದೇ ಒಂದು ಶಿಲ್ಪ ಬಾಗಲಕೋಟೆ ಪರಿಸರದ ಬೇವೂರ ಗ್ರಾಮದ ನಾರಾಯಣ ಅಥವಾ ಸಂಗಮೇಶ್ವರ ದೇವಾಲಯ ಮಂಟಪದಲ್ಲಿ ಕಂಡುಬರುತ್ತದೆ.

೧. ಗ್ರಾಮ : ಬೇವೂರ

ಶಿಲ್ಪ : ಮಹಿಷಮರ್ದಿನಿ

ಧರ್ಮ : ಶಾಕ್ತ

ಭಂಗಿ : ತ್ರಿಭಂಗ ಇಲ್ಲವೇ ಮೆಟ್ಟಿನಿಂತ

ಸ್ಥಳ : ಸಂಗಮೇಶ್ವರ (ನಾರಾಯಣ) ದೇವಾಲಯ ಮಂಟಪ

ಕಲ್ಲು : ಕಪ್ಪುಶಿಲೆ

ಕಾಲ : ೧೧-೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಪ್ರಾಚೀನ ಸ್ಥಳೀಯರು

ಶಿಲ್ಪದ ವಿವರಣೆ ಬೇವೂರದ ಸಂಗಮೇಶ್ವರ ಅಥವಾ ನಾರಾಯಣ ದೇವಾಲಯದ ನವರಂಗ ಮಂಟಪದಲ್ಲಿ ಇಡಲಾಗಿದೆ. ಪೀಠದ ಮೇಲೆ ಕೆತ್ತಲಾದ ಶಿಲ್ಪಕ್ಕೆ ಎಂಟು ಕೈಗಳನ್ನು ಹೊಂದಿದ್ದು, ಎಡಗಾಲನ್ನು ನೆಲಕ್ಕೂರಿ ಬಲಗಾಲನ್ನು ಕೋಣದ ರುಂಡವನ್ನು ತುಳಿಯುವಂತೆ ತ್ರಿಶೂಲವನ್ನು ಕೋಣದ ಬೆನ್ನಿಗೆ ಇರಿಯುತ್ತಿರುವಂತೆ ಚಿತ್ರಿಸಲಾಗಿದೆ. ಕೈಗಳಲ್ಲಿ ಶಂಖ, ಚಕ್ರ, ರುಂಡ, ಖಡ್ಗ, ತ್ರಿಶೂಲ, ಡಮರು ಇತ್ಯಾದಿ ಆಯುಧಗಳಿವೆ.

ಆ. ಸರಸ್ವತಿ ಶಿಲ್ಪ

ಬೇವೂರದ ಕಾಳಿಕಾದೇವಿಯೇ ಮಂಟಪದಲ್ಲಿ ಭಗ್ನಗೊಂಡ ಈ ಸರಸ್ವತಿ ಶಿಲ್ಪ ಇಡಲಾಗಿದೆ. ಇದೊಂದು ಸರಸ್ವತಿಯ ದೇವಾಲಯವಾಗಿದ್ದು ಮೂಲ ಮೂರ್ತಿ ಭಿನ್ನವಾದ ನಂತರ ಅದನ್ನು ತೆಗೆದು ಗರ್ಭಗೃಹದಲ್ಲಿ ಕಾಳಿಕಾದೇವಿ ಹೆಸರಿನ ದೇವಿ ಶಿಲ್ಪವನ್ನು ಪ್ರತಿಷ್ಠಾನ ಮಾಡಲಾಗಿದೆ. ಸರಸ್ವತಿ ಶಿಲ್ಪ ಭಗ್ನಗೊಂಡಿದ್ದು, ನಾಲ್ಕು ಕೈಗಳು ಕೈಗಳಲ್ಲಿ ಪುಸ್ತಕ ವ್ಯಾಖ್ಯಾನ ಮುದ್ರೆ, ರೋಜರಿ ಕಮಲದ ಮೊಗ್ಗುಹಿಡಿದಂತೆ ಕಿರೀಟಧರಿಸಿದ್ದು ಪದ್ಮಾಸನದಲ್ಲಿ ಕಂಡರಿಸಲಾಗಿದೆ.

ಇ. ಸಪ್ತಮಾತೃಕೆ ಶಿಲ್ಪಗಳು

ದೇವರು ಒಬ್ಬನೇ ಎಂಬುದನ್ನು ಯಾರೂ ಒಪ್ಪಿಕೊಳ್ಳದೆ ಶೈವರು, ವೈಷ್ಣವರು, ಗಾಣಪತ್ಯರು, ಸೌರರು, ಶಿವ, ವಿಷ್ಣು, ಗಣಪತಿ ಹಾಗೂ ಸೂರ್ಯರನ್ನು ತಮ್ಮ ಪರಮದೇವರುಗಳೆಂದು ಬಗೆದರೋ ಹಾಗೆಯೇ ಶಾಕ್ತರು ಬಹುದೇವೋ ಕಲ್ಪನೆಯ ಮಾತೃದೇವತೆಗಳನ್ನು ಆರಾಧಿಸುವುದಕ್ಕೆ ಮುನ್ನುಡಿ ಬರೆದರು. ಹೀಗಾಗಿ ಗಂಡುದೇವತೆಗಳಿಗೆ ಹೆಣ್ಣುದೇವತೆಗಳನ್ನು ಗಂಟುಹಾಕಿ ಅವರನ್ನು ಶಕ್ತಿ ದೇವತೆಗಳೆಂದು ಕರೆದರು. ಪಾರ್ವತಿ, ಲಕ್ಷ್ಮೀ, ಸರಸ್ವತಿ, ಪುಷ್ಟಿ (ಗಣಪ), ತುಷ್ಟಿ(ಅನಂತ), ರಾತ್ರಿ(ಕಾಲ), ಸಂಜ್ಞೆ(ಸತ್ಯ), ಶಚಿ(ಇಂದ್ರ), ಸ್ವಾಹಾ(ಅಗ್ನಿ), ದಕ್ಷಿಣೆ(ದಕ್ಷ), ದೇವಸೇನೆ(ಸ್ಕಂದ) ಯರೆಂದು[೨೫] ಗಂಟು ಹಾಕಿದರು. ಇದೇ ನೆಲೆಯಲ್ಲಿ ಸಪ್ತಮಾತೃಕೆ, ಅಷ್ಟಮಾತೃಕೆ ಶಿಲ್ಪಗಳು ಮೈದಳೆದವು.

ಸಪ್ತಮಾತೃಕೆಯರನ್ನು ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ಕಾರ್ತಿಕೇಯಿ, ವೈಷ್ಣವಿ, ವರಾಹಿ, ಇಂದ್ರಾಣಿಯರೆಂದು ಕರೆಯಲಾಗಿದ್ದು, ಚಾಮುಂಡಿಯನ್ನು ಇವರ ಜೊತೆಗೆ ಕೂಡಿಸಿ ಅಷ್ಟಮಾತೃಕೆಯರೆಂದು ಕರೆದು ಕಲ್ಲಿನಲ್ಲಿ ಒಂದೇ ಸಾಲಿನಲ್ಲಿ ಪೀಠದ ಮೇಲ್ಗಡೆ ಪದ್ಮಾಸನ, ಅರ್ಧಪರ್ಯಂಕಾಸನ, ಸುಖಾಸನ ಒಂದು ಕಾಲು ಮಡಚಿ, ಇನ್ನೊಂದು ಕಾಲು ಕೆಳಗೆ ಇಳಿಬಿಟ್ಟಂತೆ ಚಿತ್ರಿಸುವುದು ಸಾಮಾನ್ಯ. ಇವರ ಕೆಳಗೆ ವಾಹನ ಚಿಹ್ನೆಗಳನ್ನು, ಇದರ ಎರಡು ಬಾಜು ಗಣೇಶ, ವೀರಭದ್ರರನ್ನು ಸೇರಿಸಿ ಶಿಲ್ಪದಲ್ಲಿ ಕಂಡರಿಸಲಾಗಿದೆ. ಇಂತಹ ಒಂದೆರಡು ಶಿಲ್ಪಗಳು ಬಾಗಲಕೋಟೆ ಪರಿಸರದ ಗ್ರಾಮಗಳಾದ ಶಿರೂರ ಸಿದ್ಧೇಶ್ವರ ಗುಡಿ ಹತ್ತಿರ ಒಂದು, ಬಸವೇಶ್ವರ ದೇವಾಲಯದ ಕಡ್ಡಿಯಲ್ಲಿ ಒಂದು, ಮಂಕಣಿಯ ಈಶ್ವರ(ತ್ರಿಕೂಟ) ದೇವಾಲಯದ ಮಂಟಪದಲ್ಲಿ ಒಂದು ಹೀಗೆ ಒಟ್ಟು ಮೂರು ಶಿಲ್ಪಗಳು ದೊರಕುತ್ತವೆ.

೬.೮. ಲೌಕಿಕ ಬಲಿದಾನ-ಮರಣ ಶಿಲ್ಪಗಳು

ದೇವರ ಶಿಲ್ಪಗಳಂತೆ ಬಾಗಲಕೋಟೆ ಪರಿಸರದಲ್ಲಿ ಲೌಕಿಕ ಜಗತ್ತಿನ ವೀರಮರಣ, ಆತ್ಮಬಲಿದಾನ, ಮಾಸ್ತಿ, ಸಲ್ಲೇಖನ ವ್ರತದಿಂದ ಮರಣ ಹೊಂದಿದ ವ್ಯಕ್ತಿಗಳ ನೆನಪಿಗಾಗಿ ನಿಲ್ಲಿಸಿದ ಶಿಲ್ಪಸ್ಮಾರಕಗಳು ಕಂಡುಬರುತ್ತವೆ. ಮುಖ್ಯವಾಗಿ ವೀರಮರಣ ಹೊಂದಿದ ವೀರರ ವೀರಗಲ್ಲು ಶಿಲ್ಪಗಳು ಹೆಚ್ಚಾಗಿ ಕಂಡುಬಂದರೆ, ಒಂದೇ ಒಂದು ನಿಸಿದಿಗೆ ಕಲ್ಲು ಕಂಡುಬರುತ್ತವೆ. ಇನ್ನುಳಿದಂತೆ ಯಾವುದೇ ರೀತಿಯ ಬಲಿದಾನ, ಆತ್ಮಬಲಿದಾನ ಶಿಲ್ಪಗಳು ಕಂಡುಬರುವುದಿಲ್ಲ.

ಪ್ರಾಚೀನ ಯೋಧರ ಮನಸ್ಸಿನಲ್ಲಿ ಗೆದ್ದರೆ ಜಯ(ಲಕ್ಷ್ಮಿ), ಸೋತು ಸತ್ತರೆ ವೀರಸ್ವರ್ಗ, ಕ್ಷಣಮಾತ್ರದಲ್ಲಿ ಹೋಗುವ ಜೀವಕ್ಕೆ ಚಿಂತೆ ಯಾಕೆ ಎಂಬುದು ಅವರ ಭಾವನೆಯಾಗಿತ್ತು. ಇಂತಹ ಮಾತಿಗೆ ಕಟ್ಟುಬಿದ್ದು ಧೈರ್ಯದಿಂದ ರಣರಂಗದಲ್ಲಿ ಮುನ್ನುಗ್ಗಿ, ದೇಹವನ್ನು ಹುಲ್ಲಿಗಿಂತ ಕಡೆಯಾಗಿ ಕಂಡು ಹೋರಾಡಿ ಗೆದ್ದು ಹಿಂದಕ್ಕೆ ಬರುತ್ತಿದ್ದರು. ಇಲ್ಲವೇ ಸೋತು ಯುದ್ಧರಂಗದಲ್ಲಿ ಮರಣ ಹೊಂದುತ್ತಿದ್ದರು. ಇದು ವೀರನು ತನ್ನ ದೇಶಕ್ಕಾಗಿ, ಒಡೆಯನಿಗಾಗಿ, ತೋರಿಸಿದ ತ್ಯಾಗವನ್ನು ತೋರಿಸುತ್ತದೆ. ಯುದ್ಧದಲ್ಲಿ ವೀರರು ಪ್ರಾಣತ್ಯಾಗ ಮಾಡಿದ್ದು ಶತ್ರುಗಳ ಕೈಯಲ್ಲಿ. ಆದರೆ, ಕೆಲವು ವ್ಯಕ್ತಿಗಳು ಅಂದು ತಮ್ಮ ಪ್ರಾಣವನ್ನು ತಾವೇ ತೆಗೆದು ಕೊಳ್ಳುವ(ಬಿಡುವ) ಪದ್ಧತಿ ರೂಢಿಯಲ್ಲಿತ್ತು. ಇದನ್ನು ಆತ್ಮಬಲಿದಾನವೆಂದು ಕರೆಯಲಾಗಿದೆ.[೨೬] ಈ ಬಲಿದಾನದಲ್ಲಿ ಧಾರ್ಮಿಕ ಮತ್ತು ಲೌಕಿಕ ಬಲಿದಾನಗಳೆಂಬ ಪ್ರಬೇಧಗಳಿವೆ. ಧಾರ್ಮಿಕದಲ್ಲಿ ಹಿಂದೂ-ಜೈನವೆಂಬ ಪ್ರಕಾರಗಳು. ಲೌಕಿಕದಲ್ಲಿ ಮಾಸ್ತಿ(ಸತಿ-ಪತಿ) ಮತ್ತು ಜೋಳವಾಳಿ, ಬೇಳವಾಳಿ, ಲೆಂಕವಾಳಿ(ಅರಸ-ಸೇವಕ) ಎಂಬ ನಾಲ್ಕು ಪ್ರಭೇದಗಳು. ವೀರಮರಣದಲ್ಲಿ ತುರುಗೋಳ್ ಪೆಣ್ಬುಯ್ಯಲ್, ಎರೆವೆಸ ಮತ್ತು ನಂಟನೆರಡು, ಊರಳಿವು ಎಂಬ ಐದು ಪ್ರಕಾರಗಳು.

ಮೇಲಿನ ಧಾರ್ಮಿಕ ಮತ್ತು ಲೌಕಿಕ ಸದುದ್ದೇಶವಿಟ್ಟುಕೊಂಡು ಹೋರಾಡಿ, ಮರಣ ಹೊಂದಿದ್ದು ನಾಡಿನ ರಕ್ಷಣೆ, ಸಮಾಜದ ಉನ್ನತಿ, ಧರ್ಮ, ಸತ್ಯಗಳನ್ನು ಉಳಿಸಲು ಬೆಳೆಸಲು ದುಷ್ಟನಿಗ್ರಹ, ಶಿಷ್ಟಪರಿಪಾಲನೆಗಾಗಿ ತಮ್ಮ ಪ್ರಾಣವನ್ನು ತೃಣಸಮಾನವೆಂದು ತಿಳಿದು, ಹಲವು ಪ್ರಸಂಗಗಳಲ್ಲಿ ವೈರಿಯ ಜೊತೆಗೆ ಎದುರು ನಿಂತು ಹೋರಾಡಿದ ವೀರ, ವೀರಮರಣ ಹೊಂದಿದಾಗ ಅವನ ನೆನಪು ಚಿರಕಾಲ ಮನಃಪಟಲದಲ್ಲಿ ಉಳಿಯಲೆಂಬ ಒಂದೇ ಉದ್ದೇಶದಿಂದ ಕಟ್ಟಿಸಿದ ಕಟ್ಟೆ, ಕೊರೆಯಿಸಿದ ಕಲ್ಲು, ನೆಟ್ಟ ಸ್ಮಾರಕಗಳೇ ಸಮಾಧಿ, ವೀರ ಮತ್ತು ಮಾಸ್ತಿ ಮರಣದ ಶಿಲ್ಪ ಸ್ಮಾರಕಗಳು. ಕಾಲಗತಿಸಿದಂತೆ ಇವರೇ ಜನಪದ ದೇವತೆಗಳಾಗಿ ಪೂಜಿಸಲ್ಪಟ್ಟರು.

ಅ. ವೀರಮರಣ ಅಥವಾ ವೀರಗಲ್ಲು ಶಿಲ್ಪಗಳು

ಮೇಲೆ ತಿಳಿಸಿದಂತೆ ಲೌಕಿಕ ಮರಣದ ಸ್ಮಾರಕದ ಶಿಲ್ಪಗಳು ಸುಮಾರು ಐದು ಪ್ರಕಾರದಲ್ಲಿದ್ದು ಅವುಗಳಲ್ಲಿ ಕೆಲವು ಬಾಗಲಕೋಟೆ ಪರಿಸರದಲ್ಲಿ ಕಂಡುಬರುತ್ತಿದ್ದು, ಕೆಳಗೆ ಒಂದೊಂದಾಗಿ ಚರ್ಚಿಸಿದ್ದೇವೆ.

೧. ಗ್ರಾಮ : ಬೇವೂರ

ಶಿಲ್ಪ : ವೀರಗಲ್ಲು (ತುರುಗೋಳ್)

ಧರ್ಮ : ಶೈವ

ಸ್ಥಳ : ರಾಮೇಶ್ವರ ಅಥವಾ ಪರ್ವತಪ್ಪನ ಗುಡಿ ಹಿಂದೆ

ಕಲ್ಲು : ಕೆಂಪುಮರಳು ಶಿಲೆ

ಕಾಲ : ೧೪ನೇ ಶತಮಾನ

ಶೈಲಿ : ವಿಜಯನಗರ

ಪೋಷಕರು : ಸ್ಥಳೀಯರು

ಶಿಲ್ಪದ ವಿವರಣೆ ಈ ವೀರಗಲ್ಲು ಬೇವೂರ ಗ್ರಾಮದ ಪರ್ವತಪ್ಪ ಹೆಸರಿನ ದೇಗುಲ ಅಂದರೆ, ರಾಮೇಶ್ವರ ದೇವಾಲಯದ ಹಿಂಬದಿಯಲ್ಲಿ ಬಿದ್ದಿದೆ. ಕ್ರಿ.ಶ. ೧೪ನೇ ಶತಮಾನದ ವೀರಗಲ್ಲು ಇದಾಗಿದ್ದು, ಕೆಂಪುಮರಳು ಶಿಲೆಯಲ್ಲಿ ಕೆತ್ತಲಾಗಿದೆ. ೧೩೦ ಸೆಂ.ಮೀ. ಎತ್ತರ, ೫೭ ಸೆಂ.ಮೀ. ಅಗಲವಾದ ಕಲ್ಲಿನಲ್ಲಿದ್ದು ಮೂರು ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಶೈವ ವೀರಗಲ್ಲು ಇದಾಗಿದ್ದು ಒಂದು ಪಟ್ಟಿಕೆಯಲ್ಲಿ ೧೪ನೇ ಶತಮಾನದ ಲಿಪಿ ಬರಹದ ಶಾಸನವಿದ್ದು, ಅದು ನಾಗಣ್ಣ ಎಂಬುವವನು

ಹೋರಾಡಿ ಮಡಿದದ್ದನ್ನು ಉಲ್ಲೇಖಿಸುತ್ತದೆ.[೨೬] ಇದೊಂದು ತುರುಗೋಳ್ ಪ್ರಸಂಗ ಅಥವಾ ಗೋಗ್ರಹಣದ ವೀರಗಲ್ಲು.

ಇದರ ಕೆಳಪಟ್ಟಿಕೆಯಲ್ಲಿ ಮೂರು ಜನ ವೀರರು ಒಬ್ಬ ವೀರನನ್ನು ಹೋರಾಟದಲ್ಲಿ ಎದುರಿಸುತ್ತಿದ್ದು ವೀರನ ಹಿಂಬದಿ ಗೋವುಗಳಿವೆ. ಅಂದರೆ ವೀರ ಕಾಳಗದಲ್ಲಿ ಜಯ ಹೊಂದಿ ಮರಣಿಸಿದ್ದನ್ನು ತೋರಿಸುತ್ತದೆ. ಅವರ ಕೈಗಳಲ್ಲಿ ಬಿಲ್ಲು-ಬಾಣಗಳು ಇರುವುವು.

ಮರಣಿಸಿದ ವೀರ ಕೆಳಗೆ ಬಿದ್ದಿದ್ದಾನೆ. ಎರಡನೇ(ಮಧ್ಯ) ಪಟ್ಟಿಕೆಯಲ್ಲಿ ಮರಣಿಸಿದ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಪುಷ್ಪಕ ವಿಮಾನದಲ್ಲಿ ಹೊತ್ತೊಯ್ಯುವಂತೆ ಚಿತ್ರಿಸಲಾಗಿದೆ. ಮೂರನೆ ಮೇಲಿನ ಪಟ್ಟಿಕೆಯಲ್ಲಿ ಮಧ್ಯ ಲಿಂಗವಿದೆ. ವೀರನು ಲಿಂಗಪೂಜೆ ಮಾಡುತ್ತಿರುವನು(ಅಂಜಲಿಮುದ್ರೆ). ಒಬ್ಬನು ನಿಂತಿದ್ದಾನೆ. ಇವನ ಹತ್ತಿರ ಚಿಕ್ಕದಾದ ನಂದಿ, ಮೇಲೆ ಇದಕ್ಕೆ ಸಾಕ್ಷಿಯಾದ ಸೂರ್ಯ-ಚಂದ್ರರ ಚಿತ್ರಗಳನ್ನು ಬಿಡಿಸಲಾಗಿದೆ.

೧. ಗ್ರಾಮ : ಮುಚಖಂಡಿ

ಶಿಲ್ಪ : ವೀರಗಲ್ಲು (ತುರುಗೋಳ್)

ಧರ್ಮ : ಶೈವ

ಸ್ಥಳ : ಮುಚಖಂಡಿ ವೀರಭದ್ರ ದೇವಾಲಯದ ಹಿಂಬದಿ ಗೋಡೆಗೆ

ಕಲ್ಲು : ಕೆಂಪುಮರಳು ಶಿಲೆ

ಕಾಲ : ೧೨-೧೩ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಪೋಷಕರು : ಸ್ಥಳೀಯರು

ಶಿಲ್ಪದ ವಿವರಣೆ ಈ ವೀರಗಲ್ಲನ್ನು ಮುಚಖಂಡಿಯ ವೀರಭದ್ರ ದೇವಾಲಯದ ಹಿಂಬದಿ ಗೋಡೆಗೆ ನಿಲ್ಲಿಸಲಾಗಿದೆ. ೧೨, ೧೩ನೇ ಶತಮಾನದ ಈ ಶಿಲ್ಪವನ್ನು ಕೆಂಪುಮರಳು ಶಿಲೆಯಲ್ಲಿ ಕೆತ್ತಲಾಗಿದೆ. ೨ ರಿಂದ ೪ ಅಡಿಯಷ್ಟು ಎತ್ತರ, ಎರಡು ಅಡಿ ಅಗಲವಾದ ಕಲ್ಲಿನಲ್ಲಿ ಮೂರು ಪಟ್ಟಿಕೆಯಲ್ಲಿ ಚಿತ್ರಿಸಲಾಗಿದೆ. ಇದೊಂದು ಶೈವಧರ್ಮದ ವೀರಗಲ್ಲು ಹಾಗೂ ಗೋಗ್ರಹಣ ಅಥವಾ ತುರುಗೋಳ್ ಪ್ರಸಂಗದ ಮರಣ ಸ್ಮಾರಕವಾಗಿದೆ. ಕೆಳಪಟ್ಟಿಕೆ ದೊಡ್ಡದಾಗಿದ್ದು ಇಬ್ಬರು ವೀರರು ಬಿಲ್ಲು ಬಾಣ ಹಿಡಿದು ನಿಂತಿದ್ದಾರೆ. ಅವರನ್ನು ಎತ್ತರವಾಗಿ ಚಿತ್ರಿಸಲಾಗಿದೆ. ಸುಮಾರು ಏಳು ಗೋವುಗಳನ್ನು

ಒಂದೇ ಸಾಲಿನಲ್ಲಿ ಚಿತ್ರಿಸಿ ಅವುಗಳ ಹಿಂದೆ ೫ ಜನರು ಅವುಗಳನ್ನು ಗೆದ್ದು ಹೊಡೆದುಕೊಂಡು ಮರಳುತ್ತಿರುವಂತೆ ಚಿತ್ರಿಸಲಾಗಿದೆ. ಅಂದರೆ ಇದರಲ್ಲಿ ಇಬ್ಬರು ವೀರರಿಗೆ ಜಯ ಸಂದಿಲ್ಲ.

ಎರಡನೇ ಪಟ್ಟಿಕೆಯಲ್ಲಿ ಮರಣಿಸಿದ ವೀರರಿಬ್ಬರನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ನಾಲ್ಕು ಜನ ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿರುವ ದೃಶ್ಯ. ಮೇಲಿನ ಪಟ್ಟಿಕೆಯಲ್ಲಿ ಮಧ್ಯ ಲಿಂಗವಿದ್ದು ಇಬ್ಬರು ವೀರರು ಅಂಜಲಿಮುದ್ರೆಯಲ್ಲಿ ಕುಳಿತಿದ್ದು ಲಿಂಗದ ಮತ್ತೊಂದು ಬದಿಗೆ ಶೈವ ಆಚಾರ್ಯ ಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ. ಅವನ ಹಿಂಬದಿ ನಂದಿಯನ್ನು ಕೆತ್ತಲಾಗಿದೆ. ಇದೊಂದು ವಿಶಿಷ್ಟ ವೀರಗಲ್ಲಾಗಿದ್ದು ಬಾಗಲಕೋಟೆ ಪರಿಸರದಲ್ಲಿ ಪ್ರಾಚೀನ ಕಾಲದಲ್ಲಿ ಗೋವುಗಳ ರಕ್ಷಣೆಗೆ ಕಟಿಬದ್ಧರಾಗಿದ್ದರೆಂಬುದನ್ನು ತೋರಿಸುತ್ತದೆ.

ಇಂತಹ ತುರುಗೋಳ್ ಪ್ರಸಂಗದ ಮತ್ತೊಂದು ಶಿರೂರಿನ ವೀರಗಲ್ಲು ಬಸವೇಶ್ವರ ಕಟ್ಟೆಯಲ್ಲಿ ಕಂಡುಬಂದಂತೆ, ಬಾಚಿಸೆಟ್ಟಿಯ ಕೆರೆಯ ದಂಡೆಯ ಮನೆಯ ಗೋಡೆಯಲ್ಲಿ ನಿಲ್ಲಿಸಿದ ಇನ್ನೊಂದು ವೀರಗಲ್ಲು ದೊರಕುತ್ತದೆ. ಅದರಲ್ಲಿ ವೀರನೊಬ್ಬ ಮರಣಿಸಿದ ಚಿತ್ರವಿದೆಯೆಂದು ಗ್ಯಾಜೆಟಿಯರ್ ಸಂಪಾದಕರು ಹೇಳುತ್ತಾರೆ. ಆದರೆ ಅದು ಯಾವ ಪ್ರಸಂಗದ ವೀರಗಲ್ಲು ಎಂಬುದನ್ನು ಹೇಳುವುದಿಲ್ಲ.[೨೮] ಬೇವೂರಿನ ಗುಡಿಯಲ್ಲಿ ಇಡಲಾದ ಲಿಂಗ, ವೀರಗಲ್ಲುಗಳಲ್ಲಿ ವೀರಗಲ್ಲು ತ್ರುಟಿತಗೊಂಡಿದ್ದು, ಕೆಳಪಟ್ಟಿಕೆ ಹೊಡೆದು ಮೇಲಿನ ಎರಡು ಪಟ್ಟಿಕೆಗಳು ಮಾತ್ರ ಉಳಿದುಕೊಂಡಿವೆ. ಹೀಗಾಗಿ ಇದು ಯಾವ ಪ್ರಸಂಗದ ವೀರಗಲ್ಲು ಎಂಬುದು ಗೊತ್ತಾಗುವುದಿಲ್ಲ. ಲಿಂಗದ ಚಿತ್ರವಿರುವುದರಿಂದ ಇದೊಂದು ಶೈವ ವೀರಗಲ್ಲಾಗಿದೆ. ಇದು ೧೧-೧೨ನೇ ಶತಮಾನಕ್ಕೆ ಸೇರುತ್ತದೆ.

ಶಿರೂರ ಗ್ರಾಮದ ಸಿದ್ಧೇಶ್ವರ ದೇವಾಲಯದ ಸಂಕೀರ್ಣದಲ್ಲಿ ಭಗ್ನಗೊಂಡ ಎರಡು ವೀರಗಲ್ಲು ಶಿಲ್ಪಗಳು ದೊರಕುತ್ತಿದ್ದರೂ ಅವುಗಳ ಪ್ರಸಂಗಗಳು ತಿಳಿದುಬರುವುದಿಲ್ಲ. ಶೈಲಿಯು ೮-೯ನೇ ಶತಮಾನಕ್ಕೆ ಸೇರುತ್ತದೆ.

ಟಿಪ್ಪಣೆಗಳು

೧. ಶಿವರಾಮಕಾರಂತ, **ಭಾರತೀಯ ಶಿಲ್ಪ,** ಪು.–೧.

೨. ಅದೇ, ಪು.–೧೦.

೩. **South Indian Inscriptions,** ಸಂಪುಟ–೧೫, ನಂ. ೩, ಭೈರನಮಟ್ಟಿ(ಬಾಗ–ತಾ.), ಕ್ರಿ.ಶ. ೯೯೦–೧.

೪. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪುಟ. ೧೪

೫. ಅದೇ ಪು. ೫೧

೬. **Gupte R.S., Iconography of the Buddhist and Jains, P.20**

೭. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪು. ೧೮೪

೮. **Gupte R.S., Iconography of the Buddhist and Jains, P.4**

೯. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪುಟ. ೭೦

೧೦. ಅದೇ, **Gupte R.S., P.36**

೧೧. **Gopinath Rao T.A., Elements of Hindu Iconography,** ಸಂಪುಟ–೨. ಭಾಗ–೨, ಪು ೩೬೭–೩೭೦

೧೨. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪುಟ. ೯೮

೧೩. **Gopinath Rao T.A., Elements of Hindu Iconography,** ಸಂಪುಟ–೨. ಭಾಗ–೨, ಪು ೩೬–೩೭

೧೪. ಅದೇ, ಪು. ೪೧೫–೪೩೨

೧೫. **South Indian Inscriptions**, ಸಂಪುಟ-೧೧, ಭಾಗ-೧, ಪು. ೮೫, ಶಿರೂರ(ಭಾಗ. ತಾ.)ಕ್ರಿ.ಶ. ೧೦೪೯

೧೬. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪುಟ. ೧೩೦-೧೩೩

೧೭. **Gopinath Rao T.A., Elements of Hindu Iconography,** ಸಂಪುಟ-೨. ಭಾಗ-೨, ಪು ೭೩-೭೪

೧೮. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪುಟ. ೨೫೭

೧೯. **South Indian Inscriptions,** ಸಂಪುಟ-೧೧, ಭಾಗ-೧, ಪು. ೮೫, ಶಿರೂರ(ಭಾಗ. ತಾ.)ಕ್ರಿ.ಶ. ೧೧೪೮

೨೦. **Desai P.B. (Ed), A History of Karnataka,** P.46

೨೧. **Bhattacharya B.C., Jain Iconography,** P. 58

೨೨. **Ebid, P.60**

೨೩. **Thrivedi R.D., Iconography of Parvati,** P.1

೨೪. **Gopinath Rao T.A., Elements of Hindu Iconography,** ಸಂಪುಟ-೨. ಭಾಗ-೨, ಪುಟ. ೨೩೨-೨೩೩.

೨೫. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ ಹಿನ್ನೆಲೆ,** ಪುಟ. ೧೭೨-೩.

೨೬. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು. ೨೯೯

೨೭. **South Indian Inscriptions**, ಸಂಪುಟ-೧೫, ನಂ-೬೫೪, ಬೇವೂರ(ಬಾಗ. ತಾ.)ಕ್ರಿ.ಶ. ೧೪ನೇ ಶತಮಾನ.

೨೮. **ಭಾರತದ ಗ್ಯಾಜೆಟಿಯರ್, ಕರ್ನಾಟಕ ರಾಜ್ಯ,** ಬಿಜಾಪುರಜಿಲ್ಲೆ(ಪ.ಅ.),೧೯೯೯, ಪು.೧೧೭೨

ಅಧ್ಯಾಯ ೭

ಸಮಾರೋಪ

ಒಂದು ಪ್ರದೇಶದ ಸಂಸ್ಕೃತಿಯು ಜನ್ಮ ತಾಳಬೇಕಾದರೆ ಅದು ಹಲವಾರು ಆಯಾಮವನ್ನು ದಾಟಿ ಮುಂದುವರೆಯಬೇಕು. ಆ ಪ್ರದೇಶದ ಮಾನವನ ಹುಟ್ಟು ಬೆಳವಣಿಗೆ, ಅವನ ಜೀವನದಲ್ಲಿ ಸಂಘಟಿಸಿದಂತ ಘಟನಾವಳಿಗಳು, ಅವನು ನಡೆಸಿದಂತಹ ಪ್ರಯತ್ನಗಳು, ಸಾಮಾಜಿಕ ಬದಲಾವಣೆಗಳು, ಧಾರ್ಮಿಕ ಆಚರಣೆಗಳು ಆರ್ಥಿಕ ಪ್ರಗತಿಗಳು ಕಾಲಗತಿಸಿದಂತೆಲ್ಲ ರಾಜಕೀಯ ಬೆಳವಣಿಗೆಗೆ ಅತಿಯಾಗಿ ರಾಜ್ಯ ಸ್ಥಾಪನೆಗೆ ಕಾರಣವಾಗಿ ಪ್ರಾದೇಶಿಕ ಸಾಂಸ್ಕೃತಿಕ ಪರಸರ ಉಗಮಕ್ಕೆ ಕಾರಣವಾಗುತ್ತದೆ ಅದಕ್ಕೆ ಬಾಗಲಕೋಟ ಪರಿಸರದ ಚರಿತ್ರೆಯು ಹೊರತಾಗಿಲ್ಲ.

ಪ್ರಸ್ತುತ ಬಾಗಲಕೋಟೆ ಪರಸರದ ಚರಿತ್ರೆಯು ಬದಾಮಿ ಚಾಲುಕ್ಯರು ಇದೇ ಪ್ರದೇಶದಲ್ಲಿ ಆಡಳಿತ ಮಾಡಿ ಹೋಗಿದ್ದಾರೆ. ಅವರ ವಾಸ್ತುಶಿಲ್ಪದ ತವರು ಮನೆಯಾದ ಐಹೊಳೆ, ಪಟ್ಟದಕಲ್ಲು, ಬದಾಮಿ ಹತ್ತಿರದಲ್ಲಿ ಇರುವುದು ವಿಶೇಷವಾಗಿದೆ. ಇವುಗಳ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೆ ಬಾಗಲಕೋಟ ಪರಿಸರದ ಮೇಲೆ ಯಾರೂ ಹೆಚ್ಚು ಬೆಳಕು ಹರಿಸಿಲ್ಲ. ಅದರ ಪ್ರಯುಕ್ತವಾಗಿ "ಬಾಗಲಕೋಟ ಪರಿಸರದ ಚರಿತ್ರೆ" ಅಂದರೆ ದೇವಾಲಯಗಳು ಹಾಗೂ ವಾಸ್ತುಶಿಲ್ಪ ಅನುಲಕ್ಷಿಸಿ ಸಂಶೋಧನೆ ಮಾಡಲು ಈ ಮಹಾಪ್ರಬಂಧದಲ್ಲಿ ಒತ್ತು ನೀಡಲಾಗಿದೆ.

ಭೌಗೋಳಿಕವಾಗಿ ಬಾಗಲಕೋಟ ಪರಿಸರವು ಒಣ ಮತ್ತು ಶುಷ್ಕವಲಯವಾಗಿದ್ದು, ಘಟಪ್ರಭಾ ನದಿಯ ದಕ್ಷಿಣ, ಉತ್ತರ ವಿಶಾಲವಾದ ಕಪ್ಪು ಮಣ್ಣು ಹರಡಿಕೊಂಡಿದೆ. ಕುರುಚಲು ಅರಣ್ಯ ಇಲ್ಲಿಯ ಅಲ್ಪ

ಪ್ರಮಾಣದ ಅರಣ್ಯ ಬಯಲು ಪ್ರದೇಶವಾಗಿದೆ. ಮಾನವ ಬದುಕಿಗೆ ಕೃಷ್ಣಾ, ಘಟಪ್ರಭಾಗಳ ನದಿ ವರದಾನವೇ ಆಗಿವೆ.

ಬಾಗಲಕೋಟ ಪರಿಸರವು ಆದಿಕಾಲದಿಂದಲೂ ಮಾನವನ ಪ್ರಸಿದ್ಧ ವಾಸಸ್ಥಾನವಾಗಿತ್ತು. ಇಲ್ಲಿನ ಶಿಲಾಯುಗದ ಸಂಸ್ಕೃತಿಯ ಕುರುಹುಗಳು ಸಂಶೋಧನೆಗಳಿಂದ ತಿಳಿದು ಬಂದಿವೆ. ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ, ಮಧ್ಯ ಶಿಲಾಯುಗದ ಪುರಾವೆಗಳು ಕಡಿಮೆ ಪ್ರಮಾಣದಲ್ಲಿ ಕಾಣಿಸಿವೆ. ಆದರೆ ಈ ಪ್ರದೇಶದ ಬಾಗಲಕೋಟೆ, ಕಲಾದಗಿ, ಖಜ್ಜಿಡೋಣಿ, ಆಲಮಟ್ಟಿ, ಇಲ್ಲಾಳ, ಕಿರಸೂರ, ಕೇಸನೂರು, ಮುಗಳೊಳ್ಳಿ, ಹಿರೇಗುಳಬಾಳ ಮತ್ತು ಹಳ್ಳೂರ ಮುಂತಾದ ಕಡೆಗಳಲ್ಲಿ ನೂತನ ಶಿಲಾಯುಗ, ಬೃಹತ್ ಶಿಲಾಯುಗ ಹಾಗೂ ಶಾತವಾಹನ ಮತ್ತು ಮೌರ್ಯ ಅರಸರ ಕಾಲದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನೆಲೆಗಳಾಗಿವೆ. ಐತಿಹಾಸಿಕ ಉಪಕರಣದ ಪಳೆಯುಳಿಕೆಗಳಾದ ಮಡಿಕೆ, ಕುಡಿಕೆ, ಇಟ್ಟಂಗಿ ಮಣಿಸರಗುಂಡಿ ಹಸ್ತಿ, ದಂತದ ವಸ್ತುಗಳು ಪ್ರಮುಖವಾಗಿವೆ. ಇವು ಈ ಪ್ರದೇಶದ ಪ್ರಾಚೀನತೆಯನ್ನು ಸಾರುವ ಮಹತ್ವದ ಕುರುಹುಗಳು.

ಈ ಪರಿಸರದ ಪ್ರಾಚೀನ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ ಇಲ್ಲಿ ಆಡಳಿತ ಮಾಡಿದ ರಾಜಮನೆತನಗಳು ವೈಶಿಷ್ಟ್ಯಪೂರ್ಣವಾದ ರಾಜಕೀಯ ಕೊಡುಗೆಯನ್ನು ನೀಡಿವೆ. ಬಾಗಡಗೆ ಎಪ್ಪತ್ತರ ಇತಿಹಾಸವು ಸಾವಿರ ವರ್ಷಗಳಿಗಿಂತ ಹೆಚ್ಚಿನ ರಾಜಕೀಯ ಚರಿತ್ರೆಗೆ ನೆಲೆಯನ್ನು ಒದಗಿಸಿದೆ. ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಕಲ್ಯಾಣದ ಕಳಚುರಿಗಳು, ದೇವಗಿರಿಯ ಯಾದವರು ಹಾಗೂ ವಿಜಯನಗರದ ಅರಸರು ಸಾರ್ವಭೌಮರಾಗಿ ಅಧಿಕಾರವನ್ನು ನಡೆಸಿದ್ದಾರೆ. ಕ್ರಿ.ಶ. ಪೂರ್ವದಿಂದ ಕ್ರಿ.ಶ. **೧೫೬೫** ರವರೆಗೆ ಬಾಗಡಗೆ ನಾಡಿನಲ್ಲಿ ವಿವಿಧ ಜನ ವರ್ಗವು ವಿಭಿನ್ನ ಸಂಸ್ಕೃತಿಯೊಂದಿಗೆ ಬದುಕಿ ಬಾಳಿದೆ. ಸಾರ್ವಭೌಮ ಅರಸರು ಅಲ್ಲದೇ ಮಹಾಮಂಡಳೇಶ್ವರರು, ಸಾಮಂತರು, ದಂಡನಾಯಕರು, ಪ್ರಭುಗಾವುಂಡರು, ಗಾವುಂಡರು ಮುಂತಾದವರು ತಮ್ಮದೇ ಆದ ಕೊಡುಗೆ ನೀಡಿರುವುದು ದಾಖಲೆಗಳಿಂದ ಸ್ಪಷ್ಟವಾಗುತ್ತವೆ.

ಬಾಗಡಗೆ ಎಂಬುದು ಇಂದಿನ ಬಾಗಲಕೋಟೆ ಪಟ್ಟಣವಾಗಿದ್ದು, ಬಾದಾಮಿ ಚಾಲುಕ್ಯ ಆಡಳಿತದ ಅವಧಿಯಲ್ಲಿ ಆಡಳಿತದ ಘಟಕವಾಗಿದ್ದು, ಇದು ಮುಂದೆ ಕದಂಬರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರ ಇತರರು ಆಡಳಿತ ಮಾಡಿದ ಅರಸರ ಕಾಲದಲ್ಲಿ ಪ್ರಮುಖ ಆಡಳಿತ ಘಟಕವೆಂದು ಪ್ರಸಿದ್ದಿ ಹೊಂದಿರಬೇಕು. ಕ್ರಿ.ಶ. ೯೯೦ ಮತ್ತು ಕ್ರಿ.ಶ. ೧೦೩೩ ರ ಭೈರನಮಟ್ಟಿ ಶಾಸನವು ಬಾಗಡಗೆ ಎಪ್ಪತ್ತರ ಕುರಿತು ಮೊದಲ ಬಾರಿಗೆ ಉಲ್ಲೇಖ ಮಾಡುತ್ತದೆ. ತದನಂತರ ಕಲ್ಯಾಣದ ಚಾಲುಕ್ಯ ಅರಸ ಒಂದನೇ ಸೋಮೇಶ್ವರ ಕಾಲದ ಶಿರೂರ ಶಾಸನವು ಬಾಗಡಗೆ ಎಪ್ಪತ್ತು ಎಂದು ಹೆಸರಿಸುತ್ತದೆ. ಅಂದರೆ ಬಾಗಡಗೆ ಸಿಂಧರ ಬಗ್ಗೆ ಈ

ಎರಡು ಶಾಸನಗಳು ಉಲ್ಲೇಖ ಮಾಡುವುದರಿಂದ ಸಿಂಧರು ಸಾಮಂತ ಅರಸರಾಗಿ ಬಾಗಡಗೆ ಎಪ್ಪತ್ತನ್ನು ಆಡಳಿತ ಕೇಂದ್ರವಾಗಿ ಮಾಡಿಕೊಂಡು ಆಡಳಿತ ನಡೆಸಿದ್ದಾರೆ. ಹಾಗಾದರೆ ಬಾಗಡಗೆ ಎಪ್ಪತ್ತರ ವ್ಯಾಪ್ತಿಯನ್ನು ಗಮನಿಸಿದಾಗ ಶಿರೂರ, ಹಳ್ಳೂರ, ಭೈರನಮಟ್ಟಿ, ಬೇವೂರು, ಮಲ್ಲಾಪೂರ, ಬಾಗಲಕೋಟ, ಕಿರಸೂರ ಬಿಲ್ಲಕೆರೂರ, ಕಲಾದಗಿ, ತುಳಸಿಗೇರಿ, ಗ್ರಾಮಗಳನ್ನು ಒಳಗೊಂಡಂತೆ ಇಂದಿನ ಬಾದಾಮಿ ತಾಲೂಕಿನ ಕಟಗೇರಿ, ಮುಂತಾದ ಗ್ರಾಮಗಳು ಅಗ್ರಹಾರ, ಪುರಪಟ್ಟಣಗಳಾಗಿ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಬಾಗಡಗೆ ಎಪ್ಪತ್ತು ಆಡಳಿತವನ್ನು ಸಾರ್ವಭೌಮ ಅರಸು ಮನೆತನಗಳು ಆಡಳಿತಕ್ಕಿಂತಲೂ ಹೆಚ್ಚು ಸಾಮಂತ ಅರಸು ಮನೆತನಗಳು ಆಡಳಿತ ಮಾಡಿದ್ದು ವಿಶಿಷ್ಠವಾಗಿದೆ. ಅವರಲ್ಲಿ ಪ್ರಮುಖವಾಗಿ ಬಾಗಡಗೆ ಸಿಂಧರು ಯರಂಬರಿಗೆ ಸಿಂಧರು, ಪ್ರಾಂತ್ಯಂಡಕದ ಸಿಂಧರು, ಬಳಗತ್ತಿಯ ಸಿಂಧರು, ಕುರುಗೋಡು ಸಿಂಧರು, ರಂಜೇರು ಸಿಂಧರು, ಮುಕ್ಕುಂದೆ, (ಸಾಲಗುಂದೆ) ಸಿಂಧರು ನಿಟ್ಟರವೆ ಸಿಂಧರು ಮತ್ತು ಅವರುಗಳಲ್ಲದೇ ಪ್ರಭುಗಳು, ಪ್ರಭುಗಾವುಂಡರು ಮುಂತಾದವರು ಆಡಳಿತ ಮಾಡಿ ಧಾರ್ಮಿಕ, ಸಾಮಾಜಿಕ ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ವೈಶಿಷ್ಟ್ಯಪೂರ್ಣವಾದ ಕೊಡುಗೆಯನ್ನು ನೀಡಿದ್ದಾರೆ. ಉದಾಹರಣೆಗೆ ಅವರ ಕಾಲದಲ್ಲಿ ನಿರ್ಮಾಣವಾದ ಬೇವೂರದ ಸಂಗಮೇಶ್ವರ ದೇವಾಲಯ, ಹಳ್ಳೂರದ ಜೈನಬಸದಿ, ಶಿರೂರದ ರಾಮಲಿಂಗೇಶ್ವರ ದೇವಾಲಯ ಮತ್ತು ಸಿದ್ಧೇಶ್ವರ ದೇವಾಲಯ ಮುಂತಾದವು ಈ ಪ್ರದೇಶದ ವಾಸ್ತುಶಿಲ್ಪದ ಪ್ರತಿಬಿಂಬಗಳಾಗಿವೆ.

ಪ್ರಾಚೀನ ಬಾಗಲಕೋಟ ಪರಿಸರದ ದೇವಾಲಯಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆದಿದ್ದವು ಎಂಬುದನ್ನು ಇಲ್ಲಿ ದೊರೆತಿರುವ ದೇವಾಲಯಗಳ ವಾಸ್ತುಶೈಲಿಯ ಮುಖಾಂತರ ಗುರುತಿಸಲಾಗಿದೆ. ಈ ವ್ಯವಸ್ಥೆಯನ್ನು ಕಾಪಾಡುವಲ್ಲಿ ಸಾರ್ವಜನಕರೂ ಸಹಕರಿಸುತ್ತಿದ್ದರು. ಶತ ಶತಮಾನಗಳ ಇತಿಹಾಸವುಳ್ಳ ಈ ದೇವಾಲಯಗಳು ಕಲಾತ್ಮಕವಾಗಿ ಬೆಳೆದು ಹಲವಾರು ಶೈಲಿ, ಸಂಪ್ರದಾಯಗಳು ಸೃಷ್ಟಿಯಾದವು ಬಾಗಲಕೋಟೆ ಪರಿಸರದಲ್ಲಿ ಕಂಡುಬರುವ ದೇವಾಲಯಗಳ ವಾಸ್ತುಶೈಲಿಯ ಮೇಲೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಐಹೊಳೆ, ಪಟ್ಟದಕಲ್ಲು, ಬಾದಾಮಿ, ಮಹಾಕೂಟ, ದೇವಾಲಯಗಳ ಪ್ರಭಾವವು ಈ ದೇವಾಲಯಗಳ ಮೇಲೆ ಕಾಣಬಹುದು. ಈ ಪ್ರದೇಶದಲ್ಲಿ ಬರುವ ಬೇವೂರ, ಶಿರೂರ, ಹಳ್ಳೂರ, ಬೊಮ್ಮಣಗಿ, ಮುಂತಾದ ಗ್ರಾಮಗಳ ದೇವಾಲಯಗಳಲ್ಲಿ ವಾಸ್ತುಶೈಲಿಯ ಹೋಲಿಕೆಯು ಕಂಡುಬರುತ್ತದೆ. ಬಾಗಲಕೋಟೆ ಪರಿಸರದಲ್ಲಿ ಕಂಡುಬರುವ ದೇವಾಲಯಗಳು ರಾಷ್ಟ್ರಕೂಟ ಅರಸರ ಕಲ್ಯಾಣ ಚಾಲುಕ್ಯರ ಅರಸರ ಕಾಲದಲ್ಲಿ ನಿರ್ಮಾಣವಾಗಿದ್ದವು. ಅವುಗಳು ಸಾಮಂತರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡಂತೆ ಕಾಣುತ್ತವೆ. ಈ ಅರಸರ ಕಲಾಸೌಂದರ್ಯ ಪ್ರಜ್ಞೆ ಸ್ಥಪತಿಗಳಿಗೆ ಕೊಟ್ಟ ಪ್ರೋತ್ಸಾಹಗಳ ಫಲವಾಗಿ ಹೆಚ್ಚು ದೇವಾಲಯಗಳು ನಿರ್ಮಾಣಗೊಂಡಿವೆ. ಪ್ರಮುಖವಾಗಿ ಮೂರು ಮಾದರಿಯ ತಲವಿನ್ಯಾಸದ

ದೇವಾಲಯಗಳು ಇಲ್ಲಿ ಕಂಡುಬರುತ್ತವೆ. ಏಕಕೂಟ ದ್ವಿಕೂಟ ಮತ್ತು ತ್ರಿಕೂಟ ತಲವಿನ್ಯಾಸ ಹೊಂದಿದ ದೇವಾಲಯಗಳು ಕಾಣಬಹುದಾಗಿದೆ. ಆದರೆ ಚತಷ್ಕೂಟ ಪಂಚಕೂಟ, ತಲವಿನ್ಯಾಸದ ದೇವಾಲಯಗಳು ಈ ಪರಿಸರದಲ್ಲಿ ಕಂಡುಬರುವುದಿಲ್ಲ. ಹಾಗೂ ವರ್ತುಳಾಕಾರದ ದೇವಾಲಯ ಹೊರತುಪಡಿಸಿ ಇನ್ನುಳಿದ ಯಾವುದೇ ಮಾದರಿಯ ದೇವಾಲಯಗಳು ಬಾಗಲಕೋಟೆ ಪರಿಸರದಲ್ಲಿ ದೊರಕುತ್ತವೆ. ಆದರೆ ಚತ್ರುಸ, ಆಯತ, ವೃತ್ತ ಅಷ್ಟಕೋನ, ಬಹುಕೋನ ಮಾದರಿಯ ದೇವಾಲಯಗಳ ವಾಸ್ತುಶೈಲಿಯನ್ನು ಇಲ್ಲಿ ಗಮನಿಸಬಹುದಾಗಿದೆ.

ಈ ಪರಿಸರದ ದೇವಾಲಯಗಳ ವೈಶಿಷ್ಟ್ಯವೆಂದರೆ ಒಂದು ದೇವಾಲಯಕ್ಕಿಂತ ಇನ್ನೊಂದು ದೇವಾಲಯದ ವಾಸ್ತುಶೈಲಿ ವಿಭಿನ್ನವಾಗಿದೆ. ಬೇವೂರದ ಸಂಗಮೇಶ್ವರ ದೇವಾಲಯ ತ್ರಿಕೂಟ ಮಾದರಿಯ ತಲವಿನ್ಯಾಸ ಹೊಂದಿದ್ದರೆ ಹಳ್ಳೂರದ ಜೈನಬಸದಿ ಏಕಕೂಟ ಮಾದರಿಯ ತಲವಿನ್ಯಾಸ ಹೊಂದಿದೆ. ಇದೇ ಗ್ರಾಮದ ಬಸವೇಶ್ವರ ದೇವಾಲಯವು ದ್ವಿಕೂಟ ಮಾದರಿಯ ತಲವಿನ್ಯಾಸ ಹೊಂದಿದೆ. ವಿವಿಧ ಮಾದರಿಯ ತಲವಿನ್ಯಾಸದ ದೇವಾಲಯಗಳು ಈ ಪರಿಸರದಲ್ಲಿರುವುದು ಗಮನೀಯ.

ಈ ಪರಿಸರದ ದೇವಾಲಯಗಳ ಶಿಖರ ಶೈಲಿಯಲ್ಲಿಯೂ ವೈಶಿಷ್ಠತೆಯನ್ನು ಕಾಣಬಹುದಾಗಿದೆ. ಶಿರೂರದ ಗಣೇಶ ದೇವಾಲಯದ ಶಿಖರವು ಲುಪಾ (ಇಳಿಜಾರು) ಶೈಲಿಯನ್ನು ಹೊಂದಿದೆ. ಇದು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಮೊದಲು ಕಟ್ಟಡ ನಿರ್ಮಾಣ ಮಾಡಿದ ಪ್ರಯೋಗದಂತೆ ಕಾಣುತ್ತದೆ. ಹಳ್ಳೂರದ ಬಸವೇಶ್ವರ ದೇವಾಲಯದ ಶಿಖರದ ಶೈಲಿಯು ಕದಂಬನಾಗರ (ಫಾಂಸನಾ ಮಾದರಿ) ಶೈಲಿಯನ್ನು ಹೊಂದಿದೆ. ಇನ್ನು ಶಿರೂರದ ಸಿದ್ಧೇಶ್ವರ ದೇವಾಲಯದ ಶಿಖರವು ಕಳಿಂಗ ನಾಗರ ಶೈಲಿಯ ಶಿಖರ (ಔತ್ತರೆಯ ಮಾದರಿ) ಹೊಂದಿದೆ. ಹೀಗೆ ವಿವಿಧ ಮಾದರಿಯ ವಿಶಿಷ್ಠ ಶೈಲಿಯ ದೇವಾಲಯದ ಶಿಖರಗಳು ಈ ಪರಿಸರದಲ್ಲಿ ಕಂಡು ಬರುವುದು ಗಮನಾರ್ಹ.

ಹಳ್ಳೂರದ ಜೈನ ಬಸದಿಯು ಈ ಪ್ರದೇಶದಲ್ಲಿಯೇ ವಿಶಿಷ್ಠ ವಾಸ್ತು ಲಕ್ಷಣ ಹೊಂದಿದೆ. ಒಂದರ ಮೇಲೊಂದು ಎರಡು ಗರ್ಭ ಗೃಹಗಳನ್ನು ನಿರ್ಮಿಸಿದ್ದಾರೆ. ಇದು ತದನಂತರದ ಕಾಲದ ವಾಸ್ತುಶಿಲ್ಪಕಲೆಗೆ ಮಾದರಿಯಾಗಿದೆ. ಇದು ಪಟ್ಟದಕಲ್ಲಿನ ಜೈನ ನಾರಾಯಣ ದೇವಾಲಯ ಮಾದರಿಯನ್ನು ಹೋಲುತ್ತದೆ. ಬಾಗಲಕೋಟ ಪರಿಸರದ ದೇವಾಲಯಗಳ ವಾಸ್ತುಶೈಲಿಯನ್ನು ನೋಡಿದಾಗ ಶಿಲಾತೋರಣವು ಸುಂದರ ವಾಸ್ತುಕೆತ್ತನೆಯಿಂದ ಕೂಡಿದೆ. ಉದಾಹರಣೆಗೆ ಶಿರೂರದ ಸಿದ್ದೇಶ್ವರ ದೇವಾಲಯದ ಶಿಲಾತೋರಣವು ವಿಶಿಷ್ಠ ಅಲಂಕಾರ ಕೆತ್ತನೆಯಿಂದ ಕೂಡಿದ್ದು, ಸೂಕ್ಷ್ಮ ಕೆತ್ತನೆ ಹೊಂದಿದೆ. ಇದನ್ನು ಹೋಲುವ ಶಿಲಾತೋರಣ ಬಾದಾಮಿ ಪರಿಸರದಲ್ಲಿ ಕಂಡುಬರುವುದಿಲ್ಲ ಆದರೆ ರಾಯಚೂರು ಜಿಲ್ಲೆಯ ಇಟಗಿಯ ಲಕ್ಷ್ಮೀ ದೇವಾಲಯದಲ್ಲಿ ಈ ಮಾದರಿಯ ಶಿಲಾತೋರಣ ಇರುವುದು ಗಮನಿಸಬಹುದಾಗಿದೆ.

ವಾಸ್ತುಶಿಲ್ಪಕಲೆಯ ಲಕ್ಷಣಗಳಲ್ಲಿ ಪ್ರಾಕಾರ ಪ್ರವೇಶಮಂಟಪ ಪ್ರಮುಖ ಸ್ಥಾನ ಪಡೆದಿದೆ. ಇದು ದಕ್ಷಿಣ ಭಾರತದಲ್ಲಿ ಆಡಳಿತ ಮಾಡಿದ ಪಲ್ಲವ ಮತ್ತು ಬಾದಾಮಿ ಚಾಲುಕ್ಯರು ಪ್ರಾರಂಭಿಸಿದಂತೆ ತೋರುತ್ತದೆ. ತದನಂತರ ರಾಷ್ಟ್ರಕೂಟ ಅರಸರು ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಮತ್ತಷ್ಟು ಹೆಚ್ಚು ಪ್ರಾಶಸ್ತ್ಯ ನೀಡಿದಂತೆ ಕಾಣುವದು. ಇದು ವಿಜಯನಗರ ಅರಸರ ಆಡಳಿತದ ಅವಧಿಯ ದೇವಾಲಯಗಳಲ್ಲಿ ಕಂಡುಬರುತ್ತದೆ. ಆದರೆ ಬಾಗಲಕೋಟೆ ಈ ಪರಿಸರದಲ್ಲಿ ಆಡಳಿತ ಮಾಡಿದರಸರು ಈ ಮಾದರಿಯನ್ನು ಅನುಸರಿಸಿದರು. ಇಂತಹ ಸಂಕೀರ್ಣ ದೇವಾಲಯ ಶಿರೂರ ಸಿದ್ದೇಶ್ವರ ದೇವಾಲಯದ ಪ್ರಾಕಾರದಲ್ಲಿ ಕಂಡುಬರುತ್ತವೆ.

ಬಾಗಲಕೋಟೆ ಪರಿಸರದಲ್ಲಿ ಪ್ರಮುಖವಾಗಿ ಬೇವೂರ, ಹಳ್ಳೂರ, ಶಿರೂರ, ಹಿರೇಮ್ಯಾಗೇರಿ, ಬೊಮ್ಮಣಗಿ, ಮಂಕಣಿ, ಬಿಲ್‌ಕೆರೂರ, ಮುಡಪಲಜೀವಿ, ಮುಚಖಂಡಿ, ಸೀತಿಮನ, ತುಳಸಿಗೇರಿ, ಉದಗಟ್ಟಿ, ಕಲಾದಗಿ, ಹಿರೇಶೆಲ್ಲಿಕೇರಿ ಮತ್ತು ಬಾಗಲಕೋಟೆಯಲ್ಲಿ ಪ್ರಾಚೀನ ದೇವಾಲಯಗಳು ಅಂದರೆ ಶೈವ, ವೈಷ್ಣವ, ಜೈನಧರ್ಮದ ದೇವಾಲಗಳು ಕಂಡುಬರುತ್ತವೆ. ಆದರೆ ಬೌದ್ಧ ಧರ್ಮದ ದೇವಾಲಯಗಳು ಹಾಗೂ ಯಾವುದೇ ಬೌದ್ಧ ಧರ್ಮದ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ.

ಇದು ಬಾಗಲಕೋಟೆ ಪರಿಸರದಲ್ಲಿ ಕಂಡುಬರುವ ಶಿವಲಿಂಗಗಳು ಸ್ಥಳೀಯವಾಗಿ ಸಿಗುವ ಕಪ್ಪುಮಿಶ್ರಿತ ಕಲ್ಲಿನಲ್ಲಿವೆ. ಇನ್ನು ಕೆಲವು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಕಲ್ಲಿನಲ್ಲಿವೆ. ಇವು ನೋಡಲು ಆಕರ್ಷಕವಾಗಿದ್ದು, ಸುಂದರವಾಗಿವೆ. ಅದೇ ತರನಾಗಿ ವೀರಭದ್ರ, ಗಣೇಶ, ನಂದಿ, ವಿಷ್ಣು, ಸೂರ್ಯ, ಮಹಿಷಮರ್ದಿನಿ, ಸರಸ್ವತಿ ಶಿಲ್ಪ, ಸಪ್ತಮಾತೃಕೆಯರು ಹಾಗೂ ಜೈನರ ಜಿನಮೂರ್ತಿಗಳಾದ ಪಾರ್ಶ್ವನಾಥ, ಮಹಾವೀರ ಹಾಗೂ ಪದ್ಮಶಿ (ಪದ್ಮಾವತಿ) ಯಕ್ಷಿಣಿಯ ಶಿಲ್ಪಗಳು ಸುಂದರ ಕೆತ್ತನೆಯಿಂದ ಕೂಡಿವೆ. ಲೌಕಿಕ ಶಿಲ್ಪಗಳಾದ ಬಲಿದಾನದ ಶಿಲ್ಪಗಳು ಅಂದರೆ ವೀರಗಲ್ಲುಗಳು ತುರುಗೋಳ ಅಥವಾ ಗೋಗ್ರಹಣ ಶಿಲ್ಪಗಳೂ ಈ ಪರಿಸರದಲ್ಲಿ ಕಂಡುಬರುತ್ತವೆ.

ಬಾಗಲಕೋಟ ಪರಿಸರದ ಶಿರೂರದ ಸಿದ್ದೇಶ್ವರ ದೇವಾಲಯವು ವಾಸ್ತುಶಿಲ್ಪಕಲೆ ಹಾಗೂ ಮೂರ್ತಿಶಿಲ್ಪಗಳಿಂದ ಹೆಚ್ಚು ಮಹತ್ವ ಪಡೆದುಕೊಂಡಿದೆ. ವಿಶಿಷ್ಟವಾದ ವಾಸ್ತು ಲಕ್ಷಣಗಳನ್ನು ಹೊಂದಿದೆ. ವಿಷ್ಣು, ವಿನಾಯಕ, ಚಂಡಿ, ಹನುಮ, ಹಟಕೇಶ್ವರ, ಮಲ್ಲಿಕಾರ್ಜುನ ಹಾಗೂ ತೋರಣದಲ್ಲಿ ಮತ್ತು ವಿತಾನ ಮಂಟಪದ ಶಿಲ್ಪಗಳಾದ ನಂದಿ, ಮಹಾಕಾಳಿ, ಭೈರವ, ದುರ್ಗೆ ಆದಿತ್ಯ, ಚಂಡೀಶ, ಷಣ್ಮುಖ, ಸರಸ್ವತಿ ವಿಗ್ರಹಗಳು ವಿಶಿಷ್ಟವಾದ ಸೂಕ್ಷ್ಮಕೆತ್ತನೆಯಿಂದ ಕೂಡಿದ್ದು ಈ ಪ್ರದೇಶದ ಆಡಳಿತ ಮಾಡಿದ ಅರಸರ ಕೊಡುಗೆಗಳೆಂದರೆ ತಪ್ಪಾಗಲಾರದು. ಅದೇ ತೆರನಾಗಿ ಬೇವೂರ, ಹಳ್ಳೂರ, ಬಾಗಲಕೋಟ, ಶಿರೂರ ಇನ್ನೂ ಹಲವಾರು ಕಡೆ ಕಂಡು ಬರುವ ದೇವಾಲಯಗಳಲ್ಲಿ ಸುಂದರ ಮೂರ್ತಿಶಿಲ್ಪಗಳನ್ನು ಕಾಣಬಹುದಾಗಿದೆ.

ಅದೇ ತೆರನಾಗಿ ಬೇವೂರದ ಮಹಿಷಮರ್ದಿನಿ, ವಿಷ್ಣು ವಿಗ್ರಹ, ಸಪ್ತಮಾತೃಕೆಯ ಶಿಲ್ಪ ಹಾಗೂ ಶಿರೂರದ ಗಜಲಕ್ಷ್ಮಿ, ಗಣೇಶ ವಿಗ್ರಹಗಳು ಇವರ ವಾಸ್ತುಶಿಲ್ಪದ ಮಹತ್ವವನ್ನು ಎತ್ತಿ ತೋರಿಸುತ್ತವೆ.

ಒಟ್ಟಾರೆ ಬಾಗಲಕೋಟೆ ಪರಿಸರವು ಇತಿಹಾಸ ಮತ್ತು ಸಾಂಸ್ಕೃತಿಕವಾಗಿ ಒಂದಿಲ್ಲೊಂದು ಐತಿಹಾಸಿಕ ಕೊಡುಗೆ ನೀಡಿದೆ. ಭೌಗೋಳಿಕವಾಗಿ ಜಿಲ್ಲೆಯಲ್ಲಿ ಬೆಳೆದು ಬಂದಿವೆ. ಪ್ರಾಗೈತಿಹಾಸಿಕ ಮಾನವನ ಪಳೆಯುಳಿಕೆಗಳಿಂದ ಈ ಪ್ರದೇಶದಲ್ಲಿ ಯಾವ ರೀತಿ ಜೀವನ ಸಂಸ್ಕೃತಿ ಕಟ್ಟಿಕೊಂಡರೆಂಬುದು ಗೊತ್ತಾಗುತ್ತದೆ. ಬಾಗಡಗೆ ನಾಡು ಯಾವ ಅರಸುಮನೆತನಗಳ ಸಾರ್ವಭೌಮ ಅಧಿಕಾರಕ್ಕೆ ಒಳಪಟ್ಟಿತ್ತು ಎಂಬುದರ ಜೊತೆಗೆ ಪಾಚೀನ ಕಾಲದಿಂದ ಕ್ರಿ.ಶ. ೧೫೬೫ ರ ಮಧ್ಯಾವಧಿಯಲ್ಲಿ ಬರುವ ಅರಸರ ಕುರಿತು ದಾಖಲೆಗಳ ಸಹಾಯದಿಂದ ತಿಳಿದುಬರುವುದು. ಹಾಗೂ ವಿಶಿಷ್ಠವಾದ ವಾಸ್ತುಶಿಲ್ಪಗಳನ್ನು ಹೊಂದಿದೆ. ಮತ್ತು ಮೂರ್ತಿಶಿಲ್ಪಗಳು ಪ್ರಮುಖ ಪಾತ್ರವಹಿಸುತ್ತವೆ. ಧಾರ್ಮಿಕ ಜೀವನದ ಉನ್ನತಿಯ ಮೇಲೆ ಪ್ರಭಾವ ಬೀರುತ್ತದೆ. ಈ ಪರಿಸರದ ಆಡಳಿತ ಮಾಡಿದ ಅರಸರ ದಕ್ಷ ಆಡಳಿತ ಜೊತೆಗೆ ವಾಸ್ತುಶಿಲ್ಪಕಲೆ, ಮೂರ್ತಿಶಿಲ್ಪಕಲೆ ವೈಶಿಷ್ಟ್ಯಪೂರ್ಣವಾದ ಕೊಡುಗೆ ನೀಡಿರುವರು. ಏಕೆಂದರೆ ಅವರ ಕಾಲಾವಧಿಯಲ್ಲಿ ನಿರ್ಮಾಣವಾದ ದೇವಾಲಯಗಳೇ ಜೀವಂತ ಸಾಕ್ಷಿಯಾಗಿ ಇಂದಿಗೂ ಸಾಕ್ಷೀಕರಿಸುತ್ತವೆ.

ಒಟ್ಟಾರೆ ಬಾಗಲಕೋಟ ಪರಿಸರವು ಚರಿತ್ರೆಗೆ ಪೂರಕವಾದ ವಿಶಿಷ್ಠವಾದ ವಾಸ್ತುಲಕ್ಷಣವನ್ನು ಹೊಂದಿದೆ. ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲದೇ ಆಡಳಿತ ಮಾಡಿದ ಅರಸರ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಜೀವನದ ಉನ್ನತಿಯ ಮೇಲೆ ಪ್ರಭಾವ ಬೀರುತ್ತವೆ. ಈ ಪರಿಸರದಲ್ಲಿ ಆಡಳಿತ ಮಾಡಿದ ಅರಸರು ದಕ್ಷ ಆಡಳಿತದ ಜೊತೆಗೆ ವಾಸ್ತುಶಿಲ್ಪಕಲೆ ಹಾಗೂ ಮೂರ್ತಿಶಿಲ್ಪಕ್ಕೆ ವೈಶಿಷ್ಠಪೂರ್ಣವಾದ ಕೊಡುಗೆಯನ್ನು ನೀಡಿದ್ದಾರೆ. ಏಕೆಂದರೆ ಅವರ ಕಾಲಾವಧಿಯಲ್ಲಿ ನಿರ್ಮಾಣವಾದ ದೇವಾಲಯಗಳೇ ಜೀವಂತ ಸಾಕ್ಷಿಯಾಗಿ ಇಂದಿಗೂ ಸಾಕ್ಷೀಕರಿಸುತ್ತವೆ.

ಗ್ರಂಥಋಣ

ಕನ್ನಡ ಗ್ರಂಥಗಳು

ಅಣ್ಣಿಗೇರಿ ಎ.ಎಂ., ***ಶಾಸನ ಸಾಹಿತ್ಯ ಸಂಚಯ***, ಧಾರವಾಡ ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೬೧.

ಎಲಿಗಾರ ಚೆನ್ನಕ್ಕ ***ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ***, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.

ಅಪರ್ಣ ಕೂ.ಸ. ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕ,ವಿ,ಹಂಪಿ

ಕಾಮತ್ ಎಸ್.ಯು., ***ಕರ್ನಾಟಕ ರಾಜ್ಯ ಗ್ಯಾಜೆಟಿಯರ್ ಸಂ. ೧***, ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು, ೧೯೪೮.

ಕಲಬುರ್ಗಿ ಎಂ.ಎಂ., ***ಬಿಜಾಪುರ ಜಿಲ್ಲೆಯ ಶಾಸನಸೂಚಿ***, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

ಕೊಪ್ಪಾ ಎಸ್.ಕೆ., ***ತರ್ದವಾಡಿ ನಾಡು: ಒಂದು ಅಧ್ಯಯನ***, ಪ್ರತಿಭಾ ಪ್ರಕಾಶನ, ಇಂಡಿ, ೧೯೯೦.

ಕನವಳ್ಳಿ ಸದಾನಂದ ***ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ***, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨.

ಗಿರಿಸಾಗರ ಪಿ.ವೈ., ***ಬಾಗಲಕೋಟ ತಾಲೂಕು ದರ್ಶನ***, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೭.

ಗೋಪಾಲ ಬಿ.ಆರ್., ***ಕರ್ನಾಟಕ ರಾಜ್ಯ ಗ್ಯಾಜೆಟಿಯರ್ ಸಂ. ೧***, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೩.

ಗೋಪಾಲ ಬಿ.ಆರ್., ***ಕರ್ನಾಟಕದ ಕಲೆಗಳು, ವಾಸ್ತು ಸಂಪುಟ ೪***, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೩.

ಚಿದಾನಂದಮೂರ್ತಿ ಎಂ., ***ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ***, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯.

ತಿಪ್ಪೇಸ್ವಾಮಿ ಪಿ.ಆರ್., ***ಶಿಲ್ಪಕಲಾ ಪ್ರಪಂಚ,*** ಕರ್ನಾಟಕ ಲಲಿತಕಲಾ ಅಕ್ಯಾಡೆಮಿ, ಬೆಂಗಳೂರು, ೧೯೯೪.

ತಿಪ್ಪೇರುದ್ರಸ್ವಾಮಿ ಎಚ್., ***ಕರ್ನಾಟಕ ಸಂಸ್ಕೃತಿಕ ಸಮೀಕ್ಷೆ,*** ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೮೩.

ನರಸಿಂಹಮೂರ್ತಿ ಎ.ವಿ., ***ಚಾಲುಕ್ಯ ವಾಸ್ತುಶಿಲ್ಪ ಪರಿಚಯ,*** ಐ.ಬಿ.ಎಚ್., ಪ್ರಕಾಶನ, ಬೆಂಗಳೂರು, ೧೯೮೪.

ನಾಯಕ ಹಾ.ಮಾ., ***ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ,*** ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯.

ಪುರೋಹಿತ, ದ.ರಾ., ***ಕಲಾದಗಿ ದರ್ಶನ,*** ಕಲಾದಗಿ ಪ್ರಗತಿ ಸಾಹಿತ್ಯ ವೇದಿಕೆ, ಕಲಾದಗಿ, ೧೯೯೬.

ಪೂಜಾರ ಎಸ್. ಮತ್ತು ಕಾಡದೇವರ ಜೆ., ***ಬೆಳವಲದ ಬೆಡಗು,*** ಬಸವಲಿಂಗ ಮುದ್ರಣಾಲಯ, ಬಾಗಲಕೋಟೆ, ೧೯೯೩.

ಪಂಚಮುಖಿ ಆರ್.ಎಸ್., ***ಕರ್ನಾಟಕದ ಇತಿಹಾಸ,*** ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೧೯೬೭.

ಬಿಜಾಪುರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಗಳ ಕಛೇರಿ, **ಬಿಜಾಪುರ ಜಿಲ್ಲೆಯ ಅಂಕಿ–ಅಂಶಗಳ ನೋಟ,** ಬಿಜಾಪುರ, ೧೯೯೩–೯೬.

ರಾಜಶೇಖರ ಎಸ್., ***ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ,*** ಸುಜಾತಾ ಪಬ್ಲಿಕೇಶನ್ಸ್, ಧಾರವಾಡ, ೧೯೮೮.

ರಾಮಚಂದ್ರರಾವ್ ಎಸ್.ಕೆ., ***ಮೂರ್ತಿಶಿಲ್ಪ: ನೆಲೆ–ಹಿನ್ನೆಲೆ,*** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೩.

ರಾಮಚಂದ್ರರಾವ್ ಎಸ್.ಕೆ., ***ಭಾರತದ ದೇವಾಲಯ: ನೆಲೆ–ಹಿನ್ನೆಲೆ,*** ಐ.ಬಿ.ಎಚ್., ಪ್ರಕಾಶನ, ಬೆಂಗಳೂರು, ೧೯೮೦.

ಶಶಿಕಲಾ, ಮರಿಬಾಶೆಟ್ಟಿ ***ಬೆಳ್ಳಿ ಬೆಡಗು****(ಕೈಬರಹ ಪತ್ರಿಕೆ)***,** ಸಿದ್ಧೇಶ್ವರ ಸಂಘದ ಚರಿತ್ರೆ, ಶಿರೂರ,೧೯೯೦.

ಸೂರ್ಯನಾಥ ಯು ಕಾಮತ್., ***ಇತಿಹಾಸ ದರ್ಶನ ಸಂಪುಟ–೫,*** ಕರ್ನಾಟಕ ಇತಿಹಾಸ ಅಕ್ಯಾಡೆಮಿ, ಬೆಂಗಳೂರು, ೧೯೯೦.

ಸುಂದರ ಅ., *ಇತಿಹಾಸಪೂರ್ವ ಕರ್ನಾಟಕ ಅಥವಾ ಕರ್ನಾಟಕದ ಪ್ರಾಗೈತಿಹಾಸ,* ಐ.ಬಿ.ಎಚ್. ಪ್ರಕಾಶನ, ಬೇಂಗಳೂರು, ೧೯೭೧.

ಸುಂದರ ಅ., '*ಗಂಗ ಕದಂಬ ಪೂರ್ವ ಇತಿಹಾಸ*' ಅವಲೋಕನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ, ಬೆಂಗಳೂರು, ೧೯೮೫.

ಸುಂದರ ಅ., '*ಪ್ರಾಗೈತಿಹಾಸಿಕ ಗವಿವರ್ಣ ಮತ್ತು ಬಯಲು ಬಂಡೆಯ ಚಿತ್ರಗಳು: ಕರ್ನಾಟಕ*' ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಘದ ಹರ್ತಿಕೋಟೆ, ೧೯೮೭.

ಷೇಕ್ ಅಲಿ ಬಿ. (ಪ್ರ.ಸಂ), *ಕರ್ನಾಟಕ ಚರಿತ್ರೆ, ಸಂ. ೧–೨ ಮತ್ತು ೪,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಹಿರೇಮಠ ಬಿ. ಆರ್., *ಶಾಸನಗಳಲ್ಲಿ ಕರ್ನಾಟಕದ ವರ್ತಕರು,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬.

ಆಂಗ್ಲ ಗ್ರಂಥಗಳು

Ansari Z.D., 'Pebble tools from Nittur', ***Indian Antiquary, vol-IV***, Popular Prakashan, Bombay, 1970.

A Report, ***Indian Archaeology 1958-64 A Review***, Archaeological Survey of India, Delhi.

Annual Reports on South Indian Epigraphy of the year 1934-35 and 1937-38, Delhi.

Chakrabarti Dilip K., ***A History of Indian Archaeology from the beginning to 1947***, Munshiram Manoharlal Publishers, New Delhi, 1988.

Deo S.B. and Dhavalikar M.K., ***Studies in Indian Archaeology***, Popular Prakashan, Bombay, 1985.

Dhaky M.A., ***The Indian Temple Forms in Karnataka Inscriptions and Architecture***, Abhinav Publications, New Delhi, 1977.

Dhavalilkar M.K., **'Some Aspects of the Chalcolithic Culture of Central**

India', *Puratatva*, No-4, **Indian Archaeology Society,** New Delhi, 1970-71.

Desai P.B., ***South Indian Inscriptions, Vol-XV***, Delhi, 1964.

Foote R.B., ***The Foote Collection of Indian Pre-historic and Proto-historic Antiquities***, Govt. of India Press, Madras, 1914.

Gopal B.R., ***The Chalukyas of Kalyana and the Kalchuris***, Prasaranga Karnataka University, Dharwad, 1981.

Ghosh A., ***An Encyclopedia of Indian Archaeology***, Munshiram Manoharlal Publishers, New Delhi, 1989.

Henri Sterlin, ***Encyclopedia of World Architecture, 2 vols*****,** Macmillan Press Ltd, London, 1977.

Hultzsch E., ***Epigraphia Indica, Vol-III*****,** Office of the Superintendent of Govt. printing, Calcutta, 1994-95.

Jain K.C., ***Pre-History and Proto-History of India*****,** Agamkala Prakashan, New Delhi, 1979.

Kuppuswami G.R., ***Economic Conditions in Karnataka***, Karnataka University, Dharwad, 1975.

Mahalingam T.V., ***Studies in South Indian Temple Complex*****,** K.R.I, Karnataka University, Dharwad, 1970.

Meister M.W. and Dhaky M.A., ***Encyclopedia of Indian Temple Architecture*****,** ***South India Upper Dravidadesa Early Phase***, American Institute of Indian Studies, Oxford University Press, Delhi, 1986.

New Mayer Erwin, ***Pre-historic Indian Rock Paintings*****,** Oxford University Press, Delhi, 1983.

Narasimhaswami H.K., ***South Indian Inscriptions Vol-XI***, Govt. Press, Madras, 1940.

Padmanabha P., **Bijapur District Handbook,** Govt. of Karnataka, Bangalore, 1973.

Pappu R.S., ***Pleistocene Studies in the Upper Krishna Basin***, Deccan College Post Graduate and Research Institute, Pune, 1974.

Soundra Rajan K.V., ***Early Temple Architecture in Karnataka and its Ramifications***, K.R.I., Karnataka University, Dharwad,1969.

Sali S.A., ***Stone Age India*, Shankar Publishers,** Aurangabad, 1990.

Sankalia H.D., Pre-history and Proto-history of India and Pakistan, Deccan Post Graduate and Research Institute Pune, 1974.

Sathyam B.N., ***Mysore State Gazetteer: Bijapur District***, Govt. of Mysore, Bangalore, 1966.

Sourindranath Roy, ***The Story of Indian Archaeology 1784-1947***, Archaeological Survey of India, New Delhi, 1961.

Sundara A., **'*Proto-historic sites in Bijapur District*'**, The Journal of Karnataka University, vol-IV, Dharwad, 1968.

Sundara A., ***The Early Chamber Tombs of South India***, University Publishers, Delhi, 1975.

Ritti Srinivas, ***The Sevunas(The Yadavas of Devagiri),*** Karnataka University, Dharwad, 1973.

Rao S.R., **Dawn and Devolution of the Indus Civilization, Aditya** Prakashan, New Delhi, 1991.

Epigraphy Sources:

Annual Reports on South Indian Epigraphy of the year 1934-35 and 1937-38, Delhi.

Desai P.B., ***South Indian Inscriptions, Vol-XV***, Delhi, 1964.Hultzsch E., ***Epigraphia Indica, Vol-III***, Office of the Superintendent of Govt. printing, Calcutta, 1994-95.

Narasimhaswami H.K., ***South Indian Inscriptions Vol-XI***, Govt. Press, Madras, 1940.

ಪ್ರಬಂಧಗಳು

ಚನ್ನವೀರಯ್ಯ ವ್ಹಿ., ***'ಕುರುಗೋಡು ಸಿಂಧರು ಒಂದು ಅಧ್ಯಯನ'*** ಪಿಎಚ್.ಡಿ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩.

ಸುಭಾಸ ರಾ. ಚಿಂಚೋಳಿ ಪ್ರಕಟಿತ ಮಹಾ ಪ್ರಬಂಧ ಪ್ರಾಕ್ತಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪೂರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪಕಲೆಯ ಅಧ್ಯಯನ – ೧೯೯೯.

ಯಾವಗಲ್ಲ ಡಿ.ಎಮ್., ***ಬಾಗಲಕೋಟ ಪ್ರದೇಶದ ಶಿಲ್ಪಕಲೆ,*** ಅಂತಿಮ ವರ್ಗದ ಪದವಿಗೆ ಸಾದರಪಡಿಸಿದ ಅಪ್ರಕಟಿತ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫-೯೬.


ಲೇಖನಗಳು:

ಪುರೋಹಿತ ದ.ರಾ., ***"ಹಾಳಾಗುವ ಹಾದಿಯಲ್ಲಿ ಹಳ್ಳೂರು ಬಸದಿ",*** *ತರಂಗ*, ಮಾರ್ಚ್, ೧೯೯೭.

ಹಿರೇಮಠ ದಿ., **"ಕಲ್ಲುಗುಡ್ಡದಲ್ಲಿ ಸುಂದರ ಸೀತಿಮನಿ"**, *ಕರ್ಮವೀರ*, ಫೆಬ್ರುವರಿ, ೧೯೯೮.

Padigar S.V., **"Two Rare Temples in Sirur"**, *Journal of Institute of Indian Studies*, Vol-I Part-2.

ಬಾಗಲಕೋಟೆ ಪರಿಸರದ ದೇವಾಲಯಗಳ ಸ್ಥಳಗಳು





೧.ಶಿರೂರ ಗ್ರಾಮದ ಲುಪಾ ಶೈಲಿಯ ಗಣೇಶ ದೇವಾಲಯ (ಇಳಿಜಾರು)



೨. ಶಿರೂರ ಗ್ರಾಮದ ಗಣೇಶ ದೇವಾಲಯದ ಗರ್ಭಗೃಹದಲ್ಲಿರುವ ಗಣೇಶ ವಿಗ್ರಹ



೩.ಶಿರೂರ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಮುಖಮಂಟಪದಲ್ಲಿರುವ ಮಹಾವೀರನ ವಿಗ್ರಹ



೪. ಶಿರೂರ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಮುಖಮಂಟಪದಲ್ಲಿರುವ ಮಹಾವೀರನ ವಿಗ್ರಹ



೫.ಶಿರೂರ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಗೋಡೆಗೆ ನಿಲ್ಲಿಸಿದ ವೀರಗಲ್ಲು.



೬. ಶಿರೂರ ಗ್ರಾಮದ ಲಕ್ಷ್ಮೀನಾರಾಯಣ ದೇಗುಲದ ಗರ್ಭಗೃಹದಲ್ಲಿರುವ ನಾರಾಯಣ ಲಕ್ಷ್ಮೀ ವಿಗ್ರಹ



೭.ಶಿರೂರ ಗ್ರಾಮದ ಲಕ್ಷ್ಮೀನಾರಾಯಣ ದೇಗುಲದ ದೇವಕೊಪ್ಪದಲ್ಲಿರುವ ಸೂರ್ಯದೇವನ ವಿಗ್ರಹ



೮. ಶಿರೂರ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಹೊರನೋಟ.



೯. ಶಿರೂರ ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯದ ಹೊರನೋಟ.



೧೦. ಶಿರೂರ ಗ್ರಾಮದ ರಾಮಲಿಂಗೇಶ್ವರ ದೇಗುಲದ ದಕ್ಷಿಣ ಗರ್ಭಗೃಹದಲ್ಲಿರುವ ಪಾಣಿಪೀಠ.



೧೧. ಶಿರೂರ ಗ್ರಾಮದ ರಾಮಲಿಂಗೇಶ್ವರ ದಕ್ಷಿಣ ಗರ್ಭಗೃಹದ ದ್ವಾರಬಂಧದ ಮೇಲ್ಭಾಗದ ಗಜಲಕ್ಷ್ಮೀಯ ವಿಗ್ರಹ




೧೨. ಶಿರೂರ ಗ್ರಾಮದ ರಾಮಲಿಂಗೇಶ್ವರ ಮುಖಮಂಪಟದ ಕೋಷ್ಠಕದಲ್ಲಿರುವ ಗಣೇಶ ವಿಗ್ರಹ



೧೩. ಶಿರೂರ ಗ್ರಾಮದ ಲಕ್ಷ್ಮೀ-ನಾರಾಯಣ ದೇವಾಲಯದ ಮುಖಮಂಟಪದ ನೋಟ.



೧೪. ಶಿರೂರ ಸಿದ್ದೇಶ್ವರ ದೇಗುಲದ ಹೊರನೋಟ.



೧೪. ಶಿರೂರ ಸಿದ್ದೇಶ್ವರ ದೇಗುಲದ ಪ್ರಾಕಾರದಲ್ಲಿಯ ಮಕರತೋರಣ.



೧೬. ಶಿರೂರ ಸಿದ್ದೇಶ್ವರ ದೇಗುಲದ ಹಿಂಭಾಗದ ಭಿತ್ತಿ ಹಾಗೂ ರೇಖಾನಗರ ಶಿಖರದ ಹೊರನೋಟ.



೧೭. ಶಿರೂರ ಸಿದ್ದೇಶ್ವರ ದೇಗುಲದ ಪ್ರಾಕಾರದಲ್ಲಿಯ ಪಂಚಾತಯನ ದೇಗುಲಗಳು.



೧೮. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ಹೊರನೋಟ (ನಾರಾಯಣ).



೧೯. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ನವರಂಗದಲ್ಲಿರುವ ನಂದಿಯ ವಿಗ್ರಹ.



೨೦. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ನವರಂಗದಲ್ಲಿರುವ ಮಹಿಷಮರ್ದಿನಿ ವಿಗ್ರಹ.



೨೧. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ಪೂರ್ವಗರ್ಭಗೃಹದಲ್ಲಿರುವ ಪಾಣಿಪೀಠ.



೨೨. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ದಕ್ಷಿಣಮುಖ ಗರ್ಭಗೃಹದಲ್ಲಿರುವ ಸಪ್ತಮಾತೃಕೆಯ ಶಿಲ್ಪ.



೨೩. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ಪಶ್ಚಿಮಾಭಿಮುಖವಾಗಿ ಗರ್ಭಗೃಹದಲ್ಲಿರುವ ವಿಷ್ಣುವಿನ ವಿಗ್ರಹ.



೨೪. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ಮುಖಮಂಟಪದ ನೋಟ.



೨೫. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ಗರ್ಭಗೃಹದ ಹಿಂಬದಿಯಲ್ಲಿ ಜಲಪ್ರಣಾಳದ ಮಕರವಕ್ತ್ರ ಶಿಲ್ಪದ ನೋಟ.




೨೬. ಸೀತಿಮನಿ ಗ್ರಾಮದ ಗುಡ್ಡದ ಮೇಲ್ಗಡೆಯ ಸೀತಾಮಾತೆಯ ದೇಗುಲದ ಮುಖಮಂಪಟದ ಎಡ ಭಿತ್ತಿಯಲ್ಲಿ.



೨೭. ಬೇವೂರ ಗ್ರಾಮದ ಸಂಗಮೇಶ್ವರ ದೇವಾಲಯದ ಮುಖಮಂಟಪದ ಪಂಚಶಾಖಾ ದ್ವಾರಬಂಧದ ಹೊರನೋಟ.



೨೮. ಹಳ್ಳೂರ ಗ್ರಾಮದ ಬಸವೇಶ್ವರ ದೇವಾಲಯದ ಹೊರನೋಟ.




೨೯. ಹಳ್ಳೂರ ಗ್ರಾಮದ ಹೊರಹೊಲಯದ ದಿಬ್ಬದ ಮೇಲಿನ ಬಸದಿಯ ನೋಟ.



೩೦. ಹಳ್ಳೂರ ಗ್ರಾಮದ ಹೊರವಲಯದ ಬಸದಿಯ ಮೇಲ್ಭಾಗದ ಗರ್ಭಗೃಹದ ನೋಟ.



೩೧. ಮುಡಪಲಜೀವಿ ಸಿದ್ಧೇಶ್ವರ ದೇವಾಲಯದ ಮುಖಮಂಟಪ.



೩೨. ಮುಡಪಲಜೀವಿಯ ಸಿದ್ಧೇಶ್ವರ ದೇಗುಲದ ಪೂರ್ವದಿಕ್ಕಿನ ಗರ್ಭಗೃಹದಲ್ಲಿರುವ ವೀರಭದ್ರೇಶ್ವರ ವಿಗ್ರಹ.



೩೩. ಮಂಕಣಿ ಗ್ರಾಮದ ಹೊಳೆಈಶ್ವರ ದೇಗುಲದ ಮುಖಮಂಟಪದ ನೋಟ.



೩೪. ಮಂಕಣಿ ಗ್ರಾಮದ ಹೊಳೆಈಶ್ವರ ದೇಗುಲದ ಗರ್ಭಗೃಹದ ಒಳಗೆ ಉದ್ಭವ ಶಿವಲಿಂಗ ವಿಗ್ರಹ.



೩೫. ಮಂಕಣಿ ಗ್ರಾಮದ ಈಶ್ವರ ದೇಗುಲದ ಭುವನೇಶ್ವರಿಯಲ್ಲಿರುವ
ಅರಳಿದ ಕಮಲದ ಶಿಲ್ಪ ನೋಟ.



೩೬. ಮಂಕಣಿ ಗ್ರಾಮದ ಈಶ್ವರ ದೇಗುಲದ ಮುಖಮಂಟಪದ ನೋಟ.



೩೭. ಮಂಕಣಿ ಗ್ರಾಮದ ಈಶ್ವರ ದೇಗುಲದ ನವರಂಗದಲ್ಲಿರುವ ಸ್ತಂಭಗಳ ನೋಟ.



೩೮. ಮಂಕಣಿ ಗ್ರಾಮದ ಈಶ್ವರ ದೇಗುಲದ ನವರಂಗದಲ್ಲಿರುವ ಸ್ತಂಭದ ನೋಟ.



೩೯. ಮುಚಖಂಡಿ ಗ್ರಾಮದ ವೀರಭದ್ರೇಶ್ವರ ದೇಗುಲದ ಹಿಂಭಾಗದ ವೀರಗಲ್ಲು ಶಿಲ್ಪ.



೪೦. ಮಂಕಣಿ ಗ್ರಾಮದ ಹೊಳೆಈಶ್ವರ ದೇಗುಲದ ನವರಂಗದ ಭುವನೇಶ್ವರಿಯಲ್ಲಿರುವ ಅರಳಿದ ಕಮಲದ ನೋಟ.



೪೧. ಬಿಲ್‌ಕೆರೂರು ಗ್ರಾಮದ ರಾಮಲಿಂಗೇಶ್ವರ ದೇಗುಲದ ಪಶ್ಚಿಮ ದಿಕ್ಕಿನ ಗರ್ಭಗೃಹದಲ್ಲಿರುವ ಶಿವಲಿಂಗದ ಮೇಲಿರುವ ಬ್ರಹ್ಮಸೂತ್ರದ ನೋಟ.



೪೨. ಬಿಲ್‌ಕೆರೂರು ಗ್ರಾಮದ ಹನುಮಾನ ದೇಗುಲದ ಎದುರಿನ ಮಾನಸ್ತಂಭದ ಕಟ್ಟೆಯ ಮೇಲಿರುವ ತೃಟಿತಗೊಂಡ ಮಹಾವೀರನ ವಿಗ್ರಹ.



೪೩. ಹಳ್ಳೂರು ಗ್ರಾಮದ ಜೈನ ಬಸದಿಯ ನವರಂಗದ ಭುವನೇಶ್ವರಿಯ ಅಲಂಕಾರದ ನೋಟ.



೪೪. ಹಳ್ಳೂರು ಗ್ರಾಮದ ಜೈನ ಬಸದಿಯ ಬಲಭಾಗದ ಭಿತ್ತಿಯಲ್ಲಿರುವ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ ಪಾರ್ಶ್ವನಾಥನ ವಿಗ್ರಹ.



೪೫. ಬೇವೂರು ಗ್ರಾಮದ ರಾಮಲಿಂಗೇಶ್ವರ ದೇಗುಲದ ನವರಂಗ ಮಂಟಪದ ಭುವನೇಶ್ವರದಲ್ಲಿರುವ ತೋರಣ ಮಂಟಪ.